೧೨೭
೧೨೮

ಸಂಕ್ರಮಣ

ಸಂಪುಟ ೧೮ : ಸಂಚಿಕೆ ೩-೪ ಅಗಸ್ಟ-ಸಪ್ಟಂಬರ ೧೯೮೨

ಹೋರಾಟ ನಡೆಯುತ್ತಿದೆ : ಕತೆ
ರಾಜಾಜಿ ನರಿಬುದ್ಧಿ VS ಪಾವಟೆ ನ್ಯಾಯಬುದ್ಧಿ

ವಿಮರ್ಶೆ :
ಕಾವ್ಯ ಸತ್ಯದ 'ಸ್ವ'ರೂಪ ವಿಚಾರ
'ಯಶೋಧರ ಚರಿತೆ' ಮತ್ತು 'ಹಿಟ್ಟಿನ ಹುಂ...
೧೨ನೇ ಶತಮಾನದ ಶೂದ್ರ ವಚನಕಾರ್ತಿಯರು
ಹರಿಹರನ ಬಸವಣ್ಣ

ಪ್ರತಿಕ್ರಿಯೆಗಳು :
'ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ'
ಭಗವಾನ್‍-ಸಾಂಪ್ರದಾಯಿಕ ಆಲೋಚನೆ
ಸೀತಾಯಣ : ಒಂದು ಅಡಿಟಿಪ್ಪಣಿ
ಬಂಡಾಯ : ಕೆಲವು ಸಂದೇಹಗಳು

ಕವನಗಳು :
ರವಿಶಂಕರ ಕೋಳಿವಾಡ, ಪ್ರಹ್ಲಾದ ಅಗಸನಕಟ್ಟೆ, ಅಂಬಾದಾಸ ವಡೆ,
ಶಿವಯೋಗಿ ಮೊಗಲಿ, ಕನಕ ಹಾ. ಮ., ಎಸ್. ಆರ್. ಗುರುನಾಥ

ಸಂಕ್ರಮಣ ೧೦೧-೧೨೪ : ಲೇಖನ ಸೂಚಿ

DEVU PATTAR
GUTTIPETH,
SHAHAPUR-585223

ಸಂಪಾದಕ : ಚಂದ್ರಶೇಖರ ಪಾಟೀಲ

AT THE OTHER END

Chandrashekhar Patil

ಕನ್ನಡದ ಏಕೈಕ ಪುಸ್ತಕೋದ್ಯಮದ ಪತ್ರಿಕೆ

ಗ್ರಂಥಲೋಕ

(ಪ್ರತಿ ತಿಂಗಳು ಮೊದಲನೆಯ ದಿನ ಪ್ರಕಟನೆ)

○ ಹಿಂದಿನ ತಿಂಗಳು ಕನ್ನಡದಲ್ಲಿ ಪ್ರಕಟವಾದ ಪುಸ್ತಕಗಳ ವರ್ಗೀಕೃತ ಸೂಚಿ ○ ಪುಸ್ತಕಗಳ ಪರಿಚಯ, ವಿಮರ್ಶೆ, ಪುಸ್ತಕ ಸುದ್ದಿ ○ 'ಗ್ರಂಥಲೋಕದ ಸುತ್ತ ಮುತ್ತ,' 'ಗ್ರಂಥಲೋಕದ ಗಣ್ಯರು' ಅಂಕಣಗಳು ○ ಕನ್ನಡದ ಪುಸ್ತಕೋದ್ಯಮದ ಸಮಸ್ಯೆಗಳನ್ನು ಬಿಂಬಿಸುವ ಲೇಖನಗಳು ○ ಡೆಮಿ ಚತುರ್ಥ ಅಳತೆಯ ೩೨೦ ಪುಟಗಳಿಗೂ ಮಿಕ್ಕಿ ಉಪಯುಕ್ತ ಪರಾಮರ್ಶನ ಸಾಹಿತ್ಯ ○ ವರ್ಷಕ್ಕೆರಡು ವಿಶೇಷ ಸಂಚಿಕೆಗಳು.

ವಾರ್ಷಿಕ ಚಂದಾ ಮತ್ತು ವಿಳಾ[illegible]

DEVU PATTAR
GUTTIPETH,
SHAHAPUR-585223

ಲೇಖಕರಿಗೆ ಕೆಲ ಸೂಚನೆಗಳು

೧. 'ಸಂಕ್ರಮಣ'ದಲ್ಲಿ ಪ್ರಕಟನೆಗೆಂದು ಕಳಿಸುವ ಲೇಖನಗಳು ಕಂಪೋಜಿಟರರಿಗೆ ಆಹ್ವಾನವಾಗದ ರೀತಿಯಲ್ಲಿ ಸ್ಫುಟವಾದ ಬರಹದಲ್ಲಿರಬೇಕು; ಸಾಧ್ಯವಿದ್ದರೆ ಟೈಪು ಮಾಡಿ ಕಳಿಸಬೇಕು.

೨. ಪತ್ರಿಕೆಗೆ 'ಸಿಬ್ಬಂದಿ' ಎಂಬುದು ಇಲ್ಲದಿರುವುದರಿಂದ ನೀವು ಬರೆದ ಪ್ರತಿಯೊಂದು ಪತ್ರಕ್ಕೂ ಉತ್ತರ ಬಯಸಬಾರದು. ನೀವು ಡಬಲ್ ಕಾರ್ಡು ಮಾತ್ರ ಬರೆದರೆ ಉತ್ತರ ಗ್ಯಾರಂಟಿ. ಲೇಖನ ವಾಪಸ್ ಬೇಕೆಂದರೆ ಸ್ವವಿಳಾಸದ. ಸ್ಟಾಂಪು ಹಚ್ಚಿದ ಲಕೋಟೆ ಕಳಿಸಿರಿ.

೩. ಸ್ವೀಕೃತವಾದ ಲೇಖನಗಳ ಬಗ್ಗೆ ಮಾತ್ರ ಸಂಚಿಕೆ ಹೊರಬರುವ ಮುನ್ನವೇ ತಿಳಿಸಲಾಗುವದು. ಹೊಸದಾಗಿ ಬರೆಯುತ್ತಿರುವ ಕವಿಗಳು ಒಂದೊಂದೇ ಕವನಕ್ಕಿಂತ ತಮಗೆ ಉತ್ತಮವೆನಿಸಿದ ನಾಲ್ಕೈದು ಕವನ ಕಳಿಸಿದರೆ ಆಯ್ಕೆಗೆ ಅನುಕೂಲ. ಒಂದೇ ಪುಟದಷ್ಟು ಚಿಕ್ಕದಾದ ಕವನಕ್ಕೆ ಪ್ರಕಟನೆಯ ಚಾನ್ಸು ಬಹಳ.

೪. 'ಸಂಕ್ರಮಣ'ದಲ್ಲಿ ಪ್ರಕಟವಾದ ಲೇಖನಗಳಿಗೆ 'ಪ್ರತಿಕ್ರಿಯೆ'ಗಳು ಸಂಚಿಕೆ ಹೊರಬಂದ ಹತ್ತು ದಿನದೊಳಗಾಗಿ ನಮಗೆ ತಲುಪಬೇಕು. ಪ್ರತಿಕ್ರಿಯೆಗಳು ನೇರ ಹಾಗೂ ಸಂಕ್ಷಿಪ್ತವಾಗಿರಬೇಕು.

ಭೂ ಒಡೆತನಕ್ಕೆ ಗೇಣಿದಾರರು ಕೊಡಬೇಕಾದ ಹಣಕ್ಕೆ ಸರಕಾರದ ನೆರವು

ವಿವರಗಳಿಗೆ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ವಿಚಾರಿಸಿ

ಭೂ ಸುಧಾರಣಾ ಕಾಯಿದೆಯನ್ನು ತ್ವರಿತ ಗತಿಯಲ್ಲಿ ಜಾರಿಗೆ ತಂದಿರುವ ರಾಜ್ಯಗಳಲ್ಲೇ ಮುಂಚೂಣಿಯಲ್ಲಿದೆ ಕರ್ನಾಟಕ. ಭೂ ನ್ಯಾಯಮಂಡಳಿಗಳ ಮೂಲಕ ಫೆಬ್ರುವರಿ, ೧೯೮೨ರ ವರೆಗೆ ೮,೧೯,೦೭೪ ಅರ್ಜಿಗಳನ್ನು ಇತ್ಯರ್ಥ ಗೊಳಿಸಲಾಗಿದೆ. ಭೂ ಮಾಲೀಕರಿಂವ ವಶಪಡಿಸಿಕೊಳ್ಳಲಾದ ೨,೬೯,೨೩೨ ಎಕರೆ ಜಮೀನಿನಲ್ಲಿ ೩೨,೧೭೩ ಎಕರೆ ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದ ಭೂರಹಿತರಿಗೆ ಹಾಗೂ ೨೬,೦೭೫ ಎಕರೆ ಜಮೀನನ್ನು ಇತರ ಹಿಂದುಳಿದ ವರ್ಗದವರಿಗೆ ಹಂಚಲಾಗಿದೆ.

- ಭೂ ಒಡೆತನದ ಹಕ್ಕು ಪಡೆದ ಗೇಣಿದಾರರು ಭೂಮಿಗಾಗಿ ನೀಡಬೇಕಾದ ಹಣವನ್ನು ಸರ್ಕಾರಕ್ಕೆ ಪಾವತಿ ಮಾಡಬೇಕು.
- ಈ ಹಣವು ಎರಡು ಸಾವಿರ ರೂ.ಗಳಿಗಿಂತ ಹೆಚ್ಚಾಗಿದ್ದರೆ ಮೊದಲ ಕಂತಿನಲ್ಲಿ ಎರಡು ಸಾವಿರ ರೂ. ಗಳನ್ನೂ ಉಳಿದ ಹಣವನ್ನು ೨೦ ವಾರ್ಷಿಕ ಕಂತು ಗಳಲ್ಲಿ ಶೇಕಡಾ ೫ ॥ ಬಡ್ಡಿಯೊಂದಿಗೆ ಪಾವತಿ ಮಾಡಬೇಕು.
- ರೈತರು ಈ ಹಣ ಪಾವತಿ ಮಾಡುವಲ್ಲಿ ನೆರವಾಗಲು ಸರ್ಕಾರ ಯೋಜನೆ ಯೊಂದನ್ನು ರೂಪಿಸಿದೆ.
- ಈ ಯೋಜನೆಯಂತೆ ಸಂಬಂಧಿಸಿದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು ಗಳು ಹಣ ಪಾವತಿಗಾಗಿ ಸಾಲ ನೀಡುತ್ತವೆ.
- ಸಾಲದ ನೆರವು ಪಡೆಯಬಯಸುವ ರೈತನು ಭೂನ್ಯಾಯ ಮಂಡಳಿಯು ನೀಡಿದ ಜಮೀನು ಮಂಜೂರಾತಿ ಆದೇಶವನ್ನು ಅರ್ಜಿ ಜೊತೆ ಬ್ಯಾಂಕಿಗೆ ಒದಗಿಸಿ ಕೊಡಬೇಕು.
- ಪಡೆಯುವ ಸಾಲಕ್ಕೆ ತನ್ನ ಜಮೀನನ್ನೇ ಆಧಾರ ಮಾಡಿಕೊಡಬೇಕು, ಇದೇ ಆಧಾರದ ಮೇಲೆ ರೈತನು ಭೂ ಅಭಿವೃದ್ಧಿಗಾಗಿ ಹೆಚ್ಚಿನ ಸಾಲವನ್ನು ಅದೇ ಬ್ಯಾಂಕಿನಿಂದಲೇ ಪಡೆಯಬಹುದು.
- ಈ ಸಂಬಂಧದಲ್ಲಿ ಹೆಚ್ಚಿನ ವಿವರಗಳಿಗೆ ಆಯಾ ತಾಲೂಕಿನ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ವಿಚಾರಿಸಬೇಕು.

ಪ್ರಕಟನೆ : "ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ"

ಸಂಕ್ರಮಣ

ಸಂಪುಟ : ೧೮ ಸಂಚಿಕೆ: ೩-೪
ಮಾಸಿಕ ಸಾಹಿತ್ಯ ಸಂಕಲನ
ಅಗಸ್ಟ-ಸಪ್ಟಂಬರ ೧೯೮೨

SANKRAMANA 127-128 A Literary Monthly in Kannada
Aug.-Sept. 1982 Vol XVIII Nos. 3—4
Editor : **Chandrashekhar Patil**
Sankramana Prakashana Dharwad 580008 Phone : 80509
Printed at Rajshri Printing Press, Dharwad 1.

ಹೋರಾಟ ನಡೆಯುತ್ತಿದೆ (ಕತೆ) : ರಮೇಶ ಬತ್ತರಾ‡ ೫
ಕಾವ್ಯ ಸತ್ಯದ 'ಸ್ವ'ರೂಪ ವಿಚಾರ : ಶಂ ಬಾ ಜೋಶಿ ೧೯
ಯಕ್ಷ ಪ್ರಶ್ನೆ (ಕವನ) : ರವಿಶಂಕರ ಕೋಳಿವಾಡ ೨೬
'ಯಶೋಧರ ಚರಿತೆ' ಮತ್ತು 'ಹಿಟ್ಟಿನ ಹುಂಜ' : ಮಾರ್ಷಲ್ ಶರಾಮು ೨೭
ನಾನು ಮಾಸ್ತರರಾಗಿರುವವರಿಂದ (ಕವನ) : ಪ್ರಹ್ಲಾದ ಅಗಸನಕಟ್ಟೆ ೪೨
೧೨ನೇ ಶತಮಾನದ ಶೂದ್ರ ವಚನಕಾರ್ತಿಯರು : ವಿಜಯಶ್ರೀ ಸಬರದ ೪೩
ಎರಡು ಕವನಗಳು : ಶಿವಯೋಗಿ ಮೊಗಲಿ ೫೭
ರಾಜಾಜಿ ನರಿಬುದ್ಧಿ VS ಪಾವಟೆ ನ್ಯಾಯಬುದ್ಧಿ : ಸಿದ್ದಣ್ಣ ಗುಬ್ಬಿ ೬೧
ಹರಿಹರನ ಬಸವಣ್ಣ : ಬಸವರಾಜ ಮಲಶೆಟ್ಟಿ ೬೫
ಬೆಕ್ಕಿನ ಬಗ್ಗೆ ಹೇಳಬೇಕೆಂದರೆ (ಕವನ) : ಕನಕ ಹಾ. ಮ. ೮೦
'ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ' (ಪ್ರತಿಕ್ರಿಯೆ) : ಐ. ಆರ್. ಪ್ರಮೋದ ೮೧
ಅವ್ವನ ಪಂಚಮಿ (ಕವನ) : ಅಂಬಾದಾಸ ವಡೆ ೮೮
ಭಗವಾನ್-ಸಾಂಪ್ರದಾಯಿಕ ಆಲೋಚನೆ (ಪ್ರತಿಕ್ರಿಯೆ) : ಎಸ್. ಶಿವಾನಂದ ೮೯
ನಿಸರ್ಗದತ್ತಾ (ಕವನ) : ಎಸ್. ಆರ್. ಗುರುನಾಥ ೯೨
ಸೀತಾಯಣ ಒಂದು ಅಡಿಟಿಪ್ಪಣಿ : ಪೋಲಂಕಿ ರಾಮಮೂರ್ತಿ ೯೩
ಬಂಡಾಯ-ಕೆಲವು ಸಂದೇಹಗಳು : ನರಹರಿ ೯೬
ಸಂಕ್ರಮಣ ೧೦೧-೧೨೪ (ಲೇಖನ-ಸೂಚಿ) : ಸಿ. ಆರ್. ಕರಿಸಿದ್ದಪ್ಪ ೯೯
‡ಈ ಕತೆಯನ್ನು ಕನ್ನಡಕ್ಕೆ ತಂದವರು : ಹಸನ್ ನಯೀಮ ಸುರಕೋಡ.

ಶುಭಾಶಯಗಳೊಂದಿಗೆ—

ಬೆಲ್ಲದ ಆ್ಯಂಡ್ ಕಂಪನಿ

ಧಾರವಾಡ-೧ ಹುಬ್ಬಳ್ಳಿ-೨೧

ಈ ಸಂಚಿಕೆಯ ಲೇಖಕರು

ರಮೇಶ ಬತ್ತರಾ ಖ್ಯಾತ ಹಿಂದಿ ಕತೆಗಾರ. **ಹಸನ್ ನಯೀಮ ಸುರಕೋಡ**
ರ್ಲ್ಲ ಮಡ್ಡಿಗಲ್ಲಿ, ರಾಮದುರ್ಗ. **ಶಂ. ಬಾ. ಜೋಶಿ** ೪೧೫-ಎ, ಪ್ರಭಾತ್ಮ
ಸ್ಯಾಂಡೋ ಮಾರ್ಗ, ಚೆಂಬೂರ, ಮುಂಬೈ-೭೧. **ರವಿಶಂಕರ ಕೋಳಿವಾಡ** ಸ್ಟೇಟ
ಬ್ಯಾಂಕ್ ಆಫ್ ಇಂಡಿಯಾ. ಸಂತ ಮಾರ್ಕ ರಸ್ತೆ, ಬೆಂಗಳೂರು-೧. **ಮಾರ್ಷಲ್**
ಶರಾಮ ಹೊಟೆಲ್ ಪ್ರಮಿಳ, ಹೊಸನಗರ, ಜಿ. ಶಿವಮೊಗ್ಗ! **ಪ್ರಹ್ಲಾದ ಅಗಸನ**
ಕಟ್ಟೆ CIEDS, ಬಾಲಾಜಿ ಲೇಔಟ್, ವೀಲರ್ ರೋಡ, ಬೆಂಗಳೂರು-೫.
ವಿಜಯಶ್ರೀ ಸಬರದ ಮ.ನಂ.-೮-೧೧-೩೮ ಕೆಇಬಿ ಆಫೀಸಿನ ಎದುರಿಗೆ. ಬೀದರ.
ಶಿವಯೋಗಿ ನೊಗಲಿ ಕೃಷಿ ವಿಶ್ವವಿದ್ಯಾಲಯ, ಧಾರವಾಡ-೫. **ಸಿದ್ದಣ್ಣ ಗುಬ್ಬಿ**
ಬಿ.ಡಿ.ಟಿ. ಎಂಜಿನಿಯರಿಂಗ್ ಕಾಲೇಜು, ದಾವಣಗೆರೆ-೨. **ಬಸವರಾಜ ಮಲಶೆಟ್ಟಿ**
ಕನ್ನಡ ಪ್ರಾಧ್ಯಾಪಕ, ವಿಜಯನಗರ ಕಾಲೇಜ, ಹೊಸಪೇಟೆ. **ಕನಕ ಹಾ. ಮ.**
ಬಿ. ಬಿ. ಎಂ. ವಿದ್ಯಾರ್ಥಿನಿ, ವಿವೇಕಾನಂದ ಕಾಲೇಜು, ಪುತ್ತೂರು ದ. ಕ.
ಐ. ಆರ್. ಪ್ರಮೋದ ನ್ಯಾಯವಾದಿಗಳು ವಿರಾಜಪೇಟೆ, ಕೊಡಗು, **ಅಂಬಾದಾಸ**
ವಡೆ ಜೈನ ಪೀಠ, ಬಾಗಲಕೋಟೆ. **ಎಸ್. ಶಿವಾನಂದ** ಸಾಸ್ವೆಹಳ್ಳಿ, ಜಿಲ್ಲಾ
ಶಿವಮೊಗ್ಗ, **ಎಸ್. ಆರ್. ಗುರುನಾಥ** ಎ. ಟಿ. ಐ. ಕೊಪ್ಪಳ. **ಪೋಲಂಕಿ**
ರಾಮಮೂರ್ತಿ ಇಂಗ್ಲಿಷ್ ಪ್ರಾಧ್ಯಾಪಕ, ಮೈಸೂರು ವಿ. ವಿ. ಮೈಸೂರು-೬
ನರಹರಿ WALDHOUSWEG, 7, Z–22, D–6600, SAARBRRI–
EKINS, WEST GERMANY. **ಸಿ. ಆರ್. ಕರಿಸಿದ್ದಪ್ಪ** ಗ್ರಂಥವಿಜ್ಞಾನ
ಪ್ರಾಧ್ಯಾಪಕ. ಕರ್ನಾಟಕ ವಿ. ವಿ. ಧಾರವಾಡ–೩.

ಪ್ರಿಯ ಚಂದಾದಾರರೇ,

ಸಂಕ್ರಮಣವನ್ನು ಸಕಾಲಕ್ಕೆ ತರಲು ಎಲ್ಲ ಪ್ರಾಮಾಣಿಕ ಪ್ರಯತ್ನವನ್ನೂ ಮಾಡಲಾಗುತ್ತಿದೆ. ನಿಮ್ಮಲ್ಲಿ ಅನೇಕರು ಚಂದಾ ಹಣವನ್ನು ಇನ್ನೂ ಕಳಿಸದೆ ಇರುವುದು ವಿಷಾದನೀಯ. **ಕೂಡಲೇ ಕಳಿಸಿರಿ.** ಉದ್ರಿ ಚಂದಾದಾರರಿಗೆ ಮುಂದಿನ ಸಂಚಿಕೆಯನ್ನು ಕಳಿಸಲಾಗುವುದಿಲ್ಲ—ಎಂದು ತಿಳಿಸಲು ನೋವಾದರೂ ಹಾಗೆ ತಿಳಿಸಲೇಬೇಕಾಗಿದೆ.

—ಸಂಪಾದಕ

ಹೋರಾಟ ನಡೆಯುತ್ತಿದೆ

ಅನುವಾದ ಕತೆ

ರಮೇಶ ಬತ್ತರಾ

ನಗರಗಳಿವೆ, ಪಟ್ಟಣಗಳಿವೆ, ಹಳ್ಳಿಗಳಿವೆ,–ದೇಶಗಳಿವೆ !

ಪಕ್ಷಗಳಿವೆ. ಅಭ್ಯರ್ಥಿಗಳಿದ್ದಾರೆ, ಧುರೀಣರಿದ್ದಾರೆ, ಕಾರ್ಯಕರ್ತರಿದ್ದಾರೆ. ಘೋಷಣೆಗಳಿವೆ, ಪೋಸ್ಟರಗಳಿವೆ, ಧರ್ಮಗಳಿವೆ, ಸಂಪ್ರದಾಯಂಗಳಿವೆ, ಜಾತಿಗಳಿವೆ, ಒಳಜಾತಿಗಳಿವೆ, ವರ್ಗಗಳಿವೆ, ಜೀಪುಗಳಿವೆ, ಆನೆಗಳಿವೆ, ಧ್ವಜಗಳಿವೆ, ಅಹಂಗಳಿವೆ, ಬೈಗುಳಗಳಿವೆ, ಆರೋಪಗಳಿವೆ, ಮೆರವಣಿಗೆಗಳಿವೆ, ಭಾಷಣಗಳಿವೆ, ಆಶ್ವಾಸನೆಗಳಿವೆ, ವೋಟುಗಳಿವೆ, ಮತದಾರರಿದ್ದಾರೆ,–ಚುನಾವಣೆಗಳಿವೆ.

ಚುನಾವಣೆ ಇದೆ, ಕಾರ್ಯಾಲಯಂಗಳಿವೆ, ಅಧಿಕಾರಿಗಳಿದ್ದಾರೆ, ಸಾಹೇಬರಿದ್ದಾರೆ, ಜನಜಂಗುಳಿ ಇದೆ, ಕೆಲಸವಿದೆ. ಬಿಡುವಿದೆ, ವ್ಯವಸ್ಥೆ ಇದೆ, ನೌಕರಿ ಇದೆ !

ನೋವಿದೆ, ಲಾಲಸೆಯಿದೆ, ಆಸೆ ಇದೆ, ನಿರಾಶೆ ಇದೆ, ಆದರ್ಶಗಳಿವೆ, ಕನಸುಗಳಿವೆ. ಉಸಿರಿದೆ, ಸಾಹಸವಿದೆ, ಧೈರ್ಯವಿದೆ, ಪ್ರತೀಕ್ಷೆ ಇದೆ—ರಾಮುಬಾಬುಗಳಿದ್ದಾರೆ... ರಾಮುಕಲಿಗಳಿದ್ದಾರೆ !

●

ಸಾಹೇಬನಿದ್ದಾನೆ, ಗ್ರಾಮವಿದೆ, ಗುಡಿಸಲಿದೆ, ಸಂಜೆ ಇದೆ, ಚಳಿ ಇದೆ, ಏಕಾಂತವಿದೆ, ಜುಗುಪ್ಸೆ ಇದೆ, ಅಲ್ಲೋಲ ಕಲ್ಲೋಲವಿದೆ, ಭಯವಿದೆ, ಅನುಭವವಿದೆ, ಉತ್ಸುಕತೆಯಿದೆ, ರಾಮುಕಲಿ ಇದ್ದಾಳೆ, ಸ್ವಾಗತವಿದೆ—

"ಬರ್ರಿ ಸಾಹೇಬರೆ ! ಒಳಗೆ ಬರ್ರಿ...ಭಾಳ ಗಲೀಜಾದ ಜಾಗೆಯಲ್ಲೇನ್ರಿ ? ಮೊದಲs ಹೇಳಿದ್ನಿರಿ... ಈ ಜಾಗಾ ನಿಮಗ ಪಸಂದ ಅನಸೂದಲ್ಲ ಅಂತ !... ಹೆಂಗs ಇರಲಿ ಇದ ನನಗ ಸ್ವರ್ಗ ! ಇಲ್ಲೇ ನಾನು ಬದುಕಬೇಕು ಸಾಯಬೇಕು !... ಹೊಸ ಸರಕಾರ ಏನಾದರ ಮಾಡಿದರs ಮಾಡೀತು !...ನೀವು ಸ್ವಲ್ಪ ಹೊತ್ತ ಇದ್ದ ಮನೀಗೆ ಹೊಂಟ ಹೋಗಾವ್ರು...ನಿಮ್ಮ ಮನಿ ಮಸ್ತ ಐತಿ. ಅಲ್ಲೇನ್ರಿ ?"

"ಹಾಂ...ಹೂ...ಹೌದಲ್ಲ, ಮನಿ ಮನೀನs ಅಲ್ಲೇನ ?"

"ಇದನೂ ಮನಿ ಅಂತನs ತಿಳಕೊಳ್ರಿ...ನಿಮ್ಮದು ಭಾಳ ಉಪಕಾರ ಐತಿ ಈ ಮನಿ ಮ್ಯಾಲ."

"ನಿನ್ನ ಲಾಲೂ ಎಲ್ಲಿ ಆದಾನ ?"

"ಆಡಾಕ ಹೋಗ್ಯಾನ್ರಿ"

"ಈ ವ್ಯಾಳೇದಾಗ ? ಇಂಥಾ ಥಂಡ್ಯಾಗ ?"

"ಈವತ್ತ ನೀವು ಬರಾವರಿದ್ರೆಲ್ಲ, ಅದಕs...ಏನ ಮಾಡಲಿ ? ಅಂವ ದೊಡ್ಡಾಂವ ಆಗಾಕ ಹತ್ಯಾನ...ಬ್ಯಾರೆ ಗಂಡಸರ ಮುಂದ ನಾಚಿಕಿ ಅನಸೂದಿಲ್ಲ. ಆದರ ಸ್ವಂತ ಮಕ್ಕಳ ಮುಂದ ಅನಸೂದ ಅಲ್ಲೇನರಿ ?"

"ಅಂವಗ ಗೊತ್ತೈತೇನ ನೀನು..."

"ಅವಂದೇನ ಅಂಥಾ ವಯಸ್ಸ ?...ಮತ್ತ ಇದ ಅಂವಗ ಗೊತ್ತಾಗದಿದ್ರುs ಛಲೋ ! ಹೌದಲ್ರಿ ?"

"ಹಾಂ, ಛಲೋನ."

"ಹಂಗ ನೋಡಿದ್ರ ಸಾಹೇಬ್ರು. ರಾಮುಬಾಬುಗ ಪುಣ್ಯ ಬರಲಿ. ಅವರು ಅಂವಗ ಎರಡಕ್ಷರ ಕಲಿಸಾಕ ಹತ್ಯಾರ. ಇಲ್ಲದಿದ್ರು ಅವನೂ ನಮ್ಹಾಂಗ ಮೂರ್ಖ ಆಗೇ ಉಳಿದ ಬಿಡ್ತಿದ್ದ !...ಅಂವ ಇಂಗಲೀಸ ಮಾತಾಡುವಾಗ ಸಾಹೇಬ್ರು ನನಗ ಕಟ್ಯಾಡಿಸಿದಾಂಗ ಆಗ್ತೈತಿ ! ನಾನs ಇಂಗಲೀಸ ಕಲ್ಯಾಕ ಹತ್ತೀನೇನೊ ಅನಸ್ತೈತಿ !"

"ಒಂದುವೇಳೆ ಅಂವಗ ಗೊತ್ತಾತು ಅಂತ ತಿಳಿ...ನೀ ಈ ಕೆಲಸ..."

"ಗೊತ್ತಾದರ ಗೊತ್ತಾತ ! ಬುದ್ಧಿವಂತ ಆದಮ್ಯಾಲ ನನ್ನ ತ್ರಾಸ ತಿಳಕೋತಾನ... ಸಂಬಂಧ ಹರಕೋತಾನ. ಅವನ ನಶೀಬ ತಗೀತಂದ್ರು ನನ್ನ ಬಿಟ್ಟರೂ ಪರವಾ ಇಲ್ಲ...ಅವನ ಖುಶೀನs ನನ್ನ ಖುಶಿ ! ಆದರ ಸಾಹೇಬ್ರು, ಅಂವಗ ಸ್ವಲ್ಪಾದರೂ ಗೊತ್ತಾಗಬೌದಲ್ಲರಿ ?"

"ಯಾಕಾಗೂದಿಲ್ಲ ? ದೊಡ್ಡಾಂವ ಆದ್ಯಾಂಗೆಲ್ಲ ಎಲ್ಲಾ ತಿಳಕೋತಾನ."

"ಆವಾಗಂದ್ರು ಸರಕಾರ ಸ್ವಲ್ಪ ಇಲ್ಲ ಸ್ವಲ್ಪ ಕಲ್ಯಾಣ ಕೆಲಸ ಮಾಡಬೌದು ! ನಿಮಗ ಗೊತ್ತಿರಾಕಿಲ್ಲ ಸಾಹೇಬ್ರು, ಹೊಸ ಸರಕಾರ ನಮ್ಮದs ಆಗೂದು. ನಮ್ಮ ಸರಕಾರ ಇರೂತನಕ ಯಾರೂ ಉಪವಾಸ ಮಲಗೂದುಲ್ಲ, ಮನಿ ಇಲ್ಲದವ ರ‍್ಯಾರೂ ಇರೂದಿಲ್ಲ. ವಿದ್ಯಾ ಇಲ್ಲದವರನ್ನಾವ್ರು ಯಾರೂ ಇರೂದಿಲ್ಲ. ಎಲ್ಲರಿಗೂ ಅವಕಾಶ ಸಿಗತಾವ...ಸರಕಾರ ಎಲ್ಲರಿಗೂ ವ್ಯವಸ್ಥೆ ಮಾಡತೈತಿ."

"ಹಂಗಾರ ಏನಾರ ಮಾಡಬೇಕು ಅನ್ನೂ ಹಂಗೇನಿಲ್ಲ? ಸರಕಾರನs ಎಲ್ಲಾ ಸರಿ ಮಾಡತೈತಿ!"

“ಇಲ್ರಿ ಸಾಹೇಬ್ರ, ಏನಾರ ಬೇಕಾದರ ಕೈ ಕಾಲ ಆಡಿಸುಬೇಕಾಗತೈತಿ...ಯಾರೂ ಯಾರ ಬಾಯಾಗು ಆಗಲಿ ರೊಟ್ಟಿ ತುರುಕೂದಿಲ್ಲ...ಹಂಗ ಮಾಡಿದರ ಆದ ಮೈಗೆ ಹತ್ತೂದೂನು ಇಲ್ಲ...ಹೌದಲ್ರಿ ?”

“ನೀನಂತೂ ಒಳೆ ಗಂಡಸಿನ ಹಾಗಿದೀ !”

“ಎಲ್ಲಾ ರಾಮುಬಾಬು ಅವರದು ಪ್ರತಾಪ...ಅವರು ಎಲ್ಲಾ ಕಲಿಸ್ಯಾರ, ತಿಳಿಸ್ಯಾರ.”

“ಇಂವ್ಯಾಂವ ಈ ರಾಘುಬಾಬು ?”

“ಕರೆಂಟಿನ ಮಿಸ್ತ್ರಿ ಆದಾರ, ಹಗಲ ಹೊತ್ತ್ಯಾಗ ಕಾರಖಾನೆದಾಗ ಕೆಲಸ ಮಾಡ್ತಾರ... ಮುಂಜೇಲಿ ಸಂಜೀಕ ನಮ್ಮ ಸುಖ ದುಃಖ ಕೇಳ್ತಾರ...ಪ್ರೀತಿಲೇ ತಿಳಿಹೇಳಿ ಮಾತಾಡಾವರಂದ್ರ ಅವರು ಒಬ್ಬರು...ನೀವು ನನ ಕೂಡ ಎಷ್ಟ ಛಲೊ ನಡಕೊಂಡಿರಿ... ಮ್ಯಾಲ ಉಪಕಾರಾನೂ ಮಾಡಿದ್ರಿ...ಖರೆ ಅಂದ್ರ ನನಗ ಭಾಳ ಖುಶಿ ಆತು.”

“ನಿನಗ ನಾ ಏನೂ ಉಪಕಾರ ಮಾಡಿಲ್ಲ.”

“ನೀವು ಹಗರ ಮಾಡಿದ ಕೆಲಸಾನ ಖರೇ ಕೆಲಸ, ನೀವು ಹೇಳ್ರಿ ವೋಟು ಇರದಿದ್ರ ಎಲ್ಲಾ ಇದ್ದಕ್ಕಿದ್ದಾಂಗ ಉಳದ ಬಿಡತೈತಿ. ಸರಕಾರದಾಗ ನನ್ನ ಪಾಲೇನಿರತೈತ್ರಿ?”

“ಒಂದ ಸಣ್ಣ ಕೆಲಸಕ್ಕೆ ಬದಲಾಗಿ ನೀ ಮಾಡಾಕ ಹತ್ತಿದ್ದೇನ ತುಸಾ ಏನ ?”

“ಅರೆ, ನಾ ಮರತು ಬಿಟ್ಟೇನಿ. ಮಾತಾಡಾಕ ಹತ್ತಿದ್ನೆಂದ್ರ ಹಂಗು ಮಾತಾಡಾಕು ಹತ್ತತೀನಿ...ಕುಂಡರ್ರಿ ಸಾಹೇಬ್ರ...ಕುಂಡರೂದ್ಯಾಕ ಇನ್ನ ಮಲಗೇ ಬಿಡ್ರಿ... ನೀವು ಮತ್ತ ಮನೀಗಿ ಬ್ಯಾರೆ ಹೋಗಬೇಕು...ಮೈಯಾಗ ಆರಾಮು ಇಲ್ಲದ ಕೂಸಿಗೆ ನಿಮ್ಮ ದೇಖರೇಕಿನೂ ಭಾಳ ಜರೂರು ಅಲ್ಲೇನ್ರಿ ?”

“ಹಾಂ, ಮನೀಗೇ ಹೋಗಬೇಕು...ಮತ್ತೆಲ್ಲಿ ಹೋಗೂದು ?

“ಚಪ್ಪಲಿ ಬಿಟ್ಟು ಪಲಂಗ ಮ್ಯಾಲೆ ಬರ್ರಿ.”

“ಬರತೀನಿ. ಗಡಬಡ ಏನೈತಿ ?”

“ಕ್ಷಮಾ ಮಾಡಬೇಕು ಸಾಹೇಬ್ರ. ಪಲಂಗ ಮ್ಯಾಲಿಂದ ಚಾದರ ಜಮುಖಾನ ತೆಗೀತಿನಿ. ನಿಮಗ ಕೆಟ್ಟ ಅನಸ್ತಿರಬೇಕು. ಆದರ ಏನ ಮಾಡಲಿ ? ನನ್ನ ಮನಸ ಒಪ್ಪೂದಿಲ್ಲ...ಇದರ ಮ್ಯಾಲ ನನ್ನ ಲಾಲೂನ ಕರಕೊಂಡ ಮಲಗತೀನಲ್ಲೇನ್ರಿ ! ಈಗ ಅದು ಹಾಸಿಗಿ ಮ್ಯಾಲ ಮಗ, ಮತ್ತ ಬ್ಯಾರೇದಾವು...ಸ್ವಲ್ಪನೂ ಛಲೋ ಅನಸೂದಿಲ್ಲ...ಹೌದಲ್ರಿ ?”

“ನಿನ್ನ ಮರ್ಜಿ.”

“ನಿಮ್ಮದು ಭಾಳ ದೊಡ್ಡ ಮನಸು ಸಾಹೇಬ್ರ ! ಹಂಗಲ್ಲ ಜನ ತಿಳಕೊಳ್ಳೂದು. ರೂಪಾಯಿ ಎರಡ ರೂಪಾಯಿ ಕೊಟ್ಟ ಹೆಣ್ಣ ಖರೀದಿ ಮಾಡಿದರ ಗುಡಿಸಲ, ಹಾಸಿಗಿ ಎಲ್ಲ ಖರೀದಿ ಮಾಡೀವಿ ಅಂತಾ ತಿಳಕೋತಾರ, ಹೌದಲ್ರಿ ?”

"ಅದ ಅವರವರ ತಿಳಿವಳಿಕೆ."

"ನನಗ ಅಂಥಾ ತಿಳವಳಿಕಿ ಬೇಕಾಗಿಲ್ರಿ! ಎಷ್ಟೋ ಮಂದೀನ ಇಂಥಾ ಹಟ ಮಾಡಿನs ಓಡಿಸೀದೀನಿ. ಉಪವಾಸ ಬಿದ್ದೀನಿ ಆದರ ಅವರ ಮಾತ ಕೇಳಲಿಲ್ಲ. ನಾನು ಮಾಡಿದ್ದು ಬರೋಬರಿ ಅಲ್ಲೇನ್ರಿ? ಮಗನ ಪಾಲಿನದಕ್ಕ ಯಾರಿಗೂ ಕೈ ಹಚ್ಚಾಕ ಕೊಟ್ಟಿಲ್ಲ."

"ಛಲೋ ಮಾಡಿದಿ."

"ಆಯ್ತು, ಸ್ವಲ್ಪ ಲಗೂ ಮಾಡರಿ, ಲಾಲೂ ಬರಾಂವಾ, ರಾಮುಬಾಬು ಅವರೂ ಬರಬಹುದು. ಇತ್ತಿತ್ತಲಾಗಿ ನನಗೆ ಅವರು ಪಾಟಿ ಮ್ಯಾಲೆ ಬರೆಯೂದು ಕಲಸಾಕ ಹತ್ಯಾರ. ಮೊದಮೊದಲ ನನಗ ಏನೂ ತಿಳೀಲಿಲ್ಲ. ನನ್ನ ಈ ವಯಸ್ಸಿನ್ಯಾಗ ರಾಮುಬಾಬು ಏನ ಮಾಡಸಾಕ ಹತ್ಯಾರೊ? ಆದರ ಮನಸೀಗೆ ಹಿಡಿಸೈತಿ... ಇದರಿಂದ ನನಗ ಲಾಭ ಇರಲಿ ಬಿಡಲಿ ಲಾಲೂಗೆ ಏನಾರs ಕಲಿಸಾಕ ಬರತೈತಿ... ಹೌದಲ್ರಿ?"

"ಹೌದಲ್ಲ, ಖರೆ."

"ನಿಮಗ ಬೇಕಂದ್ರ ದೀಪ ಆರಿಸ್ತೀನಿ...ಬಹುತೇಕ ನಿಮಗ ಛಲೊ ಅನಸಾಕಿಲ್ಲ... ನನಗ ರೂಢಿ ಆಗೇತ್ರಿ."

"ಆರಿಸೇ ಬಿಡು.

"ಆದರ ಸ್ವಲ್ಪ ಲಗೂ ಮಾಡ್ರಿ. ಮಾತ ಮಾತನ್ಯಾಗ ಭಾಳ ಹೊತ್ತಾತು...ನಾಂವ ಹಿಂಗs ಬಿದ್ದಕೊಂಡೀವಿ...ಯಾರಾದ್ರು ಬಂದರ ನನಗ ಇಲ್ಲೇ ಬಿದ್ದಲ್ಲೇ ಪ್ರಾಣ ಹ್ವಾದಾಂಗ ಅನಸ್ತೈತಿ...ಭೂಮಿ ಬಾಯಿ ಬಿಟ್ರ ಛಲೊ ಅನಸ್ತೈತಿ! ಅಲ್ಲೇನ್ರಿ?"

❁

ಸಾಹೇಬನಿದ್ದಾನೆ. ಅರ್ಥ ಕತ್ತಲಿದೆ. ಸ್ತಬ್ಧತೆ ಇದೆ. ನಗ್ನತೆ ಇದೆ. ಅರ್ಥಹೀನ ಸ್ಫೂರ್ತಿ ಇದೆ. ಅರ್ಥಹೀನ ಧ್ವನಿಗಳಿವೆ. ಕಿಲಿಬಿಲಿ, ಸರ್‍ರ ಸರ್‍ರ ಸಪ್ಪಳವಿದೆ, ಬೆಂಕಿ ಇದೆ. ಸ್ಖಲನವಿದೆ. ಕ್ಷಣಿಕ ತೃಪ್ತಿ ಇದೆ. ಅಸಂಖ್ಯಾತ ಪ್ರಶ್ನೆಗಳಿವೆ—

"ರಾಮಕಲಿ?"

"ಹೂಂ"

"ಸುಮ್ಮನಾದಿಯಲ್ಲ ಯಾಕೆ?"

"ಹೂಂ"

"ನೀ ನಿನ್ನ ವೋಟ ಯಾರಿಗೆ ಕೊಡುವಿ?"

"ಹೂಂ"

"ರಾಮುಬಾಬು ಯಾವುದಾದರೂ ಚಿಹ್ನೆ ಹೇಳಿಲ್ಲವೆ ?"
"ಹೂಂ"
"ಇದೇನ ಹೂಂ ಹೂಂ ಹಚ್ಚೀದಿ ?"
"ಹೂಂ"
"ಹಾಳಾಗಿ ಹೋಗು !"
"ಹೂಂ"

ಬಾಬು ಇದ್ದಾನೆ. ಸಿಟ್ಟಿದೆ, ತಳಮಳವಿದೆ, ಉಸಿರಿದೆ, ಉತ್ಸಾಹವಿದೆ, ಸೊಕ್ಕಿದೆ, ಮೋಸವಿದೆ, ಸವಾರಿಯಿದೆ, ಆನಂದವಿದೆ, ಅಭಿಮಾನವಿದೆ !

●

ರಾಮಕಲಿ ಇದ್ದಾಳೆ. ಪಲ್ಲಂಗವಿಲ್ಲ, ಸಾಹೇಬನಿಲ್ಲ.

ರಾಮಕಲಿ ಇದ್ದಾಳೆ. ಗುಡಿಸಲಿದೆ. ಮಗನಿದ್ದಾನೆ. ಬದುಕು ಇದೆ. ರಾಮುಬಾಬು ಗಳಿದ್ದಾರೆ—

"ನಿನಗೆ ವೋಟು ಸಿಕ್ಕಿದೆಯಲ್ಲ ?"
"ಇಲ್ಲರೀ"
"ವೋಟರಲಿಸ್ಟ ಮಾಡುವವರು ನಿನ್ನ ಹತ್ತಿರ ಬಂದಿಲ್ಲವೆ ?"
"ಯಾರೂ ಬಂದಿಲ್ಲರಿ"
"ನೀನಿಂದೇ ನಿನ್ನ ಹೆಸರು ನೋಂದಾಯಿಸು, ನೋಂದಾಯಿಸಲು ಇಂದೇ ಕೊನೆ ದಿವಸ."
"ವೋಟ ಮಾಡಿ ನಾನೇನು ಮಾಡಲೀರಿ ?"
"ನಿನಗ ಎಷ್ಟ ಸಲ ಹೇಳಿಲ್ಲ ? ನಿನ್ನ ವೋಟಿನಿಂದ ಸರಕಾರ ರಚನೆ ಆಗ್ತೈತಿ, ನಮ್ಮ ಸರಕಾರನs ನಮ್ಮೆಲ್ಲರನ್ನು ಸಾಕೂದು! ನೀ ನೋಡಿದ್ರ ತಿಳಕೋಳಾಕ ತಯಾರಿಲ್ಲ."
"ನನ್ನ ಸಾಕಾವರು ನೀವs."

"ನೀನು ನನಗ ಪರಿಚಿತಳಿದ್ದಿ, ಆದಕs ಕೈಲಾಗಿದ್ದನ್ನ ಮಾಡ್ತಾ ಇದೀನಿ, ಹಾಗೆಲ್ಲ ಕೂರು ರೊಟ್ಟಿಗಾಗಿ ಬಾಯಿ ಬಿಡುವವರು ಅದೆಷ್ಟೊ ಜನ ಅದಾರ, ನೀನೊಬ್ಬಳೇ ಅಲ್ಲ. ನಿನ್ನ ನನ್ನಂಥವರು ಕೋಟಿಗಟ್ಟಲೆ ಅದಾರ, ಅವರನ್ನು ಸಾಕುವವರ್‍ಯಾರ ?"
"ಸಾಕ್ತಾರ್‍ರಿ ನಿಮ್ಮಂಥ ದೇವತೆಗಳು ?"

"ಯಾರೂ ಸಾಕೂದಿಲ್ಲ, ಸಾಕೂವ ಮನಸಿದ್ದರೂ ಸಾಕಲಾರರು......ಮತ್ತೊಬ್ಬರ ಮೇಲೆ ಬದುಕಬೇಕು ಅಂತ ಯಾಕ ಯೋಚಿಸ್ತಿ ? ನಮ್ಮ ಬಲದ ಮ್ಯಾಲ ಯಾಕ ಬದುಕಬಾರದು ? ಬದುಕಬೇಕಾದರ ಪ್ರಯತ್ನ ಮಾಡಬೇಕು ಅದರ

ಪ್ರಯತ್ನ ಮಾಡಬೇಕಂದ್ರ ಕೆಲಸ ಇದ್ದಾಗ ಅಲ್ಲೇನ ? ಕೆಲಸ ಸರಕಾರನs ಕೊಡತೈತಿ, ನಾ ಆಗಲಿ ನನ್ನಂಥ ಕಲ್ಲಪ್ಪ ಮಲ್ಲಪ್ಪಗಳು ಕೊಡದಿಲ್ಲ ? ತಿಳೀತೇನ ? ಈಗಿಂದೀಗ ಚುನಾವಣೆ ಕಾರ್ಯಾಲಯಕ್ಕ ಹೋಗಿ ನಿನ್ನ ಹೆಸರ ನೋಂದಾಯಿಸಿ ಬಾ".

"ಆಗಲೀರಿ,"

"ನಡೀತೀನಿ, ನೀ ಏನ ಮಾಡೀದಿ ನೋಡಾಕ ಮತ್ತು ಸಂಜೀಕ ಬರ್ರೀನಿ."

●

ರಾಮಬಾಬು ಹೋದರು. ರಾಮಕಲಿ ಹೊರಟು ನಿಂತಳು.

ಕಚೇರಿ ಇತ್ತು, ದಾರಿ ಇತ್ತು, ಕೋಣೆಗಳಿದ್ದವು. ಸಿಪಾಯಿ ಇದ್ದ. ಮೇಜುಗಳಿದ್ದವು. ಫಾಯಿಲಗಳಿದ್ದವು. ಕುರ್ಚಿಗಳಿದ್ದವು. ಸಾಹೇಬರುಗಳಿದ್ದರು. ಬಿಡುವು ಇತ್ತು. ರಾಮಕಲಿ ಇದ್ದಳು, ಉಲ್ಲಾಸವಿತ್ತು. ಉತ್ಸಾಹವಿತ್ತು.

"ನನಗ ವೋಟ ಬೇಕರಿ ಸಾಹೇಬ್ರ ?"

"ಕೊಡ್ತ್ರು. ಹೆಸರೇನು ?"

"ರಾಮಕಲಿ."

"ಗಂಡನ ಹೆಸರು ?"

"ಮದವಿ ಆಗಿಲ್ರಿ."

"ತಂದೆ ಹೆಸರು ?"

"ಗೊತ್ತಿಲ್ಲರಿ."

"ನಿನ್ನ ತಂದೆ ಇಲ್ಲೇನ ?"

"ಇದ್ರು. ಆದರ ಈಗ ನೆನಪಿಲ್ಲರಿ."

"ವಯಸ್ಸು?"

"ಹುಟ್ಟಿಸದವನಿಗೇ ಗೊತ್ತರಿ."

"ಅಜಮಾಸ ಗೊತ್ತಿರಬೇಕಲ್ಲ?"

"ಅಜಮಾಸನೂ ಗೊತ್ತಿಲ್ಲರಿ."

"ಬೇವಾರ್ಸಿ ಇದ್ದೀಯಾ ?

"ಅದಕ್ಕಂತs ವೋಟ ಮಾಡ್ಸಾಕ ಬಂದೀನ್ರಿ."

"ವೋಟ ಮಾಡಸೂದ್ರಿಂದ ನಿನಗ್ಯಾವ ವಾರಸದಾರ ಸಿಗಾಂವಾ ?"

"ಹೊಸ ಸರಕಾರ ಸಿಗತೈತಲ್ಲರಿ ? ರಾಮಬಾಬು ಅಂತಿದ್ರು...ಹೊಸ ಸರಕಾರ ಎಲ್ಲಾರ ರಕ್ಷಣಾ ಮಾಡ್ತೈತಿ ಅಂತ."

"ಅಂವಾ ನಿನಗ ಮೋಸಾ ಮಾಡಾಕ ಹತ್ಯಾನ...ತನ್ನ ಪಾರ್ಟಿಗೆ ನಿನ್ನ ವೋಟ ಹಾಕಸಬೇಕಂತಿರಬೇಕು."

"ನಾನೇನು ಹುಚ್ಚಿ ಏನ್ರಿ ಮೋಸಾ ಹೋಗಾಕ ? ವೋಟ ಕೊಟ್ರ...ನನಗೂ

ಏನಾರ ಸಿಗಬೇಕಲ್ಲರಿ ?"
"ಸಿಗಬಹುದು ಮೂವತ್ತ ನಾಲ್ವತ್ತ ರೂಪಾಯಿ !"
"ರೂಪಾಯಿ ?"
"ಇಲ್ಲದಿದ್ರೇನ, ವಜ್ರ ವೈಢೂರ್ಯ ಸಿಗ್ತಾವೇನ ?"
"ರೂಪಾಯಿನೂ ಬ್ಯಾಡ, ಮುತ್ತು ರತ್ನಾನೂ ಬ್ಯಾಡ."
"ಮತ್ತೇನ ಬೇಕು?"
"ಕೆಲಸ. ಮನಿ-ಮಾರು, ಸುಖ–ಶಾಂತಿ"
"ಇವೆಲ್ಲ ಈಗ ಸಿಗೂದಿಲ್ಲ ?"
"ಏನು ವರಣ್ಣೂ ಬ್ಯಾಡ ! ನಂದ ಏನಃ ಕೆಲಸ ಇವ್ರೂ ನನಗ ವಾಕರಕಿ ಬಂದೈತಿ."
"ಏನ ಕೆಲಸ ಮಾಡ್ತಿ ?"
"ತಿಳಕೊಂಡ ಏನ ಮಾಡ್ತೀರಿ ?"
"ನೌಕರಿಯಿಂದ ಖರ್ಚ ನಿಭಾಯಿಸ್ತಾ ಇಲ್ಲ. ಮನ್ಯಾಗ ಕುಂತ ಕೆಲಸ ಮಾಡೂದಾವ್ರ ನನ್ನ ಹೇಣ್ತೇನೂ ಮಾಡಲಿ ಅಂತ ಯೋಚಿಸ್ತಾ ಇದೀನಿ...ಎರಡ ದಂಡ್ದು ಬಂದ್ರ ಛಲೋ ಆಗ್ತೈತಿ."
"ಬ್ಯಾಡ ಸಾಹೇಬ್ರು...ಶಿವ ಶಿವ ! ನಿಮ್ಮ ಹೆಣ್ತಿ ಮಾಡುವಂಥಾ ಕೆಲಸ ಅಲ್ಲರಿ."
"ನನಗ ಹೇಳಾಕ ಹಿಂದಮುಂದ ಯಾಕ ಮಾಡ್ತಿ ?"
"ಹೇಳಬೇಕೇನ್ರಿ ?"
"ಕಳ್ಳಕಾಕರಿಗೆ ಫೋಟ ಸಿಗೂದಿಲ್ಲ. ನೀ ಹೇಳದಿದ್ರ ನಿನಗ ಫೋಟ ಸಿಗೂದಿಲ್ಲ... ಪೇಪರಿನೊಳಗ ಬರೀಬೇಕಾಗತೈತಿ."
"ಹೇಳ್ತೀನ್ರಿ...ಅದನ್ನ ಬರೀಬ್ಯಾಡ್ರಿ...ನಾನು ಧಂಧಾ ಮಾಡ್ತೀನ್ರಿ."
"ಏನು ? ಧಂಧಾ ? ಅಂದ್ರ ? ಓ...ಧಂಧಾ ? ನಿನಗ ನಾಚಿಕಿ ಅನಸೂದಿಲ್ಲ ?"
"ನಾಚಿಕಿಯಿಂದ ಹೊಟ್ಟಿ ತುಂಬೂದಿಲ್ಲರಿ."
"ಫೋಟನಿಂದಲೂ ಹೊಟ್ಟಿ ತುಂಬೂದಿಲ್ಲ, ರಾಮಕಲಿ!...ಹೋಗು ಮತ್ಯಾವದಾರ ಕೆಲಸ ನೋಡ ಹೋಗು."
"ರಾಮುಬಾಬು ಹೇಳ್ತಾರ...ಮರ್ಯಾದೀಲೆ ಊಟಾ ಮಾಡಬೇಕಾಗಿದ್ರ ಫೋಟ ಕೋಡೂದು ಜರೂರಿನ ಕೆಲಸ ಅಂತ."
"ಸುಳ್ಳ ಆಸೆ ಇಟ್ಕೋಬ್ಯಾಡ, ಆಮ್ಯಾಲ ಕೆಟ್ಟ ಅನಿಸಿಗೋತಿ, ಜಾದೂಗೀದೂ ನಡೀಲಾರದು...ಹೀಂಗs ಬದುಕಬೇಕು."
"ಬದುಕಬಹುದು...ಆದರ ಪ್ರಯತ್ನ ಮಾಡಿದರೇನು ಕೆಟ್ಟರಿ ?"
"ಹಂಗರs ತೆಗಿ ಹತ್ತ ಪೈಸೆ."

"ಯಾತಕ್ಕರಿ ?"

"ವೋಟ ಮಾಡಸಾಕ."

"ವೋಟ ಮಾಡಸಾಕ ರೊಕ್ಕ ಯಾಕ್ರಿ ಸಾಹೇಬ್ರು ? ಅದ ನಮ್ಮ ಹಕ್ಕೈತಿ"

"ಹಂಗ ಹಕ್ಕಗಳು ಭಾಳ ಅದಾವ. ಆದರ ಯಾವವೂ ಸಿಗೂದಿಲ್ಲ."

"ಯಾಕ ಸಿಗೂದಿಲ್ಲರಿ ?"

"ಎಲ್ಲಾ ನಮ್ಮ ಕಡಿಯಿಂದ ಒತ್ತಿ ಇಟಕೊಂಡಾರ."

"ಆದರ ನಾ ಎಂದೂ ಏನೂ ಒತ್ತಿ ಇಟ್ಟಿಲ್ಲ ಸಾಹೇಬ್ರು."

"ನೀ ಭಾಳ ಭೋಳೆ ಆದಿ ರಾಮಕಲಿ ! ನಿನಗೇನೂ ಗೊತ್ತಿಲ್ಲ...ಹಂಗs ಹೊಂಟ ಬಂದೀದಿ ಹೊಸ ಸರಕಾರ ಮಾಡಾಕ....ವೋಟ ಮಾಡಸೂದಿದ್ರು ತೆಗಿ ಹತ್ತ ಪೈಸೆ ಝಟಪಟ."

"ಹತ್ತs ಪೈಸೆ ಅಲ್ಲೇನ್ರಿ ಸಾಹೇಬ್ರು ? ನೀವs ಕೈಗಡ ಕೊಡ್ರಿ...ನಾಳೆ ನಾಡದs ಕೊಟ್ಟ ಹೋಗ್ತೀನಿ."

"ನಿನ್ನ ವೋಟಿನ ಗುಂತ್ಯಾಗಿ ಒಡಿದಿಲ್ಲ ನಾ ಏನ ? ಯಾರ ಕಡೆಯಿಂದರs ಇಸಿದ ಕೊಂಡ ಬಾ–..."

"ಎಲ್ಲಿಂದ ತರಲೀರಿ ?"

"ಧಂಧಾ ಏನ ಪುಕ್ಕಟ ಮಾಡ್ತಿ ಏನ ?"

"ಬೇಜಾರಾಗಿದ್ರು ಬಡವೀದ ಮಜಾ ನೋಡಬ್ಯಾಡಿರಿ ಸಾಹೇಬ್ರು ! ನಿಮಗ ಗೊತ್ತಿಲ್ಲ ಎಷ್ಟ ತ್ರಾಸೈತಿ ಅನ್ನೂದ ?"

"ಹೌದು. ಬ್ಯಾಡಾದ ಕೆಲಸ ಮಾಡೂದು ತ್ರಾಸನs."

"ನಿಮಗ ಗೊತ್ತಿದ್ದ ಹತ್ತ ಪೈಸೆ ಕೊಟ್ಟ ಬಿಡ್ರೆಲ್ಲ ? ನಿಮಗೇನ ಲುಕ್ಸಾನ ಆಗ ತೈತಿ ? ನಿಮ್ಮ ಸಂಪತ್ತೇನ ಕೇಳಾಕ ಹತ್ತಿಲ್ಲ ?"

"ನಿನ್ನ ಹಟ ನೋಡಿದರ ಕೊಟ್ಟ ಬಿಡಬೇಕನಸತೈತಿ. ಆದರ ಕೊಡಲಾರೆ... ಸಂಜೀಕ ಕೂಸಿಗೆ ಏಳು ರೂಪಾಯಿ ಹತ್ತ ಪೈಸೆ ಔಷಧ ಒಯ್ಯಬೇಕು."

"ಮತ್ತ ನಿಮ್ಮ ಹಂತೇಕ ರೊಕ್ಕ ಇಲ್ಲೇನ್ರಿ ?"

"ನಾಲ್ವತ್ತ ಪೈಸೆ ಅದಾವು."

"ಅದರಾಗಿಂದ ಹತ್ತ ಪೈಸೆ ಕೊಡ್ರಿ."

"ಮನೀಗಿ ಹೋಗಾಕ ಬಸ್ಸಿಗೆ ೪೦ ಪೈಸೆ ಕೊಡಬೇಕು."

"ಟಿಕೀಟಿಲ್ಲದ ಹೋಗಬೇಕರಿ."

"ಸಿಕ್ಕಬಿದ್ರು ಫಜೀತಿ ಆಗ್ತೈತಿ."

"ನಾ ಯಾವಾಗಾದರೂ ಟೀಕಿಟ ಇಲ್ಲದs ಬರ್ತೀನಿ, ಹೋಗ್ತೀನ್ರಿ"
"ಯಾವಾಗಾರ ಸಿಕ್ಕಿ ಬಿದ್ದಿಲ್ಲೇನು ?"
"ಒಮ್ಮೆ ಸಿಕ್ಕಬಿದ್ದಿದ್ನಿರಿ."
"ಮತ್ತ ?"
"ಹೇಳಿ ಬಿಟ್ನಿ...ಇರದs ಇದ್ರು ಕೊಡಲಿ ಎಲ್ಲಿಂದ ? ಏನ ಮಾಡ್ತೀರಿ ಮಾಡ್ಕೊರಿ... ಟಿಕೀಟಿನಾಂವ ಗಾಬರಿಯಾದ, ಆಗ ಒಬ್ಬ ಒಳ್ಳೆ ಮನಸ್ಯಾ ಟಿಕೀಟ ತಗಿಸಿದ...ತನ್ನ ಕೂಡ ಕರಕೊಂಡ ಹೋದ...ಊಟ ಮಾಡಿಸಿದ ಮತ್ತು...ಎರಡ ರೂಪಾಯಿನೂ ಕೊಟ್ಟ!"
"ಬರೇ ಎರಡ ರೂಪಾಯಿ ?"
"ನನ್ನಲ್ಲಿ ಉಳದೈತೇನ್ರಿ ಸಾಹೇಬ್ರ ? ಏನೋ ಸ್ವಲ್ಪ ಇದ್ದಾಗ ಇಂಥಾ ಕೆಲಸ ಮಾಡಿ ತಿನ್ನಾಕ ಮನಸ ಒಪ್ಪತ್ತಿರಲಿಲ್ಲ...ಬದಕ್ತೀನಿ ಅನಸ್ತಿತ್ತು...ಆದರ ಬದಕೂದು ಸಾಯೂದು ಒಂದs ಆತು ! ಆಗ ಯಾರಾದರೂ ಒಂದ ರೂಪಾಯಿ ಕೊಟ್ಟರೂ ಭಾಳs ಅಂತ ತಿಳೀರಿ !"
"ನೀ ಬ್ಯಾರೆ ಕೆಲಸ ಯಾಕ ಮಾಡೂದಿಲ್ಲ ? ಮುಂಸುರಿ ಕೆಲಸ ಸಿಕ್ಕs ಸಿಗತೈತಿ,"
"ಮಾಡಿದ್ನಿ ಸಾಹೇಬ್ರ, ಆದರ ಅಲ್ಲ್ಯೂ ಇದೆಲ್ಲ ಮಾಡಬೇಕಾತು...ಮೈ ಒಪ್ಪಲಿಲ್ಲ, ದುಪ್ಪಟ್ಟ ದಣಿವಾಕ್ಕಿತ್ತು...ಮಾಡಬೇಕಾದ್ರ ಮುದುಕಿ ಆದ ಮ್ಯಾಲ ಮಾಡತೀನಿ ಈ ಕೆಲಸ ಅಂತ ವಿಚಾರ ಮಾಡಿದ್ನಿ."
"ಆದರ ಎಲ್ಲಾರೂ ಅಂಥವ್ರ ಇರೂದಿಲ್ಲ."
"ನೀವ್ರ ನಿಮ್ಮ ಮನ್ಯಾಗ ಇಟಕೊರ್ರಿ... ಝಟಪಟ ಅಡಿಗಿ ಮಾಡ್ತೀನಿ...ಎಲ್ಲಾ ಕೆಲಸ ಮಾಡ್ತೀನಿ."
"ನಮ್ಮದs ನಮಗ ನೀಗವಾಲ್ತು ? ನಿನಗೇನ ಕೊಡಲಿ ?"
"ನಿಮಗೂ ನೀಗವಾಲ್ತ ?...ನೀವು ನೌಕರಿ ಮಾಡ್ತೀರಿ!"
"ಸರಕಾರ ಕೊಡತೈತಾರ ಏನ ?"
"ನೀವು ಸರಕಾರನs ಕೇಳೂದಿಲ್ಲ ಯಾಕ ? ರಾಮಬಾಬು ಅಂತಿರತಾರ; ಸರಕಾರ ಎಲ್ಲಾ ಕೊಡತೈತಿ...ಆದ ಕೊಡಾಕಬೇಕು..."
"ಸರಕಾರ ಕುರಡೇನಿಲ್ಲ, ಅದಕ್ಕ ನಾವು ಹ್ಯಾಂಗ ಬದಕಾಕ ಹತ್ತೀವಿ ಅನ್ನೂದು ಗೊತ್ತಿಲ್ಲ."
"ರಾಮಬಾಬು ಅಂತಾರ: ಅಳದಿದ್ರ ತಾಯಿನೂ ಹಾಲ ಕೊಡದಿಲ್ಲ ! ಆದರ ಈ ಮಾತ ವಿಚಿತ್ರ ಅನಸ್ತೈತಿ ಸಾಹೇಬ್ರ, ನನ್ನ ಮಗ ಅಳತಿರತಾನ ಆದರ ನನಗ ಹಾಲ ಕೊಡಾಕ ಆಗೂದಿಲ್ಲ! ಹಂಗಾರ ರಾಮಬಾಬು ಹಂಗ್ಯಾಕ ಹೇಳ್ತಾರ ?"
"ರಾಮಬಾಬು...ರಾಮಬಾಬು...ಆದ್ಯಾವ ಮಾರಾಯನ ಹೆಸರ ತಗೊಂಡ ನೀ ನನ್ನ

ತಲಿ ತಿಂತಿ ಯಾಕ ? ಹೋಗು ತಾಯಿ. ನಾ ಕೆಲಸ ಮಾಡಬೇಕ ಬಿಡು. `ನಿನ್ನ ಒಬ್ಬಾಕಿ ಸಲವಾಗಿ ನಾ ಇಲ್ಲಿ ಕುಂತಿಲ್ಲ...ಏ, ಅರ್ಧಮರ್ಧ ಕಳದ ಹೋತು ಬಾಕಿ ಅರ್ಧ ಆಯುಷ್ಯ ಕಳದ ಹೋಗ್ತೈತಿ...ಈ ಜಂಜಾಟಕ್ಕಿಂತ ಸತ್ತ ಹೋಗು...ನಿನಗ ಅವಶ್ಯ ಸ್ವರ್ಗ ಸಿಗತೈತಿ!"

"ಇಲ್ಲ ಸಾಹೇಬ್ರ–ನಾ ಬದಕಬೇಕಂತೀನಿ,"

"ಯಾತಕ್ಕ ? ಏನ ಉಳದೈತಿ ನಿನ್ನ ಜೀವನದಾಗ ?"

"ನನ್ನ ಲಾಲೂ ಆದಾನಲ್ರಿ ?"

"ನೀ ಬದಕಿದ್ಹಾಂಗ ಅವನೂ ಬದಕ್ತಾನ,"

"ಅಂವಾ ದೊಡ್ಡಾಂವಾಗಿ ದಿಕ್ಕಿಲ್ಲದಾಂವಾ ಆಗಬಾರದು ಅಂತ ನಾ ಬಯಸೂದು,"

"ಆಂವಾ ದಿಕ್ಕಿಲ್ಲದಾಂವಾ ಆಗ್ತಾನೊ ಇಲ್ಲೊ ? ಯಾರೂ ಏನೂ ಹೇಳಲಾರರು. ಆದ ನನ್ನ ಕೈಯಾನ ಮಾತೂ ಅಲ್ಲ, ನಿನ್ನ ಕೈಯಾಂದೂ ಅಲ್ಲ."

"ಅದರ ಸರಕಾರದ ಕೈಯಾಗಾರs ಐತ್ಯೊ ಇಲ್ಲರಿ? ಸರಕಾರದ ವೋಟ ನಮ್ಮ ಕೈಯಾಗೈತಿ."

"ಹಂಗಾರ ತೆಗಿ ಹತ್ತ ಪೈಸಾ. ಅಂದರ ಈಗಿಂದೀಗ ನಿನ್ನ ಸರಕಾರ ತಯಾರಾಗ್ತೈತಿ."

"ಸರಕಾರದ ಕಿಮ್ಮತ್ತ ಕಟ್ಟತೀರ್‍ಯಾ ಸಾಹೇಬ್ರ ?"

"ವೋಟ ಮಾಡಿಸುವ ಚಾರ್ಜ ಹತ್ತ ಪೈಸೆ...ಆಗ ನಿನ್ನ ಸರಕಾರ ತಯಾರಾಗ್ತೈತಿ ನಿನ್ನ ವೋಟಿನಿಂದ. ಅಂದಾಗ ಸರಕಾರದ ಕಿಮ್ಮತ್ತ ಹತ್ತ ಪೈಸ ಆಗ್ಲಿಲ್ಲ ? ಭಾಳ ಅನಸದಿದ್ರ ಲಾಭ ಕೂಡಿಸು."

"ನಿಮ್ಮ ತೆಲಿ ತಿರಗಲ್ಲಲ್ಲರೀ ಸಾಹೇಬ್ರ ?"

"ತಿರಗಿರದಿದ್ರೂನೂ ನೀ ಅವಶ್ಯ ತಿರಗಸ್ತೀ"

"ನನಗೆಲ್ಲಾ ಗೊತ್ತಾಗ್ತೈತಿ, ಒಂದು ಹತ್ತಪೈಸೆ ಸಲವಾಗಿ ಸಾಯ್ತೀರಿ ನೀವು!"

"ಸ್ವತಃ ನಿನ್ನ ಹಂತೇಕ ಹತ್ತ ಪೈಸಾ ಇಲ್ಲ. ನನ್ನಿಂದ ಯಾಕ ಬಯಸ್ತೀ ?"

"ನೀವು ನೌಕರಿ ಮಾಡ್ತೀರಿ ಅದಕs"

"ಮತ್ತ ನೀನೂ..."

"ನಾ ಅರ್ಧಾ ಹೊಟ್ಟಿ ತಿಂದ ಬದಕ್ತೀನಿ,"

'ನಾ ಏನ ಸಕ್ಕರಿ ತುಪ್ಪ ತಿಂತೀನೇನ ?'

'ತಿಂತಿರದಿದ್ರೂ ಉಪವಾಸಂತೂ ಇರೂದಿಲ್ಲ. ಹೊಟ್ಟಿ ತುಂಬ ತಿನ್ನಾಕಸಿಕ್ರ ಮನಸ್ಯಾ ಧರ್ಮಾಕರ್ಮಾ ಅಂತನೂ ಮಾಡಬೇಕು...ವೋಟ ಮಾಡಸೂದೂನೂ ಧರ್ಮದ ಕೆಲಸನs...ಧರ್ಮಾಕರ್ಮದಾಗ ನಿಮಗ ನಂಬಿಕಿ ಇಲ್ಲ ಅಂದ್ಹಂಗಾಂತು ಅಲ್ಲೇನ್ರಿ ?'

'ನಂಬಿಕಿ ಇರದಿದ್ರೂ ನಂಬಬೇಕಾಗ್ತೈತಿ'

'ಹಂಗಾ ಈವತ್ತ ನನಗ ಹತ್ತ ಪೈಸಾ ಭಿಕ್ಷಾನs ಕೊಡ್ರಿ.'

‘ನನ್ನ ಹಂತೇಕ ರೊಕ್ಕ ಇದ್ದಾಗ ಭಿಕ್ಷಾ ಕೊಡ್ತೇನಿ.’

‘ನಿಮ್ಮ ಹಂತೇಕ ಯೆಳೂವರಿ ರೂಪಾಯಿ ಅದಾವಲ್ರಿ ?’

‘ಏಳೂವರಿ ರೂಪಾಯಿ ಲೆಕ್ಕಾನೂ ನಿನಗೆ ಹೇಳೇನಿ!... ಇನ್ನ ಇಲ್ಲಿಂದ ಹೊಂಟ ಹೋಗು... ನೀನಂತೂ ಹೇಣ್ತಿ ಹಾಂಗ ಜೇಬಿಗೆ ಕೈ ಹಾಕ್ತಿಯಲ್ಲ ?’

‘ಒಂದು ಹತ್ತ ಪೈಸೆ ಸಲವಾಗಿ ನನ್ನ ಪೋಟ ಹಂಗs ಉಳದ ಬಿಡತೈತಿ... ಇದ ಬಾಳ ಕೆಟ್ಟರಿ ಸಾಹೇಬ್ರ.’

‘ಹಿಂಗ ಮಾಡು... ನಿನ್ನ ರಾಮಬಾಬುವಿನಿಂದ ಇಸಿದುಕೊಂಡು ಬಾ.’

‘ನನಗ ನಾಚಿಕಿ ಅನಸ್ತೈತಿ. ಹೋಗಲಿ, ಅವರ್ಯಾವ ದೊಡ್ಡ ಶ್ರೀಮಂತರು ? ಮಾರಾಯರು ಅವರು ನನಗೆ ತಾಂವs ತಿಳಿದ ಸಹಾಯ ಮಾಡ್ತಾನs ಇರ್ತಾರ. ಈ ಉಪಕಾರ ನೀವು ಮಾಡ್ರಿ ಸಾಹೇಬ್ರ!’

‘ಇನ್ನೊಬ್ಬರ ಮ್ಯಾಲ ಉಪಕಾರ ಮಾಡೂದು ಮನಸ್ಯಾಗs ಬರದ ಕೊಟ್ಟಿಲ್ಲ!’

‘ಮನಸ್ಯಾ ಮನಸ್ಯಾಗ ಪರಿಹಾರ ಅಗ್ತಾನ. ಒಬ್ಬ ಮತ್ತೊಬ್ಬನ ನೋವು ತಿಳಕೋತಾನ.’

‘ಏನ್ನs ಅನ್ನ, ನನಗೆ ಹತ್ತು ಪೈಸೆ ಕೊಡಾಕಾಗೂದಿಲ್ಲ...ಕೊಡಾಕಾಗೂದಿಲ್ಲ.’

‘ನಿಮಗೂ ತ್ರಾಸ ಐತಿ !’

‘ನೀ ವಿಚಿತ್ರ ಹೆಂಗಸ ಅದಿ...ನಾ ಒಂದ ಹತ್ತ ಪೈಸೆ ಸಲವಾಗಿ ನಿನ್ನನ್ನು ದೂಡಾಕ ಹತ್ತೇನಿ... ನೀ ನನಗ ತ್ರಾಸ ಐತಿ ಅಂತಿ ...ನಿನಗ ಕೆಟ್ಟ ಅನಸೂದಿಲ್ಲ?’

‘ಕೆಟ್ಟ ಯಾಕ ಅನಿಸಿಕೊಳ್ಳಲಿ ಸಾಹೇಬ್ರ ? ರಾಮಬಾಬು ಖರೆ ಹೇಳ್ತಾರ : ನಮ್ಮೆಲ್ಲಾರ ಪರಿಸ್ಥಿತಿ ಒಂದs ಐತಿ. ಯಾರ ಸಲವಾಗಿ ಯಾರೇನ ಮಾಡ್ತಾರ ?’

‘ಈ ಸಮಸ್ಯೆಗೆ ನಿನ್ನ ಬಾಬು ಏನೂ ಹೇಳೂದಿಲ್ಲ ?’

‘ಅವರಂತಾರ : ಒಬ್ಬ ಮನಸ್ಯಾನ ನೋವು ದೂರ ಅದರೆ ಮನಸ್ಯಾ ಸುಖಿ ಆಗೂದಿಲ್ಲ, ಎಲ್ಲಾರ ದುಃಖ ದೂರ ಆದ್ರನs ಮನಸ್ಯಾ ಸುಖಿ ಆಗ್ತಾನ...ಅಂವಾ ಯಾರ ಮ್ಯಾಲೂ ಕೈ ಊರಬೇಕಾಗೂದಿಲ್ಲ...ಈ ಕೆಲಸ ಸರಕಾರದ ಸಹಾಯದಿಂದನ, ಆಗಾಕ ಸಾಧ್ಯ ಐತಿ.’

‘ನಿನಗಂತೂ ಸರಕಾರದ ಭೂತ ಬಡಕೊಂಡೈತಿ ರಾಮಕಲಿ! ನೂರ ಸಲ ಹೇಳೀದೀನಿ, ನಿನ್ನ ಸರಕಾರ ಹತ್ತ ಪೈಸೆ ಒಳಗೆ ತಯಾರಾಗತೈತಿ. ಆದರ ನಿನ್ನ ಹಂತೇಕ ಒಂದ ಕವಡೀನೂ ಇಲ್ಲ.’

‘ಬರೋಬರಿ ಸಾಹೇಬ್ರ, ನನ್ನ ಸಲವಾಗಿ ಒಂದ ಕೆಲಸ ಮಾಡ್ರಿ.’

‘ಹೇಳು’

‘ನೋಡ್ರಿ ನನ್ನ ಮನಸ ಮುರಿಬ್ಯಾಡ್ರಿ.’

“ಹೇಳರೆ ಹೇಳು.”

"ಸಂಜೀಕ ಸ್ವಲ್ಪ ಕಾಲ್ನಡಿಗೀಲಿ ನಡವ ಹೋಗ್ರಿ. ಮುಂದ ಬೇಕಾರ ಬಸ್ ಹಿಡೀರಿ...ದೊಡ್ಡ ಉಪಕಾರ ಆಗತ್ತೈತಿ."

"ಅಂದರ ನಾ ನಿನಗ ಹತ್ತ ಪೈಸೆ ಕೊಡಬೇಕು."

"ಇನ್ನೇನ ಹೇಳಲಿರಿ ?"

"ಹತ್ತ ಪೈಸೆ ಬದಲ ನೀ ಏನ ಕೊಡ್ತಿ ?"

"ನಿಮ್ಮನ್ನ ಹಾಡಿ ಹರಸ್ತೀನಿ...ನಿಮ್ಮ ಸಲುವಾಗಿ ದೇವರಿಗೆ ಪ್ರಾರ್ಥನಾ ಮಾಡ್ತೀನಿ."

"ಪ್ರಾರ್ಥನೆಯಿಂದ ಆಗೋದೇನು, ಹೋಗೋದೇನು ?"

"ಹಂಗಾರ ನನ್ನನ್ನ ನಿಮಗ ಅರ್ಪಿಸ್ತೀನಿ."

"ಹತ್ತ ಪೈಸೆ ! ಕೇವಲ ಹತ್ತ ಪೈಸೆಯಲ್ಲಿ?"

"ಈ ಹತ್ತ ಪೈಸೇಕ ಭಾಳ ಕಿಮ್ಮತ ಐತರಿ ಸಾಹೇಬ್ರ!...ನಮ್ಮ ಸರಕಾರ ಬಂತಂದ್ರ ನಮ್ಮ ಬದುಕು ಸುಧಾರಸತ್ತೈತಿ !...ಲಾಲೂನ ಚಿಂತಿ ಬಗಿ ಹರಿತ್ತೈತಿ."

"ಸರಿ. ಸಂಜೀಕ ಐದ ಘಂಟೇಕ ಬಾ ಹೋಗು."

"ಬರತೀನ್ರಿ."

"ನಿನಗ ಜಾಗಾ ಐತಿಲ್ಲೊ ?"

"ಗುಡಸಲೈತ್ರಿ...ಆದರ ನಿಮಗ ಪಸಂದಾಗಾಕಿಲ್ಲ."

"ಆದರ ಚಿಂತಿ ಮಾಡಬ್ಯಾಡ."

"ನನಗ ವೋಟ ಸಿಗತೈತಲ್ರಿ ಮತ್ತ ?"

"ಯಾಕ ಸಿಗೂದಿಲ್ಲ ? ಅವಶ್ಯ ಸಿಗತೈತಿ. ಆದರ ಐದ ಘಂಟೇಕ ನೆನಪೀಲೆ ಬರಬೇಕು."

"ನೆನಪೀಲೆ ಬರತೀನ್ರಿ...ಬಡವಿ ಅದೀನ್ರಿ ಆದ್ರ ಹೊಲಸ ಇಲ್ರಿ !"

ಸಾಹೇಬನಿದ್ದ, ರೊಕ್ಕ ಇತ್ತು, ಮನಸ್ಸಿತ್ತು, ಜಾಣತನವಿತ್ತು, ಅವಸರವಿತ್ತು, ಸಮಯವಿತ್ತು, ಲಾಭವಿತ್ತು, ಸುಖವಿತ್ತು !

ರಾಮುಕಲಿ ಇದ್ದಳು, ವೋಟು ಇತ್ತು, ಮಗ ಇದ್ದ, ಕನಸುಗಳಿದ್ದವು, ಸಂತೋಷವಿತ್ತು, ಆಶೆ ಇತ್ತು, ಆನಂದವಿತ್ತು.

●

ಈಗ ಬಾಬು ಇದ್ದಾನೆ, ಪಲ್ಲಂಗವಿದೆ, ರಾಮುಕಲಿ ಇದ್ದಾಳೆ ! ಕೂಸಿಲ್ಲ, ಔಷಧಿ ಇಲ್ಲ, ಹೆಂಡತಿ ಇಲ್ಲ, ಮನೆ ಇಲ್ಲ, ಬಸ್ ಇಲ್ಲ, ಭಾಡಿಗೆ ಇಲ್ಲ ! ಶರೀರವಿದೆ, ಕೇವಲ ಶರೀರವಿದೆ !

ರಾಮುಕಲಿ ಇದ್ದಾಳೆ, ಪಲ್ಲಂಗವಿಲ್ಲ, ಸಾಹೇಬರಿಲ್ಲ, ಧಂಧಾ ಇಲ್ಲ, ಶರೀರವಿಲ್ಲ! ಮಗ ನಿದ್ದಾನೆ, ಬದುಕು ಇದೆ, ವೋಟ ಇದೆ, ಸರಕಾರವಿದೆ, ಕನಸುಗಳಿವೆ, ನಿನ್ನೆ ಇವೆ,

ಇಂದು ಇದೆ-...

"ಸಾಹೇಬ್ರು ಗಡಬಡ ಮಾಡ್ರೆಲ್ಲ ?"

"ಗಡಬಡ ಯಾಕ ?

"ಲಗೂನs ಕಪ್ಯಾಕ ಆಗರಿ, ಲಾಲೂ ಬರಾಕ ಹತ್ತಿರಬೇಕು."

"ಕಡ್ಯಾಕ?...ಕಡ್ಯಾಕಂತೂ ಆಗೇನಿ !"

"ಆಂ? ಅರಿವಿ ತೊಟ್ಟಕೊಳ್ಳಾಕ ಹತ್ತೀರಿ ? ನೀವು ಕಪ್ಯಾಕ ಆಗಿಲ್ಲ ?"

"ಆದ್ನಿ."

"ಯಾವಾಗ ?"

"ಭಾಳ ಹೊತ್ತಾತು."

"ನನ್ನ ಮ್ಯಾಲ ದಯಾ ತೋರಿಸಾಕ ಹತ್ತಿರಲ್ಲ ಮತ್ತ ?"

"ದಯಾ ತೋರಿಸುವ ಯಾಳೆ ಏನ ಇದ ?"

"ನನ್ನಾಣಿ ?"

"ನಿನ್ನಾಣಿ."

"ನನಗ ಗೊತ್ತs ಆಗಲಿಲ್ಲ !"

"ಏನು ? ನಿನಗ ಗೊತ್ತs ಆಗಲಿಲ್ಲ ?"

"ಇಲ್ಲಲ್ಲ ?"

"ಯಾಕ ನಾಟಕ ಮಾಡ್ತಿ ?"

"ಖರೇ ಸಾಹೇಬ್ರು ನನ್ನಾಣಿ !"

ಆಣೆ ಇದೆ, ಸಾಹೇಬ ಇದ್ದಾನೆ, ಗಂಡಸಿದ್ದಾನೆ, ಹೊಲಸಿದೆ, ತಿರಸ್ಕಾರವಿದೆ, ಹಣವಿದೆ, ಚರ್ಮವಿದೆ, ಬೆಂಕಿ ಇದೆ, ಕಲೆ ಇದೆ, ಔಷಧಿ ಇದೆ, ಮನೆ ಇದೆ, ಹೆಂಡತಿ ಇದ್ದಾಳೆ, ಕೂಸಿದೆ. ಚಿಂತೆ ಇದೆ, ಭಯವಿದೆ, ಪಾಪವಿದೆ, ಪ್ರೇಮ ಇದೆ, ಧರ್ಮವಿದೆ, ಅಧರ್ಮವಿದೆ, ಗಡಿಬಿಡಿ ಇದೆ.

"ಸರಿ, ನಡೀತೀನಿ ರಾಮಕಲಿ !...ನಿನ್ನ ಕೂಡಿ ಭಾಳ ಛಲೊ ಅನಿಸ್ತು."

"ಆದರ ಸಾಹೇಬ್ರು ನನ್ನ ಫೋಟು ?"

"ನಿನ್ನ ಫೋಟ ಆಗಿ ಹೋಯ್ತು. ಇದೋ ತಗೊ ಪೇಪರ... ಈ ಒಂದ ನೋಟನೂ ಇಟಕೊ... ನಿನಗ ಬೇಕಾದೀತು."

"ಆದರ ನಿಮ್ಮ ಕೆಲಸ ನಿಂತ ಹೋಗ್ತೈತಿ ಸಾಹೇಬ್ರು. ಕೂಸಿಗೆ ಔಷಧೀನೂ ಒಯ್ಯು ಬೇಕಲ್ರಿ?"

"ತಗೋತೀನಿ ಮತ್ತಾವ್ಯಾಗಾರ."

"ಬ್ಯಾಡ ಸಾಹೇಬ್ರು. ಪೇಪರ ನನಗ ಕೊಡ್ರಿ. ನೋಟ ನೀವು ತಗೋಳ್ರಿ. ಬೇಕಾದಾಗ ಹತ್ತ ಪೈಸೆ ಕೊಡಲಿಲ್ಲ. ಇದುಂತೂ ಐವರ ನೋಟೈತಿ."

"ನಾ ಏನಾರ ವ್ಯವಸ್ಥೆ ಮಾಡ್ತೀನಿ. ನೀ ತಗೋ,"

"ನನ್ನ ಹಂತೇಕ ಈವತ್ತಿನ ಊಟಕ್ಕೈತಿ. ನನಗ ಇದ ಬ್ಯಾಡ್ರಿ."

"ಆದರೂ ಇಟಕೋ."

"ಬ್ಯಾಡ, ನೀವು ಕೂಸಿಗೆ ಔಷಧ ಒಯ್ಯಬೇಕು....ನನ್ನಾಣಿ."

ಸಾಹೇಬ ಇದ್ದಾನೆ. ಸಂಕಟವಿದೆ. ತೊದಲುವಿಕೆಯಿದೆ. ಕಾಲುಗಳಿವೆ. ನಡೆ ಇದೆ. ಆಸೆ ಇದೆ. ಕಣ್ಣುಗಳಿವೆ. ಭೂಮಿ ಇದೆ. ಸಮಸ್ಯೆ ಇದೆ. ವಿಸ್ಮಯವಿದೆ. ತಂಗಿದೆ. ನಿರ್ವಣ್ಣತೆ ಇದೆ. ಗುಡಿಸಲಿದೆ. ಬಾಗಿಲು ಇದೆ. ರಾಡಿ ಇದೆ. ದಾರಿ ಇದೆ. ಬಂಜರಿದೆ. ಕತ್ತಲಿದೆ. ಕಾಡು ಇದೆ—ಬದುಕು ಇದೆ!

●

ರಾಮಕಲಿ ಇದ್ದಾಳೆ. ಬದುಕು ಇದೆ. ಕನಸುಗಳಿವೆ. ರಾಡಿ ಇದೆ. ದಾರಿ ಇದೆ. ಬಂಜರಿದೆ. ಪೋಟ ಇದೆ. ದರಕಾರ ಇದೆ. ಸರಕಾರವಿದೆ. ಕ್ಲೇಶವಿದೆ. ಉಪದೇಶ ವಿದೆ. ಕತ್ತಲು ಇದೆ. ಕಾಡು ಇದೆ, ಮೋಸವಿದೆ, ಗಳಿಕೆ ಇದೆ, ಹೋರಾಟವಿದೆ ! ಹೋರಾಟವಿದೆ—ಗಳಿಕೆಯೊಂದಿಗೆ, ಮೋಸದೊಂದಿಗೆ, ಕಾಡಿನೊಂದಿಗೆ, ಕತ್ತಲೆ ಯೊಂದಿಗೆ, ಉಪದೇಶದೊಂದಿಗೆ, ಕ್ಲೇಶದೊಂದಿಗೆ, ಸರಕಾರದೊಂದಿಗೆ, ದರಕಾರ ದೊಂದಿಗೆ, ಪೋಟಿನೊಂದಿಗೆ, ಬಂಜರಿನೊಂದಿಗೆ, ದಾರಿಯೊಂದಿಗೆ, ರಾಡಿಯೊಂದಿಗೆ, ಕನಸುಗಳೊಂದಿಗೆ, ಬದುಕಿನೊಂದಿಗೆ...ರಾಮಕಲಿಯೊಂದಿಗೆ... !

●

ಕಾವ್ಯ ಸತ್ಯದ 'ಸ್ವ'ರೂಪ ವಿಚಾರ

ಶಂ. ಬಾ. ಜೋಶಿ

'ಕಾವ್ಯಸತ್ಯ'ದ ವ್ಯಾಪ್ತಿ

'ಕಾವ್ಯ–ಸತ್ಯ' ಎಂಬಲ್ಲಿ ಕಾವ್ಯ (ಸೌಂದರ್ಯ) ಇದೇ ಸತ್ಯ; ಸತ್ಯ ಇದೇ ಕಾವ್ಯ (ಸೌಂದರ್ಯ). ಆದರೆ 'ವಾಸ್ತವ : ಸತ್ಯ' ಇದಕ್ಕೆ ಪ್ರತಿಯಾಗಿ 'ಕಾವ್ಯಸತ್ಯ' ಎಂಬ ಮಾತನ್ನು ಬಳಸಲಿಕ್ಕೂ ಅವಕಾಶವಿದೆ. ಆದರೆ ಇವರಲ್ಲಿ 'ಕಾವ್ಯ' ಮತ್ತು 'ಸತ್ಯ' ಇವೆರಡೂ ಸಂಕೇತಗಳ ಅಪಮೂಲ್ಯನವು ಆಗುತ್ತಿದೆ. ಕೇವಲ ಕಲ್ಪನಾ–ವಿಲಾಸಕ್ಕೇ ಪಟ್ಟ ಕಟ್ಟುವ ಅನ್ಯಾಯವು ಇಲ್ಲಿ ಸಂಭವಿಸುತ್ತಿದೆ. ನನಗೆ ಕಾಣುತ್ತಿರುವಂತೆ, 'ಕಾವ್ಯಸತ್ಯ'ದಲ್ಲಿ ವಾಸ್ತವ : ಸತ್ಯವೂ ಒಳಗೊಳ್ಳುತ್ತಿದೆ. ಏಕೆಂದರೆ ಭಾಷಿಕ ಸಂಕೇತಗಳ ಅರ್ಥವು ವ್ಯಕ್ತಿಯನ್ನು ಅವಲಂಬಿಸಿರುವಂತಹದಲ್ಲ !

ಭಾಷಿಕ ಸಂಕೇತಗಳಿಗೆ ಆ ಬಾಳಿನ ಪಾತಳಿಗಳ ಪ್ರಭಾವದಲ್ಲಿ ಅರ್ಥವು ಕಾಣಿಸಿಕೊಳ್ಳುತ್ತದೆ. ಈ ಕಾರಣದಿಂದಾಗಿ, ಕಾವ್ಯಸತ್ಯದ 'ಸ್ವ'ರೂಪವನ್ನು ನಿರ್ಧರಿಸುವ ಪಾತಳಿಗಳ ಸುಸ್ಪಷ್ಟ ಪರಿಚಯವು ಅತ್ಯವಶ್ಯವಾಗುತ್ತಿದೆ. ಇದು ನಿಜವಿದ್ದರೆ ಕಾವ್ಯಸತ್ಯದ 'ಸ್ವ'ರೂಪವು ಎರಡು ಬಗೆಯದ್ದು ಆಗುವ ಅನಿವಾರ್ಯತೆ ಇದೆ.

೧) ಮನು—ಮಾನವ ಸಂಪ್ರದಾಯದ ಕಾವ್ಯ 'ಸ್ವ'ರೂಪದ ಬಗೆಯೇ ಒಂದು; ಮತ್ತು ೨) ನರ(ಳ) ಸಂಪ್ರದಾಯವು ಮೆಚ್ಚಿಕೊಂಡಿರುವ 'ಕಾವ್ಯಸತ್ಯ'ದ 'ಸ್ವ' ರೂಪವೇ ಇನ್ನೊಂದು ಬಗೆಯದ್ದು ಆಗಿದೆ. ಮೊದಲನೆಯ ಪ್ರಕಾರದ ಕಾವ್ಯ ಸತ್ಯವು ಮಾನವನ ಏಳ್ಗೆಗೆ ಕಾರಣವಾಗುವಂತೆ, ಎರಡನೆಯ ಬಗೆಯ ಕಾವ್ಯಸತ್ಯವು ಮಾನವ ಸಂಪ್ರದಾಯದ ಅಧೋಗತಿಗೆ ಕಾರಣವಾಗುತ್ತ ಬಂದಿದೆ. ಭಾರತೀಯ ಪುರಾತನರು (ಅ) ಮಾನವ ಸಂಪ್ರದಾಯದ ಕಾವ್ಯಸತ್ಯಕ್ಕೆ 'ಋತ' ಸ್ವರೂಪೀ: ವಿಶ್ವ ನಿಯಮದ ಬೆಳಕಿನಲ್ಲಿ ಅರಿಕೆಗೆ ಬರುವ 'ಸತ್ಯ' ಎಂದು ಹೆಸರಿಸಿದ್ದರು. ವೈವಸ್ವತ

ಮನು—ಮಾನವ ಸಂಪ್ರದಾಯದಲ್ಲಿ-ವೈವಸ್ವತ ಮನ್ವಂತರದಲ್ಲಿ-ಋತ ಸತ್ಯವು ಮಾತ್ರ ಲಿಪ್ತವಾಸ್ಯವಿತ್ತು. ಆದರೆ ಮೃತ್ಯು (ಚಾಂದ್ರ) ತತ್ತ್ವದ ಆರಾಧನೆಯೂ ಮಂಡಲೋಪಾಸನೆಯು-ತಲೆಯೆತ್ತಿ ಈ ಪಂಥವು ಪ್ರಬಲವಾಗತೊಡಗಿದಂತೆ, ವೈವಸ್ವತ ಮನ್ವಂತರವು ನಾಮ ಮಾತ್ರಕ್ಕೇ ಉಳಿದು ವಿಷ್ಣು ಪಂಥೀಯ 'ಶ್ವೇತ ವರಾಹ—ವಾರಾಹ ಕಲ್ಪವು' ಪ್ರತಿಷ್ಠೆ ಪಡೆದಿರುವುದನ್ನು ಕಾಣಬಹುದಾಗಿದೆ ! ಭಾರತೀಯ ಪೂರ್ವಪರಂಪರೆಯಲ್ಲಿ 'ಮನ್ವಂತರ' ಧಾರಣೆಯಂತೆ, 'ಕಲ್ಪ' ಎಂಬ ಪರಿಕಲ್ಪನೆಯೂ ಕಾಲಾವಧಿಸೂಚಕ ಸಂಕೇತವಾಗಿದ್ದುಂಟು !

ಬಾಳಿನ ಪಾತಳಿಗಳ ವಿಚಾರ

೧) ಮಾನವ ಶಾಸ್ತ್ರಜ್ಞ ಕ್ರೋಬರನ ನಿಷ್ಕರ್ಷದಂತೆ (ಅ) ಈ ಮಾನವ ಸಂಸ್ಕೃತಿಯು 'Super Organic' (ಸ್ವರ) ಪಾತಳಿಯ ಮೇಲೆ ಇದೆ (ಬ) ಮಾನವ ಸಂಸ್ಕೃತಿಗೆ ಆಕಾರವನ್ನಿತ್ತಿರುವ ಈ 'ಸ್ವರ್' ಪಾತಳಿಗೆ ಪ್ರತಿಯಾಗಿ ಈ ಬಾಳಿನಲ್ಲಿ 'Organic' (ಪ್ರಾಣಲಿಂಗ ಚೇತಸ ಶಕ್ತಿಯ ಇಂದ್ರಿಯಗಳ) ಪಾತಳಿಯೂ ಒಂದುಂಟು ಎಂಬು ದನ್ನು ಇಲ್ಲಿ ಒಪ್ಪಿದಂತೆಯೇ ಇದೆ.

೨) ಡಾ॥ ಕ್ರೋಬರನ ಈ ಆಶಯವನ್ನು ಹೀಗೂ ಹೇಳಬಹುದು : ಅ) ಈ ಬಾಳಿನಲ್ಲಿ ಜೀವನದ ಪ್ರಜ್ಞೆಯ ಅಂಗವಾದ ಪುನಸ್ ತತ್ವದ (ಸೌರ) ಪಾತಳಿಯು ಇರುವಂತೆ. ಬ) ಜೀವಿತದ : ಮೃತ್ಯು ತತ್ವದ (ಚಾಂದ್ರ) ಪ್ರಾಣಲಿಂಗದಿಂದ ಪ್ರಚೋದಿತ ಇಂದ್ರಿಯಗಳ ಪಾತಳಿಗಳ ಅಂತಃಪ್ರಚೋದನೆಯ ಸ್ವರೂಪವು ತೀರ ಭಿನ್ನವಿದೆ ಎಂಬುದನ್ನೂ ಮರೆತು ನಡೆಯದು.

೩) ಜಾಗತಿಕ ಪ್ರಾಚೀನ ಸಂಸ್ಕೃತಿಯ ಆ ಪುರಾತನರಿಗೆ, ದಿವ್ಯ ಪ್ರತಿಮಾರಾಧನೆಯ ಅನುಸಂಧಾನದಲ್ಲಿ ಅ) ಸೂರ್ಯ : ಪ್ರಜ್ಞಾತತ್ತ್ವ ಮತ್ತು ಬ) ಚಂದ್ರಮ : ಮೃತ್ಯು ತತ್ತ್ವ ಎಂಬ ಪರಸ್ಪರ ವಿಪರೀತ ಸ್ವಭಾವದ ಇಬ್ಬಗೆಯ ಪಾತಳಿಗಳೂ ಉಂಟು ಎಂಬುದೂ ಅಂದಿನವರ ಅರಿಕೆಗೆ ಬಂದಿತ್ತು-ಇದಕ್ಕೆ ಪ್ರಮಾಣವೇನು ?

೧) 'ಪ್ರಾಚೀನ ಸಂಸ್ಕೃತಿ' ಎಂದು ಬಗೆಯಲಾಗುತ್ತಿರುವ ಇಜಿಪ್ತಿನ ಪುರಾತನ ಸಾಂಸ್ಕೃತಿಕ ಅವಶೇಷಗಳಲ್ಲಿ 'ಸೂರ್ಯ'ನು ನೇರವಾಗಿ ಕಾಣಬೇಕಿತ್ತು. ಆದರೆ ಅಲ್ಲಿ ದೊರೆಯುತ್ತಿರುವ ಸಂಕೇತ-ಪ್ರತಿಮೆಗಳಲ್ಲಿ ಸೂರ್ಯನು ನಾಗನ ಆ-ಲಿಂಗನದಲ್ಲಿ ಸಿಲುಕಿರುವುದನ್ನು ಕಾಣಬಹುದು !

೨) ಇದೇ ಮೇರೆಗೆ ಅತಿ ಪುರಾತನ ಗ್ರಂಥ ಎಂದು ನಂಬಿಸಲಾಗಿರುವ ಋಗ್ವೇದದ ಪ್ರಚಲಿತ ಪಾಠದಲ್ಲಿ 'ಸರ್ಪರಾಜ್ಞೀ ಸೂರ್ಯೋವಾ' ಎಂಬ ದೇವತಾ ಸೂಕ್ತವಿದೆ.

ನಾಗ : ಸರ್ಪ ಇದಕ್ಕೆ ನಾಗ:ಚಂದ್ರ, ನಾಗ : ಲಿಂಗ ಎಂಬ ಅರ್ಥವಿದ್ದುದನ್ನು ಈ ಪರಂಪರಾಗತ ಪಡೆನುಡಿಗಳೇ ಹೇಳುತ್ತಿವೆ !

ಇಂದು ಭಾರತದಲ್ಲಿ 'ಸೂರ್ಯ (ಪ್ರಜ್ಞೆ)' ಕಾಣೆಯಾಗಿದ್ದಾನೆ; ಸೂರ್ಯ: 'ನಾರಾಯಣ' ಹೆಸರಿನಲ್ಲಿ ಪೂಜೆಗೊಳ್ಳುತ್ತಿದ್ದಾನೆ. ಇದು ಯೋನೀ ಲಿಂಗವೇ ಹೊರತು 'ಸೂರ್ಯ' ನಲ್ಲ. 'ಪಾತಳಿಯು ಸಂಕೇತದ ಆಕೃತಿ ಸ್ವರೂಪವನ್ನು ನಿರ್ಧರಿಸುತ್ತದೆ'. ನಾಗ : ಚಂದ್ರನ ನಾಗ:ಲಿಂಗನ ಪಾತಳಿಯ ಮೇಲೆ ಬಂದಿರುವ ಈ 'ಸೂರ್ಯನು' ಸೂರ್ಯ ನಲ್ಲ. ಈ ಕಣ್ಕಟ್ಟು ಮೋಸವನ್ನು ಆಮಂತ್ರಿಸುತ್ತಿದೆ !

ಈ ಪಾತಳಿಗಳ ಅನುಷಂಗದಿಂದ 'ಕಾವ್ಯಸತ್ಯ'ದ ಸ್ವರೂಪವು ಬದಲಾಗಲು ಕಾರಣವೇನು ?

೧) ಜೀವನದ ಪಾತಳಿಯನ್ನು ಪ್ರೇರಿಸುವ ಪ್ರಜ್ಞೆಯ ಅಂಗವಾದ ಮನಸ್ ತತ್ತ್ವವು ಅರ್ಥ : ವಿಚಾರ ರೂಪ ಪ್ರಕಾಶದ ಹಿನ್ನೆಲೆಯುಳ್ಳದ್ದು ಆಗಿರುತ್ತದೆ. ಆದಕಾರಣ ಇವನ್ನು ಸೌರಪಾತಳಿ ಎಂದು ಬಗೆಯಲಾಗಿದೆ. ಜೀವನಪಾತಳಿಯ ಮೇಲಣ ಪ್ರೇರಣೆಯಲ್ಲಿ ಅಂತಃಸಂಗತಿಯು ಅಭಿಪ್ರೇತವಿದೆ. ಈ ಪಾತಳಿಯ ಮೇಲೆ ಕಾರಣ ಮತ್ತು ಕಾರ್ಯ ಇವೆರಡರಲ್ಲಿ ಅನುಕ್ರಮವಿರುತ್ತದೆ. ಆದರೆ ೨) ಜೀವಿತದ ಪಾತಳಿಯನ್ನು ಪ್ರಚೋದಿಸುವ ಪ್ರಾಣಲಿಂಗ ಚೇತಸವು ನಿತ್ಯವಾಗಿ ಕತ್ತಲಿನ ಆವರಣದಲ್ಲಿ ಇರುವ ಸ್ವಭಾವದ್ದು ಆಗಿದೆ ! ಅಲ್ಲದೆ ಇದು 'ಸ್ವಯಂಭೂ' ಸ್ವರೂಪದ ಶಕ್ತಿ. ಯಾವ ನಿಯಂತ್ರಣಕ್ಕೂ ಒಗ್ಗದ ಸ್ವಭಾವದ್ದು. ಅ-ನಿಯತ ಕಾಲಿಕ ಚಂದ್ರಮನು ಪ್ರಾಣಲಿಂಗ ಶಕ್ತಿಯ ಪ್ರೇರಕನು. ಎಂಬಲ್ಲಿ ಔಚಿತ್ಯವಿದೆ.

ಅಮಾವಾಸ್ಯೆಗೆ ಇಲ್ಲವಾಗುವ, ಈ ಇಲ್ಲಮೆ [0]ಯೊಳಗಿಂದಲೇ ಶುಕ್ಲಪಕ್ಷದಲ್ಲಿ ಮರಳಿ ಅಂಕುರಿಸುವ ಈ ಜೀವತತ್ತ್ವವು ನಿತ್ಯ ಅ-ಭಾವಾತ್ಮಕ ಸ್ವರೂಪದ್ದು ಆಗಿದೆ. ಈ ಕಾರಣದಿಂದಾಗಿ ಈ ಪ್ರಾಣಲಿಂಗಶಕ್ತಿ : ಚಂದ್ರಶಕ್ತಿಯು ಮಾಟ, ಕಣ್ಕಟ್ಟು, ಬಾನಾಮತಿ ಮೊದಲಾದ ಅಭಿಚಾರ ಪ್ರಕ್ರಿಯೆಯ 'ಯಾತು' ಶಕ್ತಿ ಯುಳ್ಳದ್ದು ಎಂದು ಜಾಗತಿಕ ಪಾತಳಿಯಲ್ಲಿಯೇ ದೃಢವಾದ ನಂಬುಗೆಯು ಇದ್ದದ್ದು ಕಂಡು ಬರುತ್ತಿದೆ.

ಪುರಾತನರು ಈ ಪ್ರಾಣವನ್ನು 'ಅಸು' (ಉಸಿರು) ಎಂಬ ಹೆಸರಿನಿಂದ ಕರೆಯು ತ್ತಿದ್ದರು. ವೇದದಲ್ಲಿ 'ಪ್ರಾಣ'ಕ್ಕೆ 'ಅಸು' ಹೆಸರೇ ಪ್ರಾಧಾನ್ಯದಿಂದ ಕಂಡುಬರು ತ್ತದೆ. ಈ 'ಅಸುರ' ಶಕ್ತಿಗೆ : ಪ್ರಾಣಲಿಂಗಕ್ಕೆ ನೈತಿಕ ಮೌಲ್ಯಗಳ ಲೆಕ್ಕವಿಲ್ಲ. ಪ್ರಾಣಿಲೋಕದಲ್ಲಿ ತಂದೆ, ತಾಯಿ, ಮಗ, ಮಗಳು ಎಂಬೀ ಬಗೆಯ ನೈತಿಕ ಸಂಬಂಧಗಳ ಅರಿವು ಸುಸ್ಪಷ್ಟವಾಗಿ ಮೂಡಿಲ್ಲ.

ಜೀವಿತದ ಈ ಅಸುರ ಪಾತಳಿಯ ಮೇಲೆ ಅವರವರ ಅರ್ಥವು ಅವರವರ ಪಾಲಿನ ಸತ್ಯವೆನಿಸುತ್ತದೆ. ಜೀವಿತದ ಪಾತಳಿಯ ಮೇಲೆ ಕಾರಣ ಕಾರ್ಯ ಸಂಬಂಧವು ಸುಸ್ಪಷ್ಟವಿಲ್ಲ. ಚಂದ್ರಮನು ಇಲ್ಲಮೆಯೊಳಗಿಂದ ಮರಳಿ ಬರುವಲ್ಲಿ, 'ಶೂನ್ಯವು [O]=ಮೃತ್ಯುತತ್ತ್ವವು ಜೀವನಕ್ಕೆ ಕಾರಣ' ಎಂಬ ಭ್ರಾಂತಿಗೆ ಇಂಬು ದೊರೆಯುತ್ತಿದೆ.

ಕಾರ್ಯವೇ ಕಾರಣವಾಗಿ ಪರಿಣಮಿಸುವ ಅಸುರ : ಪ್ರಾಣಲಿಂಗ ಶಕ್ತಿಯ ಪಾತಳಿಯು ಮಾನವಧರ್ಮ : ಸಂಸ್ಕೃತಿಗೆ ಮಾರಕವಾಗಿ ಪರಿಣಮಿಸುತ್ತ ಬಂದಿದೆ. ಆದರೆ, ಯಾತು ಶಕ್ತಿಯಪ್ರಭಾವಕ್ಕೆ ಮನಸೋತ ಮಾನವನಿಗೆ ತಾನು ನರ(ಳ)ನಾಗಿ ಮಾರ್ಪಟ್ಟಿದ್ದೇನೆ ಎಂಬ ಪ್ರಜ್ಞೆ ಮೂಡದಾಗಿದೆ.

ತಮ್ಮ ಅಧಃಪಾತಕ್ಕೆ ಮೃತ್ಯು ತತ್ತ್ವದ ಈ ಕೃಷ್ಣ ಶಕ್ತಿಯೇ ಕಾರಣ ಎಂಬುದು ಇನ್ನೂ ಇವರ ಗಮನಕ್ಕೆ ಬರುತ್ತಿಲ್ಲ !

'ಅವರವರ ಅರ್ಥವು ಅವರವರ ಪಾಲಿನ ಸತ್ಯ'ವಾಗಿ ಪರಿಣಮಿಸುತ್ತಿರಲು ಅವರವರ ಪಾಲಿನ ಕಾವ್ಯ ಸತ್ಯವೂ ಇದಕ್ಕೆ ಕಾರಣವಾಗಿದೆ. ಭಾಷಿಕ ಸಂಕೇತಗಳನ್ನು ವೈಯಕ್ತಿಕ ರೀತಿಯಿಂದ ತಮಗೆ ಇಷ್ಟ ಬಂದಂತೆ ಅರ್ಥಯಿಸುವ ಈ ಕೃತ್ಯವು ಸಮಾಜ ಸಮಷ್ಟಿಯ ವಿನಾಶಕ್ಕೆ ಆಮಂತ್ರಿಸುವ ಮೃತ್ಯುತತ್ತ್ವವಾಗಿ ಪರಿಣಮಿಸುತ್ತಿದೆ. ಜೀವನ ವಿಶ್ವಸ್ಥ ವಿಕಾಸ ತತ್ತ್ವದ ಪ್ರಕ್ರಿಯೆಯಿಂದಾಗಿ 'ಮನುಜ'ತ್ವವು ಲಭಿಸಿರುವ ಈ ಮಾನವನು'ಮೃತ್ಯುತತ್ತ್ವೋಪಾಸನೆಯ' ಯಾತು ಕ್ರಿಯೆಗೆ ಮೋಹಿಸಿ ನರ(ಳ)ನಾಗಿ ಮಾರ್ಪಡುತ್ತಿದ್ದಾನೆ. ಇದು ನಿಜವಿದ್ದಲ್ಲಿ, ವೇದವಲ್ಲಿ, ಮೊದಲಲ್ಲಿ–ವೈವಸ್ವತ ಮನ್ವಂತರದಲ್ಲಿ–ವಾಡಿಕೆಯಲ್ಲಿ ಇದ್ದಿಲ್ಲ, ಶಿಷ್ಟಮಾನ್ಯವಾಗಿರಲಿಲ್ಲ ಎಂದು ಹೇಳುವ ಈ ಮೃತ್ಯುತತ್ತ್ವದ (ಚಾಂದ್ರ) ಉಪಾಸನೆಯು ಪ್ರಾರಂಭವಾದದ್ದು ಯಾವಾಗ ? ಇದಕ್ಕೆ ಪ್ರಮಾಣಗಳು ಉಂಟೆ ?

ಈ ಮೊದಲು ಹೇಳಿರುವ 'ಸರ್ಪರಾಜ್ಞೀ ಸೂರ್ಯೋವಾ' ಎಂಬ ಈ ದೇವತಾ ಸೂಕ್ತವೆ ಇಂದಿನ ಅಧಃಪಾತದ ಪೂರ್ವಸೂಚನೆಯಂತೆ ಇದೆ. ಈ ಸೂಕ್ತವನ್ನು 'ನಾರಾಯಣ ಬಲಿ, ನಾಗ ಬಲಿ' ಮುಂತಾದ ಜಾರಣ–ಮಾರಣಾದಿ ಅಭಿಚಾರ ಕ್ರಿಯೆಗಳಲ್ಲಿ ವಿನಿಯೋಗಿಸಲಾಗುತ್ತದೆ ಎಂದು ಸಂಪ್ರದಾಯವೇ ಹೇಳಿದೆ.

ಮಾನವರು ಈ ಬಗೆಯ ಅಭಿಚಾರ ಕೃತ್ಯಗಳ ಪ್ರಭಾವದಲ್ಲಿ ಸಿಲುಕಿದ್ದು, ಇವರು ಇದನ್ನು ಒಪ್ಪಲು ಮಾತ್ರ ಸಿದ್ಧರಿಲ್ಲ ! ಜೀವಿತದ ಈ ಪಾತಳಿಯ ಮೇಲೆ ಕಾರ್ಯವೇ ಕಾರಣವೂ ಆಗುತ್ತದೆ ! ಏಕೆಂದರೆ ಇದು ವೃತ್ತಾಕೃತಿಯ [O] ಜನನ–ಮರಣ ರೂಪ (ಸಂ)ಭವ ಚಕ್ರದ [O] ಪಾತಳಿ !

ಜೀವನದ ಪಾತಳಿಯು ಮೇಲೆ ತಂದೆ (ಕಾರಣ) ಮಗು (ಕಾರ್ಯ) ಈ ನೈಸರ್ಗಿಕ ಕ್ರಮವಿದೆ. ಜೀವಿತದ ಪಾತಳಿಯು ಮೇಲೆ 'ಏನೆಲ್ಲವೂ ಒಂದೇ ತತ್ತ್ವದಿಂದ ಆಗಿದೆ' ಎಂಬ ನಂಬುಗೆಯು, ಎಲ್ಲ ನರ(ಳ) ಸಂಪ್ರದಾಯಗಳಲ್ಲೂ ಉಂಟು. 'ಏನೆಲ್ಲವೂ ಒಂದೇ ತತ್ತ್ವದಿಂದ ಆಗಿದೆ' ಎಂಬ ಶ್ರದ್ಧೆಯಂತೆ ಆದಿಮಾತೆ [೦] ಕಣ್ ಅಥವಾ ಆದಿ 'ಪುರುಷ' (ಉಪನಿಷತ್ತೇ ಹೇಳುವಂತೆ ಇವನು ಅಮಾನವ) ಲಿಂಗ : ಗಣ್ ರೂಪನು. ಕಣ್ ಅಥವಾ ಗಣ್ ಇವೆರಡರಲ್ಲಿ ಒಂದು ಪ್ರಾರಂಭದಲ್ಲಿ ಇರಬೇಕಾಗುವ ಅನಿವಾರ್ಯತೆಯುಂಟು.

ಋಗ್ವೇದದ ಇಂದಿನ ಪಾಠದಲ್ಲಿ ಇರುವ 'ಪುತ್ರಃ ಸನ್ ಪಿತಾಭುವಃ' ಎಂಬ ಈ ವಾಕ್ಯವು, ಈ ವೇದದಲ್ಲಿ ಅಭಿಚಾರಕೃತ್ಯದ ಪ್ರಚೋದನೆಯು ಹುದುಗಿದೆ ಎಂಬುದರ ದ್ಯೋತಕವಾಗಿದೆ. (ಋ 1೬೯, ೧/೭) ಈ ಅಭಿಚಾರಕೃತ್ಯವು ಜೀವಿತ ಪಾತಳಿಯ ಮೇಲಣ ಪಶುಗಳಲ್ಲಿ ಕಾಣುವ ನಡೆವಳಿ. ಈ ಮಾನವನು ಇಂದು ನರ(ಳ)ನಾಗಿ ಮಾರ್ಪಟ್ಟು ಪ್ರಾಣಿ-ಪಶುಗಳ ಪಾತಳಿಯ ಮೇಲೆ ಬಂದಿದ್ದಾನೆ ಎಂಬುದನ್ನು 'ಪುತ್ರಃ ಸನ್ ಪಿತಾಭುವಃ' ಎಂಬ ವೇದವಾಕ್ಯವೇ ಒಪ್ಪುತ್ತದೆ !

ಪಾಶ್ಚಾತ್ಯ ಪರಂಪರೆಯ ಕ್ರೈಸ್ತ ಪಂಥವೂ 'ನರ : ನಾರ-ಅಯನ' ಸಂಪ್ರದಾಯದ ಇನ್ನೊಂದು ನಿಲುವೆಯಂತೆ ಇದೆ. ಆ ಸಂಸ್ಕೃತಿಯಲ್ಲಿಯೂ 'Child is the father of man' ಎಂಬ ಉಕ್ತಿಯುಂಟು !

ಜೀವನದ ಪಾತಳಿಯ ಮೇಲಣ ಪ್ರಕಾಶ ತತ್ತ್ವದ ಋತ ಸತ್ಯವು ಇಂದು ಕಣ್ಮರೆಯಾಗಿದೆ; ಜೀವಿತದ ಪಾತಳಿಯ ಮೇಲೆ ರೇತವೇ ಸತ್ಯವಾಗಿ ಪರಿಣಮಿಸಿದೆ-ಇಂದು ! ವೇದೋಪನಿಷತ್ತು, ಮಹಾಭಾರತ, ಗೀತೆ, ರಾಮಚಂದ್ರಾಯಣಾದಿ ಸಾಹಿತ್ಯಕೃತಿಗಳ ಪ್ರಭಾವದಿಂದ ಈ ಸ್ಥಿತ್ಯಂತರವಾಗಿದೆ.

ಒಂದೊಮ್ಮೆ ಜೀವನವು ಸಾಹಿತ್ಯವನ್ನು ರೂಪಿಸುತ್ತಿದ್ದರೆ, ಇಂದು ಸಾಹಿತ್ಯವು (ಕಾರ್ಯ) ಜೀವನವನ್ನು (ಕಾರಣ) ರೂಪಿಸುತ್ತಿದೆ ! ಈ ಬಾಳಿನಲ್ಲಿ ಈ ಜೀವನ (ಸ್ವರ್ ಪಾತಳಿ) ಮತ್ತು ಜೀವಿತ (ಪ್ರಾಣಲಿಂಗ ಪಾತಳಿ) ಇವೆರಡೂ ಪಾತಳಿಗಳ ನಡುವಣ ಅಂತರವು ಶೂನ್ಯವಾಗಲು ಕಾರಣವೇನು ?

ಸೂರ್ಯನು ನಾಗಚಂದ್ರ : ನಾಗಲಿಂಗನ ಪಾತಳಿಗೆ ಬಂದಿರುವಲ್ಲಿ, ಋತಸಂಹಿತೆಯಲ್ಲಿ ಸ್ವರ್ (Super Organic) ಪಾತಳಿಯನ್ನೇ ಇಲ್ಲವಾಗಿಸಿರಲಿಕ್ಕೆ ಬೇಕಷ್ಟೆ ? ಇದಕ್ಕೆ ಇಂಥ ಬೇರೆ ಯಾವ ಪ್ರಮಾಣಗಳು ಇವೆಯೆ ?

ಈ ವೇದದಲ್ಲೆ, 'ಅಪಾಲಾ' ಎಂಬ ಮರ್ತ್ಯ ಕುಮಾರಿಯ ಗುಹ್ಯಾಂಗದ ರೋಗ

ವನ್ನು ಗುಣಪಡಿಸುವುದಕ್ಕಾಗಿ 'ಶಿಶ್ನೋದೇವಾಃ' ಪಂಥದ ಶತ್ರುವೆಂಬ ಇಂದ್ರನು ಪರೋಪಕಾರಾರ್ಥವಾಗಿ ಮರ್ತ್ಯಲೋಕಕ್ಕೆ ಬರುತ್ತಾನಂತೆ !

ಮಹಾಭಾರತದಲ್ಲಿ ಕುಮಾರಿ ಕುಂತಿಯ ಕಾಮನಾ ತೃಪ್ತಿಗಾಗಿ, ಸ್ವರ್ ಲೋಕದ ಸೂರ್ಯನು ಭೂಲೋಕಕ್ಕೆ ಬಂದನಂತೆ ! ಈ ಕುಂತಿಗೆ ಸೂರ್ಯನಿಂದ ಕಾಮಶಮನ ವಾಗದ್ದಕ್ಕೆ, ಇಂದ್ರನನ್ನೂ ಭೂಮಿಗೆ ಬರಲು ಬೇಡಿಕೊಂಡಳು. ಭೀಮ ವಾಯು ದೇವರ ಮಗ !

ಮೃತ್ಯು (ಚಾಂದ್ರ) ತತ್ತ್ವದ ಆರಾಧಕ ವ್ಯಾಸನೆಂಬವನು ಹೀಗೆ ಅಭಾವವನ್ನೇ ಸ್ಥಾಯೀ ಆಗಿಸಿ 'ಐತಿಹಾಸಿಕ ಸ್ವರೂಪದ್ದು' ಎಂದು ಲೋಕವು ಸಂ–ಭ್ರಮಿ ಸುವಂತೆ, ಈ ಮಹಾಕಾವ್ಯ ರಚಿಸಿದ್ದಾನೆ!

'ವಾಲ್ಮೀಕಿ (ಹುತ್ತಪ್ಪ ಃ ನಾಗ)' ಎಂಬವನು ರಾಮಚಂದ್ರನ ಅಯನದಲ್ಲಿ ಅಹಿಃ ವೃತ್ರಹನ್ ಬಿರುದಿನ ಇಂದ್ರನ ತೇಜೋವಧೆಗಾಗಿ ಆತನನ್ನು 'ಅಹಲ್ಯಾಜಾರ'ನೆಂದು ಚಿತ್ರಿಸಿದ್ದಾನೆ ! ಈ ಸ್ಥಿತ್ಯಂತರವು ವೇದೋಪನಿಷದಾದಿಗಳಲ್ಲಿ 'ಪೂರ್ವಯೋಜನೆ ಯಂತೆ ಆಗಿದೆ' ಎಂಬುದರ ಸೂಚನೆಯು ಸಾಯಣಭಾಷ್ಯದ ಮೂಲಕ ಬಯಲಿಗೆ ಬರುತ್ತಿದೆ. 'ಇಂದ್ರಹನನ ಸಮರ್ಥಂಪುತ್ರಂ ಕಾಮಾಯಮಾನಾ ಅದಿತಿಃ, ಭರ್ತುಃ ಸಕಾಶಾತ್ ಗರ್ಭಂ ಲೇಬೇ'. (ಋ. I ೧೧೪. ೫ನೆಯ ಋಚೆ ಭಾಷ್ಯ VIII ೮–೯) ಸಾಧು ಸನ್ತರ, ಸಿದ್ಧರ, ಮಾಂತ್ರಿಕರ ತಳಿಯನ್ನು ಪೋಷಿಸಿಕೊಂಡು ಬರುತ್ತಿರುವ ಈ ದಿವ್ಯಾಧ್ಯಾತ್ಮವು ಸುಳ್ಳಿನ ತಳಹದಿಯ ಮೇಲೆ ನಿಂತಿದೆ. 'ಆದಿಮಾತೆ' ಎಂಬ ಅದಿತಿ ಕುಮಾರೀದೇವಿಗೆ ಗಂಡನೆಂಬವನೇ ಇಲ್ಲ! ಹೀಗಿದ್ದರೂ ಇವಳು ಇಂದ್ರಹನನ ಸಮರ್ಥ ಪುತ್ರನನ್ನು ಬಯಸಿ, 'ಗಂಡನಿಂದ ಗರ್ಭ ಪಡೆದಳಂತೆ !'

ಕುಮಾರ–ಕುಮಾರೀ ಸಂಪ್ರದಾಯಕ್ಕೆ ಅಭಿಚಾರ ಕೃತ್ಯಗಳ ಇಂಥ ಸಿದ್ಧಿಯು ಶಕ್ಯವಾದುದು ಹೇಗೆ ? ಎಂಬ ಪ್ರಶ್ನೆಗೆ ಸೂಚ್ಯವಾಗಿ ಒಂದೆಡೆಯಲ್ಲಿ ಉತ್ತರವುಂಟು. ಇಲ್ಲಿ ಕಾವ್ಯಸತ್ಯದ ಎರಡೂ ಪ್ರಕಾರಗಳೂ ಒಂದೆಡೆಗೇ ಇವೆ. ಸೌರಸತ್ಯವು ಚಾಂದ್ರಸತ್ಯದ ಉರುಳಿನಲ್ಲಿ ಸಿಲುಕಿದೆ

'ಸತ್ಯಂ ಏವ ಜಯತೆ, ನ ಅನೃತಮ್;' ಸೌರ ಕಾವ್ಯಸತ್ಯ. ಋತಸ್ವರೂಪೀ ಪ್ರಕಾಶರೂಪ ಸತ್ಯಕ್ಕೇ ಗೆಲುವು, ಅನೃತಕ್ಕೆ–ಕತ್ತಲೆಗೆ ಜಯವಿಲ್ಲ. ಈ ಉಕ್ತಿಯ ಉತ್ತರಾರ್ಧ ಹೀಗಿದೆ: 'ಸತ್ಯೇನ ಪಂಥಾಃ ವಿತತಃ ದೇವಯಾನಃ'. ಇದು ಚಾಂದ್ರ ಕಾವ್ಯಸತ್ಯ.

'ಉಂಡು ಉಂಡು ಉಪವಾಸಿ; ಬಳಸಿ ಬ್ರಹ್ಮಚಾರಿ' ಆಗಿ ಇರಬಲ್ಲ ಈ ಸಾಧನ ಸಾಧನ ಮಾರ್ಗದಲ್ಲಿ 'ಅತ್ಯಂತಿಕ ಅಹಿಂಸೆಯ ಆಧಾರದ ಸತ್ಯದ ಆರಾಧನೆ

ಅವಶ್ಯವಿರುತ್ತದೆ. ಇದು ಪಾಶ್ಚಾತ್ಯ ಪರಿಭಾಷೆಯ empirical truth'. ದಿವ್ಯಾತ್ಮಗಳಲ್ಲಿ, ಮೂರ್ತ ಮತ್ತು ಅಮೂರ್ತ ಇವೆರಡರಲ್ಲಿ ಅಂತರವಿರುವುದಿಲ್ಲ. ಈ ಸತ್ಯದೊಡನೆ ಪ್ರಯೋಗಗಳು, ಪವಾಡ ಚಮತ್ಕಾರಗಳ ಸಿದ್ಧಿಗೆ ಕಾರಣವಾಗುತ್ತವೆ ಎಂಬ ನಂಬುಗೆ ಇದೆ. ಹೀಗೆ, ಪ್ರಯೋಗ ನಡೆಸಬೇಕಾದ 'ಸತ್ಯ'ವು ಸಗುಣ, ಸಾಕಾರ, ಮೂರ್ತ ರೂಪದ್ದಾಗಿರಬೇಕಾಗುತ್ತದೆ! ಆದರೆ ನಿಜವಾದ 'ಸತ್ಯ' ಎಂಬುದು ನಿತ್ಯವಾಗಿ ಅಮೂರ್ತ ತಾತ್ತ್ವಿಕ ಪಾತಳಿಯ ಮೇಲೆಯೇ ಇರಬಲ್ಲುದು! ದೇವಯಾನ ಪಥ=ಬ್ರಹ್ಮಪಥವನ್ನು ಹಿಗ್ಗಿಸಿ ಅಗಲವಾಗಿಸುವ ಈ ಸತ್ಯವು ಮೂರ್ತ ಆಕಾರದ್ದೇ ಇರಬೇಡವೆ? ಈ ಬ್ರಹ್ಮಪಥದ ಆಚರಣವೇ 'ಬ್ರಹ್ಮಚರ್ಯ' ಎನಿಸುತ್ತದೆ! ಈ ಕಾವ್ಯಸತ್ಯವು ನಿತಾಂತ ರಮಣಿ(ೀ) ಯ ಸ್ವರೂಪದ್ದಾಗಿಲ್ಲವೆ ?

ಋತ ಸತ್ಯವು ವಿಶ್ವನಿಯಮದ ಆಧಾರದ್ದು ಇರಬೇಕಾದಂತೆ, ಇದಕ್ಕೆ ಪ್ರತಿಯಾಗಿ ಇರುವ ವಿಶ್ವನಿಯಮವನ್ನು ಇಲ್ಲವಾಗಿಸುವ 'ನಿಯಂತ್ರಿಕೃತ ನಿಯಮರ ಹಿತಾಂ,' ಅನನ್ಯ ಪರತಂತ್ರಾಂ' ಸ್ವರೂಪದ್ದೇ ಇರಬೇಡವೆ ?

ಕೊನೆಯಲ್ಲಿ ಇಲ್ಲಿ ಇದು ಇಮರ್ಸನನ್ನ ಉಕ್ತಿ ನೆನಪಿಗೆ ಬರುತ್ತದೆ. ಕವಿ, ತತ್ತ್ವಜ್ಞಾನಿಯಾಗುತ್ತಾನೆ, ತತ್ತ್ವಜ್ಞಾನಿ ಕವಿಯಾಗಬಯಸುತ್ತಾನೆ.

●

ಯಕ್ಷ ಪ್ರಶ್ನೆ

ರವಿಶಂಕರ ಕೋಳಿವಾಡ

ಕೆಲಸ ಸಿಗಲಿಲ್ಲ
ಕೋಪಕ್ಕೆ ಎಗರಾಟ ವ್ಯರ್ಥ ಅಮ್ಮ-ಅಪ್ಪನ ಮೇಲೆ,
ಅಮ್ಮನ ಹಣೆಬರಹದ ಪೇಚಾಟ
ಅಪ್ಪಂಗೆ ಮಗನಿಗೆ ವಯಸ್ಸಾಗಿಬಿಡುವುದರ ಒದ್ದಾಟ;
ಅಂತೂ ಇಂತೂ ಸಿಕ್ಕ ಕೆಲಸದಲ್ಲಿ
ಅಕ್ಕನ ಬೆಳ್ಳಿಗೆರೆಗಳ ನಡುವಣ ಸೋತದೃಷ್ಟಿಯ ಸೆರೆ ಬಿಡಿಸುವಷ್ಟರಲ್ಲಿ
ಕಾಲೇಜು ಮೆಟ್ಟಲೇರಿದ ತಮ್ಮ ಮೂಗೊಳಗೇ ಸೊರಗುಟ್ಟುತ್ತಾನೆ,
ತಂಗಿಯ ಮಣ್ಣಾಟ ಸ್ವಚ್ಛಂದದಲಿ ಸಾಗಿ
ಇವಳಿಗೂ ಅದೇ ಮಣ್ಣು–ಅದೇ ನೀರು-ಅದೇ ಗಾಳಿ (!)
ಮೈ ಕೈ ತುಂಬಿ–
ದೆದೆಯ ಗಾನದ ಮೊರೆತ
ಕನಸುಗಳ ನಡುವೆ ಮಗ್ಗುಲ ಹೊರಳಿಸಿ
ಒಮ್ಮೆಲೇ
ಗಾಳಹಾಕಿ
ಬೆಚ್ಚಿಸಿ
ಎಚ್ಚೆತ್ತವರು ಕೆರೆಹೊಳೆಯ ನೀರಿನಾಳ ಎಣಿಸುವಲ್ಲಿ
ಮುಂದೇನು ?
ಯಕ್ಷಗಾನದ ಲಕ್ಷ ಲಕ್ಷ ಭಂಗಿಗಳಲಿ ಲಕ್ಷ್ಯವಿಲ್ಲದೇ ಇರಿವ
ಯಕ್ಷಪ್ರಶ್ನೆಯ ಕಾಟ
ಈ ವಂಶೋದ್ಧಾರಕನಿಗೆ.

ಯಶೋಧರ ಚರಿತೆ ಮತ್ತು ಹಿಟ್ಟಿನ ಹುಂಜ ‡

ಒಂದು ಅಭ್ಯಾಸ

ಮಾರ್ಷಲ್ ಶರಾವ್

ಕಾರ್ನಾಡರ, 'ಅಂಜುಮಲ್ಲಿಗೆ' ಯ ನಂತರದ ಕೃತಿ, "ಹಿಟ್ಟಿನಹುಂಜ". ಮನುಷ್ಯ ನಂಬಿದ ಮೌಲ್ಯ ಮತ್ತು ಪ್ರವೃತ್ತಿಗಳ ನಡುವಿನ ಮೌನಹೋರಾಟವೇ ಈ ನಾಟಕದ ವಸ್ತು. ಜನ್ನನ 'ಯಶೋಧರ ಚರಿತೆ'ಯಿಂದ ಪ್ರೇರಣೆ ಪಡೆದ ಈ ವಸ್ತು, ಕವಿಯ ಆಶಯಕ್ಕೆ ಸಂಪೂರ್ಣ ಭಿನ್ನವಾಗಿ "ಜೀವದಯೆ ಜೈನಧರ್ಮಂ" ಎಂಬ ತತ್ತ್ವವನ್ನು ಹಿಂದೆ ತಳ್ಳಿ "ಪ್ರವೃತ್ತಿ ಮಾನುಷ ಸಹಜಧರ್ಮಂ" ಎಂಬ ತತ್ವವನ್ನು ಹೇಳಹೊರಟಿದೆ.

ನಾಲ್ಕೇ ಪಾತ್ರಗಳಲ್ಲಿ ಚಿಕ್ಕದಾಗಿ, ಚೊಕ್ಕವಾಗಿ ನಿರೂಪಿತವಾದ ಈ ನಾಟಕ, ಕಾರ್ನಾಡರ ಪ್ರತಿಭೆಯ ಕೈಗನ್ನಡಿ. ಪುರಾಣಗಳಿಂದ ವಸ್ತುವನ್ನು ಆರಿಸಿಕೊಂಡು, ಅದನ್ನು ಸಮಕಾಲೀನ ಬದುಕಿನ ಅಂಶವನ್ನಾಗಿ ನೋಡುವ ದೃಷ್ಟಿ, ಕಾರ್ನಾಡರ ಹಿಂದಿನ ಎಲ್ಲಾ ನಾಟಕಗಳಲ್ಲಿಯೂ ಇದೆ. ಆದರೆ ಇಲ್ಲಿ, ಪ್ರಧಾನವಾಗಿ, "ಹಿಟ್ಟಿನ ಹುಂಜ" ನಾಟಕದಲ್ಲಿ ಇದು ಹೇಗೆ ಸಾಧ್ಯವಾಗಿದೆ ಎಂಬುದನ್ನು ಮತ್ತು ಒಬ್ಬ ಕ್ರಿಯಾಶೀಲ ಬರಹಗಾರ, ಹಳೆಯ ವಸ್ತುವೊಂದನ್ನು, ತನ್ನ ಸಮಕಾಲೀನ ಬದುಕಿನ ಸಂದರ್ಭದಲ್ಲಿ ಹೇಗೆ ದುಡಿಸಿಕೊಳ್ಳಬಲ್ಲ ಎಂಬುದನ್ನು, ಜನ್ನನ ಯಶೋಧರ ಚರಿತೆ ಕಾರ್ನಾಡರ ಪ್ರಸ್ತುತ ಕೃತಿಯನ್ನು ಜೊತೆ ಜೊತೆಯಲ್ಲಿಟ್ಟು ನೋಡುವುದರ ಮೂಲಕ, ನನ್ನ ಅಭ್ಯಾಸದ ಪರಿಮಿತಿಯಲ್ಲಿ ತಿಳಿಯಬಯಸುತ್ತೇನೆ.

ಸುಮಾರು ೩೧೦ ಪದ್ಯಗಳನ್ನೊಳಗೊಂಡ ಕಾವ್ಯ, ಯಶೋಧರ ಚರಿತೆ. ಈ ಕಾವ್ಯ

‡ ೨೭-೧-೮೨ರಂದು ತರಗತಿಯ ವಿಚಾರಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧದ ಸಂಕ್ಷಿಪ್ತ ರೂಪ.

ದಲ್ಲಿನ ಪಾತ್ರಗಳು, ಆ ಪಾತ್ರಗಳ ಏಳುಬೀಳುಗಳು ಜೈನಧರ್ಮದತ್ತ ನಮಗೆ ಬೆರಳು ತೋರಿಸುತ್ತವೆ. ಈ ಹಿನ್ನೆಲೆಯಲ್ಲಿಯೇ ಜನ್ನನ ಕಾವ್ಯ ರಚಿತವಾಗಿದೆ. ಕಾರ್ನಾಡರ ನಾಟಕಕ್ಕೆ, ಈ ಕಾವ್ಯದಲ್ಲಿ ಬರುವ "ಅಷ್ಟವಂಕ ಮತ್ತು ಅಮೃತಮತಿಯರ ಪ್ರಣಯ ಕೇಳಿಯಿಂದ, ಯಶೋಧರ ಬಲಿಯ ಬಗ್ಗೆ ಮಾಡುವ ಆಲೋಚನೆ'ಯ ವರೆಗಿನ ಪ್ರಸಂಗ ವಸ್ತುವಾಗಿದೆ.

ನಾಟಕಕಾರರ ಮೊದಲ ಮಾರ್ಪಾಟು ಕಾಣುವುದು, ಪಾತ್ರಗಳನ್ನು ಹೆಸರಿಸಿರುವುದ ರಲ್ಲಿ. ಅಲ್ಲಿಯ ಅಷ್ಟವಂಕ, ಇಲ್ಲಿ ಮಾವುತ; ಅಮೃತಮತಿ–ರಾಣಿ; ಯಶೋಧರ–ರಾಜ; ಚಂದ್ರಮತಿ-ರಾಜಮಾತೆ. ಒಂದು ಅಂಶ ಸ್ಪಷ್ಟ. ಕಾವ್ಯದಲ್ಲಿ ಮೊದಲ ಸ್ಥಾನ ಯಶೋಧರನದಾದರೆ, ಇಲ್ಲಿ ಆ ಸ್ಥಾನ ಮಾವುತನದಾಗಿದೆ. ಎರಡನೆಯವಳು ರಾಣಿ; ಮೂರನೆಯ ಸ್ಥಾನ ರಾಜನಿಗೆ. ಅಂದರೆ ಕಾವ್ಯದ ನಾಯಕ 'ಯಶೋಧರ' ನಾದರೆ, ನಾಟಕದ ನಾಯಕ 'ಮಾವುತ'. ನಾಯಕಿಯ ವಿಷಯದಲ್ಲಿ ಇಬ್ಬರದೂ ಒಂದೇ ಮತ. ಅಷ್ಟವಂಕನಿಗೆ ಮಾತ್ರ ಬಡ್ತಿ. ಸೂಕ್ಷ್ಮವಾಗಿ ಗಮನಿಸಿದರೆ, ಇಲ್ಲಿಯೇ ಸ್ಪಷ್ಟಪಡಿಸಿಕೊಳ್ಳಬಹುದು, ನಾಟಕಕಾರರ ಒಲವು ಮಾನವ ಸಹಜ ಪ್ರವೃತಿಗಳೆಡೆಗೆ ಇದೆ ಎಂಬುದನ್ನು.

ನಾಟಕ ಪ್ರಾರಂಭದ ಹೀಗಿದೆ; ಜಿನ ಬಸದಿಯೊಂದರಲ್ಲಿ ಮಾವುತ ಮತ್ತು ರಾಣಿ ಕೂಡಿದ್ದಾರೆ. ಮಾವುತನಿಗೆ, ರಾಣಿ ಯಾರೆಂಬುದು ತಿಳಿದಿಲ್ಲ; ಕೇಳುತ್ತಿದ್ದಾನೆ; ಇದೇ ಸಂದರ್ಭದಲ್ಲಿ ರಾಜ ಮತ್ತು ರಾಜಮಾತೆ, ಇವರನ್ನು ಬಸದಿಯ ಹೊರಗೆ ಕಾಯುತ್ತಿದ್ದಾರೆ. ಆದರೆ, ಜನ್ನನಲ್ಲಿ ಈ ಕ್ರಿಯೆ ನಡೆಯುವುದು ಬಸದಿಯಲ್ಲಿ ಅಲ್ಲ; ಗಜ ಶಾಲೆಯಲ್ಲಿ. 'ನೋಡುವ ಕಣ್ಗಳ ಸಿರಿ, ಮಾತಾಡುವ ಬಾಯ್ಗಳ ರಸಾಯನಂ, ಸಂತಸದಿಂ ಕೂಡುವ ತೋಳ್ಗಳ ಪುಣ್ಯಂ'ನಂತಿದ್ದ ಯಶೋಧರ ಇಲ್ಲಿಯೂ ತನ್ನ ಸೌಂದರ್ಯವನ್ನು ಉಳಿಸಿಕೊಂಡಿದ್ದಾನೆ–ದೈಹಿಕವಾಗಿ.

ನಾಟಕದಲ್ಲಿ ಬರುವ ಮತ್ತು ಕಾವ್ಯದಲ್ಲಿ ಬರುವ ಪಾತ್ರಗಳನ್ನು ಒಟ್ಟೊಟ್ಟಿಗೇ ತೂಗಿ ನೋಡುವುದರ ಮೂಲಕ, ನಾಟಕಕಾರರು ಮಾಡಿಕೊಂಡ ಮಾರ್ಪಾಟುಗಳನ್ನು, ಮೂಲ ಆಶಯವನ್ನು ಉಳಿಸಿಕೊಂಡ ಸಂದರ್ಭಗಳನ್ನು ಇನ್ನೂ ಹೆಚ್ಚು ಸ್ಪಷ್ಟವಾಗಿ ಗುರುತಿಸಬಹುದು.

ಮಾವುತ, ಸಂಗೀತ ಗುಣವನ್ನು ಇಲ್ಲಿಯೂ ಉಳಿಸಿಕೊಂಡಿದ್ದಾನೆ. ಆ ಮೂಲಕವೇ 'ನುಣ್‌ದನಿ ನಿದ್ರೆಗೆ ತಕಬೀಜ'ವಾಗಿದೆ. ಕಾವ್ಯದಲ್ಲಿ ಮಾತಿನ ಮೂಲಕ ಕ್ರಿಯಾಶೀಲ ನಾಗದ ಅಷ್ಟವಂಕ, ನಾಟಕದಲ್ಲಿ ಕ್ರಿಯಾಶೀಲನಾಗುತ್ತಾನೆ. ತನ್ನನ್ನು ಒಲಿದು ಬಂದ

ರಾಣಿಯಲ್ಲಿ ತಾನೂ ಅನುರಾಗಗೊಳ್ಳುತ್ತಾನೆ. ಕಾವ್ಯದಲ್ಲಿ ಮಾವುತನ ಕ್ರಿಯೆಗಳನ್ನು, 'ತಾಂಬೂಲ ಜಾಲವುಂ ಕೆವಱಿ ಕುರುಳೊಳಸೆಱೆ', 'ತೋರಮುಡಿವಿಡಿದು ಕುಡಿಯುಂ ಸಾರಂ ತದೆವಂತೆ ತದೆದಂ', ಎಂದು ಮುಂತಾಗಿ ಕವಿಯ ಮಾತಿನಲ್ಲಿ ಕೇಳುತ್ತೇವೆ. ಆದರೆ ನಾಟಕದಲ್ಲಿ,

'ಯಾರs ನೀ ?'

'ಅವರ ಹೋಗೂ ಮುಂಕ್ಕಟ್ಟ ನಿನ್ನ ಪ್ಯಾರಿ ಆಟು ತೋರಿಸಿ ಹೋಗು'

'ನಿನ್ನ ಹೆಸರೇನ್ಸತಿ ಅದನರೆ ಹೇಳಿ ಹೋಗು'

ಎಂದು ರಮಿಸುವ ಇನಿಯನಾಗಿ, ಕಾಣುತ್ತಾನೆ. ಅದೇ ಸಂದರ್ಭದಲ್ಲಿ,

'ನನ್ನ ದನಿಗೆ ಮಳ್ಳಾಗಿ, ನನ್ನ ಸಂಗಾಟ ಮಲಕೊಣ್ಣಾಕ ಬಂದಾಕಿ ನೀನs ಒಬ್ಬಾಕಿ ಅಲ್ಲ. ಸಣ್ಣವಿದ್ದಾಗ ನಾ ಅತ್ತರ ಕೇಳಾಕ ಹಕ್ಕಿ ಗುಂಪ್ಗುಗಟ್ಟಿಕೊಂಡು ಬರತ್ತಿದ್ವಂತ' ಎಂಬಲ್ಲಿ ತನ್ನ ಹೆಗ್ಗಳಿಕೆಯನ್ನು ಮೆರೆಯುತ್ತಾನೆ. ಕಾವ್ಯದಲ್ಲಿ ಈ ಮಾವುತನನ್ನು ಕಾಣುವುದೇ ಇಲ್ಲ; 'ಅಷ್ಟವಂಕ'ನನ್ನು ಮಾತ್ರ ಕಾಣುತ್ತೇವೆ. ಕಾವ್ಯದಲ್ಲಿ ಅಷ್ಟವಂಕ, ಅಮೃತಮತಿಯನ್ನು ಕೂಡುವಷ್ಟರ ಮಟ್ಟಕ್ಕೇ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಬಿಡುತ್ತಾನೆ. ಆದರೆ. ನಾಟಕದಲ್ಲಿ, ನಿಜವಾದ ಮಾವುತನ ದರ್ಶನ ಇಲ್ಲಿಂದಲೇ ಆರಂಭವಾಗುತ್ತದೆ. ಕಾವ್ಯದಲ್ಲಿ, ಅಷ್ಟವಂಕ ಮತ್ತು ಅಮೃತಮತಿಯರ ಸಮಾಗಮ ಸೂಚ್ಯವಾಗಿದೆ; ನಾಟಕದಲ್ಲಿ ವಿವರವಾಗಿ ನಿರೂಪಿತವಾಗಿದೆ. ಪಾತ್ರದ ಬೆಳವಣಿಗೆಯ ದೃಷ್ಟಿಯಿಂದ ಅದು ಅವಶ್ಯಕವೂ ಹೌದು. ಕಾವ್ಯದಲ್ಲಿ ಕವಿಗೆ ಧರ್ಮವಷ್ಟೇ ಪ್ರಧಾನವಾದುದರಿಂದ, ಅಷ್ಟವಂಕನ ಬಗ್ಗೆ ಹೆಚ್ಚಿನ ಕಾಳಜಿ ವಹಿಸ ಬೇಕಿತ್ತು ಎಂದು ನಾವು ಅಪೇಕ್ಷಿಸುವಂತೆಯೂ ಇಲ್ಲ ಮತ್ತು ಆಕ್ಷೇಪಿಸುವಂತೆಯೂ ಇಲ್ಲ. ಆದರೆ, ನಾಟಕದ ಮಾವುತನ ಪಾತ್ರ, Round character ದೃಷ್ಟಿಯಿಂದ ಮತ್ತು ಸಹಜಪ್ರವೃತ್ತಿಗಳ ಪ್ರಾಬಲ್ಯವನ್ನು ಸ್ಥಾಪಿಸಬೇಕಾಗಿರುವುದರಿಂದಲೂ, ಇದು ಅಪೇಕ್ಷಣೀಯವಾಗಿದೆ. ಆದ್ದರಿಂದ ಕಾವ್ಯದಲ್ಲಿ, 'ಸಂಗೀತಗಾರ' ಎಂಬ ಒಂದು ಪ್ಲಸ್‌ಪ್ಯಾಂಟ್ ಮತ್ತು

'ಪಱಿದಲೆ ಕುಱನೊಸಲ ಱಗ
ಣ್ಣೊಱವಾಯ್ ಹಪ್ಪಳಿಕೆ ಮೂಗು ಮುರುಟಿದ ಕಿವಿ ಬಿ
ಬ್ಬಿಜಂವೆಲ್ ಕುಸಿಗೊರಲಿಱಿದೆರ್ದೆ' ಮತ್ತು

'ಕಱಿದೊವಲ ಪಱಿಯ ಕುಱಿಯುಂ
ತೆಱಿದಂಪದ ಪೆುಯ್ಯನಾತಮಾತನ ಕಯ್ಗಳ್
ಕುಱಿಗಣ್ಣು ಕೂನಬೆನ್ ಕಾರ್
ಮೆಱಿಯಿಸುವುದು ಟೊಂಕ ಮುಱಿದ ಕತ್ತೆಯ ಕಾಲಂ' ಮತ್ತು

'ಮುದುಗರಡಿ', 'ಮುರುಡ', ಎಂಬ ಅನೇಕ ಮೈನಸ್ ಪ್ಯಾಂಟ್ಸ್‌ಗಳೊಂದಿಗೆ
ಕೂಡಿದ ಅಷ್ಟವಂಕ ಇಲ್ಲಿ, ಹೆಣ್ಣಿನ ವೈಕಸುವನ್ನು ಅಳೆಯುವ ರಸಿಕನಾಗಿ ತನ್ನ
ಅಸ್ತಿತ್ವವನ್ನು, ಹುಟ್ಟನ್ನು ನೆನಪಿಸಿಕೊಳ್ಳುವ ನೆನಪುಕಾರನಾಗಿ, ತನ್ನ ವಿಕಾರಕ್ಕೆ ಮರು
ಗುವವನಾಗಿ, ಬೆಳದಿಂಗಳನ್ನು ಸವಿಯುವ ಪ್ರಕೃತಿಯ ಉಪಾಸಕನಾಗಿ ಕಾಣು
ತ್ತಾನೆ.

ಅಷ್ಟೆ ಅಲ್ಲ, ಒಲಿದು ಬಂದ ಹೆಣ್ಣನ್ನು, ಆಕೆಯ ಗಂಡನೆದುರೇ, ಆತ ರಾಜನೆಂದು
ತಿಳಿದೂ, ಪ್ರಣಯಕೇಳಿಯ ಆಗುಹೋಗುಗಳ ಬಗ್ಗೆ ರಾಣಿಯ ವಿಷಯದಲ್ಲಿಯೇ
ಸಲಹೆ ನೀಡುವ ಸಲಹೆಗಾರನಾಗಿಯೂ, ತನ್ನ ನಿದ್ದೆಗೆ ಭಂಗ ತರುವ ರಾಜದಂಪ-
ತಿಗಳನ್ನು ಟೀಕಿಸುವವನಾಗಿಯೂ, ಅರ್ಥವಿಲ್ಲದ ಬಲಿ ಕೊಡುವುದನ್ನು ಪ್ರತಿಭಟಿಸುವ
ಸಂಕೇತವಾಗಿಯೂ ಇಲ್ಲಿಯ ಮಾಪುತನಿದ್ದಾನೆ. ಅವನ ಈ ಮಾತು, ನನ್ನ
ಅಭಿಪ್ರಾಯವನ್ನು ಸಮರ್ಥಿಸುತ್ತದೆ;

'ಏಯ್, ಸ್ವಲ್ಪ ನಾಲಿಗೀ ಸಂಭಾಳಿಸಿ ಮಾತಾಡರಿ. ಯಾಕ್ಕ?
ಕಲತೀರಂತ ಬರೇ ಬೈಗುಳನsts ಕಲಿತೀರೇನು?
ಯಾವಾಗಿನಿಂದ ನೋಡತೀನು – ಅದs ನಡದೈತಿ. ಈಗ ಒಳೆ
ಮಾತಿಲೆ ಆ ಕೋಳಿ ಒಯ್ಯಿರಿ ಇಲ್ಲಿಂದ. ಹೂಂ, ಎತ್ತರಿ ಅದನ್ನ.'

ಆದರೆ, ಜನ್ನನ ಅಷ್ಟವಂಕನ ಧೈರ್ಯ ಈ ಮಟ್ಟಕ್ಕೆ ಬರುವುದೇ ಇಲ್ಲ. ರಾ
ಎಂದೊಡನೆ, 'ಹಿಂದುಮುಂದನ್ನು' ಮುಟ್ಟಿಕೊಂಡು ಪ್ರಾಣಭಿಕ್ಷೆ ಬೇಡುವ ಅ
ವಂಕನನ್ನು ಅಲ್ಲಿ ಕಾಣುತ್ತೇವೆ. ಅದಕ್ಕೇ ಕಾಲಧರ್ಮ ಮತ್ತು ಕವಿಯ ಆಶ
ಕಾರಣವೆಂಬುದನ್ನು ನಾವು ಗಮನದಲ್ಲಿಡಬೇಕು.

ರಾಣಿ ಸಾಮಾನ್ಯಳಲ್ಲ; ಅವಳಲ್ಲಿ ಯಶೋಧರನ ಪ್ರೀತಿ ಅಲ್ಪಪ್ರಮಾಣದ್ದೇನೂ ಅ

'ಅಳವಡೆ ಭುಜದೊಳ್ ಮೃಗಮದ
ತಿಲಕದಪೊಲ್ ಸಕಲಧರಣಿ ಯೌವನಭೂಷಣ
ವಳಿಯೆನೆ ತಿರ್ದಿದನಾ ನೃಪ
ಕುಲಶೇಖರನಮೃತಮತಿಯ ಮುಖದರ್ಪಣದೊಳ್'

ಹಾಗಾದರೆ, ಅಮೃತಮತಿ 'ಮುಟ್ಟಿದ ಮಾನವನೆ ತೊಟ್ಟನೆ ಪಸಾಯದನಗೊಡ
ಕಾರಣವೇನು ? ಯಶೋಧರ ಮತ್ತು ಅಮೃತಮತಿಯ ಪ್ರೀತಿಯ ದ್ಯೋ
ವಾಗಿ ಮಗನೊಬ್ಬನಿದ್ದ ಎಂಬ ಸೂಚನೆ ಕಾವ್ಯದಲ್ಲಿ ಇದೆ. ಆದರೆ ನಾಟಕದಲ್ಲಿ

ಕಲ್ಪನೆ ಬೇರೆ ರೂಪದಲ್ಲಿ ಮೂರ್ತಗೊಂಡಿದೆ, (ರಾಣಿಯು ಬಸಿರಿನ ಕಲ್ಪನೆ). ರಾಣಿ ಬಸಿರಾಗಿದ್ದಳು ನಿಜ; ಆದರೆ ಆಕೆಯದು ಸುಳ್ಳು ಬಸಿರು. ಮಗುವನ್ನು ಹೆರಲೇ ಇಲ್ಲ. ಆದರೆ ಜನ್ನನ ಪ್ರಕಾರ ಅಮೃತಮತಿ ಮನಸೋಲಲು ಮುಖ್ಯ ಕಾರಣ, 'ವಿಧಿವಿಳಸನ'. ಜಾರಿದ ಅಮೃತಮತಿ, ತನ್ನನ್ನು ತನ್ನ ದೃಷ್ಟಿಯಲ್ಲಿ ಸಮರ್ಥಿಸಿ ಕೊಳ್ಳುವ ಪರಿ, ಕಾವ್ಯದಲ್ಲಿಯೂ ತರ್ಕಬದ್ಧವಾಗಿದೆ: ನಾಟಕದಲ್ಲಿಯೂ ತರ್ಕಬದ್ಧ ವಾಗಿದೆ. ಆದರೆ ಆ ತರ್ಕಕ್ಕೆ ಬಳಸುವ ಮಾನದಂಡಗಳು ಮಾತ್ರ ಬೇರೆ ಬೇರೆ. ಕಾವ್ಯದಲ್ಲಿನ ಅಮೃತಮತಿ ತನ್ನ ಗಂಡನಿಗೆ ಗುಟ್ಟು ತಿಳಿದಮೇಲೆ, ಮೌನವಾಗುತ್ತಾ ಹೋಗುತ್ತಾಳೆ. ಆದರೆ, ನಾಟಕದಲ್ಲಿ ಇನ್ನೂ ಹೆಚ್ಚು ಕ್ರಿಯಾಶೀಲಳಾಗುತ್ತಾ ಹೋಗುತ್ತಾಳೆ. 'ಪೊಲ್ಲಮೆಯೇ ಲೇಸು ನಲ್ಲರ ಮೆಯ್ಯೊಳ್' ಎಂದು ಸಮರ್ಥಿಸಿ ಕೊಳ್ಳುವ ಅಮೃತಮತಿ ತನ್ನ ಅತ್ತೆಗೆ ಗುಟ್ಟು ತಿಳಿದದ್ದಕ್ಕಾಗಿ ಚಿಂತಿಸುತ್ತಾಳೆ-ನಾಟಕ ದಲ್ಲಿ. ಆದರೆ ಗಂಡನ ಕನಸನ್ನು ಅರ್ಥಮಾಡಿಕೊಳ್ಳಲಾರದ, ಇನಿಯನನ್ನು (ಮಾವುತ) ನಿರ್ದಿಷ್ಟವಾಗಿ ಬೆಂಬಲಿಸಲಾಗದ ಸಹಜಪ್ರವೃತ್ತಿಯ ಒತ್ತಡವನ್ನು ಅದುಮಿಡಲಾರದ ಅಸಹಾಯಕ ಸ್ಥಿತಿ ಆಕೆಯದು.

ಅತ್ತೆಯೆದುರು ಧೈರ್ಯವಾಗಿ ವಾದಿಸುವ, ಬಲಿಯ ವಿಷಯದಲ್ಲಿ ಖಂಡಿಸುವ, ರಾಣಿ ಯನ್ನು ನಾಟಕದಲ್ಲಷ್ಟೇ ನೋಡುತ್ತೇವೆ ತಾನು ವಿಟನಲ್ಲಿ ರಮಿಸಿದ್ದರೂ, ತನ್ನ ಗಂಡ, ಅದೇ ವಿಟನೆದುರು ತನ್ನ ಮೈ ಪರೀಕ್ಷಿಸುವುದನ್ನು ಆಕೆ ಸಹಿಸಳು. ಈ ಸನ್ನಿವೇಶ, ಜನ್ನನಲ್ಲಿ ಇಲ್ಲ. ಇವನ ರೂಪ ನೋಡಿ ಅಸಹ್ಯಪಡಲಿಲ್ಲವೇ ಎಂದು ರಾಜ ಕೇಳಿದಾಗ, ಆಕೆಯ ಬಗ್ಗೆ ಮಾವುತ ಹೇಳುವ ಈ ಮಾತು—

'ಅದೇನ ಕೇಳತೀರಿ ? ನನ್ನ ನೋಡಿದ್ದs ದೀಪ ಆರಿಸಿಬಿಟ್ಟರು. ಹೇಳಲಿಲ್ಲs ? ಅವರಿಗೆ ಯಾ ಯಾಳೇಕೆ ಏನ್ ಮಾಡಬೇಕು ಎಲ್ಲs ಗೊತ್ತೈತಿ'

ಎಂಬಲ್ಲಿ 'ರಾಣಿ'ಯ ಪ್ರಣಯಾನುಭವದ ಜ್ಞಾನ ಎಷ್ಟಿದೆ ಎಂಬುದನ್ನು ಗುರುತಿಸ ಬಹುದು. ಅಷ್ಟೇ ಅಲ್ಲ, ಅವನ ರೂಪನ್ನು ದೀಪದ ಬೆಳಕಿನಲ್ಲಿ ನೋಡಿದ್ದರೆ, ರಾಣಿ ತನ್ನ ಮನಸ್ಸಿಗೆ ತಾನೇ ಕಡಿವಾಣ ಹಾಕುವ ಸಾಧ್ಯತೆಯನ್ನು ಮನಗಂಡಿರು ವುದರಿಂದಲೇ ದೀಪ ಆರಿಸಿರಲೂಬಹುದು.

ನಾಟಕದ ರಾಣಿ ಕೇವಲ ರಾಣಿಯಲ್ಲ. ಬಾಲ್ಯದಲ್ಲಿ ಆಕೆ ಬಹಳಷ್ಟು ಬುದ್ಧಿವಂತೆ. 'ಒಂದು ಒಗಟ ಹೇಳತೀನಿ' ಎನ್ನುವಲ್ಲಿ, ನಿನಗೆ ಮುಂದೆ ನಾನೇ ಒಂದು ಬಿಡಿಸ ಲಾಗದ ಒಗಟಾಗುತ್ತೇನೆ ಎಂಬ ಸೂಚನೆ ಇದೆ. (ಇಂದಿಗೂ, ಅಮೃತಮತಿ ಮನ ಶ್ಶಾಸ್ತ್ರ ವಿಶ್ಲೇಷಣಕಾರರಿಗೆ ಒಳ್ಳೆಯ ಅಧ್ಯಯನ ವಸ್ತುವಾಗಿಯೇ ಉಳಿದಿದ್ದಾಳೆ). ಇಂತಹ ಸನ್ನಿವೇಶಗಳ ಕಲ್ಪನೆಯಾಗಲೀ ಅಥವಾ ಅಮೃತಮತಿಯ ಬಾಲ್ಯಚಟು ವಟಿಕೆಗಳನ್ನಾಗಲೀ ಜನ್ನನಲ್ಲಿ ಕಾಣುವುದಿಲ್ಲ. ಅದಕ್ಕೆ ಬದಲಾಗಿ, ಅವಳು ತನ್ನ

ಪತನದ ನಂತರ, ಜನ್ಮಜನ್ಮಗಳಲ್ಲಿ ತೊಳಲಾಡುವುದನ್ನು ಕಾಣುತ್ತೇವೆ. ಅಂದರೆ ಇಲ್ಲಿಯೇ ನಾವು ಜನ್ನ ಮತ್ತು ಕಾರ್ನಾಡರಿಗೆ ಅಂತರವನ್ನು ಕಾಣುತ್ತೇವೆ. ಕವಿ ಧರ್ಮಪ್ರತಿಪಾದನೆಯ ಸಲುವಾಗಿ, ಬಾಲ್ಯವನ್ನು ಕಡೆಗಣಿಸಿ, ಧಾರ್ಮಿಕತೆಯೆಡೆಗೆ ಪಾತ್ರಗಳನ್ನು ಎಳೆದೊಯ್ದರೆ, ನಾಟಕಕಾರರು ಸಹಜಪ್ರವೃತ್ತಿಗಳ ಮೂಲಕ, ಪಾತ್ರಗಳನ್ನು ಹಂತಹಂತವಾಗಿ ಬೆಳೆಸಿಕೊಂಡು ಬಂದಿದ್ದಾರೆ.

ಅಮೃತಮತಿಯನ್ನು ಯಶೋಧರ ಕಮಲದ ದಂಟಿನಿಂದ ಹೊಡೆದಾಗ, ಮೂರ್ಛೆ ದಪ್ಪಿ ಬೀಳುತ್ತಾಳೆ. ಆದರೆ ಇಲ್ಲಿಯ ರಾಣಿಗೆ ತನ್ನದೇ ಆದ ವ್ಯಕ್ತಿತ್ವವಿದೆ. ಅದಕ್ಕಾಗಿಯೇ ಗಂಡನ ಕೈಯಿಂದ ಕೊಸರಾಡಿಕೊಂಡು, 'ಕೋಡಗ'ನ ತೋಳನ್ನೇ ಬಯಸುತ್ತಾಳೆ. ಮಾವುತನನ್ನು, ಹುಂಜವನ್ನು ಎಸೆಯುವ ವಿಷಯದಲ್ಲಿ ಬೆಂಬಲಿಸುತ್ತಾಳೆ–ಗಂಡನಿಗೆ ವಿರುದ್ಧವಾಗಿ. 'ಕೋಡಗ' ಎಂದು ಕರೆದ ಬಗ್ಗೆ ಗಂಡನನ್ನು ಪ್ರತಿಭಟಿಸುತ್ತಾಳೆ. ಅಷ್ಟೇ ಅಲ್ಲ, ಗಂಡನ ಸಾನ್ನಿಧ್ಯ ಮುಳ್ಳುಹಾಸಿಗೆ ಎಂಬುದನ್ನು ಗಂಡನೆದುರೇ ವ್ಯಂಗ್ಯವಾಗಿ ಹೀಗೆ ಹೇಳುತ್ತಾಳೆ :

'ಈಗ ಅರಮನೆಗೆ ಹೋಗಿ ಏನು ಮಾಡೋದಿದೆ ಅಪ್ಪವಂಕ ?
ಈ ಕೋಳಿಯನ್ನೇ ಅಪ್ಪಿ ಮುದ್ದಾಡಬೇಕು.'

ಆದರೆ ರಾಜ 'ಅದರ ವಿಷಯದಲ್ಲಿ ತಮಾಷೆ ಬೇಡ' ಎನ್ನುತ್ತಾನೆ. ಆಗ ರಾಣಿ,

'ಆ ಕೋಳೀನ್ನ ಎತ್ತಿ ಹೊರ್ರ್ಯಾಕ ಚೆಲ್ಲಾಕ ಆ ಮಂಗ್ಯಾನ ಕೈಲಿ ಸೈತ
ಆಗಾಕಿಲ್ಲೇನ್ರೀ ? ಅಸಟ ಪ್ರೈಮಾ ಐತೇನವರದು ? ಹಂಗಾರs ನಾನs
ನೋಡತೀನು ಅದರ ಪ್ರೈಮಾ......'

ಎನ್ನುತ್ತಾಳೆ. ಈ ಮಾತು ಇಲ್ಲಿಯ ರಾಣಿಯ ಮನವಿಂಗಿತವನ್ನು ಸ್ಪಷ್ಟಪಡಿಸುತ್ತದೆ.

ಜನ್ನನ ಅಮೃತಮತಿ, ಯಶೋಧರನನ್ನು ವಿಷವಿಕ್ಕಿ ಕೊಂದರೆ, ಕಾರ್ನಾಡರ ನಾಯಕಿ, (ರಾಣಿ) ರಾಜನನ್ನು ತನ್ನ ವಿಚಾರಶೀಲ ಮಾತುಗಳಿಂದ ಇರಿಯುತ್ತಾಳೆ.

೧೨ನೆಯ ಶತಮಾನದ ಅಥವಾ ಅದಕ್ಕಿಂತಲೂ ಮೊದಲಿನ ಸೌಂದರ್ಯವೇ ೨೦ನೆಯ ಶತಮಾನದ ರಾಜನಲ್ಲಿಯೂ ಇದೆ. ಆದರೆ 'ಯಶೋಧರ'ನಿಗಿಂತ 'ರಾಜ' ಹೆಚ್ಚು ಬೌದ್ಧಿಕವಾಗಿ ಬೆಳೆದಿದ್ದಾನೆ. 'ರಾಣಿ'ಯ ಜಾರುವಿಕೆಗೆ ಕಾರ್ಯ ಕಾರಣ ಸಂಬಂಧವನ್ನು 'ವಿಧಿವಿಳಸನ' ಎಂಬ ತತ್ವದಡಿಯಲ್ಲಿ ಹುಡುಕಹೋಗದೇ, ಹೀಗಾಗುವುದಕ್ಕೆ ಕಾರಣವೇನು ಎಂದು ವಸ್ತುನಿಷ್ಠವಾಗಿ ಯೋಚಿಸತೊಡಗುತ್ತಾನೆ.

'ಬಾಳ್ ನಿಮಿರ್ಚಿ ತೋಳ್ ತೂಗಿಸಿ ಮನ ಕನಲಿಸುವ' ಆದರೆ, ಮರುಕ್ಷಣದಲ್ಲಿಯೇ

ಧೃತಿಗೆಡದ ಯಶೋಧರನನ್ನು ಕಾವ್ಯದಲ್ಲಿ ಕಾಣುತ್ತೇವೆ. ಆದರೆ ನಾಟಕದ ರಾಜನ ಮನಃಸ್ಥಿತಿಯೇ ಬೇರೆ. ಅವನು ಅನ್ವೇಷಣೆಗಾಗಿಯೇ ಬಂದಿದ್ದಾನೆ; ಅನ್ವೇಷಣೆಯನ್ನೂ ಮಾಡಿದ್ದಾನೆ. ಇದಕ್ಕೆ ಕಾರಣವನ್ನೂ ಹುಡುಕುತ್ತಾನೆ–ತಾನೂ ಸಮಸ್ಯೆಯಲ್ಲಿ involve ಆಗುವುದರ ಮೂಲಕ. ಕಾವ್ಯದ ಯಶೋಧರನೂ ಇದರಿಂದ ಹೊರತಿಲ್ಲ. ಆದರೆ, ವ್ಯತ್ಯಾಸ ಅಲ್ಲ. ಅಷ್ಟವಂಕನೆದುರು ಯಶೋಧರ ಕಾಣಿಸಿಕೊಳ್ಳುವುದೇ ಇಲ್ಲ. ಇಲ್ಲಿ ಹಾಗಲ್ಲ; ರಾಜ, ಮಾವುತನಿಂದಲೇ ತನ್ನ ಹೆಂಡತಿಯ ಬಗ್ಗೆ ಕಾಮಸೂತ್ರಗಳನ್ನು ಪಠಿಸಬೇಕಾಗುತ್ತದೆ. ಉದಾಹರಣೆಗೆ :

'......ನಿಮಗೊಂದು ಮಾತು ಹೇಳಲ್ರೀ ? (ರಾಜನ ಹತ್ತಿರಕ್ಕೆ ಬಂದು) ಅವರ್ನ ಬಲಗಡೀ ಹೆಗಲಮ್ಯಾಗ–ಇಂತಲ್ಲೇ ಮುಟ್ಟರೀ. ಏನು ಮಜಾ ಆಕ್ಕೈತಿ ನೀವs ನೋಡ್ರಿ'

ಎನ್ನುವ ಮಾವುತನ ಮಾತು, ರಾಜನಿಗೆ ಹೇಗೆನಿಸಬೇಡ; ಆದರೆ ಅಲ್ಲಿ ಬಾಳ್‌ತೋಳ್‌ಗಳ ಶೌರ್ಯ ತೋರಲು ಉದ್ಯುಕ್ತನಾದ ಯಶೋಧರನ ಸ್ವಭಾವ ಇಲ್ಲಿ ಸಂಪೂರ್ಣವಾಗಿ ಬದಲಾಯಿಸಿದೆ. ಅದಕ್ಕೇ ಕೇಳುತ್ತಾನೆ :

'ಬಲಗಡೆಯ ಹೆಗಲು ? ಎಲ್ಲಿ ? ಇಲ್ಲೇನು ? ನೆನಪಿಡಬೇಕು. ನನಗೆ ಅವಳ
ಕುತ್ತಿಗೆಯ ಮೇಲೆ, ಇಲ್ಲಿ ತಿಕ್ಕಬೇಕು ಅಂತ ಗೊತ್ತಿತ್ತು. ಆದರೆ
ಬಲಗಡೆಯ ಹೆಗಲು, ಇದು ಹೊಸತು. ಇನ್ನು ಎಲ್ಲೆಲ್ಲಿ...'

ಈ ಮಾತಿನಲ್ಲಿ ವ್ಯಂಗ್ಯವೂ ಇರಬಹುದು; ಮಾವುತ ಮತ್ತು ರಾಣಿಯೊಂದಿಗೆ ರಾಜಿಯ ಮನೋಭಾವವೂ ಇರಬಹುದು. ಆದರೆ, ಒಬ್ಬ ವಿಮರ್ಶಕರು ಯಶೋಧರನ ಬಗ್ಗೆ ಪಡುವ ಅಭಿಪ್ರಾಯ–'ಯಶೋಧರ ಸುಂದರನಾಗಿದ್ದರೂ, ಅವನಿಗೆ ಜಘನ್ಯ ಗುಣವಿಲ್ಲದ್ದರಿಂದ, ಅವನ ಸಂಗಸುಖಿಗಳು ತೃಪ್ತಿ ಪಡೆಯುತ್ತಿರಲಿಲ್ಲ' ಎಂಬ ಅಂಶನಾಟಕಕಾರರ ಮೇಲೆಯೂ ಪ್ರಭಾವ ಬೀರಿರುವಂತೆ ತೋರುತ್ತದೆ.

ಕಾವ್ಯದಲ್ಲಿ ಕೇವಲ ತನ್ನ ಕಣ್ಸನ್ನೆಯಿಂದಲೇ ಸಮಸ್ತ ರಾಜ್ಯಭಾರವನ್ನು ನಿರ್ವಹಿಸುವ ಯಶೋಧರ ನಾಟಕದಲ್ಲಿ. ವ್ಯಕ್ತಿತ್ವವನ್ನು ಕಳೆದುಕೊಂಡು ಮಾವುತನಿಂದ ದಬಾಯಿಸಿಕೊಳ್ಳುವ ರಾಜನಾಗಿದ್ದಾನೆ. ಆದರೆ ಕಾವ್ಯದಲ್ಲಿ ಮರೆಯಾಗಿದ್ದ ಮಾವುತ ಇಲ್ಲಿ ಮಿಂಚಿದ್ದಾನೆ. ತೆರೆಯ ಮರೆಯಲ್ಲಿ. ಅಷ್ಟವಂಕ ಮತ್ತು ಅಮೃತಮತಿಯರ ಸಂಗವನ್ನು ಕಂಡು ಮರೆಯಾಗುವ ಯಶೋಧರ, ನಾಟಕದಲ್ಲಿ ಇವರಿಬ್ಬರ ಮಿಲನದಲ್ಲಿ 'ಶಿವಪೂಜೆಯಲ್ಲಿ ಕರಡಿ (ಗೆ) ಬಿಟ್ಟಂತೆ' ಪ್ರವೇಶಿಸಿ, ಸಮಸ್ಯೆಯನ್ನೂ, ಸಮಸ್ಯೆಯ ಆಳವನ್ನೂ ಅರಿಯುವ ಛಾತಿ ತೋರುತ್ತಾನೆ.

ಕಾವ್ಯದಲ್ಲಿ ಒಂದು ನಿಮಿಷ. 'ಬಾಳನ್ನು ನಿಮಿರ್ಸಿ, ತೋರ್ಕ್ತೂಗಿಸುವ' ಯಶೋಧರನ ಮನಃಕಂಪನ ನಾಟಕದಲ್ಲಿಯೂ ಸೂಚಿತವಾಗಿದೆ. ಮಾವುತನ ಮಾತನ್ನು ಕೇಳಿ ರಾಜನ ಕೈ ಕತ್ತಿಯತ್ತ ಸರಿಯುತ್ತದೆ. ಆದರೆ ತತ್‌ಕ್ಷಣದಲ್ಲೇ

'ಸ್ವಾಮಿ, ಇದು ಬಸದಿ'

ಎಂಬ ರಾಣಿಯ ಮಾತಿನಿಂದ ಆತನನ್ನು ನಿಯಂತ್ರಿಸುತ್ತಾರೆ. ಒಂದು ಅಂಶ ಸ್ಪಷ್ಟವಾಗುತ್ತದೆ. ನಾಟಕಕಾರರು. ಉದ್ದೇಶಪೂರ್ವವಾಗಿ ಕವಿಯ ಮೂಲ ಆಶಯಕ್ಕೆ (ಜೀವದಯೆ ಜೈನಧರ್ಮ) ಧಕ್ಕೆ ತರಲು ಹೋಗಿಲ್ಲ. ಆದರೆ ಕೆಲವು ಕಡೆ ಮಾರ್ಪಾಟು ಅನಿವಾರ್ಯವಾಗಿದೆ.

ಕಾವ್ಯದಲ್ಲಿ. ಹೆಂಡತಿಯ ದುರ್ಗುಣವನ್ನು. ಕಮಲದ ದೇಟಿನಿಂದ ಹೊಡೆಯುವುದರ ಮೂಲಕ. ಅಸಹನೆಯನ್ನು ವ್ಯಕ್ತಪಡಿಸುವ ಯಶೋಧರ. ನಾಟಕದಲ್ಲಿಯೂ ಕೆಲವೊಮ್ಮೆ ಕಟುವ್ಯಂಗ್ಯದೊಂದಿಗೆ. ಮುಖಾಮುಖಿಯಾಗಿ ಸಮಸ್ಯೆಯ ಸಿಕ್ಕನ್ನು ಬಿಡಿಸತೊಡಗುತ್ತಾನೆ. ಅಲ್ಲಿ ತಾಯಿಯ ವಾತ್ಸಲ್ಯಕ್ಕೆ ಬಲಿಯಾದ ಯಶೋಧರ. ನಾಟಕದಲ್ಲಿಯೂ ಈ ಬಂಧನದಿಂದ ವಂಚಿತನಾಗಿಲ್ಲ. ಮೂಲದ ಕನಸೇ ಇಲ್ಲಿಯೂ ಸಂಕೇತವಾಗಿ ಉಳಿದುಕೊಂಡಿದೆ. ಪತ್ನಿಯೊಂದಿಗೆ, ಪೂರ್ವಜೀವನದ ಸ್ಮರಣೆಯನ್ನು ತಂದುಕೊಳ್ಳುವ ರಾಜನನ್ನು ನಾಟಕದಲ್ಲಿ ಮಾತ್ರ ಕಾಣುತ್ತೇವೆ. ಕಾವ್ಯದಲ್ಲಿ ಕೇವಲ ಅರಸನಾಗಿ. ಗಂಡನಾಗಿ. ತಾಯಿಗೆ ತಕ್ಕ ಮಗನಾಗಿ ಕಾಣಿಸಿಕೊಳ್ಳುವ ಯಶೋಧರ ನಾಟಕದಲ್ಲಿ ಇವೆಲ್ಲ ಗುಣಗಳೊಂದಿಗೆ ತನ್ನ ಹೆಂಡತಿಯ ಮನಸ್ಸನ್ನು ಅರಿಯಲೆಳಸುವ ಮನಃಶಾಸ್ತ್ರಜ್ಞನಾಗಿಯೂ ತೋರುತ್ತಾನೆ.

ತನ್ನ ಪತ್ನಿಯ ಅಸಂಗತ ನಡವಳಿಕೆಯಿಂದಾಗಿ ಬೇಸತ್ತ ರಾಜ. ಪರಿಹಾರಕ್ಕಾಗಿ ಪತ್ನಿಯನ್ನು ಕೇಳುವುದು ನ್ಯಾಯವಾಗಿದೆ. ಕಾವ್ಯದಲ್ಲಿ ಈ ಸಂದರ್ಭದಲ್ಲಿ ತೆರೆಯ ಮರೆಯಲ್ಲಿ ಬಂದುಹೋಗುವ ಯಶೋಧರ. ಇಲ್ಲಿ ಪಾಪವಾದ ಸ್ಥಳದಲ್ಲೇ ಶುದ್ಧೀಕರಣ ಕ್ರಿಯೆ ನಡೆಯಬೇಕೆಂಬ ಹಂಬಲ ಹೊತ್ತಿರುವುದು ಅರ್ಥಪೂರ್ಣವಾಗಿದೆ.

ಪಾಪ ಪರಿಹಾರಕ್ಕಾಗಿ ತಾಯಿಯ ಮೊರೆಹೋಗುವ ರಾಜ ಇಲ್ಲಿಯೂ ಇದ್ದಾನೆ. ರಾಜಮಾತೆಯ ಬೆದರಿಕೆ. ಜೊತೆಗೆ ಪರಿಹಾರ–ಮೂಲದಲ್ಲಿ ಇದ್ದಂತೆಯೇ ಬಂದಿವೆ. ರಾಜ. ತನ್ನ ವಿವಾಹದ ಮೊದಲ ದಿನಗಳನ್ನು ನೆನೆಯುತ್ತಾ. ಪತ್ನಿಯ ಮೇಲಿರುವ ತನ್ನ ಪ್ರೀತಿಯನ್ನು ತೋಡಿಕೊಳ್ಳುತ್ತಾನೆ. ಕಾವ್ಯದಲ್ಲಿ ಕವಿ ನೇರವಾಗಿ ಹೇಳುವ ಈ ಸಂದರ್ಭದ ಮಾತುಗಳು. ನಾಟಕದಲ್ಲಿ ಪಾತ್ರಗಳ ಬಾಯಿಂದಲೇ ಬಂದಿವೆ.

ತನ್ನ ಪತ್ನಿಯನ್ನು ಒಲಿಸಿಕೊಳ್ಳಲು ರಾಜ ಮಾಡುವ ಕ್ರಿಯೆಗಳು ಒಂದೆರಡಲ್ಲ. ಆದರೆ ರಾಣಿ ಒಲಿಯುವುದಿಲ್ಲ. ಚಿಂತಿತನಾದ ರಾಜ ಹೇಳುತ್ತಾನೆ :

'......ನಿನ್ನ ಮನಸ್ಸು ಒಲಿಸಲಿಕ್ಕೆ ನಾನು ಇನ್ನೇನು ಮಾಡಬೇಕು
ಹೇಳು ? ನಿನ್ನ ಕಳ್ಳ ಬಸುರಿನ ಸಲುವಾಗಿ ಬತ್ತಲೆ ಬೈರಾಗಿಯಾದೆ,
ನಿನ್ನ ವ್ಯಭಿಚಾರಕ್ಕಾಗಿ ಷಂಢನಾದೆ. ಈ ಕೋಡಗನ ಕಡೆಯಿಂದ
ಉಗುಳಿಸಿಕೊಂಡೆ. ಇನ್ನೇನು ಉಳಿದಿದೆ ? ಸಿಡಿ ಆಡಬೇಕೋ ?
ತಲೆ ಸಿಡಿಸಬೇಕೋ ? ಏನು ಮಾಡಲಿ ?'

ಎಂಬ ಮಾತಿನಲ್ಲಿ ರಾಜನ ಮನಸ್ಸು ಯಾವ ತೆರದ್ದಿದೆ ಮತ್ತು ಮಾನವ, ಸಹಜ ಪ್ರವೃತ್ತಿಗಳ ಪ್ರವಾಹದಲ್ಲಿ ಹೇಗೆ ನಿಷ್ಕ್ರಿಯನಾಗುತ್ತಾನೆ, ಅಸಾಹಯಕನಾಗುತ್ತಾನೆ ಎಂಬ ಸೂಚನೆ ಇದೆ. ಅಲ್ಲದೆ ಇದು, ಪಾತ್ರಗಳನ್ನು ಸರಳತೆಯಿಂದ ಸಂಕೀರ್ಣತೆ ಯೆಡೆಗೆ ನಡೆಸುವ ಪ್ರಯತ್ನವೂ ಹೌದು. ಆದರೆ ಹೀಗೆ, ಆತ್ಮವಿಶ್ಲೇಷಣೆಗೆ ತೊಡಗುವ ಯಶೋಧರ ನನ್ನು ನಾವು ಕಾವ್ಯದಲ್ಲಿ ಕಾಣುವುದಿಲ್ಲ.

ಕೊನೆಗೂ ಕೂಡಾ ರಾಜ 'ಹುಂಜ' ವನ್ನು ಗೆಲ್ಲುವುದು ಸಾಧ್ಯವೇ ಆಗುವುದಿಲ್ಲ.ಇದು 'ರಾಣಿ' ಗೂ ತಿಳಿಯುತ್ತದೆ; ರಾಜಗೂ ತಿಳಿಯುತ್ತದೆ. ತನ್ನ ಎಲ್ಲಾ ಸಮಸ್ಯೆ ಗಳಿಗೂ ಕಾರಣ 'ವಿಧಿ' ಎಂದು ಚಿಂತಿಸುವ ಯಶೋಧರ ಇಲ್ಲಿ ವಿಧಿಗಿಂತ ಹೆಚ್ಚಾಗಿ ತಾನೇ ಎಂಬುದನ್ನು ಮಾನವಸಹಜ ದೌರ್ಬಲ್ಯಗಳನ್ನು ಅರ್ಥಮಾಡಿಕೊಳ್ಳುವ ಕ್ರಿಯೆಯ ಮೂಲಕ ಕಂಡುಕೊಳ್ಳಬಯಸುತ್ತಾನೆ.

ರಾಜಮಾತೆಯದು ಮೂಲದಲ್ಲಿಯೂ ಸಣ್ಣ ಪಾತ್ರವೇ. ಕಾವ್ಯದಲ್ಲಿ 'ಚಂದ್ರಮತಿ'ಯ ಪಾತ್ರ, ಯಶೋಧರನನ್ನು ಉದ್ಯಾನವನದಲ್ಲಿ (ಆತ ಕೆಟ್ಟಕನಸನ್ನು ಕಂಡನಂತರ) ಭೆಟ್ಟಿಯಾಗುವುದರ ಮೂಲಕ ಕಾಣಿಸಿಕೊಳ್ಳುತ್ತದೆ. ಮಗನ ಸೌಲಭ್ಯಾಕಾಂಕ್ಷೆಯ ದೃಷ್ಟಿಯಿಂದ,ತಾಯಿ ಬಲಿಯ ಸೂಚನೆ ನೀಡಿದ್ದು ಸಮಂಜಸವೇ. ಆಕೆ ಯೋಚಿಸಿದ ದಿಕ್ಕು, ಆ ದಾರಿಯನ್ನು ತೋರಿಸಿದೆ. ನಾಟಕದಲ್ಲಿಯೂ ಈ ಅಂಶ ಉಳಿದುಬಂದಿದೆ.

ನಾಟಕದಲ್ಲಿ, ಈ ಪಾತ್ರದ ಬಗ್ಗೆ ಮಾಡಿಕೊಂಡ ಮೂಲಭೂತ ಬದಲಾವಣೆ ಎಂದರೆ. ಅತ್ತೆ–ಸೊಸೆಯರ ಸಂವಾದದ ಮೂಲಕ ಮಾನವೀಯ ಸಂಬಂಧಗಳ ಸ್ಥಾಪನೆ. ಕಾವ್ಯದಲ್ಲಿ, ಕೇವಲ ವಿಷವುಣ್ಣುವುದಕ್ಕಾಗಿ ಚಂದ್ರಮತಿ ಸೊಸೆಯ ಸಂಗಡ ಹೋಗಿದ್ದಾಗಿ ಸೂಚನೆ ಇದೆ. ಆದರೆ, ನಾಟಕದಲ್ಲಿ, ತನ್ನ ಮಗನ ಒಳಿತಿಗಾಗಿ ಬಲಿಯನ್ನು ಸಮರ್ಥಿಸಿಕೊಳ್ಳುವಷ್ಟರ ಮಟ್ಟಿಗೆ ಬೌದ್ಧಿಕವಾಗಿ ರಾಜಮಾತೆ ಬೆಳೆದಿದ್ದಾಳೆ.

ಹಿಂಸೆಗೆ ಪ್ರಚೋದನೆ, ರಾಜಮಾತೆಯದೇ ನಿಜ: ಆದರೆ ಈಕೆಯ ದೃಷ್ಟಿಯಲ್ಲಿ ಹಿಂಸೆ ಪಾಪವಲ್ಲ; ಅದು ಅಜ್ಞಾನದಿಂದ ನಡೆಯುವ ಭಕ್ತಿಯ ಪೂರಕ ಕ್ರಿಯೆ. ನಾಟಕ

ದಲ್ಲಿನ ಅತ್ತೆ-ಸೊಸೆಯರ ಸಂವಾದದಿಂದ ನಾಟಕಕಾರರು ಒಂದು ಅಂಶದ ಪ
ಬೆಳಕು ಚೆಲ್ಲಿದ್ದಾರೆ: ರಾಜ ಜಿನಭಕ್ತ, ರಾಜಮಾತೆಯೂ ಜಿನಭಕ್ತೆ; ಹಾಗಾದರೆ
ಬಲಿಯ ಬಗ್ಗೆ ಯೋಚಿಸಲು ಹೇಗೆ ಸಾಧ್ಯ ? ಜೈನಧರ್ಮದ ಮೂಲತತ್ವ
"ಜೀವದಯೆ, ಜೈನಧರ್ಮ" ಆಕೆಗೆ ತಿಳಿದಿರಲಿಲ್ಲವೇ ? ಯಶೋಧರ ಚರಿತೆ
ಇದಕ್ಕೆ ಉತ್ತರವಿಲ್ಲ. ಆದರೆ ನಾಟಕಕಾರರು ಈ ತೊಡಕನ್ನು ಬಿಡಿಸಿದ್ದಾರೆ.
ನಮಗೆ ಅತ್ತೆಸೊಸೆಯ ಸಂವಾದದಿಂದ ಸ್ಪಷ್ಟವಾಗುತ್ತದೆ. ರಾಜಮಾತೆಯ
ಮಾತನ್ನು ಗಮನಿಸಿ :

'ನನ್ನ ಮಗ ಕ್ಷತ್ರಿಯ, ಶಾಕ್ತಪಂಥದ, ಅವನನ್ನು ನೀನು ಜೈನಧರ್ಮಕ್ಕೆ ಎಳೆ
ಕೊಂಡು ಹೋದೆ.........'

ರಾಣಿ ಉತ್ತರ ಹೇಳುತ್ತಾಳೆ;

'ಇಲ್ಲ, ನಾನವರ ಮನಸ್ಸನ್ನು ಒಲಿಸಲಿಲ್ಲ. ಅವರೇ ನಮ್ಮ ಅಹಿಂಸಾತತ್ವ
ಮಾರುಹೋದರು :

ಯಶೋಧರ, ಮೂಲತ; ಕ್ಷತ್ರಿಯನಾದುದರಿಂದ, ಅವನ ಮೂಲಕ್ಷಾತ್ರಗು
ಅವನಲ್ಲೂ, ಚಂದ್ರಮತಿಯಲ್ಲೂ ಉದ್ದೀಪನಗೊಂಡವು ಎಂಬುವಕ್ಕೆ ನಾಟಕದ
ಸಮರ್ಥನೆ ದೊರೆತಿದೆ. ಕಾರ್ನಾಡರಿಗೆ ಇದಕ್ಕೆ ಆಧಾರವೇನಿದೆಯೋ ತಿಳಿದಿಲ್ಲ.

ಜನಿಸುವಾಗ, ನರಕಹಿಂಸೆಗೆ ಈಡುಮಾಡಿದ ತನ್ನ ಮಗನಿಗೆ, ಅಹಿಂಸೆ ಬೋಧಿಸು
ಔಚಿತ್ಯವೇನು ಎಂದು ರಾಜಮಾತೆ ಕೇಳುವಲ್ಲಿ ಔಚಿತ್ಯವಿದೆ. ಕೇವಲ 'ಜೀವಬಲಿ
ಯಷ್ಟೇ ಹಿಂಸೆಯಲ್ಲ, ಪ್ರತಿಯೊಂದು ಮಾನಸಿಕ ವೇದನೆಯೂ 'ಹಿಂಸೆ' ಎಂಬ
ದನ್ನು ರಾಜಮಾತೆ ಪರೋಕ್ಷವಾಗಿ ಸೂಚಿಸುತ್ತಿದ್ದಾಳೆ. ರಾಜಮಾತೆ, ರಾಣಿ
ಹೇಳುವ,

'ಹೌದು ! ನೀನು ಪ್ರತ್ಯಕ್ಷ ಹಾದರಕ್ಕೆ ಇಳಿದದ್ದರಿಂದ, ನಿನ್ನ
ಅಮೂರ್ತ ಅನುಭವಕ್ಕೆ ಆಕಾರ ಸಿಕ್ಕಿತು. ಅಸ್ತಿತ್ವ ಸಿಕ್ಕಿತು!
ಬರೇ ನೆನಪಿನ ಮಾತಾಗಿ ಮಾಸಿ ಹೋಗಬೇಕಾದದ್ದು ಹಿಂಸೆಯಾಗಿ
ಬದುಕಿ, ಉಳಿಯಿತು. ಅಲ್ಲಿ ನೋಡು, ಅಲ್ಲಿ ಕೂತಿದೆಯಲ್ಲ,
ಆ ಹುಂಜ, ಅದೇ ನಿನ್ನ ಕನಸಿನ ಕಾಡುಬೇರು. ಅದಕ್ಕಂತಲೇ
ಹೇಳತಿದ್ದೇನೆ, ಬಲಿ ಕೊಡಬೇಡ.........'

ಎನ್ನುವ ಮಾತು, ಇಡೀ ನಾಟಕದ ಅರ್ಥವನ್ನು ಧ್ವನಿಸುತ್ತದೆ. 'ರಾಣಿ'ಯ

ಮನಸ್ಸಿನ 'ಕಾಡುಬೇರು', ಆ ಹುಂಜ–ಹಿಟ್ಟಿನಹುಂಜ–ಇದೇ ಮನುಷ್ಯನ ಸಹಜ ಪ್ರವೃತ್ತಿಗಳ ಪ್ರತೀಕ.

ಆದರೆ. ಕಾವ್ಯದಲ್ಲಿ ಇಂತಹ ವಿಚಾರಪರವಾದ ಯಾವ ಪಾತ್ರವನ್ನೂ ನಾವು ಕಾಣುವುದಿಲ್ಲ. ಕಾವ್ಯದ ಎಲ್ಲಾ ಪಾತ್ರಗಳೂ 'ವಿಧಿವಿಳಸನ' ನಂಬಿಕೆಯ ಮೇಲೆ ಹೆಜ್ಜೆ ಹಾಕಿ, ಮೋಕ್ಷದೆಡೆಗೆ ಸಾಗುತ್ತವೆ. ಆದರೆ ನಾಟಕದಲ್ಲಿರುವ ನಾಲ್ಕೇ ಪಾತ್ರಗಳು, ನಾಟಕಕಾರನ, ಓದುಗರ ಮತ್ತು ಪ್ರೇಕ್ಷಕರ ವಿಚಾರಪರತೆಗೆ ಸವಾಲೊಡ್ಡುತ್ತವೆ.

೧೨ನೆಯ ಶತಮಾನದ ಕವಿಗೆ. ತನ್ನ ಧರ್ಮಪ್ರತಿಪಾದನೆಗಾಗಿ, ಜೀವದಯೆ 'ಜೈನ ಧರ್ಮಂ' ಎಂಬ ತತ್ವವನ್ನು ಸಾರಲು, ಅಮೃತಮತಿ ಮತ್ತು ಅಷ್ಟವಂಕರ ಪ್ರಣಯ ಸಮಸ್ಯೆಯನ್ನು ದುಡಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಅಮೃತಮತಿ ಏಕೆ ಜಾರಿದಳೋ ಅದರ ವಿಶ್ಲೇಷಣೆ ಜನ್ನನಿಗೆ ಮುಖ್ಯವಲ್ಲ. ಐಹಿಕ ಸುಖಭೋಗ ಗಳನ್ನು ವಿಮುಖಗೊಳಿಸಬೇಕಾಗಿದೆ–ಯಾವುದಾದರೊಂದು ನೆಪದಿಂದ, ಆ ನೆಪ ಇಲ್ಲಿ ಅಷ್ಟವಂಕ ಮತ್ತು ಅಮೃತಮತಿಯ ಪ್ರಣಯ ಸಮಸ್ಯೆ. ಈ ಸಮಸ್ಯೆಯನ್ನೇ ಆರಿಸಿಕೊಳ್ಳುವಲ್ಲಿ ಅರ್ಥವಿದೆ. ಏಕೆಂದರೆ, ನಾವು ಯಾವುದು, ಭೋಗಭಾಗ್ಯದ ಆಗರವೆಂದು ತಿಳಿದಿರುತ್ತೇವೆಯೋ, ಅದು ಜುಗುಪ್ಸಾಲೋಕವೂ ಆಗಿರುತ್ತದೆಂಬು ದನ್ನು ತಿಳಿಸುವುದರ ಮೂಲಕ, ಜನ್ನ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳಬೇಕಾ ಗಿದೆ. ಅದಕ್ಕಾಗಿಯೇ ಜನ್ನ 'ಮುಟ್ಟಿದ ಮನಮನೆ ತೊಟ್ಟನೆ ಪಸಾಯದನಂ ಗೊಟ್ಟಳ್' ಎಂದು ಹೇಳುತ್ತಾನೆಯೇ ವಿನಃ ಅದರ ವಿಶ್ಲೇಷಣೆಗೆ ತೊಡಗುವುದಿಲ್ಲ. ಇದನ್ನು ಯಶೋಧರ ಕೆಟ್ಟ ಕನಸೆಂದು ತಾಯಿಗೆ ಹೇಳಿ, ಹಿಟ್ಟಿನ ಹುಂಜದ ಬಲಿಗೆ ಒಪ್ಪಿಬಿಡುತ್ತಾನೆ. 'ಹಿಂಸೆ' ಪಾಪವೆಂಬುದನ್ನು ಸಾಬೀತು ಪಡಿಸಬೇಕಾಗಿದೆ; ಅದು ಮಾನಸಿಕವಾಗಲೀ, ದೈಹಿಕವಾಗಲೀ ಹಿಂಸೆಯೇ. ಆದ್ದರಿಂದ ಜನ್ನನ ಹಿಟ್ಟಿನ ಕೋಳಿ ಕೂಗುವುದು ನ್ಯಾಯುವಾದುದಾಗಿದೆ.

ಆದರೆ ಇದೇ ವಸ್ತುವನ್ನು ಆರಿಸಿಕೊಂಡು ನಾಟಕ ರಚಿಸಿದ, ವೈಚಾರಿಕ ಪ್ರಜ್ಞೆಯುಳ್ಳ ನಾಟಕಕಾರನೊಬ್ಬ 'ಹಿಟ್ಟಿನ ಹುಂಜ'ವನ್ನು ಕೂಗಿಸುವುದು ಏಕೆ ? ಆದರೆ ಆ ಹುಂಜ ಕೂಗುವುದರಲ್ಲಿ ಅರ್ಥವಿದೆ. ಆದರೆ ಆ ಅರ್ಥದ ಸ್ತರಗಳು, ಇಬ್ಬರಲ್ಲೂ ಭಿನ್ನವಾಗಿವೆ. ಜನ್ನನಲ್ಲಿ ಕೋಳಿಯಲ್ಲಿ ಬೆಂತರ ಸೇರಿತ್ತು; ಆದರೆ ಇಲ್ಲಿ? ಇಲ್ಲಿಯೂ ಒಂದು ಬೆಂತರವು ಕೋಳಿಯಲ್ಲಿ ಸೇರಿದೆ. ಅದನ್ನು ನಾಟಕಕಾರರು ವಾಚ್ಯವಾಗಿ ಸೂಚಿಸಿಲ್ಲ. ಆ ಬೆಂತರವೇ ಮನುಷ್ಯನ ಸಹಜಪ್ರವೃತ್ತಿಗಳು. ಪ್ರವೃತ್ತಿಗಳಲ್ಲಿ, ನಾಟಕಕಾರರು ಪ್ರಧಾನವಾಗಿ ಕಾಮವನ್ನು ಕುರಿತು ಹೇಳುತ್ತಿದ್ದಾರೆ. ನಾಟಕಕಾರರು

ಹುಂಜವನ್ನು ಕೂಗಿಸುವುದು ಅವಾಸ್ತವವೇನಲ್ಲ. ಏಕೆಂದರೆ ಅವರ ಮುಖ್ಯ ಆಶಯ, 'ಹಿಟ್ಟಿನ ಹುಂಜ' ಕೂಗುವುದೇ ನಿಜವಾದರೆ, ಮನುಷ್ಯನ ಸಹಜ ಪ್ರವೃತ್ತಿಗಳನ್ನು ಮೆಟ್ಟಲು ಸಾಧ್ಯವಿದೆ ಎಂಬುದಾಗಿದೆ. ಆದ್ದರಿಂದ 'ಹಿಟ್ಟಿನ ಹುಂಜ' ಕೂಗುವುದಿಲ್ಲ; ಮನುಷ್ಯನ ಸಹಜ ಪ್ರವೃತ್ತಿಗಳನ್ನು ಮೆಟ್ಟುವುದು ಸಾಧ್ಯವಿಲ್ಲ. ಅದಕ್ಕಾಗಿಯೇ ನಾಟಕದ 'ರಾಣಿ'.

'ಜೈನರಾಗಿ ನೀವು ಹಿಂಸೆಗೆ ಒಪ್ಪಿದಿರಿ. ಹೆಂಡತಿಯಾದ ನಾನು ಯಾಕೆ ವ್ಯಭಿಚಾರ ಮಾಡಬಾರದು ?'

ಎಂಬ ತರ್ಕಾತೀತ ವಾದವನ್ನು ಒಡ್ಡುತ್ತಾಳೆ.

ಇಷ್ಟಲ್ಲದೇ ಈ ನಾಟಕ, ಸಮಕಾಲೀನ ಸಾಹಿತ್ಯ ಚಳುವಳಿಗಳಿಗೂ ಸ್ಪಂದಿಸುತ್ತಿರುವಂತೆ ತೋರುತ್ತದೆ. ರಾಜಪ್ರಭುತ್ವ ಮತ್ತು ಯಜಮಾನ ಸಂಸ್ಕೃತಿಗಳ ನಡುವೆ, ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಶೋಷಿತ ಜನತೆಯ ದನಿಗೊಂದು ರೂಪು ಕೊಡುವ Individualityಯನ್ನು ಎತ್ತಿ ಹಿಡಿಯುವ ಧೋರಣೆಯೂ ಈ ನಾಟಕದಲ್ಲಿ ಇರುವಂತಿದೆ. ನಾಟಕದ ಈ ಕೆಲವು ಮಾತುಗಳು ನನ್ನ ಅಭಿಪ್ರಾಯಕ್ಕೆ ಪೂರಕವಾಗುತ್ತವೆ :

ಮಾವುತ : 'ನಾ ಬಾಯಿ ಮುಚಗೊಂಡರ ನನ್ನ ಗತಿ ಏನ್ರೀ ದಣಿ ?
ಈ ಬಡವನ ಮ್ಯಾಗ ಇಂತಾ ಕೆಲಸ ಮಾಡಬ್ಯಾಡ್ರಿ
ಮುದ್ದು ಮಾಟ ಮಾಡಿ ಇದ್ದ ದನಿ ತಗಸಿ ಗೋಳಾಡಿಸಬ್ಯಾಡ್ರಿ...'

ಮತ್ತು ಮಾವುತನದೇ ಇನ್ನೊಂದು ಮಾತು :

'ಏಯ್, ಸ್ವಲ್ಪ ನಾಲಿಗಿ ಸಂಭಾಳಿಸಿ ಮಾತಾಡರಿ. ಯಾಕ್ಕ? ಕಲತೀರಂತ
ಬರೇ ಬೈಗೂಳಸುಟs ಕಲತೀರೇನು? ಯಾವಾಗಿನಿಂದ ನೋಡತೀನು
ಅದs ನಡದೈತಿ. ಈಗ ಒಳೇs ಮಾತೀಲೆ ಆ ಕೋಳಿ ಒಯ್ಯಿರಿ ಇಲ್ಲಿಂದ.
ಹೂಂ, ಎತ್ತರಿ ಅದನ್ನ.'

ಒಬ್ಬ ಕವಿಗೆ ಪ್ರಮುಖವಲ್ಲದ, ಅಥವಾ ಬೇರೊಂದು ರೂಪದಲ್ಲಿ ಪ್ರಮುಖವಾಗಬಹುದಾದ ವಸ್ತು, ಕಾಲಾನಂತರದ ಕವಿಗಳಿಗೆ ಸಾಹಿತ್ಯ ರಚನೆಗೆ ಹೇಗೆ ಪ್ರೇರಕವಾಗಬಲ್ಲದು ಎಂಬುದಕ್ಕೆ 'ಹಿಟ್ಟಿನ ಹುಂಜ' ಒಳ್ಳೆಯ ಉದಾಹರಣೆಯಾಗಿದೆ. ಜಾಗತಿಕ ಸಾಹಿತ್ಯದಂತೆ. ಕನ್ನಡದಲ್ಲಿಯೂ ಇದರ ಪರಂಪರೆಯೇ ಇದೆ

ನಾಟಕವು, ರಂಗಪ್ರಯೋಗಕ್ಕೆಂದೇ ಸಿದ್ಧವಾಗುವುದರಿಂದ, ಕಾವ್ಯದ ತಂತ್ರಕ್ಕಿಂತ ಭಿನ್ನವಾಗಿರುವುದು ಅನಿವಾರ್ಯ. ಕಾವ್ಯ ಪ್ರಾರಂಭವಾಗುವುದು– Flash back

ತಂತ್ರದಿಂದ. ಆ ಕಾವ್ಯದ ಯಾವುದೋ ಒಂದು ಪ್ರಸಂಗ ಈ ನಾಟಕಕ್ಕೆ ಪ್ರೇರಕವಾಗಿರುವುದರಿಂದ (ಅದು ಅಷ್ಟವಂಕ ಮತ್ತು ಅಮೃತಮತಿಯರ ಪ್ರಣಯ) ಅದೇ ತಂತ್ರದ ಬಳಕೆ ಸ್ವಲ್ಪಮಟ್ಟಿಗೆ ಇಲ್ಲಿಯೂ ಇದೆ.

ಮಾವುತ ಮತ್ತು ರಾಣಿಯ ಸಮಾಗಮ ಜಿನಬಸದಿಯಲ್ಲಿ. (ಕಾವ್ಯದಲ್ಲಿ, ಗಜಶಾಲೆಯಲ್ಲಿ,) ನಾಟಕದ ಆರಂಭವೂ ಇಲ್ಲಿಂದಲೇ, ಅಂತ್ಯವೂ ಇಲ್ಲಿಯೇ. ಮಾವುತ ಮತ್ತು ರಾಣಿಯ ಸಂಭಾಷಣೆಯಿಂದ ಪ್ರಾರಂಭವಾದ ನಾಟಕ, ಸ್ವಲ್ಪ ಹೊತ್ತಿನಲ್ಲಿಯೇ ರಾಜನು ಬಸದಿಯೊಳಗೆ ಪ್ರವೇಶಿಸುವಲ್ಲಿ, ಮತ್ತು ರಾಜ ಮತ್ತು ರಾಣಿ ಮಾತನಾಡುತ್ತಿದ್ದಂತೆಯೇ ರಾಜಮಾತೆಯ ಪ್ರವೇಶ. ಈ ಘಟ್ಟಗಳಲ್ಲಿ ನಿಲುಗಡೆ ಪಡೆದು ಸಾಗುತ್ತದೆ. ಈ ಎಲ್ಲಾ ಕ್ರಿಯೆಗಳೂ ಬಸದಿಯಲ್ಲೇ ನಡೆಯುತ್ತವೆ. 'ಪಾಪ ಆದದ್ದು ಇಲ್ಲೇ; ಪರಿಹಾರ ಇಲ್ಲೇ ಆಗಬೇಕು ಜಿನೇಶ್ವರನ ಎದುರಿಗೆ' ಎಂಬ ಮಾತು ಅರ್ಥಪೂರ್ಣವಾಗಿದೆ.

ಕಾವ್ಯದ ಭಾಷೆ ಸುಮಾರಿನ ನಡುಗನ್ನಡ; ಅಷ್ಟು ಬಿಗಿಯೂ ಅಲ್ಲದ, ಸರಳವೂ ಅಲ್ಲದ ಹದವಾದ ಭಾಷೆ ಅಲ್ಲಿಯದು. ಎಲ್ಲಾ ಪಾತ್ರಗಳೂ ಒಂದೇ ಭಾಷಾಶೈಲಿಯಲ್ಲಿ ಪಡಿಮೂಡಿವೆ. ಆದರೆ ನಾಟಕದಲ್ಲಿ ಮಾವುತನ ಭಾಷೆಯನ್ನು ಇತರ ಮೂರು ಪಾತ್ರಗಳ ಭಾಷೆಯಿಂದ ಬೇರ್ಪಡಿಸಬಹುದು, ಅಂದರೆ. ಮಾವುತನ ಸಂದರ್ಭದಲ್ಲಿ ಲೇಖಕರು ಸ್ವಲ್ಪ ಕೆಳಸ್ತರದ ಭಾಷೆಯನ್ನು ಬಳಸಿದರೆ, ಉಳಿದ ಮೂರು ಪಾತ್ರಗಳ ಸಂದರ್ಭದಲ್ಲಿ ಬಳಸುವ ಭಾಷೆ ಸ್ವಲ್ಪಮಟ್ಟಿಗೆ ಸುಧಾರಿತ ಭಾಷೆ. [ಕಾರ್ನಾಡರ ಇತರ ಎಲ್ಲಾ ನಾಟಕಗಳಿಗಿಂತಲೂ ಈ ನಾಟಕದ ಭಾಷೆ ಸುಧಾರಿತವಾದದ್ದೇ.]

ನಾಟಕದ ಶೀರ್ಷಿಕೆ 'ಹಿಟ್ಟಿನ ಹುಂಜ' ಮನುಷ್ಯನ ಸಹಜಪ್ರವೃತ್ತಿಗಳ ಪ್ರತೀಕವಾಗಿ ಬಳಕೆಯಾಗಿದೆ. ಹುಂಜದ ಕೂಗು, ಇಲ್ಲಿ ಮಾನವ ಸಹಜಪ್ರವೃತ್ತಿಗಳ ಸಾಂಕೇತಿಕ ಧ್ವನಿಯಾಗಿದೆ. ಕಾವ್ಯದ ಶೀರ್ಷಿಕೆ 'ಯಶೋಧರ ಚರಿತೆ', ಅಂದರೆ ಯಶೋಧರನ ಚರಿತ್ರೆಯಷ್ಟೇ ಅಲ್ಲಿ ಪ್ರಧಾನ. ಆದರೆ ಇಲ್ಲಿ 'ಹುಂಜ' ಪ್ರಧಾನ: ಅದರ ಕೂಗೂ ಅಷ್ಟೇ ಪ್ರಧಾನ.'ಹಿಟ್ಟಿನ ಹುಂಜ ಕೂಗು ಸಹಜಪ್ರವೃತ್ತಿಗಳ ಪ್ರತಿಕವಾಗಿ ನಾಟಕದಲ್ಲಿ ಬಳಕೆಯಾಗಿದೆ ಎಂದು ಹೇಳಿದೆನಷ್ಟೇ. ಈ ಅಭಿಪ್ರಾಯವನ್ನು, ನಾಟಕದ ಈ ಕೆಲವು ಮಾತುಗಳು ಸಮರ್ಥಿಸುತ್ತವೆ; ರಾಜ ಮಾತೆ ಹೇಳುವ:

'......ಅಲ್ಲಿ ನೋಡು, ಅಲ್ಲಿ ಕೂತಿದೆಯಲ್ಲ, ಆ ಹುಂಜ ಅದೇ ನಿನ್ನ ಕನಸಿನ ಕಾಡುಬೇರು. ಅದಕ್ಕಂತಲೇ ಹೇಳುತ್ತೇನೆ ಬಲಿ ಕೊಡಬೇಡ.'

ರಾಜ ಹೇಳುವ:

'ನೋಡಿದಿಯೇನು ಹುಂಜದ ಆಟ ? ಅದು ಬಲಿ ತಪ್ಪಗೊಡೋದಿಲ್ಲ. ಬೇರೆ ದಾರಿ ಬಿಡೋದಿಲ್ಲ'

ರಾಣಿ ಹೇಳುವ:

'ಈಗ ಅರಮನೆಗೆ ಹೋಗಿ ಏನು ಮಾಡೋದಿದೆ ಅಷ್ಟವಂಕ?
ಈ ಕೋಳಿಯನ್ನೇ ಅಪ್ಪಿ ಮುದ್ದಾಡಬೇಕು?' ಮತ್ತು
ಅಟ ಬೆರಕಿ ಐತೇನ್ರಿ ಈ ಕೋಳಿ?'

ಸಹಜ ಪ್ರವೃತ್ತಿಗಳನ್ನು ಅದುಮಿಡುವುದು ಎಷ್ಟು ಕಠಿಣವೆಂಬುದನ್ನು ನಾಟಕಕಾರರು ಈ ಕೋಳಿಯ ಪ್ರತಿಮೆಯ ಮೂಲಕ ಸಾಧಿಸಿ ತೋರಿಸಿದ್ದಾರೆ. ಆದ್ದರಿಂದಲೇ ರಾಣಿ, ಕೋಳಿಯನ್ನು ಎತ್ತಿ ಎಸೆಯಲಿಕ್ಕೆ ಹೋದರೂ, ನಾಟಕಕಾರರು ಅದನ್ನು ಆಗಗೊಡುವದಿಲ್ಲ. ಇದು ರಾಣಿಯ ಬಗೆಗಿನ ಸಹಜಪ್ರವೃತ್ತಿಯ ಪ್ರತಿಕ್ರಿಯೆ. ಮಾವುತನ ಪ್ರತಿಕ್ರಿಯೆಯನ್ನು ಹಿಂದೆಯೇ ಸ್ಥೂಲವಾಗಿ ಗಮನಿಸಿದ್ದಾಗಿದೆ. ನಾಟಕಕಾರರು ಈ ಬಗ್ಗೆ ರಾಜನ ಪ್ರತಿಕ್ರಿಯೆಯನ್ನು ಸೂಚಿಸಬೇಕಾಗಿದೆ. ಅದಕ್ಕಾಗಿ, ರಾಜನು ಹುಂಜವನ್ನು ಇರಿಯುವಾಗ ಅದನ್ನು ಕೂಗಿಸುತ್ತಾರೆ. ಈ ಕೂಗು, ಕಾವ್ಯದಲ್ಲಿ 'ಕೂಗಿ ಕರೆವ ದುರಿತಂಗಳ ಬಲ್ಲುಲಿ' ಯಾದರೆ, ನಾಟಕದಲ್ಲಿ, 'ನೀನು ನನ್ನ ಕೊಲ್ಲಲಾರೆ, ಸಹಜಪ್ರವೃತ್ತಿಗಳನ್ನು ಎಂದೂ ದಮನ ಮಾಡಲಾರೆ' ಎಂಬ ಧ್ವನಿಯನ್ನು ಕೊಡುತ್ತದೆ. ಅಂದರೆ, ಈ ಮೊದಲೆ ಹೇಳಿದಂತೆ ಹಿಟ್ಟಿನ ಕೋಳಿ ಕಾವ್ಯದಲ್ಲಿ ಕೂಗಿದುದು ಬೇರೆಯ ಕಾರಣಕ್ಕಾಗಿ; ಇಲ್ಲಿ ಕೂಗಿದುದೇ ಬೇರೆಯ ಕಾರಣಕ್ಕಾಗಿ. ಇಲ್ಲಿ, ಅದು ಕೂಗುವುದು ನಿಜವೇ ಆದರೆ, ವಾಸ್ತವವೇ ಆದರೆ, ಸಹಜಪ್ರವೃತ್ತಿಗಳು ಮನುಷ್ಯ ನಂಬಿದ ಮೌಲ್ಯಗಳ ಮುಂದೆ ಸೋಲುವುದು ಖಂಡಿತ. ಹಾಗಿಲ್ಲದೇ ಹೋದರೆ, ಸಹಜಪ್ರವೃತ್ತಿಗಳೇ ಮೇಲುಗೈಯಾಗಿ ಮೌಲ್ಯಗಳು ಸೋಲುತ್ತವೆ–ಇದು ನಾಟಕಾರರ ಆಶಯ ಆಗಿರಬಹುದು. ಈ ದೃಷ್ಟಿಯಿಂದ ಶೀರ್ಷಿಕೆ ಅರ್ಥಪೂರ್ಣವಾಗಿದೆ.

ನಮ್ಮ ಸಮಕಾಲಿನ ಬದುಕಿಗೆ, ಹಳೆಯ ವಸ್ತುವೊಂದನ್ನು ಹೇಗೆ ದುಡಿಸಿಕೊಳ್ಳಬಹುದು ಎಂಬುದನ್ನು ನನ್ನ ಅಭ್ಯಾಸದ ಪರಿಮಿತಿಯಲ್ಲಿ ಸೂಚಿಸಿದ್ದೇನೆ. ಇನ್ನೊಮ್ಮೆ ಕ್ರೋಢಿಕರಿಸುವುದಾದರೆ, ಮೂಲವಸ್ತುವನ್ನು ನಾಟಕಕಾರರು, ಬಸದಿಯ ಪರಿಸರ, ಪಾತ್ರಗಳ ಹೆಸರು ಮತ್ತು ಸ್ಥಾನನಿರ್ದೇಶನದಲ್ಲಿ ಬದ್ಧಿ, ರಾಜ ಬಲಿಗೊಪ್ಪಲು ಇರುವ ಮುಖ್ಯ ಕಾರಣ, ರಾಜಮಾತೆ ಮತ್ತು ರಾಣಿಯರ ಸಂಬಂಧ, ಸುಳ್ಳುಬಸಿರಿನ ಕಲ್ಪನೆ, ಕ್ರಿಯಾಶೀಲ ಅಷ್ಟವಂಕ ಮತ್ತು ಮನುಷ್ಯ ನಂಬಿದ ಮೌಲ್ಯಗಳು ಮತ್ತು ಸಹಜಪ್ರವೃತ್ತಿ ಈ ಅಂಶಗಳ ಆಧಾರದ ಮೇಲೆ ಕಾವ್ಯಕ್ಕಿಂತ ಭಿನ್ನವಾದ ಅರ್ಥದಲ್ಲಿ ನಾಟಕ ರಚನೆಯಾಗಿದೆ.

ಕಾರ್ನಾಡರ ಎಲ್ಲಾ ನಾಟಕಗಳೂ, (ಹಿಟ್ಟಿನ ಹುಂಜದವರೆಗೆ) ಹಳೆಯ ವಸ್ತುವನ್ನೇ ಒಳಗೊಂಡಿದ್ದರೂ. ನವನವೀನ ಅರ್ಥಗಳಿಂದ ಆ ವಸ್ತುವಿಗೆ ಜೀವ ತುಂಬಿಕೊಂಡಿವೆ. ಸ್ವತಃ ನಿರ್ದೇಶಕರೂ ಆಗಿರುವುದರಿಂದ. ರಂಗಸ್ಥಲದ ಪರಿಚಯ ಸಾಕಷ್ಟು ಇರುವುದರಿಂದ, ತಾಂತ್ರಿಕ ಅಂಶಗಳೆಡೆಗೂ ಗಮನ ಹರಿಸಿರುವುದರಿಂದ, ಕಲಾತ್ಮಕ ದೃಷ್ಟಿಯಿಂದ ಸ್ವೀಕಾರಾರ್ಹವಾದ ಇವರ ನಾಟಕಗಳು, ಸಮಕಾಲೀನ 'ಸಾಮಾನ್ಯ' ಪ್ರೇಕ್ಷಕನನ್ನು ಸ್ಪಂದಿಸುವಲ್ಲಿ ಸೋಲುತ್ತವೆ. ಆದರೆ, ಬೌದ್ಧಿಕ ಚಿಂತನೆಗೆ ಒಳಗಾದಂತೆ, ಅವರ ನಾಟಕಗಳು ಅರ್ಥದ ಸ್ತರಗಳನ್ನು, ಮನುಷ್ಯ ನಂಬಿದ ಮೌಲ್ಯಗಳ ಪದರಗಳನ್ನು ವಿವೇಚಿಸತೊಡಗುವುದನ್ನು ಕಾಣುತ್ತೇವೆ.

ಕೊನೆಯದಾಗಿ ಕಾರ್ನಾಡರ ನಾಟಕಗಳ ಬಗ್ಗೆ ಮತ್ತು ವಸ್ತುವಿನ ಆಯ್ಕೆಯಬಗ್ಗೆ, ವಸ್ತು ನಿರೂಪಣೆಯ ಬಗ್ಗೆ ಹೇಳಬಹುದಾದ ಮಾತೆಂದರೆ;

"ಆಧುನಿಕ ನಾಟಕ ಕ್ಷೇತ್ರದಲ್ಲಿ ಕಾರ್ನಾಡರು ಗಟ್ಟಿಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಯಯಾತಿ, ತುಘಲಕ್, ಹಯವದನ,– ನಾಟಕದಿಂದ ನಾಟಕಕ್ಕೆ ಪರಿಷ್ಕೃತವಾಗಿ ಬೆಳೆಯುತ್ತಾ ಹೋಗಿರುವುದು ಇವರದು ಅನುಕರಣೀಯ ವೈಯಕ್ತಿಕ ನಾಟಕಶೈಲಿ. ಹಳೆ ಥೀಮುಗಳನ್ನು ಸಮಕಾಲೀನವಾಗಿ, ಜೀವಂತಗೊಳಿಸುವ, ತಾತ್ವಿಕ ಅನಿಸಿಕೆಗಳಿಗೆ ವೈಯುಕ್ತಿಕ ರೂಪ ಕೊಡುವ, ಅನೇಕ ಭಿನ್ನ ಪ್ರತಿಮೆಗಳನ್ನು ಸೃಜಿಸಿ, ಮೂಲ ಆಶಯಕ್ಕೆ ಸಮೀಕರಣಗೊಳಿಸುವ, ಭಾಷೆಗೆ ಪ್ರಾಧಾನ್ಯ ಕೊಟ್ಟೂಕೊಡದೇ, ನಾಟಕದ ಸತ್ವಕ್ಕನುಗುಣವಾಗಿ ದುಡಿಸಿಕೊಳ್ಳುದ ಅಪರೂಪದ ಚಾತುರ್ಯವನ್ನು ಇವರಲ್ಲಿ ಕಾಣಬಹುದು. ಇದ್ದ ಸ್ಥಿತಿಯಿಂದ ಮತ್ತೊಂದಕ್ಕೆ ಬದಲಾಗುವ ಹಂಬಲದ ಮೂಲಭೂತ ಕೊರಗನ್ನು ಇವರ ಎಲ್ಲಾ ನಾಟಕಗಳಲ್ಲಿಯೂ ಗುರುತಿಸಬಹುದು."[೧]

DEVU PATTAR
GUTTIPETH,
SHAHAPUR-585223

---

೧. ಲೇಖನ : ಕನ್ನಡ ನವ್ಯನಾಟಕ-ಎಚ್. ಶ್ರೀಧರಮೂರ್ತಿ. ಗ್ರಂಥ : ಕಪ್ಪಿನಹಾಲು- ಕೆ. ವಿ. ಶಂಕರಗೌಡರ ಅಭಿನಂದನಾಗ್ರಂಥ ಪುಟ-೬೮೬.

ನಾನು ಮಾಸ್ತರರಾಗಿರುವುದರಿಂದ

ಪ್ರಹ್ಲಾದ ಅಗಸನಕಟ್ಟೆ

ನಾನು ಮಾಸ್ತರರಾಗಿರುವುದರಿಂದ
ಹಾಲ್ಿಯ ಮತ್ತು ಮಾಜಿಯ ವಿದ್ಯಾರ್ಥಿಗಳನ್ನು
ಕ್ಲಾಸಿನೊಳಗೆ ಮತ್ತು ಬೀದಿಯ ಮೇಲೆ
ಕಾಣುತ್ತೇನೆ.
ನನ್ನ ಕಣ್ಣಿಗೆ
ಕಾರಿಡಾರ್ ಮೇಲೆ ಲವಲವಿಕೆಯ ಹುಡುಗರು
ಪೋರ್ಟಿಕಾದಲ್ಲಿ, ಮಾವಿನ ನೆರಳಲ್ಲಿ ನಗುವ ಹುಡುಗಿಯರು
ಮತ್ತು
ದೇಶದ ಬಗ್ಗೆ ಪದ್ಯ ಬರೆದು ಹುಬ್ಬೇರಿ ಪ್ರಶ್ನೆ ಮಾಡುವ ಹುಡುಗರು
ಸಿಟ್ಟಂತೂ ಬರುವುದಿಲ್ಲ.

ಮಾಸ್ತರರಾಗಿರುವುದರಿಂದ ಇಂಥ ತಂಟೆ ಹುಡುಗರನ್ನು ಬಹಳ
ಕಂಡಿದ್ದೇನೆ.

ಬೀದಿಯಲ್ಲಿ,
ಕ್ಯಾಂಟೀನಿನಲ್ಲಿ ಟೀ ಕುಡಿಯುತ್ತ ಕೂತಿರುವ ವೇಳೆ
ಅಪರೂಪಕ್ಕೆ ಒಬ್ಬೊಬ್ಬರು ಕಾಣಸಿಗುತ್ತಾರೆ ಮಾಜಿಶಿಷ್ಯರು.
ಕಂಡವರೇಕೊ ತಲೆತಪ್ಪಿಸುತ್ತಾರೆ.
ತಲೆ ತಪ್ಪಿಸಲಾಗದವರು ತಗ್ಗಿದ ದನಿಯಲಿ ನಮಸ್ಕಾರ ಎನ್ನುತ್ತಾರೆ.
ಹೆಚ್ಚು ಮಾತಿಗೆ ನಿಲ್ಲದೆ
ಬರುತ್ತೇವೆ ಸಾರ್-ಆಕಸ್ಮಿಕ ಗಲ್ಲಿಗಳಲ್ಲಿ ಇಲ್ಲವಾಗುತ್ತಾರೆ.

ನನಗೆ ಕ್ಲಾಸಿನ ಹುಡುಗರು ನೆನಪಾಗುತ್ತಾರೆ.

ಇತಿಹಾಸದ ಮಾಸ್ತರರಾಗಿರುವುದರಿಂದ
ಕ್ಲಾಸಿನಲ್ಲಿ ಕ್ರಾಂತಿಯ ಬಗ್ಗೆ ಪಾಠ ಮಾಡುತ್ತೇನೆ.

೧೨ನೇ ಶತಮಾನದ ಶೂದ್ರ ವಚನಕಾರ್ತಿಯರು

ವಿಜಯಶ್ರೀ ಸಬರದ

ಬಸವಾದಿ ವಚನಕಾರರು ಉದಯಿಸುವದಕ್ಕಿಂತ ಪೂರ್ವದಲ್ಲಿ ಕನ್ನಡನಾಡಿನ ಧಾರ್ಮಿಕ-ಸಾಮಾಜಿಕ ಜೀವನದಲ್ಲಿ ವೈಷಮ್ಯ ತಲೆದೋರಿತ್ತು ಆ ಕಾಲದಲ್ಲಿ ಮಹಿಳೆ ಕಸಕ್ಕಿಂತಲೂ ಕಡೆಯಾಗಿದ್ದಳು. ಆಕೆ ದೇವಪೂಜೆಗೆ ಓದು ಬರಹಕ್ಕೆ ಅನರ್ಹಳು ಎಂಬ ನೀಚಭಾವನೆ ಅಂದಿನ ಸಮಾಜದ ಜನತೆಯಲ್ಲಿ ಬೇರೂರಿತ್ತು. ಭೋಗದ ವಸ್ತುವೆಂದು ತಿಳಿದುಕೊಂಡ ಅಂದಿನ ಸಮಾಜದಲ್ಲಿ ಅಸಮಾನತೆಧಾರ್ಮಿಕ ಅವಹೇಳನ ಅತಿಯಾಗಿತ್ತು. "ಯತ್ರ ನಾರ್ಯಸ್ತು ಪೂಜ್ಯಂತೇ ತತ್ರ ರಮಂತೇ ದೇವತಾಃ" ಎಂದು ಬರೀ ಸಂಸ್ಕೃತ ಶ್ಲೋಕ ಬೊಗಳುವ ಅಂದಿನ ಕುಹಕ ಪಂಡಿತರ ನಡೆ–ನುಡಿ ಬೇರೆ ಬೇರೆಯಾಗಿದ್ದವು.

ಬಸವಾದಿ ವಚನಕಾರರ ಆಗಮನ ಇಡೀ ಮಹಿಳಾ ವರ್ಗಕ್ಕೇನೇ ಹೊಸ ಆಯಾಮ ತಂದುಕೊಟ್ಟಿತು. ಬಸವೇಶ್ವರರ ಸಾಮಾಜಿಕ ಧಾರ್ಮಿಕ ಕ್ರಾಂತಿಯಿಂದ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸಮಾನ ಅವಕಾಶಗಳು ದೊರೆಯಹತ್ತಿದ್ದವು. ಸಾಮಾಜಿಕವಾಗಿ, ಧಾರ್ಮಿಕವಾಗಿ ಕೀಳೆಂದು ಭಾವಿಸಿದ ಹೆಣ್ಣನ್ನು ಶರಣರು ಅತ್ಯಂತ ಗೌರವದಿಂದ ಕಂಡರು. "ಹೆಣ್ಣು–ಹೊನ್ನು–ಮಣ್ಣು–ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ" ಎಂದು ಪ್ರಭುದೇವರು ಹೆಣ್ಣಿಗೆ ಅಂಟಿಸಿದ ಮಾಯೆಯ ಕಲಂಕವನ್ನು ಕಿತ್ತೊಗೆದರು. "ಪರ ವಧುವನು ಮಹಾದೇವಿ ಎಂಬೆ" ಎಂದು ಬಸವೇಶ್ವರರು ತಮ್ಮ ವ್ಯಕ್ತಿತ್ವಕ್ಕೆ ತಕ್ಕ ಮಾತನ್ನೇ ಆಡಿದರು. "ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂದು ಸಿದ್ಧರಾಮ ಭಾವಿಸಿದರು. ಹೀಗೆ ಹೆಣ್ಣಿನ ಬಗೆಗಿದ್ದ ತುಚ್ಛ ಭಾವನೆ ಹನ್ನೆರಡನೇ ಶತಮಾನದಲ್ಲಿ ಕಳೆದುಹೋಗಿ, ಹೆಣ್ಣನ್ನು ಸಾಕ್ಷಾತ್ ದೇವರೆಂದು ಭಾವಿಸಿದ ಶರಣರು ಹೆಣ್ಣಿಗೆ ಯಾವ ಸಮಾಜವೂ ಕೊಡದಷ್ಟು ಸಮಾನತೆಯನ್ನು ಕಲ್ಪಿಸಿಕೊಟ್ಟರು. ಈ ಶತಮಾನದಲ್ಲಿ ವಚನಗಳನ್ನು

ರಚಿಸಿದ ಮಹಿಳಾ ವಚನಕಾರ್ತಿಯರ ಸಂಖ್ಯೆ ಮೂವತ್ತಾರಕ್ಕೆ ಏರುತ್ತದೆ. ಅದರಲ್ಲಿ ಶೂದ್ರ ವರ್ಗದಿಂದ ಬಂದ ವಚನಕಾರ್ತಿಯರ ಸಂಖ್ಯೆಯೇ ಅಧಿಕ. ಸಾಮಾಜಿಕ ಜೀವನದಲ್ಲಿ ಸಮಾನಸ್ಥಾನ ತೆಗೆದುಕೊಳ್ಳುವವರ ಜತೆಗೆ, ಆಧ್ಯಾತ್ಮಿಕ ರಂಗದಲ್ಲೂ ಮುನ್ನಡೆದು ಪುರುಷನನ್ನು ಮೀರಿಸಿದ ಮಹಿಳೆಯರು ಇಲ್ಲಿದ್ದಾರೆ. ಅತ್ಯಂತ ಕೆಳ ವರ್ಗದಿಂದ ಬಂದ, ಕಡುಬಡತನದಲ್ಲಿ ಬೆಳೆದ ಈ ವಚನಕಾರ್ತಿಯರ ವಚನಗಳನ್ನು ಗಮನಿಸಿದಾಗ ಅವರ ಪ್ರತಿಭಟನೆ, ಶೌರ್ಯ, ಹೋರಾಟಭಾವ ಇಂದಿಗೂ ಜ್ವಲಂತ ವಾಗಿ ದಿಮಿಗುಡುತ್ತವೆ. ಸಾಹಿತಿಗಳಾಗಬೇಕೆಂದು ಇವರು ವಚನ ರಚಿಸಿದವರಲ್ಲ. ಅಂದಿನ ಅನಿವಾರ್ಯತೆಯ ವಾತಾವರಣದಿಂದ ಹೊರಬಂದು ತಮ್ಮನ್ನೇ ತಾವು ಮೂಡಿಸಿಕೊಳ್ಳುವದಕ್ಕಾಗಿ ತಾವುಂಡ ನೋವುಗಳನ್ನು ತಿಳಿಸುವದಕ್ಕಾಗಿ ಸಮಾಜ ದಲ್ಲಿದ್ದ ಶೋಷಣೆಯ ವಿರುದ್ಧ ಹೋರಾಟಕ್ಕಾಗಿ ಇವರಿಂದ ಸಹಜವಾಗಿ ವಚನಗಳು ಹೊರಹೊಮ್ಮಿವೆ.

ಈ ಗಟ್ಟಿಸಾಹಿತ್ಯವನ್ನು ನಮ್ಮ ಕುರುಡು ಚರಿತ್ರೆಕಾರರು ಕಾಣದೇ ಹೋಗಿದ್ದಾರೆ. ಕೇವಲ ಬಸವ–ಪ್ರಭುದೇವ-ಸಿದ್ಧರಾಮ-ಚೆನ್ನಬಸವಣ್ಣ-ಮಹಾದೇವಿಯಕ್ಕ ಇಂತಹ ಐದಾರು ವಚನಕಾರರನ್ನಷ್ಟೇ ಹೆಸರಿಸಿ ಅತಿಮುಖ್ಯವಾದ ಶೂದ್ರವಚನಕಾರ್ತಿಯ ರನ್ನು ನಿರ್ಲಕ್ಷಿಸಿರುವದು ನಿಜಕ್ಕೂ ಚರಿತ್ರೆಕಾರರಿಗೆ ಕೆಳವರ್ಗದವರ ಅದರಲ್ಲೂ ಶೂದ್ರಮಹಿಳೆಯರ-ಬಗೆಗೆ ಬರೆಯಬೇಕೆಂದರೆ ಸಂಕೋಚವಾಗಿರಬೇಕು. ಬಸವೇಶ್ವರರ ಸಾಮಾಜಿಕ-ಧಾರ್ಮಿಕ ಕ್ರಾಂತಿಯುಲ್ಲಿ ಸರಿಸಮಾನಾಗಿ ಪಾಲುಗೊಂಡು ಒಂದೊಂದು ಸಂದರ್ಭದಲ್ಲಿ ಬಸವ ಅಲ್ಲಮರನ್ನು ಮೀರಿಸಿದವರು ಇವರು

ಚರಿತ್ರೆಯದು ಈ ರೀತಿಯಾದರೆ, ಇನ್ನು ಸುಪ್ರಸಿದ್ಧ ಭಾಷಣಕಾರರೆನ್ನಿಸಿಕೊಂಡ ವರು, ಭಾರೀ ಪ್ರಚಾರ ಪಡೆದ ಪ್ರವಚನಕಾರರು, ಹೆಸರಾಂತ ಉಪನ್ಯಾಸಕರು, ಧರ್ಮವನ್ನು ಉಳಿಸಲೆಂದೇ ಆಕಾಶದಿಂದ ನೆಗೆದುಬಂದು ಅಡ್ಡಪಲ್ಲಕ್ಕಿಯಲ್ಲಿ ಮೆರೆವ ಪಂಚಪೀಠಾ (ಠಾ)ಧೀಶ್ವರರು–ಇವರೆಲ್ಲಾ ತಾವು ಹೇಳುವ ಭಾಷಣಗಳಲ್ಲಿ ಬಸವ-ಅಲ್ಲಮ–ಅಕ್ಕಮಹಾದೇವಿಯರನ್ನು ಬಿಟ್ಟರೆ ಉಳಿದ ಶೂದ್ರವಚನಕಾರ್ತಿಯರ. ಹೆಸರನ್ನೇ ಉಲ್ಲೇಖಿಸದಿರುವದು ನಿಜಕ್ಕೂ ದುರಂತವಾದುದು. ಜನಸಾಮಾನ್ಯರ ಮಹತ್ಕಾರ್ಯಗಳಿಗೆ–ಹೋರಾಟಕ್ಕೆ–ಅವರ ನಿರಂತರ ಪ್ರತಿಭಟನೆಗೆ ನಮ್ಮ ಚರಿತ್ರೆ–ಪುಸ್ತಕಗಳಲ್ಲಿ ಸ್ಥಳ ಸಿಗದೇ ಹೋಗಿದೆ.

ಪ್ರಸ್ತುತ ಲೇಖನದಲ್ಲಿ ಶೂದ್ರ ವಚನಕಾರ್ತಿಯರ ಪರಿಚಯ ಮಾಡಿಕೊಡುವದರ ಜತೆಗೆ ಅವರ ವಚನಗಳಲ್ಲಿ ಬರುವ ವಿಡಂಬನೆ, ಪ್ರತಿಮೆ, ಸಂಕೇತ, ಸಾಮಾಜಿಕ ಪ್ರಜ್ಞೆ ಭಾಷೆ ಇವುಗಳನ್ನು ಉಲ್ಲೇಖಿಸಲಾಗಿದೆ. 'ಶೂದ್ರ' ಪದದ ವಿಶ್ಲೇಷಣೆ ನನ್ನ ಈ ಲೇಖನದ ಸಂದರ್ಭದಲ್ಲಿ ಸಾಮಾಜಿಕವಾಗಿ–ಧಾರ್ಮಿಕವಾಗಿ-ಆರ್ಥಿಕವಾಗಿ ತುಳಿಯ–

ಲ್ಪಟ್ಟ, ಬಹತರದಿಂದ ನೋಡು ಬಂದವರು ಎಂದು. ಕೆಲವರನ್ನು ಮಾತ್ರ ನಾನಿಲ್ಲಿ ಗುರುತಿಸಿದ್ದೇನೆ. ಅವರಲ್ಲಿ ಹೀನಕುಲದವರೆಂದು ಪರಿಗಣಿಸಿದ ಉರಿಲಿಂಗಪೆದ್ದಿಯ ಹೆಂಡತಿ–ಕಾಳವ್ವೆ, ನೇಕಾರಕುಲದ ಅಮುಗಿದೇವನ ಪತ್ನಿ ರಾಯಮ್ಮ, ಹಡಪದಪ್ಪ ಣ್ಣನ ಹೆಂಡತಿ ಲಿಂಗಮ್ಮ. ಆಯ್ದಕ್ಕಿಮಾರಯ್ಯನ ಪತ್ನಿ ಲಕ್ಕಮ್ಮ ಹಾಗೂ ಅಕ್ಕಮ್ಮ, ಸತ್ಯಕ್ಕ. ಗೊಗ್ಗವ್ವೆ, ಹಾದರದ ಗಂಗಮ್ಮ. ಕಾಲಕಣ್ಣಿಯ ಕಾಮಮ್ಮ, ಕೊಟ್ಟಣದ ಸೂಳೆಸಂಕವ್ವೆ. ಕನ್ನಡಿ ಕಾಯಕದ ರೇಮಮ್ಮ.ಬಾಚಿಕಾಯಕದ ಕಾಳವ್ವೆ,ಕದಿರರೆಮವ್ವೆ ಬೋಂತಾದೇವಿ (ಬಿಡಾಡಿ), ಕದಿರಿಕಾಯಕದ ಕಾಳವ್ವೆ. ಬಡಗಿಮಾಜಲದೇವಿ, ನೀರು ಹೊರುವ ನಿಂಬೆವ್ವೆ, ಜೋಳವ್ವೆ–ಈ ಮೊದಲಾದವರನ್ನು ನಾನಿಲ್ಲಿ ಶೂದ್ರವಚನ ಕಾರ್ತಿಯರೆಂದು ಹೆಸರಿಸಿದ್ದೇನೆ. ಈ ಲೇಖನದಲ್ಲಿ ಬಳಸಿಕೊಂಡಿರುವ ಎಲ್ಲಾ ವಚನ ಗಳನ್ನು ಡಾ. ಆರ್. ಸಿ, ಹಿರೇಮಠರು ಸಂಪಾದಿಸಿದ "ಶಿವಶರಣೆಯರ ವಚನಗಳು" ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

ಕಾಳವ್ವೆ : ಪೆದ್ದಣ್ಣನೆಂಬ ಹೀನಕುಲದ ಕಳ್ಳನು ಹೃದಯ ಪರಿವರ್ತನ ಹೊಂದಿ, ಕಂದಹಾರ ಪಟ್ಟಣದ ಉರಿಲಿಂಗದೇವರ ಶಿಷ್ಯನಾಗುತ್ತಾನೆ-ಶಿವಶರಣ ನಾಗುತ್ತಾನೆ. ಪೆದ್ದಣ್ಣನ ಅಪಾರಭಕ್ತಿಗೆ ಮೆಚ್ಚಿದ ಗುರುಗಳು ಆತನನ್ನು ತಮ್ಮ ಉತ್ತರಾಧಿಕಾರಿಯ ನ್ನಾಗಿ ಮಾಡುತ್ತಾರೆ.ಆತನೇ ಪ್ರಸಿದ್ಧವಚನಕಾರ ಉರಿಲಿಂಗಪೆದ್ದಿ ಆತನ ಹೆಂಡತಿಯೇ ಕಾಳವ್ವೆ, ಅನುಭಾವಿಯಾದ ಕಾಳವ್ವೆ ಕನ್ನಡ–ಸಂಸ್ಕೃತಗಳೆರಡನ್ನು ಸರಿಯಾಗಿ ತಿಳಿದು ಕೊಂಡವಳು. ಈಕೆಯ ಹದಿಮೂರು ವಚನಗಳು ಲಭ್ಯ ಒಂದುವಚನ ಚೆನ್ನಪ್ಪಕವಿಯ ಯಕ್ಷಗಾನ ಕೃತಿ "ಶರಣಲೀಲಾಮೃತ"ದಲ್ಲಿ ಉರಿಲಿಂಗದೇವರ ವಚನ ಎಂಬ ಹೆಸರಿ ನಲ್ಲಿ ಉಲ್ಲೇಖಗೊಂಡಿದೆ. ಇನ್ನೂ ಹೆಚ್ಚು ವಚನಗಳು ಈಕೆಯಿಂದ ರಚನೆಯಾಗಿರ ಬಹುದು. "ಉರಿಲಿಂಗ ಪೆದ್ದಿಗಳರಸ" ಈಕೆಯ ವಚನಾಂಕಿತ. ಈಗ ದೊರೆತ ಕಾಳವ್ವೆಯ ವಚನಗಳು ಸಂಖ್ಯೆಯಲ್ಲಿ ಕಡಿಮೆಯೆನಿಸಿದರೂ, ಸತ್ವದಲ್ಲಿ ಅಧಿಕವೆನಿಸಿವೆ. ಬಸವಣ್ಣನವರ ದರುಶನಕ್ಕೆಂದು ಕಲ್ಯಾಣಕ್ಕೆ ಬಂದ ಈ ದಂಪತಿಗಳು ಅನೇಕ ವರ್ಷ ಕಲ್ಯಾಣದಲ್ಲಿಯೆ ಇದ್ದರು. ಬಸವೇಶ್ವರರು ಎಸಗಿದ ಅಂದಿನ ಧಾರ್ಮಿಕ–ಸಾಮಾಜಿಕ ಕ್ರಾಂತಿಯಲ್ಲಿ ಈ ಶೂದ್ರ ದಂಪತಿಗಳು ಪಾಲುಗೊಂಡಿದ್ದರು.

ಡಂಭಾಚಾರಕ್ಕಾಗಿ ಪೂಜೆ ಮಾಡುವ ಶ್ರೀಮಂತರನ್ನು ಈ ವಚನಕಾರ್ತಿ ತುಡು ಗುಣಿಗೆ ಹೋಲಿಸಿದ್ದಾಳೆ.

'ಒಡೆಯರೆಂಬ ತುಡುಗುಣಿಗಳು ತಾವು ಪೂಜೆಗೊಂಬಲ್ಲಿ
ಅವರ ಮನೆಗೆ ಹೂ ಹಣ್ಣು ಕಾಯಿ ಪತ್ರೆಗಳ ತಾಹ
ಹೋಗುವ ಬರುವ ಊಳಿಗದ ಕೊಂಬಾತ ಭಕ್ತನಲ್ಲ;

ಅಲ್ಲಿ ಪೂಜೆಗೊಂಬಾತ ಜಂಗಮನಲ್ಲ.
ಇವರಿಬ್ಬರೂ ನಾಯಕ ನರಕಕ್ಕೆ ಯೋಗ್ಯರಯ್ಯಾ,
ಅವರ ಉರಿಲಿಂಗಪೆದ್ದಿಗಳರಸ ಒಲ್ಲನೊಲ್ಲನವ್ವಾ
(ಶಿ. ಶ. ವ. ೨೦೬ ಪುಟ ೩೮೩)

ಎನ್ನುವಲ್ಲಿ ಡಾಂಭಿಕ ಶ್ರೀಮಂತ ವರ್ಗದ ವಿರುದ್ಧ ಆಕೆ ಬಂಡೆದ್ದುದು ಸ್ಪಷ್ಟವಾಗು ತ್ತದೆ.

ಅಡಿಗೆ ಮಾಡುವಾಗ ಉಪಯೋಗಿಸಿದ ಕಟ್ಟಿಗೆಯನ್ನೇ ಉದಾಹರಿಸಿ ರಚಿಸಿದ ಈಕೆಯ ಮತ್ತೊಂದು ವಚನ ಅತ್ಯಂತ ವ್ಯಂಗ್ಯದಿಂದ ಕೂಡಿದೆ. ತೂಬರದ ಕೊಳ್ಳಿ ಯಂತೆ ಉರಿವಾತ, ಸುಳ್ಳಾಡುವಾತ, ಭಕ್ತರ ಕುಲವನೆತ್ತಿ ನಿಂದಿಸುವಾತ ಇಂತವರೆಲ್ಲ ಭಕ್ತರೆ ? ಎಂದು ಪ್ರಶ್ನಿಸುತ್ತಾ ಈ ರೀತಿ ನಿಂದೆ ಮಾಡುವವರು ಕೋಟಿ ಜನ್ಮ ಗಳಲ್ಲೂ ಹಂದಿಗಳಾಗಿ ಹುಟ್ಟುತ್ತಾರೆ ಎಂದು ಹೇಳುವಲ್ಲಿ ನೊಂದ ಧ್ವನಿಯು ತುಡಿತ ವಿದೆ.

"ವ್ರತಹೋದಾಗಳೆ ಇಷ್ಟಲಿಂಗದ ಕಳೆ ನಷ್ಟವವ್ವಾ. ಅವರು ಲಿಂಗವಿದ್ದೂ ಭವಿ ಗಳು"—ಎನ್ನುವ ಆಕೆಯ ನುಡಿಯಲ್ಲಿ ಇಷ್ಟಲಿಂಗಕ್ಕಿಂತಲೂ ಆಚರಣೆ ಮುಖ್ಯ ವಾದುದೆಂಬ ಮಾತು ಧ್ವನಿತವಾಗುತ್ತದೆ. ಒಬ್ಬ ಶೂದ್ರ ಹೆಣ್ಣು ಮಗಳು ಅರಿವು, ಆಚಾರ, ಆಧ್ಯಾತ್ಮದಲ್ಲಿ ಇಂತಹ ಒಂದು ಉಚ್ಚಮಟ್ಟಕ್ಕೇರಿದ್ದನ್ನು ಗಮನಿಸಿದಾಗ ಅಂದಿನ ಮಹಿಳಾವರ್ಗದಲ್ಲಿ ಮೂಡಿಬರುತ್ತಿದ್ದ ಜಾಗೃತಿ ಸ್ಪಷ್ಟವಾಗುತ್ತದೆ. ಕೇವಲ ಜಂಗಮನನ್ನು ಪೂಜಿಸಿದಾಕ್ಷಣ ಭಕ್ತನಾಗಲಾರನು. ಆತನಲ್ಲಿ ಮುಖ್ಯವಾಗಿ ನಿಷ್ಠೆ ಬೇಕು—ಎಂಬಂತಹ ಆಕೆಯ ನುಡಿಗಳಲ್ಲಿ ದಟ್ಟ ಸತ್ಯವಡಗಿದೆ.

'ಕುರಿಕೋಳಿ ಕಿರಿ ಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು
ಅವರೆಂತು ಕೀಳುಜಾತಿಯಾದರು, ಜಾತಿಗಳು ನೀವೇಕೆ ಕೀಳಾಗಿರೊ ?
ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿನೆಕ್ಕಿ ಹೋಯಿತು.
ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಯಿತು.'
(ಶಿ. ಶ. ವ. ೨೧೨ ಪುಟ ೩೯೧)

ಎಂದು ಹೇಳುತ್ತಾ 'ಸಿದ್ದಲಿಕೆಯ ತುಪ್ಪವನು, ಸಗ್ಗಳೆಯ ನೀರನು, ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದಯ್ಯಾ' ಎನ್ನುತ್ತಾಳೆ. ಮಹಿಳೆ ಯರಿಂದ ಬಂದ ಇಂತಹ ಕ್ರಾಂತಿಕಾರಿ ವಚನ ಅಂದಿನ ಚಾರಿತ್ರಿಕ ದೃಷ್ಟಿಯಿಂದಂತೂ ಬಹಳ ಮಹತ್ವವಾದುದು. ಒಬ್ಬ ಅಸ್ಪೃಶ್ಯ ಹೆಣ್ಣುಮಗಳು ಹನ್ನೆರಡನೆ ಶತಮಾನ

ವಲ್ಲಿ ಇಷ್ಟು ಧೈರ್ಯವಾಗಿ. ಪಕ್ವ ಅನುಭವದಿಂದ ಇಂತಹ ಗಟ್ಟಿಮಾತುಗಳನ್ನಾಡು ತ್ತಿದ್ದಳೆಂದರೆ–ಇಂದಿನ ಲೇಖಕಿಯರಿಗೂ ಆಶ್ಚರ್ಯವೆನಿಸುತ್ತದೆ. ಅಂತಹ ಗಡಸು ತನ, ಛಲ, ನಿಜವಾದ ರೊಚ್ಚು ಕಾಳವ್ವೆಯ ವಚನಗಳಲ್ಲಿದೆ. ಒಂದರ್ಥದಲ್ಲಿ ವಿಚಾರಿಸಿದಾಗ ಅಕ್ಕಮಹಾದೇವಿಗಿಂತಲೂ ಹೆಚ್ಚಿನ ಪ್ರಾಮುಖ್ಯತೆ, ಪ್ರಚಾರ ಕಾಳವ್ವೆಗೆ ಸಿಗಬೇಕಾಗಿತ್ತು. ಆದರೆ ಮಡಿವಂತ ಜನರಿಂದ ಕಾಳವ್ವೆಯ ವ್ಯಕ್ತಿತ್ವ ವಚನ ಸಾಹಿತ್ಯದಲ್ಲಿ ಎಲೆಮರೆಯ ಹೂವಿನಂತಾಗಿದೆ.

ಅಮುಗೆ ರಾಯಮ್ಮ : ನೇಕಾರ ಕುಲದ ಅಮುಗಿದೇವನ ಹೆಂಡತಿಯೇ ರಾಯಮ್ಮ. ಪ್ರಳಿಜೆಯ ಶಾಸನದಲ್ಲಿ ಅಮುಗಿದೇವನ ಪ್ರಶಸ್ತಿಯೂ ದೊರಕುತ್ತದೆ. ಭೀಮಾತೀರದ ಸೊಳೂಜದ ಈ ದಂಪತಿಗಳು ಸೊಲ್ಲಾಪುರಕ್ಕೆ ಬಂದು ನೇಯ್ಗೆ ಕಾಯಕ ಮಾಡು ತ್ತಿದ್ದು ನಂತರ ಕಲ್ಯಾಣ ಪಟ್ಟಣಕ್ಕೆ ಬಂದು ಬಸವಣ್ಣನವರನ್ನು ಕಂಡು ಕಲ್ಯಾಣದ ಬಳಿ ಇರುವ ಶಿವಪುರದಲ್ಲಿ ವಾಸಿಸುತ್ತಿದ್ದರೆಂದು ತಿಳಿದುಬರುತ್ತದೆ. ಸಿದ್ಧರಾಮನ ಸಾಕಾರನಿಷ್ಠೆಯನ್ನು ಒಪ್ಪದ ಈ ಅಮುಗೆ ದಂಪತಿಗಳು, ಸೊಲ್ಲಾಪುರದಿಂದ– ಕಲ್ಯಾಣಕ್ಕೆ ಬಂದು ಇಷ್ಟಲಿಂಗದ ವೀರಶೈವ ತತ್ವವನ್ನು ಸ್ವೀಕರಿಸಿದರೆಂದು ಕಂಡು ಬರುತ್ತದೆ.

ಶಿವಶರಣೆಯರ ವಚನಗಳು'—ಸಂಕಲನದಲ್ಲಿ ರಾಯಮ್ಮನ ೧೧೬ ವಚನಗಳು ಸಿಗು ತ್ತವೆ. ಈಕೆಯ ವಚನಾಂಕಿತ 'ಅಮುಗೇಶ್ವರಲಿಂಗ'. ರಾಯಮ್ಮನ ವಚನಗಳು ಕೂರಿಯಂಪ್ಪು ಹರಿತ. ವ್ಯಂಗ್ಯ–ವಿಡಂಬನೆ ಎದ್ದು ಕಾಣುತ್ತದೆ, ಈಕೆ ಯಾರ ದಾಸ್ಯಕ್ಕೂ ಒಳಗಾಗದ ಬಹಳ ನಿಷ್ಠುರ ಸ್ವಭಾವದವಳು. ಅಧೈರ್ಯದ ಎಲ್ಲಾ ಜನಕ್ಕೂ ರಾಯಮ್ಮನ ನುಡಿಗಳು ಹೊಸ ಬದುಕು ಕೊಡುತ್ತವೆ. ಪಶುಪತಿಯನ್ನೇ ಟೀಕಿಸುವ ಈಕೆಯ ಎದೆಗಾರಿಕೆ ಎಂತಹ ಗಂಡೆದೆಯನ್ನೂ ಜುಮ್ಮೆನಿಸುತ್ತದೆ.

ಅರ್ಹತೆಗೆ ಪ್ರಾಮುಖ್ಯತೆ ಕೊಡಬೇಕೆಂಬ ಈಕೆಯ ನಿಲುವು ಇಂದಿಗೂ ಆದರ್ಶ ಯ. 'ಮೂಗಿಲ್ಲದವಂಗೆ ಕನ್ನಡಿ ತೋರಲೇಕೆ ? ಕೈಯಿಲ್ಲದವಂಗೆ ಕುದರಿಯ ತೋರಲೇಕೆ ? ಕಾಲಿಲ್ಲದವಂಗೆ ನಿಚ್ಚಣಗೆಯನೇರಲೇಕೆ ?' ಎಂದು ಪ್ರಶ್ನಿಸುತ್ತಾ ಭಕ್ತಿ ಜ್ಞಾನ ವೈರಾಗ್ಯವಿಲ್ಲದವಂಗೆ ಇಷ್ಟಲಿಂಗವೇಕೆ ?' ಎಂದು ಕೇಳುತ್ತಾಳೆ. ಈ ವಚನದಲ್ಲಿ ಲೋಕಾನುಭವದೊಂದಿಗೆ ಶಿವಾನುಭವವೂ ಸಮರಸಗೊಂಡಿದೆ. ಭಕ್ತಿ– ಜ್ಞಾನ–ವೈರಾಗ್ಯದಂತಹ ವಿಷಯಗಳನ್ನು ತಿಳಿಯಪಡಿಸುವಾಗ ಅರ್ಥ ಸ್ಪಷ್ಟತೆಗಾಗಿ ಕೆ ಲೌಕಿಕ ಉದಾಹರಣೆಗಳನ್ನು ಕೊಟ್ಟಿರುವದು ಗಮನಾರ್ಹ. 'ಅರಿವು–ಆಚಾರ– ಮ್ಯಕ್ ಜ್ಞಾನವರಿಯದೆ ನಾಮವ ಹೊತ್ತುಕೊಂಡು ತಿರುಗುವ ಗಾವಿಲರ ಮುಖವ ನೋಡಲಾಗದು' ಎನ್ನುವ ಇನ್ನೊಂದು ವಚನದಲ್ಲೂ ಕೂಡ ಇದೇ ಭಾವ ಅಡಗಿದೆ.

ಅಲ್ಲಿ ಕಾಗೆ–ಆಡು–ಸೀಳು ನಾಯಿಗಳ ಉದಾಹರಣೆ ಕೊಟ್ಟು ಅವು ಎಂದಾದರು
ಕೋಗಿಲೆ–ಆನೆ–ಸಿಂಹದ ಮರಿಯಾಗಬಲ್ಲವೇ ಎಂದು ಕೇಳುತ್ತಾಳೆ.

'ಕತ್ತೆಯಂತೆ ಬತ್ತಲೆಯಿದ್ದಡೇನು, ಇಷ್ಟಲಿಂಗ ಸಂಬಂಧಿಯಾಗಬಲ್ಲನೆ?' ಎನ್ನು
ಈಕೆಯ ನುಡಿ ಇರಿದಷ್ಟೂ ಹರಿತವಾಗಿದೆ. ಕೇವಲ ನಾಮದ ಬಲದಿಂದ, ಹುಟ್ಟಿ
ಆಧಾರದಿಂದ ಕೊರಳಲ್ಲೊಂದು ಲಿಂಗ ಕಟ್ಟಿಕೊಂಡು ಅನಿತ್ಯವ ಹೊತ್ತುಕೊಂಡ
ತಿರುಗುವ ಅಘೋರಿಗಳ ಮುಖವನ್ನು ನೋಡಲಾಗದು ಎನ್ನುತ್ತಾಳೆ.

ಬೇರೆಯವರಿಗೆ ಕೇಳುವಂತೆ ಧ್ವನಿ ತೆಗೆದು ಮಂತ್ರ ಒದರುವ ಡಾಂಭಿಕರನ್ನು ಕುರಿತ
'ಕೊಂಬಿನ ಕುರಿಯಂತೆ ಕೂಗಿದಡೇನ ಲಿಂಗೈಕ್ಯರಾಗಬಲ್ಲರೆ ?' ಎನ್ನುತ್ತಾಳೆ. ಏನೂ
ಅರಿಯಲಾರದೆ ಬರೀ ಭಸ್ಮ ಧರಿಸಿದರೆ 'ಕತ್ತೆ ಬೂದಿಯಲ್ಲಿ ಬಿದ್ದಂತಾಯಿತ್ತು' ಎನ್ನು
ತ್ತಾಳೆ. ಅರಿವು–ಆಚರಣೆಯ ಬಗೆಗೆ ಅನುಭವ ಪಡೆದ ಈಕೆ ಡಾಂಭಿಕರನ್ನು
ಕುರಿತು ಅತ್ಯಂತ ಕಟುವಾಗಿ ವಿಡಂಬಿಸಿದ್ದಾಳೆ. 'ಕಾವಿಯ ಹೊದ್ದು ತಿರುಗುವ
ಜೀವಗಳ್ಳರು ವಿರಕ್ತರೆ' ಎಂಬ ಮಾತಂತೂ ಡಾಂಭಿಕ ಸ್ವಾಮಿಗಳ ಮರ್ಮಾಂಗಕ್ಕೇ
ತಟ್ಟುತ್ತದೆ.

ವಚನಗಳನ್ನು ಹೇಳಿಕೊಂಡು ಬರೀ ಭಾಷಣ ಬಿಗಿದು ಬದನೇಕಾಯಿ ತಿನ್ನುವ
ಜನರನ್ನು ರಾಯಮ್ಮ ತರಾಟೆಗೆ ತೆಗೆದುಕೊಂಡಿದ್ದಾಳೆ. ಅಂತವರಿಗೆ "ಕಾಲಾಡಿಯಂತೆ
ದೇಶ ದೇಶಕ್ಕೆ ತಿರುಗಲೇತಕ್ಕೆ ? ಪರಸಮಯದ ಜೈನನಂತೆ ನುಡಿಯಲೇತಕ್ಕೆ ?"
ಎಂದು ಕೇಳುತ್ತಾಳೆ. ತಾವು ಜ್ಞಾನಿಗಳೆಂದು ಸುಳ್ಳು ಚಿತ್ರವನ್ನು ಕೊಡುವ ಜನ
ರನ್ನು ಅದರಲ್ಲೂ ವಿರಕ್ತರನ್ನು ಈಕೆ ಟೀಕಿಸಿರುವಂತೆ ಮತ್ತಾರೂ ಟೀಕಿಸಿಲ್ಲ,
ಅಂತೆಯೇ ಇಂದಿನ ಜಗದ್ಗುರುಗಳಿಗೆ ರಾಯಮ್ಮನ ವಚನ ಓದಿದಾಕ್ಷಣ ಮೈ ಬೆವ
ರೇಳುತ್ತದೆ. ತಾನು ಮೈಮೇಲೆ ಲಿಂಗವನ್ನು ಧರಿಸುವದಿಲ್ಲವೆಂದು ಧೈರ್ಯವಾಗಿ
ಹೇಳಿಕೊಂಡ ಛಲದ ಸ್ವಭಾವದ ರಾಯಮ್ಮ ಅರಿವೇ ನಿಜವಾದ ಗುರುವೆನ್ನುತ್ತಾಳೆ.
ಅವಳ ಒರಟುತನವೇ ಅವಳ ಅಭಿವ್ಯಕ್ತಿಗೆ ವಿಶಿಷ್ಟತೆಯನ್ನು ತಂದಿದೆ. ಸಮಾಜದ
ಬಗ್ಗೆ ತೀವ್ರ ಕಳಕಳಿಯಿದೆ.

ವೇದಶಾಸ್ತ್ರ ಆಗಮ ಪುರಾಣ ಶ್ರುತಿ ಸ್ಮೃತಿ ಇವೆಲ್ಲಾ ನುಡಿವುದು ಹುಸಿ ಎನ್ನುವ
ಈಕೆ ಇವೆಲ್ಲವುಗಳನ್ನು ಅಲ್ಲಗಳೆದಿದ್ದಾಳೆ. ಕೆಲ ಪುರಾಣಕಾರರು ಪ್ರಭುದೇವನನ್ನು
ನೇರವಾಗಿ ಕೈಲಾಸದಿಂದ ಭೂಲೋಕಕ್ಕಿಳಿದನೆಂದು ಬಣ್ಣ ಹಚ್ಚಿ ಬಣ್ಣಿಸಿದ್ದಾರೆ.
ಆದರೆ ರಾಯಮ್ಮ ಇಂತಹ ಮಾತುಗಳನ್ನು ಒಪ್ಪುವದಿಲ್ಲ.

'ಮಾಯಾವಾದದಿಂದ ಮರ್ತ್ಯಕ್ಕೆ ಬಂದನೆಂದು
ನುಡಿವವರ ನಾಲಗೆಯ ಕಿತ್ತು. ಕಾಟುಮೆಟ್ಟಿ ಸೀಳುವೆನು.
ಹೊಟ್ಟೆಯ ಸೀಳಿ, ಮುಳ್ಳಿನ ರೊಂಪೆಯ ಮಡಗುವೆನು'

ಎನ್ನುವ ಈಕೆಯ ನುಡಿಗಳಲ್ಲಿ ವೈಜ್ಞಾನಿಕ ಮನೋಧರ್ಮವಿದೆ. ಕೈಲಾಸ–ಮಾಯಾವಾದ–ಸ್ವರ್ಗ-ನರಕ-ವೇದ–ಉಪನಿಷತ್ತು ಇಂತಹ ಕೆಲಸಕ್ಕೆ ಬಾರದವುಗಳನ್ನು ನಂಬುವ ಅಯೋಗ್ಯರ ಈ ಮಾತುಗಳನ್ನೆಲ್ಲಾ ಅಳಿಸಿ ಹಾಕಿ, ವೈಜ್ಞಾನಿಕವಾಗಿ. ವಾಸ್ತವಿಕವಾಗಿ, ನಿಷ್ಠೆ–ಸತ್ಯಗಳಿಂದ ಪಕ್ವ ಅನುಭವದೊಂದಿಗೆ ಹೊರಹೊಮ್ಮುವ ರಾಯಮ್ಮನ ವಚನಗಳ ಐಸಿರಿ ಅಪಾರ.

> 'ಮರ್ತ್ಯದಲ್ಲಿ ಹುಟ್ಟಿದವರೆಲ್ಲರೂ ಇಷ್ಟಲಿಂಗ ಸಂಬಂಧಿಗಳೆ ?'
>
> 'ಕೋಣನನೇರಿ ಕೋಡಗದಾಟವನಾಡುವಂಗೆ ಭಾರವಣೆಯ ಶುದ್ಧಿ ಎಲ್ಲಿಯದು ?'
>
> 'ಮಂಡೆಯ ಬೋಳಿಸಿಕೊಂಡು ತುಂಡುಗಂಬಳಿಯ ಹೊದ್ದವರ ಕಂಡಡೆ ನಂಬಲಾರೆ'
>
> 'ಉದರ ಪೋಷಣಕ್ಕೆ ಗಿಡುಗಿಡುಂದಪ್ಪದೆ ತಿರುಗುವ ಕುನ್ನಿ ಒಡೆಯನ ಗುರುತು ಬಲ್ಲುದೆ ?'
>
> 'ಕಳ್ಳೆಯ ಸಂಗವ ಮಾಡಿ, ಕಾಯವಿಕಾರ ಮುಂದುಗೊಂಡು
> ನಿಜವಲ್ಲಭನ ಅರಿದೆನೆಂಬ ಕರ್ಮಿಗಳ ನೋಡಾ.'
>
> 'ಅಂಗದ ಆಪ್ಯಾಯನಕ್ಕೆ ಲಿಂಗವ ಮರೆದು ತಿರುಗುವ
> ಭಂಡ ಭವಿಗಳನೇನೆಂಬೆನಯ್ಯಾ ?'

ಈ ಮೊದಲಾದ ವಚನಗಳಲ್ಲಿಯ ವಿಡಂಬನೆ ಕಟುವಾಗಿದೆ. 'ಮಂಡೆ ಬೋಳಿಸಿಕೊಂಡು ತುಂಡಗಂಬಳಿಯ ಹೊದ್ದವರ ಕಂಡಡೆ'–ಎಂಬ ರಾಯಮ್ಮನ ಈ ವಚನವೇ ಸರ್ವಜ್ಞನ 'ಮಂಡೆ ಬೋಳಿಸಿಕೊಂಡು ತುಂಡುಗಂಬಳಿ ಹೊದೆದು' ಎಂಬ ತ್ರಿಪದಿಗೆ ಪ್ರೇರಕವಾಗಿರಬೇಕು.

ಅಕ್ಕಮ್ಮ (ರೆಮ್ಮವ್ವೆ) :–ಸಮಾಜದ ಬಗ್ಗೆ ತೀವ್ರವಾಗಿ ಕಳಕಳಿಸುವಲ್ಲಿ ಅಕ್ಕಮ್ಮನೂ ರಾಯಮ್ಮನ ಸ್ವಭಾವದವಳೇ ಆಗಿದ್ದರೂ ಅವಳ ಮೊನಚು ಇವಳಲ್ಲಿಲ್ಲ. ಈಗ ದೊರೆತ ವಚನಗಳ ಆಧಾರದಿಂದ ಶೂದ್ರ ವಚನಕಾರ್ತಿಯರಲ್ಲಿ ಅತ್ಯಂತ ಅಧಿಕ ಸಂಖ್ಯೆಯಲ್ಲಿ ವಚನಗಳನ್ನು ರಚಿಸಿರುವವಳು ಅಕ್ಕಮ್ಮ ಎಂದು ಹೇಳಬಹುದು. ಈಕೆಗೆ ರೆಮ್ಮವ್ವೆಯೆಂತಲೂ ಹೆಸರಿದೆ. ಈಕೆಯ ವಚನಾಂಕಿತ–'ರಾಮೇಶ್ವರಲಿಂಗ'. 'ಶಿವಶರಣೆಯರ ವಚನಗಳು' ಸಂಕಲನದಲ್ಲಿ ಈಕೆಯ ೧೫೪ ವಚನಗಳಿವೆ. ಅಕ್ಕಮ್ಮನ ವಚನಗಳು ಮಾಹೇಶ್ವರ ಸ್ಥಲದ ನಿಷ್ಠೆಯನ್ನು ಹೆಚ್ಚಾಗಿ ಪ್ರಕಟಪಡಿಸುತ್ತವೆ. ಏಕ ನಿಷ್ಠೆ ಮಹೇಶ್ವರ ಸ್ಥಲದ ಮುಖ್ಯ ಲಕ್ಷಣ. ಅಕ್ಕಮ್ಮನ ಹೆಣ್ಣು ಹೃದಯದಲ್ಲಿ ಗಂಡೆದೆಯ ಕೆಚ್ಚು ಒಡೆದು ಕಾಣುತ್ತದೆ. ರಾಯಮ್ಮ 'ಅರಿವಿ'ಗೆ ಅತಿ ಹೆಚ್ಚು

ಪ್ರಾಮುಖ್ಯತೆ ಕೊಟ್ಟಿದ್ದರೆ ಅಕ್ಕಮ್ಮ 'ಆಚಾರ'ಕ್ಕೆ ಅತ್ಯಂತ ಮಹತ್ವ ಕೊಡುತ್ತಾಳೆ.

'ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು
ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು
ತಲೆ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ
ಆವ ಪ್ರಕಾರವಾದಡೇನು ? ಅರಿವೆ ಮುಖ್ಯವಯ್ಯ
ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ.'

ಜಾಡಿ ಹೇಳುವವರಿಗೆ, 'ಅವ್ವಾ-ಅಕ್ಕಾ' ಎಂದು ನಟನೆ ಮಾಡುವ ಭಂಡರಿಗೆ ಚಾಟಿ ಏಟಿನಂತಿದೆ ಅಕ್ಕಮ್ಮನ ಈ ಕೆಳಗಿನ ವಚನ :

'ಆಚೆಯ ನೀರ ಈಚೆಯಲ್ಲಿ ತೆಗೆವುದು ಚೆಲುವೆಯಲ್ಲ
ಆಚೆಯಲ್ಲಿ ಕೇಳಿದ ಮಾತ ಈಚೆಯಲ್ಲಿ ನುಡಿದು
ಮತ್ತಾಚೆಯಲ್ಲಿ ಬೆರೆಸುವ ಭಕ್ತನಲ್ಲ,
ಆತನ ಇದಿರಿನಲ್ಲಿ ಆತನ ಸತಿಯ ಅವ್ವಾ ಎಂದು
ಈಚೆಯಲ್ಲಿ ಕೂಡಿಕೊಂಡು, ಆತನಿದ್ದಾಗ ಅಮ್ಮಾ ಎಂದು
ಅತ ಸಂದಲ್ಲಿ ಸತಿ ಎಂಬ ಭಂಡರಿಗೇಕೆ ವ್ರತನೇಮ ನಿತ್ಯ ?'

'ಗಡಿಗೆಯ ತುಪ್ಪ, ಹೆಡಿಗೆಯ ಮೃಷ್ಟಾನ್ನ–ತುಡುಗುಣಿಯಂತೆ ತಿಂಬವಂಗೆ
ಮತ್ತೊಡೆಯರ ಕಟ್ಟಳೆಯೆ ?'
'ಗಡ್ಡ, ಮಂಡೆ ಬೋಳಿನ ಕುರುಹ ತೋರಿ ಬಲ್ಲವರಂತೆ ಆಧ್ಯಾತ್ಮವ ನುಡಿದು
ಉಪಾಧಿಯಿಂದ ಒಡಲ ಹೊರೆವಾತ ವಿರಕ್ತನೆ ?'
'ಹೋತಿನ ಗಡ್ಡದಂತೆ ಗಡ್ಡದ ಹಿರಿಯರ ನೋಡಾ'
'ವೇಷ ಎಲ್ಲಿರದು ? ಸೂಳೆಯಲ್ಲಿ, ಡೊಂಬಿನಲ್ಲಿ, ಬೈರೂಪನಲ್ಲಿರದೆ ?'

ಈ ಮೊದಲಾದ ವಚನಗಳಲ್ಲಿಯ ವಿಡಂಬನೆ ಗಮನಾರ್ಹ. ಮೂಢ ನಂಬಿಕೆಯಲ್ಲೂ ವೈಚಾರಿಕತೆಯನ್ನು ತೋರಿಸುವ ಅಕ್ಕಮ್ಮನ ಜಾಣ್ಮೆ ಒಂದು ವಚನದಲ್ಲಿ ವ್ಯಕ್ತವಾಗಿದೆ. ಒಕ್ಕಲಿಗರು ಬೆದರಿನ ಬೊಂಬೆಗೆ ರುದ್ರಾಕ್ಷಿ, ಭಸ್ಮಧರಿಸಿ ಪೂಜಿಸುವದನ್ನು ಕಂಡ ಆಕೆ 'ಅದು ಆ ಬೊಂಬೆಯ ಶಕ್ತಿಯಲ್ಲ. ನಿಮ್ಮ ಮನಸ್ಸಿನ ಶ್ರದ್ಧೆ' ಎಂದು ಸ್ಪಷ್ಟಪಡಿಸುತ್ತಾಳೆ. ಹೀಗೆ ಅಕ್ಕಮ್ಮ ವೈಚಾರಿಕ ಮನಸ್ಸಿನಿಂದ ಅಂದಿನ ಸಮಾಜದ ಎಳೆಗಳನ್ನು ಬಿಚ್ಚಿದ್ದಾಳೆ; ಆಧ್ಯಾತ್ಮಿಕ ತೂಕದಿಂದ ಅಳೆದಿದ್ದಾಳೆ.

ಹಡಪದ ಲಿಂಗಮ್ಮ : ಹಡಪದಪ್ಪಣ್ಣನ ಸತಿ ಲಿಂಗಮ್ಮ ಅನೇಕ ಸುಂದರ ವಚನಗಳನ್ನು ಬರೆದಿದ್ದಾಳೆ. ಈಗ ಸಧ್ಯ ಆಕೆಯವು ೧೧೩ ವಚನಗಳು ಮತ್ತು 'ಮಂತ್ರ

ಗೋಪ್ಯ' ದೊರಕಿವೆ. 'ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣಾ' ಈಕೆಯ ವಚನಾಂಕಿತ, ಹಡಪದಪ್ಪಣ್ಣ ನಡೆ-ನುಡಿ ಶುದ್ಧಿ ಪಡೆದ ಶ್ರೇಷ್ಠ ಶರಣ ಮತ್ತು ಅನುಭಾವಿ. ಪತಿಗೆ ತಕ್ಕ ಸತಿ ಲಿಂಗಮ್ಮ ! ಲಿಂಗಮ್ಮನ ಗುರು ಚೆನ್ನ ಬಸವಣ್ಣ. ಅಂತೆಯೇ ತನ್ನ ವಚನಾಂಕಿತದಲ್ಲಿ ಪತಿಯ ಹೆಸರನೊಂದಿಗೆ, ಗುರುವಿನ ಹೆಸರನ್ನು ಸೇರಿಸಿ ಕೊಂಡಿದ್ದಾಳೆ.

ಮನವನ್ನು ಹತೋಟಿಯಲ್ಲಿಡಬೇಕಾದರೆ ದೇಹವನ್ನು ದಂಡಿಸಬೇಕೆನ್ನುವ ಕೆಲವರ ವಾದವನ್ನು ಈಕೆ ಒಪ್ಪಳು. ಸಂದೇಹಗೊಂಡ ಮನುಜ ಕುಲವನ್ನೇ ಸಂಬೋಧಿಸಿ ಈಕೆ ಹೇಳುತ್ತಾಳೆ. 'ಗಾಳಿ ಬೀಸದ ಜಲದಂತೆ, ಮೋಡವಿಲ್ಲದ ಸೂರ್ಯನಂತೆ. ಬೆಳಗಿದ ದರ್ಪಣದಂತೆ' ಮನ ನಿರ್ಮಲವಾಗಬೇಕು ಎಂದು ಇಂತಹ ಅನೇಕ ಸುಂದರ ಉಪಮೆ–ಸಂಕೇತಗಳು ಈಕೆಯ ವಚನದಲ್ಲಿವೆ. ನೀಲಲೋಚನೆ–ಗಂಗಾಂಬಿಕೆಯಂತವರು ವಚನಗಳನ್ನು ಬರೆದದ್ದು ದೊಡ್ಡದೇ ನಿಜ, ಆದರೆ ಸೇವಕ ವೃತ್ತಿಯಲ್ಲಿರುವ ಒಬ್ಬ ಕೆಳವರ್ಗದವನ ಹೆಂಡತಿ 'ಕೇಳಿರೊ ಮನುಜರಿರಾ' ಎಂದು ಸಂಬೋಧಿಸಿ ಆಧ್ಯಾತ್ಮದ ಬಗ್ಗೆ, ಸಮಾಜದ ಬಗ್ಗೆ ವಿಡಂಬಿಸಿರುವದು ಇಂದಿನ ಶತಮಾನದಲ್ಲಿ ನಿಂತು ನೋಡುವವರಿಗೂ ಅಚ್ಚರಿಯನ್ನುಂಟು ಮಾಡುತ್ತದೆ.

'ಕನಿಷ್ಟದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ' ಎಂಬಂತಹ ಆಕೆಯ ನುಡಿಗಳು ಆತ್ಮ ಚರಿತ್ರಾತ್ಮಕವಾಗಿರುವಂತಿದೆ. ಕೆಳವರ್ಗದಲ್ಲಿ ತಾನು ಹುಟ್ಟಿದ್ದನ್ನು ನಿಸ್ಸಂಕೋಚ ವಾಗಿ ಹೇಳಿಕೊಳ್ಳುವ ಲಿಂಗಮ್ಮನ ಅಭಿಮಾನ, ಕೆಚ್ಚು ಗಮನಾರ್ಹ. ಈಕೆಯ ಕೆಲ ವಚನಗಳಲ್ಲಿ 'ಕನಸಿನ ಲೋಕ' ಗೋಚರಿಸುತ್ತದೆ. ಆ ಮೂಲಕ ಒಂದು ಪಕ್ವ ಅನುಭವ ಬಿಚ್ಚಿಕೊಳ್ಳುತ್ತದೆ. ಶರಣರ ಆಧ್ಯಾತ್ಮ ಜ್ಞಾನದ ಹಿನ್ನೆಲೆಯಲ್ಲಿ ಲಿಂಗಮ್ಮ ನಂತಹ ಜನಪದ ಮನಸ್ಸುಗಳು ಹೇಗೆ ಗಟ್ಟಿಯಾಗಿ ಕಾರ್ಯ ಮಾಡಿದೆಯೆಂಬುದು ಮನಶ್ಶಾಸ್ತ್ರಜ್ಞರಿಗೆ, ವಿಜ್ಞಾನಿಗಳಿಗೆ ಒಂದು ಕುತೂಹಲದ ಅಧ್ಯಯನವಾಗುತ್ತದೆ.

ತಮ್ಮ ಮನಸ್ಸನ್ನು ತಾವು ಅರಿತುಕೊಳ್ಳದೆ ಕಂಡ–ಕಂಡವರ ಹಿಂದೆ ತಿರುಗಿ 'ಬೇರೆ ಹೊಸದನ್ನು ಕಂಡೆ' ಎನ್ನುವವರನ್ನು ಈಕೆ ಕಟುವಾಗಿ ವಿಡಂಬಿಸಿದ್ದಾಳೆ.

> 'ಮಲಮೂತ್ರ ಕೀವಿನ ಕೊಣದ ಉಚ್ಚೆಯ ಮೆಚ್ಚಿ,
> ಹುಚ್ಚುಗೊಂಡು ತಿರುಗುವ ಕತ್ತೆ ಮನುಜರ'
> 'ಬಂಡಿಯ ಮೇಗಣ ಹೆಳವನಂತೆ ಕಂಡಕಂಡ ಕಡೆಗೆ ಹಲುಬಿದಡೆ,
> ನಿಮಗೆ ಬಂದುದೇಸಿರೊ ?'

ಕೈಲಾಸಕ್ಕೂ ಮತ್ತು ಮರ್ತ್ಯಕ್ಕೂ ಇವಳಲ್ಲಿ ಭೇದ ಕಾಣದು. ಎರಡೂ ಕಡೆಯೂ ನಡೆ ನುಡಿ ಒಂದೇ ಎನ್ನುವ ಈಕೆಯ ವಚನಗಳಲ್ಲಿ ಸುಳ್ಳು ಸ್ವರ್ಗಕ್ಕಿಂತ ಸತ್ಯ

ಬದುಕಿಗೆ ಪ್ರಾಮುಖ್ಯತೆ ಇದೆ. ಕಾಮ-ಕ್ರೋಧ-ಲೋಭ-ಮೋಹ-ಮದ-ಮತ್ಸರ ಇವು ಇಲ್ಲ ಎಂದು ಮನವ ಕದ್ದು ನುಡಿವವರನ್ನು ಈಕೆ 'ಅಬದ್ಧರು' ಎನ್ನುತ್ತಾಳೆ. ಹೀಗೆ ವಾಸ್ತವವಾಗಿ ಬದುಕನ್ನು ಕಂಡುಂಡವಳು ಲಿಂಗಮ್ಮ.

ಆಯ್ದಕ್ಕಿ ಲಕ್ಕಮ್ಮ: ಆಯ್ದಕ್ಕಿ ಮಾರಯ್ಯನ ಪತ್ನಿ ಲಕ್ಕಮ್ಮ ಪತಿಯನ್ನು ಮೀರಿಸಬಲ್ಲ ಶರಣೆ. ರಾಯಚೂರ ಜಿಲ್ಲೆಯ ಅಮರೇಶ್ವರದ ಇವರು ಕಲ್ಯಾಣದಲ್ಲಿ ನಡೆವ ಶಿವಾನುಭವದ ಮಹಿಮೆಯನ್ನು ಕೇಳಿ ಅಲ್ಲಿಗೆ ಬಂದು ನೆಲೆಸಿದವರು. ಅಲ್ಲಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತರುವದೇ ಇವರ ಕಾಯಕ. ಒಮ್ಮೆ ಮಾರಯ್ಯ ನಿಗೆ ಮರುವಾಗಿ ಬಸವಣ್ಣನವರ ಮನೆಯಂಗಳದಿ ರಾಶಿಗಟ್ಟಲೆ ಚೆಲ್ಲಿದ್ದ ಅಕ್ಕಿಯನ್ನು ಬಳಿದು ತಂದದ್ದನ್ನು ಲಕ್ಕಮ್ಮ ಮರಳಿ ಕಳಸಿದಳು. ಈಕೆಯ ವಚನಾಂಕಿತ— 'ಮಾರಯ್ಯ ಪ್ರಿಯ ಅಮರೇಶ್ವರಲಿಂಗ'. ಈಕೆ ರಚಿಸಿದ ೨೫ ವಚನಗಳು ದೊರಕಿವೆ.

"ಆಸೆಯೆಂಬುದು ಅರಸಿಂಗಲ್ಲದೆ,
ಶಿವಭಕ್ತರಿಗುಂಟೆ ಅಯ್ಯಾ ?"
"ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ,
ಇದು ನಿಮ್ಮ ಮನವೊ ಬಸವಣ್ಣನ ಅನುಮಾನ ಚಿತ್ತವೊ ?"

ಈ ಮೊದಲಾದ ನುಡಿಗಳಲ್ಲಿ ಲಕ್ಕಮ್ಮನ ಆತ್ಮನಿಷ್ಠೆ, ಧೈರ್ಯ, ಸತ್ಯವನ್ನೇ ಬಿಂಬಿಸುವ ಎದೆಗಾರಿಕೆ ಕಾಣುತ್ತೇವೆ ಪ್ರಜಾತಂತ್ರದ ಇಂದಿನ ದಿನಗಳಲ್ಲಿ ಸರ್ವಸ್ವತಂತ್ರರಾಗಿರುವ ನಮ್ಮ ಅನೇಕ ಲೇಖಕಿಯರು, ಇಂದಿನ ಖದೀಮ ಮಂತ್ರಿ-ಮಾನ್ಯರ ಬಗ್ಗೆ ತುಟಿ ಪಿಟಕ್ಕನ್ನದೆ, ಕೊಳೆತು ನಾರುತ್ತಿರುವ ಪ್ರಸಕ್ತ ಸಮಾಜದ ವಿರುದ್ಧ ಪ್ರತಿಭಟಿಸದೆ, ಅಡುಗೆ ಮನೆಯಲ್ಲೇ ಕುಳಿತು ಇಡ್ಲಿ-ಉಪ್ಪಿಟ್ಟುಗಳೊಂದಿಗೆ ತಮ್ಮ ಸಾಹಿತ್ಯ ಬೆಳೆಸುವದು ದುರಂತಕರವಾದುದು. ಅಂದಿನ ಅರಸೊತ್ತಿಗೆಯ ಕಾಲದಲ್ಲೇ ಲಕ್ಕಮ್ಮ, ಆಸೆಯೆಂಬುದು ಅರಸನಿಗೆ ಮಾತ್ರ ಎಂದು ಧೈರ್ಯವಾಗಿ ಹೇಳಿದಳು. ಅಕ್ಕಿ ಬಳಿದು ತಂದ ಸಂದರ್ಭದಲ್ಲಿ ಬಸವಣ್ಣನ ಬಗೆಗೂ ಅನುಮಾನ ಪಟ್ಟು ಪತಿಗೆ ಬುದ್ಧಿ ಹೇಳಿದಳು. ಧರ್ಮಮಾರ್ಗದಲ್ಲಿ ಪತಿ ತಪ್ಪಿದ್ದರೆ ಎಚ್ಚರಿಸುವ ಹೊಣೆಗಾರಿಕೆ ಪತ್ನಿಯದು ಎಂಬ ಮಾತಿಗೆ ಲಕ್ಕಮ್ಮ ಸಾಕ್ಷಿಯಾಗಿ ನಿಂತಿದ್ದಾಳೆ,

ಸತ್ಯಕ್ಕ : ಕಸಗೂಡಿಸುವ ಕಾಯಕದ ಸತ್ಯಕ್ಕ ಅತ್ಯಂತ ಕೆಳವರ್ಗದಿಂದ ಬಂದವಳು. 'ಶಿವಶರಣೆಯ ವಚನಗಳು' ಸಂಕಲನದಲ್ಲಿ ಈಕೆಯವು ೨೮ ವಚನಗಳಿವೆ. 'ಶಂಭು ಜಕ್ಕೇಶ್ವರ'— ಈಕೆಯ ವಚನಾಂಕಿತ. ಒಬ್ಬ ಪ್ರಾಮಾಣಿಕ ಸಾಧಕಿಯಾಗಿರುವ ಈಕೆಯ ವಚನಗಳಲ್ಲಿ ಇವಳ ಮನಸ್ಸಿನ ಅಂತರಂಗ ಶೋಧನೆಯಿದೆ.

"ಅರ್ಚನೆ ಪೂಜನೆ ನೇಮವಲ್ಲ; ಮಂತ್ರ ತಂತ್ರ ನೇಮವಲ್ಲ,
ಧೂಪ ದೀಪಾರತಿ ನೇಮವಲ್ಲ;
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ"
'ದೇವರದೇವ ನೀನೆಂದೆನಿಸಿ ಕೊಂಡೆ
ಬಾಣನ ಬಾಗಿಲಕಾಯ್ವುರೇನಯ್ಯಾ ?......'

ಎಂದು ದೇವರನ್ನೇ ಪ್ರಶ್ನಿಸುವ ಸತ್ಯಕ್ಕನ ಧೈರ್ಯ ಮೆಚ್ಚುವಂತಹದು. ಅವಳ ಮನಸ್ಸಿನ ಮೊರೆಯನ್ನು ಕೆಲ ವಚನಗಳು ಪ್ರತಿಧ್ವನಿಸುತ್ತವೆ. ಅವಳ ಅಂತರಂಗದ ಹೋರಾಟ ವಚನಗಳುದ್ದಕ್ಕೂ ಕಾಣಿಸುತ್ತದೆ.

ಗೊಗ್ಗವ್ವೆ: ಗೊಗ್ಗವ್ವೆಯವು ಆರು ವಚನಗಳು ದೊರಕಿವೆ. ನಾಸ್ತಿನಾಥಾ ಈಕೆಯ ವಚನಾಂಕಿತ. ಜ್ಞಾನಕ್ಕೆ ಗಂಡು-ಹೆಣ್ಣೆಂಬ ಭೇದವಿಲ್ಲವೆನ್ನುವ ಈವಚನಕಾರ್ತಿ ಒಂದು ವಚನದಲ್ಲಿ ಬಹುಮುಖ್ಯವಾದ ಸವಾಲೊಡ್ಡಿದ್ದಾಳೆ.

'ಗಂಡು ಮೋಹಿಸಿ ಹೆಣ್ಣ ಹಿಡಿದಡೆ,
ಅದು ಒಬ್ಬರ ಒಡವೆ ಎಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು ?'

ಕೆಳವರ್ಗದ ಮಹಿಳೆಯೊಬ್ಬಳಿಂದ ಬಂದ ಈ ಪ್ರಶ್ನೆ ಬಹಳ ಮುಖ್ಯವಾದುದು.ಗಂಡು ಒಂದು ಹೆಣ್ಣನ್ನು ಮೋಹಿಸಿದರೆ ಆಕೆ ಅವನ ಒಡವೆಯಾಗುತ್ತಾಳೆ ಆದರೆ ಅದೇ ಹೇಣ್ಣು ಒಂದು ಗಂಡನ್ನು ಪ್ರೀತಿಸಿದರೆ ಆತನೇಕೆ ಆಕೆಯ ವಡವೆಯಾಗಲಾರ ಎಂಬುದು ಈಕೆಯ ನೈಜಪ್ರಶ್ನೆ.

ಕದಿರರೆಮ್ಮವ್ವೆ: ಈಕೆ ನೂಲುವ ಕಾಯಕದವಳು. ಸಧ್ಯಕ್ಕೆ ನಾಲ್ಕುವಚನಗಳು ಲಭಿಸಿವೆ. 'ಕದಿರರೆಮ್ಮೆಯೊಡೆಯಗುಮ್ಮೇಶ್ವರಾ' ರೆಮ್ಮವ್ವೆಯ ವಚನಾಂಕಿತ.

"ಎಲ್ಲರ ಗಂಡಂದಿರು ಗಜವೇಂಟೆಕಾರರು, ಎನ್ನಗಂಡ ಮನೆವೇಂಟೆಕಾರ ಎಂಬ ಈಕೆಯ ನುಡಿಗಳಲ್ಲಿ ಮಧುರ ಭಾವದ ಉಕ್ತಿ ಸಮರ್ಪಕವಾಗಿದೆ. ದ್ವಂದ್ವಾರ್ಥದಲ್ಲಿ ತನ್ನ ನೂಲುವ ಕದಿರನ್ನು ಬಣ್ಣಿಸಿದ್ದಾಳೆ. ಬ್ರಹ್ಮ, ವಿಷ್ಣು, ರುದ್ರರನ್ನೇ ರಾಟೆಯೊಳಗಳವಡಿಸಿ ತೋರಿಸಿದ ಈ ಕೆಳಗಿನಈಕೆಯ ವಚನ ಗಮನಿಸುವಂಥದ್ದು.

"ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ
ಅಡಿಯ ಹಲಗೆ ಬ್ರಹ್ಮ ತೋರಣ ವಿಷ್ಣು

ನಿಂದ ಬೊಂಬೆ ಮಹಾರುದ್ರ
ಅರಿವೆಂಬ ಕದಿರು ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ
ಸುತ್ತಿತು ನೂಲು; ಕದಿರು ತುಂಬಿತ್ತು.........

ಇಲ್ಲಿರಾಟೆಯ ವರ್ಣನೆಯನ್ನು ಅನುಭಾವದ ದೃಷ್ಟಿಯಿಂದ ರೂಪಿಸಿದ್ದಾಳೆ. ಬಸವಣ್ಣ ಚೆನ್ನಬಸವಣ್ಣ, ಪ್ರಭುದೇವರ ಕರುಣದಿಂದ ಬದುಕಿದೆನೆಂದು ತಿಳಿಸಿದ್ದಾಳೆ.

ಇನ್ನಿತರರು

ಇಲ್ಲಿಯವರೆಗೆ ಉಲ್ಲೇಖಿಸಿದವರಷ್ಟೇ ಅಲ್ಲದೆ ಇನ್ನಿತರ ಶೂದ್ರ ವಚನಕಾರ್ತಿಯರಿದ್ದಾರೆ. ಅವರೆಲ್ಲರವೂ ಒಂದೊಂದೇ ವಚನಗಳು ದೊರಕಿವೆ; ಒಂದೊಂದೇ ಆದರೂ ಸತ್ವದಿಂದ ಕೂಡಿವೆ.

ಇವರಲ್ಲಿ ಹಾದರದ ಕಾಯಕದ ಮಾರಯ್ಯಗಳ ಹೆಂಡತಿ ಗಂಗಮ್ಮನ ವಚನವೂಒಂದು. ಆಕೆಯ ಅಂಕಿತ 'ಗಂಗೇಶ್ವರಲಿಂಗ'. ಯಾವ ಕಾಯಕ ಮಾಡಿದರೂ ಒಂದೇ ಎನ್ನುವ ಗಂಗಮ್ಮ ಹಾದರದ ವೃತ್ತಿಯಲ್ಲೂ ಕೂಡ ಕಾಕಪಿಕದಂತ್ತೆ ಕೂಡಿವರೆ ನಾಯಕನರಕ ತಪ್ಪದೆನ್ನುತ್ತಾಳೆ.

ಅತ್ಯಂತ ಕೆಳವರ್ಗದಿಂದ ಬಂದ ಈ ವಚನಕಾರ್ತಿಯರಲ್ಲೂ ಅಂದಿನ ವ್ಯವಸ್ಥೆಯಬಗ್ಗೆ ಪ್ರತಿಭಟನೆ, ರೊಚ್ಚು, ಛಲ, ಸ್ವಾಭಿಮಾನಗಳು ತುಂಬಿತುಳುಕುತ್ತಿವೆ. ಸಮಾಜದಲ್ಲಿ ಕಾಣುವ ಸಣ್ಣತನವನ್ನು ಕಂಡ ಅವರು ಕೆರಳಿದ್ದಾರೆ. ಈ ದೃಷ್ಟಿಯಿಂದ ಕಾಲಕಣ್ಣಿಯ ಕಾಮಮ್ಮನ ಈ ವಚನ ಗಮನಾರ್ಹ. ಈಕೆಯ ಅಂಕಿತವೇ 'ನಿರ್ಭೀತಿನಿಜಲಿಂಗ'

"ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ;
ಗುರುಲಿಂಗ ಜಂಗಮದ ಕಾಲ ಕಟ್ಟುವೆ;
ವ್ರತ ಭ್ರಷ್ಟರ ನಿಟ್ಟೊರಸುವೆ, ಸುಟ್ಟು ತುರತುರನೆ ತೂರುವೆ
ನಿರ್ಭೀತಿ ನಿಜಲಿಂಗದಲ್ಲಿ;

ಕುಟ್ಟುವ ಕಾಯಕದ ಕೊಟ್ಟಣದ ಸೋಮಮ್ಮ 'ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ' ಎನ್ನುತ್ತಾಳೆ—ತನ್ನ ವಚನದಲ್ಲಿ. ತಮ್ಮ ಲಿಂಗ, ಜಾತಿ, ವರ್ಗಗಳಿಗೆ ಅಂದಿನ ತಮ್ಮ ಕಾಲಕ್ಕಿದ್ದ ಅಳುಕು, ಸಂಕೋಚ, ನಾಚಿಕೆಗಳನ್ನು ಕಿತ್ತೊಗೆದು ಸ್ವಾಭಿಮಾನವನ್ನು ಬೆಳೆಸಿಕೊಂಡು ದಿಟ್ಟವಾಗಿ ನಿಂತ ಈ ಶೂದ್ರ ವಚನಕಾರ್ತಿಯರ ಧೈರ್ಯ ಮೆಚ್ಚುವಂತಹದು. ಇದಕ್ಕೆ ಸೂಳೆಸಕವ್ವೆಯ ವಚನ ಒಳ್ಳೆಯ ನಿದರ್ಶನ, ಈಕೆಯ ವಚನಾಂಕಿತವೇ 'ನಿರ್ಲಜ್ಜೇಶ್ವರಾ' ಎಂಬುದು ಇನ್ನೂ ಗಮನಾರ್ಹ. ಸೂಳೆಯಾಗಿದ್ದ ಈಕೆ ತನ್ನ

ಅನುಭವವನ್ನು ಅತ್ಯಂತ ಪ್ರಾಮಾಣಿಕವಾಗಿ ನಿವೇದಿಸಿದ್ದಾಳೆ.

"ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ.
ಹಿಡಿವಡೆ ಒತ್ತಲೆ ನಿಲಿಸಿ ಕೊಲುವರಯ್ಯಾ,
ವ್ರತಹೀನನನರಿದು ಬೆರೆದಡೆ
ಕಾದ ಕತ್ತಿಯಲ್ಲಿ ಕೈಕಿವಿ ಮೂಗ ಕೊಯ್ವರಯ್ಯಾ,
ಒಲ್ಲೆನೊಲ್ಲೆ ಒಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ"

ತನ್ನ ಆಲೋಚನೆಯನ್ನು, ತನ್ನ ವೃತ್ತಿಯಲ್ಲೇ ನಿಸ್ಸಂಕೋಚದಿಂದ ಸಂಕವ್ವೆ ಹೇಳಿಕೊಂಡಿದ್ದಾಳೆ.

'ಸದ್ಗುರುಸಂಗ ನಿರಂಗಲಿಂಗ'-ಎಂಬ ವಚನಾಂಕಿತದಿಂದ ಬರೆದ ಕನ್ನಡಿಕಾಯಕದ ರೇವಮ್ಮನ ವಚನ ಸೂಳೆ ಸಂಕವ್ವೆಯ ವಚನದಷ್ಟೇ ಹರಿತವಾಗಿದೆ. ಈಕೆ ಕ್ಷೌರಿಕ ಕುಲದವಳು. ಕೈಯಲ್ಲಿ ಕನ್ನಡಿಯಿದ್ದಾಗ ತನ್ನತಾ ನೋಡಬಾರದೇಕೆ-ಎಂದು ಪ್ರಶ್ನಿಸುವ ಈಕೆ, ಲಿಂಗ ಜಂಗಮದ ಪ್ರಸಾದಕ್ಕೆ ತಪ್ಪಿದವರನ್ನು ಏಕೆ ಕೊಲ್ಲಬಾರದು ಎನ್ನುತ್ತಾಳೆ. 'ಕೊಂದಡೆ ಮುಕ್ತಿಯಿಲ್ಲವೆಂಬವರ ಬಾಯಲ್ಲಿ, ಪಡಿಹಾರನ ಪಾದರಕ್ಷೆಯನಿಕ್ಕುವೆ'-ಎನ್ನುವ ಈಕೆಯ ನುಡಿಯಲ್ಲಿ ಧಾರ್ಷ್ಟ್ಯವಿದೆ; ಆದರೆ ಸತ್ಯವಿದೆ.

ಬಾಚಿ ಕಾಯಕದ ಬಸವಯ್ಯನ ಹೆಂಡತಿ ಕಾಳವ್ವೆಯ ವಚನ ಆಕೆಯ ಕಾಯಕವನ್ನು ಸೂಚಿಸುತ್ತದೆ. 'ಕರ್ಮಹರ ಕಾಳೇಶ್ವರಾ'-ಆಕೆಯ ವಚನಾಂಕಿತ.ಕಾಯಕ ತಪ್ಪಿದರೆ, ವ್ರತ ತಪ್ಪಿದರೆ ಎಂದೂ ಸೈರಿಸಬಾರದೆನ್ನುತ್ತಾಳೆ, 'ಕೈತಪ್ಪಿ ಕೆತ್ತಲು ಕಾಲಿಗೆ ಮೂಲ, ಮಾತ ತಪ್ಪಿ ನುಡಿಯಲುಬಾಯಿಗೆ ಮೂಲ,ವ್ರತಹೀನನನರೆಯಲು ನರಕಕ್ಕೆಮೂಲ'-ಎಂದು ಹೇಳುವಲ್ಲಿ ವ್ರತ, ಕಾಯಕದ ಬಗ್ಗೆ ನಿಷ್ಠೆ ಎದ್ದುಕಾಣುತ್ತಿದೆ. 'ಕದಿರು ಮುರಿಯಿತು, ಏನೂ ಇಲ್ಲ, ವ್ರತಹೀನನ ನೆರೆಯಲಿಲ್ಲ ಗುಮ್ಮೇಶ್ವರಾ'-ಕದಿರಕಾಯಕದ ಕಾಳವ್ವೆಯ ಬರಹ ದೊರಕಿರುವದು ಇದಿಷ್ಟೆ, 'ಬಿಡಾಡಿ' ಎಂಬ ಅಂಕಿತದಿಂದ ಬೊಂತಾದೇವಿಯ ವಚನಗಳು ಸಾಮಾನ್ಯವಾಗಿವೆ. 'ಊರೊಳಗೆ ಬ್ರಾಹ್ಮಣ ಬಯಲು ಊರಹೊರಗೆ ಹೊಲೆಯ ಬಯಲೆಂದುಂಟೆ?' ಎಂದು ಪ್ರಶ್ನಿಸಿದ್ದಾಳೆ.ಇದಲ್ಲದೇ ಇನ್ನೂ ಅನೇಕ ಶೂದ್ರ ವಚನಕಾರ್ತಿಯರಿದ್ದಾರೆ. ಅವರಲ್ಲಿ ಬಹಳಷ್ಟು ವಚನಕಾರ್ತಿಯರ ವಚನಗಳು ಲಭಿಸಿಲ್ಲ.

ಶೂದ್ರವರ್ಗದಿಂದ ಬಂದ ಈ ಮಹಿಳೆಯರು ವಚನಕಾರ್ತಿಯರಾಗಿ ಸಾಧಿಸಿದ್ದೇನೆಂಬುದು ಬಹು ಮುಖ್ಯವಾದ ಪ್ರಶ್ನೆ. ಯುಗಗಳಿಂದ ನೊಂದ ಜನಗಳ ಕೊರಳಧ್ವನಿಗಳಾಗಿ ಇವರ ವಚನಗಳು ಕಿಡಿಕಾರಿವೆ. ಇಷ್ಟೆಲ್ಲಾ ಮಹಿಳೆಯರ ವಚನಗಳು ದೊರಕಿರುವದು ಅಂದಿನ ಸ್ತ್ರೀವರ್ಗದಲ್ಲಿ ಮೂಡಿದ್ದ ಒಂದು ಎಚ್ಚರದ ಕುರುಹಾಗಿದೆ. ಒಟ್ಟು ವಚನಕಾರ್ತಿಯರಲ್ಲಿ ನೀಲಲೋಚನೆ, ಗಂಗಾಂಬಿಕೆಯಂತಹ ಕೆಲವರನ್ನು

ಬಿಟ್ಟರೆ ಉಳಿದವರೆಲ್ಲರೂ ತೀರಾ ಸಾಮಾನ್ಯ ವರ್ಗದಿಂದ ಮತ್ತು ಕೆಳವರ್ಗದಿಂದ ಬಂದಂತವರು. ನಮ್ಮ ಚರಿತ್ರೆಯಲ್ಲಿ ಹನ್ನೆರಡನೇ ಶತಮಾನವೊಂದನ್ನು ಬಿಟ್ಟರೆ, ಅತ್ಯಂತ ಕೆಳವರ್ಗದ ಮಹಿಳೆಯರು ಇಷ್ಟು ಜಾಗ್ರತರಾಗಿ ಪ್ರತಿಭಟಿಸಿದ್ದು. ಪಕ್ವಾನು ಭವದ ಸಾಹಿತ್ಯ ಕೊಟ್ಟದ್ದು ಎಲ್ಲಿಯೂ ಕಾಣಿಸುವದಿಲ್ಲ. ವ್ಯಕ್ತಿಸ್ವಾತಂತ್ರ್ಯಕ್ಕೆ ಸೂಳೆ ಸುಂಕವ್ವೆ, ಕನ್ನಡಿಕಾಯಕದ ರೇವಮ್ಮ, ಕೊಟ್ಟಣದ ಸೋಮವ್ವೆ ಒಳ್ಳೆಯ ನಿದರ್ಶನ ಅಮುಗೆರಾಯಮ್ಮನ ಮಾತಿನ ಕ್ರೌರ್ಯ ಪ್ರಿಯವಾಗಲು ಕಾರಣ ನೇರವಾಗಿ ಆಕೆ ಬದುಕನ್ನು ಆಹ್ವಾನಿಸಿ, ಎದುರಿಸಿದ್ದರಿಂದ. ನನ್ನ ದೃಷ್ಟಿಯಲ್ಲಿ ಉರಿಲಿಂಗಪೆದ್ದಿಯ ಹೆಂಡತಿ ಕಾಳವ್ವೆ ಅತ್ಯಂತ ಪ್ರಮುಖ ಸ್ಥಾನ ಪಡೆಯುತ್ತಾಳೆ.

ಹಡಪದ ಲಿಂಗಮ್ಮ, ಅಕ್ಕಮ್ಮ ಮತ್ತು ರಾಯಮ್ಮ ಇವರ ವಚನಗಳಲ್ಲಿ ಪ್ರತಿಮೆ-ಸಂಕೇತಗಳು ಸಾರ್ಥಕವಾಗಿ ಬಳಕೆಯಾಗಿವೆ. ಇಲ್ಲಿಯ ಹೆಚ್ಚು ವಚನಕಾರ್ತಿಯರು ಲೋಕಾನುಭವದೊಂದಿಗೆ ಶಿವಾನುಭವವನ್ನು ಬಿತ್ತರಿಸಿದ್ದಾರೆ.

ಈ ವಚನಕಾರ್ತಿಯರ ಭಾಷೆ ಜನಪದ ನುಡಿಗಟ್ಟಿನಿಂದ ಕೂಡಿದ್ದು ಬಹಳ ಸತ್ವ ಪೂರ್ಣವಾಗಿದೆ; ತಮ್ಮ ಆಡು ಭಾಷೆಯನ್ನೇ ಸಮರ್ಪಕ ರೀತಿಯಲ್ಲಿ ಬಳಸಿ ವಚನ ಗಳ ಗಟ್ಟಿತನವನ್ನು ಹೆಚ್ಚಿಸಿದ್ದಾರೆ. ಹಂದಿ, ಕತ್ತೆ, ಕೋಣ, ಕುರಿ, ಕೋಳಿ ಕಾಕ ಪಿಕ ಮೊದಲಾದ ಪ್ರಾಣಿಪಕ್ಷಿಗಳ ರೂಪಕಗಳನ್ನು ಬಳಸಿಕೊಂಡು, ಕಳ್ಳ, ಸೂಳೆಗಾಣ, ಕಾವಕತ್ತಿ, ಗೆಣೆಯ ಗೆಜ್ಜೆ ತುರತುರನೆ, ಬತ್ತಲೆ. ಹೆಳವ, ಭಂಡ,ಮುಳ್ಳುಬೋಳಿಸು, ತುಡುಗುಣಿ ಇಂತಹ ಅನೇಕ ದೇಸಿಯ ನುಡಿಗಟ್ಟುಗಳೊಂದಿಗೆ; ಚಾಟಿ, ಗುಂಡು, ಪಗುಡಿ, ಬುಧನ, ಪರಿಹಸನ, ಕಲಕೇತ ಈ ಮೊದಲಾದ ಜಾನಪದ ನುಡಿಗಡಣ ತುಂಬಿಕೊಂಡು ಜ್ವಲಂತವಾಗಿ ಪ್ರತಿಕ್ರಿಯಿಸಿದ್ದಾರೆ.

ಇಲ್ಲಿನ ಎಲ್ಲ ವಚನಕಾರ್ತಿಯರಲ್ಲೂ ಸಾಮಾಜಿಕ ಕಳಕಳಿ. ಶೋಷಣೆ ವಿರುದ್ಧ ಪ್ರತಿ ಭಟನೆ, ಆಧ್ಯಾತ್ಮದ ಬಗೆಗಿನ ಒಲವುಗಳು ಗೋಚರಿಸುತ್ತವೆ. ಆದರೆ ಈ ವಚನಕಾರ್ತಿ ಯರು ಕೆಲವೊಂದು ಕಡೆ ಘೋಷಣೆಗಿಳಿದುದ್ದೂ ಉಂಟು. ಇಂತಹ ಸಂದರ್ಭದಲ್ಲಿ ಇವ ರಿಗೆ ವಚನಕಾರರನ್ನು ಅನುಸರಿಸಿ ಮಾತನಾಡುವದೇ ಪ್ರಿಯವೆನಿಸಿತು. ಗಂಡಸರಂತೆ ಅವರು ಸಾಧಕಿಯರಾದರು, ಆ ಮಾತು ಸರಿಯೇ. ಆದರೆ ಇವರು ಹೆಣ್ಣಾಗಿ ತಮ್ಮ ಸಮಸ್ಯೆಗಳತ್ತ ಇನ್ನೂ ಹೆಚ್ಚಿನ ಗಮನ ಹರಿಸಿದ್ದರೆ ಅವರಿಂದ ಇನ್ನೂ ಉತ್ಕೃಷ್ಟ ವಾದ ಸಾಹಿತ್ಯ ದೊರೆಯಬಹುದಿತ್ತು.

ಎರಡು ಕವನಗಳು

ಶಿವಯೋಗಿ ಮೊಗಲಿ

೧. ಹೆಪ್ಪುಗಟ್ಟಿದ ದಿನಗಳು

ಹೆಪ್ಪುಗಟ್ಟಿದ ಉಸಿರಿನ ದಿನಗಳವು
ಬಿರುಕು ಬಿಟ್ಟ ನಾಲಿಗೆ, ನೀರಡಿಸಿದ ಕಾವು
ಕಾರ್ಗಲ್ಲು, ಕೋಗಿಲೆ, ಸಾಕಿದ ಹಾವು

ಮುಳ್ಳುತಂತಿಯ ಚೌಕಟ್ಟಿನ ಹೂದೋಟದಲ್ಲಿ
ಗಂಗಾರಾಮು ಬೆವರುಣಿಸುತ್ತಾನೆ
ಪಾದುಕೆಗಳಿಗೆ. ಅರಳಿದ ಬೆವರಿನ ಬಣ್ಣದ
ಸುವಾಸನೆ ಕುಡಿಯಲು ಚಿಟ್ಟೆಗಳಿಗೆಲ್ಲಿ ಪುರುಸೊತ್ತು?
ಅವರೂ ದಾಟುತ್ತಾರೆ ಬಹಳ ಅವಸರದಲ್ಲಿ

ಮತ್ತೆ ಚಿಗಿಯುವ ಚಿಗುರು
ಮತ್ತು ಹೆಪ್ಪು ಗಟ್ಟಿದ ರಕ್ತದ ಅದರ ಎಲೆಗಳು
ಹಿಂದೆಯೇ ಬಂದು ಮೈಮುರಿಯುವ ಕೆಂಗುಲಾಬಿ
ಅರಳಿ ತನುವ ತೊರೆದ ರಕ್ತಗೆಂಪು ಹೃದಯ:
ಕಣಿವೆಯ ಆದಿವಾಸಿ ತರುಣಿ ಅದರೊಡತಿ.

ಮಬ್ಬು ಕತ್ತಲೆ ಹೊತ್ತ ಸೂರ್ಯನಿಲ್ಲದ ದಿನಗಳು
ಬೇಲಿಯ ನುಗ್ಗಿ ಬಂದು ಕಿಟಕಿಯ ಕಾಜು
ತಟ್ಟುವ ಬೇಡಾದ ಚಳಿ ಟೊಳ್ಳು ಎದೆಯಲ್ಲಿ
ಸುತ್ತಾಡಿ ಹೋಗುತ್ತದೆ ಗುಂಯ್ಯೆಂದು ರಾಗ ಮಾಡಿ
ಮೈಯೆಲ್ಲ ಕಂಪನ ಹುಟ್ಟಿಸಿ.

ನೀಲಿಗಪ್ಪು ಕಾರ್ಮೋಡಗಳ ಪರ್ವತಗಳ ಹಿನ್ನೆಲೆಯಲ್ಲಿ
ಎದೆ ಸೆಟಿಸಿ ನಿಂತ ಗಂಗಾರಾಮನ ಹೂವುಗಳು
ಹಾಗೂ ಕೆಂಗುಲಾಬಿಯ ರಕ್ತರಂಜಿತ ವರ್ಣ ಮಿರಿ ಮಿರಿ
ಮಿಂಚುತ್ತದೆ. ಆದಿವಾಸಿ ಕನ್ನಿಕೆಯ ರಕ್ತಗೆಂಪು
ಹೃದಯದಂಥ ಗುಲಾಬಿಗೆ ಕಪ್ಪು ಮುಡಿಯ ಬಯಕೆ;
ಅದರ ಹಂಬಲ: ಕಪ್ಪು ಹಿನ್ನೆಲೆ.

ಕುಡಿಯಲು ಬಿಡಿ.
ಯಾವುದೋ ಹಳ್ಳಿಗಾಡಿನ ಮುಗ್ಧ ಜಾತ್ರೆಯಲ್ಲಿ
ಮಲಗಿ ಧೂಳು ತುಂಬಿದ ನೆಲದ ಮೇಲೆ, ಎದೆಯಲ್ಲಿ
ನೆಟ್ಟುಕೊಂಡು ಅವಳ ಕೆಂಗುಲಾಬಿ ಕಂಚಿಯ
ಹೊಟ್ಟೆ ತುಂಬ ಬಿಸಿಲು ಕುಡಿಯಲು ಬಿಡಿ.

ಒಣಗಿ ನಿಂತ ಶ್ವೇತ ಮಲ್ಲಿಗೆಗಳು
ಒಣಗಿ ನಿಂತ ಕಣ್ಣುಗಳು
ಬಣ್ಣ ಬಣ್ಣದ ಮಣ್ಣುಗಳು

ಹೆಪ್ಪುಗಟ್ಟಿದ ನನ್ನ ನೆಲದ
ಮೋಡಗಳನ್ನು ಕಡಿದೊಯ್ಯುತ್ತಿದ್ದಾರೆ!
ಅದೋ, ಕೆಸರನ್ನೂ ಲೂಟಿ ಮಾಡುತ್ತಿದ್ದಾರೆ!
ಹೇಗಾದರೂ ತಡೆಯಿರಿ. ಮೋಡಗಳನ್ನು
ಸುರಿಯಗೊಡಿ. ನೆನೆಯಗೊಡಿ
ಮಲ್ಲಿಗೆಗಳನ್ನು, ಕಣ್ಣು, ಮಣ್ಣುಗಳನ್ನು
ರಕ್ತಗೆಂಪು ಗುಲಾಬಿಯ ಬಣ್ಣದಲ್ಲಿ.

ಆವಿಯಾದ ಬೆವರು ಮಿಶ್ರಿತ
ನಮ್ಮ ರಕ್ತವನ್ನು ಒಮ್ಮೆಯಾದರೂ ಅವರು ಮರಳಿ ಕುಡಿಯಲಿ
ಜೀವ ತನ್ನ ಬಣ್ಣ ಮರಳಿ ಪಡೆಯಲಿ,

೨ ಕುರುಡುಗಣ್ಣಿನ ತಾತ

ಈಗ ನೋಡುತ್ತಿರುವಿರಲ್ಲ
ಹೀಗೆಯೇ ಆ ಮಗು

ತನ್ನ ಕುರುಡು ತಾತನ ಕೈಹಿಡಿದು
ಉತ್ಸವಗಳಲ್ಲಿ ತಿರುಗುತ್ತಿತ್ತು.
ಬ್ರಿಟಿಷರ ಕೈಯಲ್ಲಿ
ಕಣ್ಣು ಕಳೆದುಕೊಂಡು
ಗುಡ್ಡೆಗಳಿಲ್ಲದ ತೂತಾದ ಕಣ್ಣು
ತೋರಿಸಬಾರದೆಂದು ಗುಂಡು ಗುಂಡು ಕಪ್ಪು
ಕನ್ನಡಕ ಧರಿಸುತ್ತಿದ್ದ
ಆ ಹಣ್ಣು ಹಣ್ಣು ಮುದುಕನ ಕೈಹಿಡಿದು
ಬಣ್ಣ ಬಣ್ಣದ ದೀಪಮಾಲೆಯ ಸುತ್ತಿ
ಆ ಮಗು ತಿರುಗುತ್ತಿತ್ತು.

ಗಲ್ಲಿಗಲ್ಲಿಯ ಮೊಹಲ್ಲೆಗಳಲ್ಲಿಯೂ ಗಣೇಶೋತ್ಸವ
ಮುಸ್ಲಿಮರ ಉರಿಸಲು ಆಚರಿಸುತ್ತಿದ್ದರೆ
ಮಸೀದೆಗಳ ಗುಂಬಜಗಳ ಮೇಲಿನ ಧ್ವನಿವರ್ಧಕಗಳು
ನಿದ್ದೆಗೆಟ್ಟ ದಣಿದ ದೇಹಗಳ ಹಸಿದ
ಕನಸು ಹರಿಯಲು ನಸುಕೆಲ್ಲ
ಗಂಟಲು ಹರಿದುಕೊಳ್ಳುತ್ತಿದ್ದರೆ
ಸಡಗರಗಳು, ದುಂದುವೆಚ್ಚಗಳು
ಹಸಿದ ಒಂದು ಜೀವ ನಾಚಿಕೆ ಬಿಟ್ಟು
ಹೊಸ ಬಟ್ಟೆಯಲ್ಲಿ ಉತ್ಸವ ನೋಡಲು ಬರುವವರ ಎದುರು
ಕೈಯೊಡ್ಡುವುದ ನಿಲ್ಲಿಸದಿದ್ದರೆ
ಇಳಿದು ಬಂದ ಈ ಕುರುಡು ಬಾಲದ ನೆಪದಲ್ಲಿ
ಅಷ್ಟದಿಕ್ಕುಗಳಿಂದಲೂ ಸುತ್ತುವರೆದು
ಜೀವಹಿಂಡುವ ಧ್ವನಿವರ್ಧಕದಲ್ಲಿನ ಗೀತೆಗಳು
ಒಬ್ಬ ರೋಗಿಯನ್ನು ಆರಾಮವಾಗಿ ಸಾಯಗೊಡದಿದ್ದರೆ
ನಾಚಿಕೆ ನಮ್ಮಿಂದ ಅಸಹ್ಯಗೊಳ್ಳುತ್ತಿದ್ದರೆ
ಬತ್ತಲಾದ ಮೇಲೂ ನಾವು ಬತ್ತಲಾಗುತ್ತಿದ್ದರೆ......

ಎಲ್ಲಿಯೋ ತಪ್ಪಾಗಿದೆ.
ಎಂದಿತ್ತೊ ಒಂದು ಸಣ್ಣ ತೂತು ಈಗ
ಹೊಲಿದಷ್ಟೂ ಹಸಿವು ಇದ್ದಂತೇ ಇದೆ..
ಬಹುಶಃ

ಇತಿಹಾಸದ ಒಂದು ತಪ್ಪು ಸಮಯದಲ್ಲಿ
ನನ್ನ ಜನ್ಮವಾಗಿದೆ.
ನನ್ನ ಹೃದಯ ಬರಿದಾಗಿದೆ. ತಾತನೆದೆಯಲ್ಲಿ
ಹಳೆಯ ಹೆಣದ ಭಾರವಿದೆ.
ಸತ್ತು ಕೊಳೆಯುತ್ತಿರುವ ರಾಷ್ಟ್ರಾಭಿಮಾನದ
ಒಜ್ಜೆ ಏರುತ್ತಿದೆ.

ಮಗು ಹಾಗೂ ತಾತ ಮಾತಾಡಿಲ್ಲ ಎಂದೂ
ಈತ ಹೇಳಿಲ್ಲ ಏನೂ
ಮತ್ತು ಏನೂ ಆತ ಕೇಳಿಲ್ಲ.
ಆದರೂ ನಗುತ್ತವೆ ತಾತನ ತೂತು ಕಂಗಳು
ಮೊಮ್ಮಗನ ಕಣ್ಣ ಒದ್ದಾಟಕ್ಕೆ.
ಗಲ್ಲಿಗೇರಿಸಿದವರನ್ನು ಕಂಡ ಸ್ಮೃತಿ ಹೊತ್ತ
ಕುರುಡು ಕಣ್ಣುಗಳು
ಗಲ್ಲಿಗೇರದೇ ಗದ್ದುಗೆಯೇರಿದವರ ಮುಖ ಕಮಲ ಕಾಣದ
ಸುದೈವಕ್ಕಾಗಿ ಹೆಮ್ಮೆಯಿಂದ ನಗುವ
ಕುರುಡು ಕಣ್ಣುಗಳು–ಕಪ್ಪು ಗುಂಡು ಕನ್ನಡಕದಲ್ಲಿ
ಮರೆಯಾದ ತೂತುಗಳು.

ದೇಶ, ಬಾವುಟ, ಸ್ವಾತಂತ್ರ್ಯ ದಿನೋತ್ಸವ,
ವಿವಿಧ ಧರ್ಮಗಳ ಸರಕಾರಿ ರಜೆಯ
ಯಾವುದೇ ಉತ್ಸವ ವೀಕ್ಷಿಸದ
ಕುರುಡು ಕಣ್ಣುಗಳು ದೇಶದ್ರೋಹಿಗಳಾಗಿವೆಯೇ?
ಹುತಾತ್ಮರು ಬ್ರಿಟಿಷರ ಉಪಕಾರ
ಸ್ಮರಿಸುವಲ್ಲಿ ಯಾವ ತಪ್ಪೂ ಇಲ್ಲ.
ಯಾವ ಜನರು ದೇಶಕ್ಕಾಗಿ ಹೊಡೆದಾಡಲಿಲ್ಲವೋ
ಅವರಿಗೆ ತಮ್ಮ ತಮ್ಮಲ್ಲಿಯೇ ಬಡಿದಾಡುವ
ಹಕ್ಕೂ ಇಲ್ಲ.
ಯಾವ ಹಕ್ಕೂ ಇಲ್ಲ.

ರಾಜಾಜಿ ನರಿಬುದ್ಧಿ vs ಪಾವಟೆ ನ್ಯಾಯಬುದ್ಧಿ

ಒಂದು ದಾಖಲೆ

ಸಿದ್ದಣ್ಣ ಗುಬ್ಬಿ

ಬಾಂಬೆ ಪ್ರಾಂತದ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಡಾ. ದಾ. ಚಿಂ. ಪಾವಟೆ ಯವರು ರಾಜ್ಯ ಸರಕಾರದ ಪರವಾಗಿ ದಿಲ್ಲಿಯಲ್ಲಿ Central Advisory Board ನ ಸಭೆಯಲ್ಲಿ ಭಾಗವಹಿಸಬೇಕಾಗಿತ್ತು. ರಾಜಾಜಿಯ ನೇತೃತ್ವದಲ್ಲಿ ಮದ್ರಾಸ ಸರ್ಕಾರದ Elementary Education Bill ಎಂಬ ಮಸೂದೆಯೊಂದನ್ನು ಆ ಸಭೆಯಲ್ಲಿ ಮಂಡಿಸಲಾಗಿತ್ತು. ಆ ಮಸೂದೆಯನ್ನು ದೇಶದ ಎಲ್ಲ ರಾಜ್ಯಗಳೂ ಮಾದರಿ ಯಾಗಿ ಅಂಗೀಕರಿಸಬೇಕೆಂಬುದು ಮದ್ರಾಸ ಸರ್ಕಾರದ ನಿಲುವಾಗಿತ್ತು. ಈ "ಮಾದರಿ" ಶೈಕ್ಷಣಿಕ ಯೋಜನೆಯ ಸಾರಾಂಶವಿಷ್ಟೆ : ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಅರ್ಧದಿನ ಅಂದರೆ ಬೆಳಿಗ್ಗೆ ಮೂರು ಗಂಟೆ ಮಾತ್ರ ಶಿಕ್ಷಣ ನೀಡಬೇಕು. ಮಧ್ಯಾನ್ಹ ಪೂರ್ತಿ ವಿದ್ಯಾರ್ಥಿಗಳನ್ನು ತಂತಮ್ಮ ಪಾಲಕರ ಉದ್ಯೋಗಗಳಲ್ಲಿ ಪಾಲ್ಗೊಳ್ಳಲು ಬಿಡಬೇಕು. ಅಂದರೆ ಆಗ ದೇಶದಲ್ಲೆಲ್ಲ ಜಾರಿಯಲ್ಲಿದ್ದ ಗಾಂಧೀಜಿ ಪ್ರೇರಿತ ಮೂಲ ಶಿಕ್ಷಣ (Basic crafst) ಕ್ಕೆ ಬದಲಾಗಿ ವಿದ್ಯಾರ್ಥಿಗಳಿಗೆ ಮಧ್ಯಾನ್ಹದ ಬಿಡುವು ನೀಡಬೇಕು.

ಸಿ. ರಾಜಗೋಪಾಲಾಚಾರಿಯ ಬುದ್ಧಿಯ ಶಿಶುವಾದ ಈ ಯೋಜನೆ ಸ್ವತಃ ಮದ್ರಾಸ ರಾಜ್ಯದಲ್ಲಿಯೇ ತುಂಬ ಕಟುವಾದ ಟೀಕೆಗೆ ಗುರಿಯಾಗಿತ್ತು. ಹಿಂದುಳಿದ ಜಾತಿಗಳ ವಿದ್ಯಾರ್ಥಿಗಳು ತಮ್ಮ ಜಾತಿಯ ಪರಂಪರಾಗತ ಕಸಬುಗಳಲ್ಲಿಯೇ ಮುಂದುವರಿಯಬೇಕು ಎಂಬುದು ರಾಜಾಜಿಯ ಈ ಯೋಜನೆಯ ದುರುದ್ದೇಶ ಎಂದು ಆಗ ಮದ್ರಾಸ ರಾಜ್ಯದಲ್ಲಿ ಡಿ. ಎಂ. ಕೆ. ಪಕ್ಷ ಬಲವಾಗಿ ವಿರೋಧಿಸಿತು. (ಹಾಗೂ ಇದರ ಪರಿಣಾಮವಾಗಿಯೇ ನಂತರ ರಾಜಾಜಿ ಅಧಿಕಾರ ಕಳೆದುಕೊಳ್ಳ ಬೇಕಾಯಿತು). ಸ್ಫುಟವಾಗಿ ಹೇಳುವದಾದರೆ ಈ ಯೋಜನೆ ಒಂದು ರೀತಿಯಿಂದ ನಮ್ಮ ಸಮಾಜದಲ್ಲಿರುವ ಜಾತಿ ಆಧಾರಿತ ವೈಷಮ್ಯಗಳನ್ನು ಮುಂದುವರಿಸಿಕೊಂಡು

ಹೋಗುವ ಉದ್ದೇಶ ಹೊಂದಿತ್ತು. ಹಾಗೂ ರಾಜ್ಯಾಂಗದಲ್ಲಿ ನಮೂದಿತವಾಗಿರುವ ಸಮಾನ ಅವಕಾಶಗಳ ತತ್ವಕ್ಕೆ ವಿರುದ್ಧವಾಗಿತ್ತು.

ತಮಾಷೆಯೆಂದರೆ ಎಲ್ಲ ರಾಜ್ಯಗಳ ಪ್ರತಿನಿಧಿಗಳು ಇದನ್ನು ಸಮರ್ಥಿಸಿದರು. ಒಬ್ಬ ಶಿಕ್ಷಣವೇತ್ತನಂತೂ 'ರಾಜಾಜಿಯ ಯೋಜನೆ ಎಂದ ಮೇಲೆ ಅದು ಅದ್ಭುತ ವಾದದ್ದೇ ಸರಿ, ರಾಜಾಜಿಯ ಬುದ್ಧಿಮತ್ತೆಯನ್ನು ಪರೀಕ್ಷಿಸಲು ನಾವ್ಯಾವ ಗಿಡದ ತೊಪ್ಪಲು ?' ಎಂದು ಬಿಟ್ಟರು. ಪಾವಟೆಯವರಿಗೆ ಈ ಗುಲಾಮೀ ಮನೋಭಾವ ಸರಿಬರಲಿಲ್ಲ. ಮಿಲಿಯಗಟ್ಟಲೆ ವಿದ್ಯಾರ್ಥಿಗಳ ಹಣೆಬರಹ ನಿರ್ಧರಿಸುವ ಶೈಕ್ಷಣಿಕ ಯೋಜನೆಯಂಥ ಮಹತ್ವದ ವಿಷಯಗಳಲ್ಲಿ ಚರ್ಚೆ, ಅಭಿಪ್ರಾಯ ಸ್ವಾತಂತ್ರ್ಯವಿಲ್ಲ ದಿದ್ದರೆ ಹೇಗೆ ? ಅಲ್ಲದೆ ಮದ್ರಾಸ ರಾಜ್ಯದ ಪ್ರತಿನಿಧಿಗಳು ಉಳಿದವರನ್ನು ಒಪ್ಪಿ ಸಲು ಎರಡು-ಮೂರು ದಿನಗಳಿಂದ ಹೊರಗೆ ಒಳಗೆ ಪ್ರಬಲ ರಾಜಕೀಯ ಪ್ರಚಾರ ನಡೆಸಿದ್ದುದನ್ನು ಪಾವಟೆ ನೋಡಿದ್ದರು. ಯಾರೂ ದನಿ ಎತ್ತದೆ ಇರುವುದನ್ನು ಕಂಡು ಇದೆಲ್ಲ ಪೂರ್ವನಿಯೋಜಿತ ಸಂಚು ಎಂಬುದು ಪಾವಟೆಯರಿಗೆ ಖಾತ್ರಿ ಯಾಯಿತು. ಪಾವಟೆ ಖಡಾಖಂಡಿತವಾಗಿ ಮಾತನಾಡಿದರು: "ಇದೊಂದು ಹೇಯ ಮಸೂದೆ. ಬಡವರನ್ನು, ದಲಿತರನ್ನು ಶಿಕ್ಷಣದ ಸೌಲಭ್ಯಗಳಿಂದ ದೂರ ವಿಡುವ ಸಂಚು. ಇದು ಗಾಂಧೀಜಿಯ ಮೂಲ ಶಿಕ್ಷಣದ ತತ್ವಕ್ಕೆ ವಿರುದ್ಧವಾದದ್ದು. ಇದರ ನಿಜವಾದ ಪರಿಣಾಮವೆಂದರೆ ಹಳ್ಳಿಗಾಡುಗಳ ಮಕ್ಕಳ ಶಿಕ್ಷಣವನ್ನು ಹಾಳು ಮಾಡುವುದು. ಮಧ್ಯಾಹ್ನ ನಂತರ ಮಕ್ಕಳು ಕೈಗೊಳ್ಳುವ ಕೆಲಸಗಳನ್ನು ನಿರ್ದೇ ಶಿಸುವವರು ಯಾರು ? ಪಾಲಕರೇ ? ಒಂದು ವೇಳೆ ಪಾಲಕರೇ ಸ್ವತಃ ನಿರು ದ್ಯೋಗಿಗಳಾಗಿದ್ದರೆ ಏನು ಮಾಡಬೇಕು ? ರಾಜಾಜಿ ಒಬ್ಬ ರಾಜಕೀಯ ಮುತ್ಸದ್ದಿ ಯಾಗಿರಬಹುದು. ಆದರೆ ದೇಶದ ಮಕ್ಕಳ ಶಿಕ್ಷಣವನ್ನು ಹಾಳು ಮಾಡುವ ಅಧಿಕಾರ ಅವರಿಗಿಲ್ಲ" ಎಂದುಬಿಟ್ಟರು ಪಾವಟೆ. ತಕ್ಷಣ ಸಭೆಯಲ್ಲಿ ಗಂಭೀರ ಮೌನ ಆವರಿಸಿತು. ಮಸೂದೆಯನ್ನು ವಿರೋಧಿಸಿದವರು ಪಾವಟೆ ಒಬ್ಬರೇ. ತಮ್ಮ ಅಧಿಕೃತ ವಿರೋಧವನ್ನು ಸಭೆಯ ಕಲಾಪಗಳ ವರದಿಯಲ್ಲಿ ನಮೂದಿಸಲೇ-ಬೇಕೆಂದು ಪಾವಟೆ ಪಟ್ಟು ಹಿಡಿದರು.

ಈ ಪ್ರಕರಣ ಇಷ್ಟಕ್ಕೇ ನಿಲ್ಲಲಿಲ್ಲ. ನಂತರ ರಾಜಾಜಿಯವರು ಆಗಿನ ಬಾಂಬೆ ಪ್ರಾಂತದ ಮುಖ್ಯಮಂತ್ರಿಯಾಗಿದ್ದ ಮೊರಾರ್ಜಿ ದೇಸಾಯಿಯವರಿಗೆ ಒಂದು ಗುಪ್ತ ಪತ್ರ ಬರೆದು ಪಾವಟೆಯವರ ಬಗ್ಗೆ ತೀವ್ರ ಖೇದ ಹಾಗೂ ಕಟುವಾದ ಅಸಮಾಧಾನ ವ್ಯಕ್ತಪಡಿಸಿದ್ದರು. ಆ ಪತ್ರವನ್ನು ಮೊರಾರ್ಜಿಭಾಯಿ ಡಿ. ಪಿ. ಐ. ಆಗಿದ್ದ ಪಾವಟೆಯವರಿಗೆ ಟಿಪ್ಪಣಿ (remarks)ಗಾಗಿ ಕಳಿಸಿದರು. ಈ ಮಸೂದೆಯನ್ನು ವಿರೋಧಿಸುವವರೆಲ್ಲರೂ ಡಿ. ಎಂ. ಕೆ. ಯವರಿಗಿಂತ ಕಟ್ಟಾ ಮತೀಯವಾದಿಗಳು

ಹಾಗೂ ಬ್ರಾಹ್ಮಣ ವಿರೋಧಿಗಳು ಆಗಿರಲೇಬೇಕೆಂಬುದು ರಾಜಾಜಿಯ ಅಭಿಪ್ರಾಯ ನಮ್ಮ ಪ್ರಜಾಪ್ರಭುತ್ವಪಡಿಯಲ್ಲಿ ಪ್ರತಿಯೊಬ್ಬರಿಗೂ ಅಭಿಪ್ರಾಯ ಸ್ವಾತಂತ್ರ್ಯವಿವೆ ಯೆಂಬುದನ್ನು ಮರೆತು ರಾಜಾಜಿ ಪಾವಟೆಯವರನ್ನು ಹಳಿದು ಬರೆದಿದ್ದರು. ಇದಕ್ಕೆ ಉತ್ತರವಾಗಿ ಪಾವಟೆಯವರು ಹೀಗೆ ಬರೆದರು : "ನಾನು ಕೇಂದ್ರ ಸಲಹಾ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದುದು ಬಾಂಬೆ ಪ್ರಾಂತದ ಪ್ರತಿನಿಧಿಯಾಗಿ; ಮದ್ರಾಸ ರಾಜ್ಯದ ಪ್ರತಿನಿಧಿಯಾಗಿ ಅಲ್ಲ. ಆದ್ದರಿಂದ ಮದ್ರಾಸದವರ ಮಸೂದೆ ಯನ್ನು ನಾನು ಅನುಮೋದಿಸಲೇಬೇಕೆಂಬ ನಿಬಂಧನೆಯೇನೂ ಇರಲಿಲ್ಲ. ಮದ್ರಾಸ ರಾಜ್ಯದವರು ತಾವು ರೂಪಿಸಿದ ಯೋಜನೆ ಇಡೀ ದೇಶಕ್ಕೆ ಮಾದರಿಯಾಗಬೇಕೆಂದು ಹಾಗೂ ಎಲ್ಲರೂ ಅದನ್ನೇ ಅನುಸರಿಸಬೇಕೆಂದು ಪ್ರಚಾರ ಮಾಡಿದರು. ಶಿಕ್ಷಣದ ಕ್ಷೇತ್ರದಲ್ಲಿ ಇಷ್ಟೊಂದು ಸಾಧನೆ ಮಾಡಿದ ಬಾಂಬೆ ಪ್ರಾಂತಕ್ಕೆ ಇದೊಂದು ಅವ ಮಾನವೇ ಸರಿ. ಬಾಂಬೆ ಪ್ರಾಂತವು ಕಟ್ಟುನಿಟ್ಟಾಗಿ ಪಾಲಿಸುತ್ತಿರುವ ಗಾಂಧೀಜಿಯ ಮೂಲ ಶಿಕ್ಷಣದ ತತ್ವಗಳನ್ನು ಹಾಳುಗೆಡವುದೊಂದೇ ಮದ್ರಾಸ-ಮಸೂದೆಯ ಉದ್ದೇಶ. ಅದೊಂದು ಕಪಟ ಮಸೂದೆ. ಬಡ ಹಾಗೂ ಹಿಂದುಳಿದ ಜನರ ದಮನವೇ ಅವರ ಮುಖ್ಯ ಗುರಿಯಾಗಿರುವದರಿಂದ ನಾನು ಇನ್ನಷ್ಟು ಕಟುವಾಗಿ ವಿರೋಧಿಸಿದ್ದರೆ ಒಳ್ಳೆಯದಿತ್ತು ಎನಿಸುತ್ತದೆ".

ಈ ಬಗ್ಗೆ ಮೊರಾರ್ಜಿಯವರಿಂದ ಮತ್ತೇನೂ ಪತ್ರ ಇತ್ಯಾದಿ ಪಾವಟೆಯವರಿಗೆ ಬರಲಿಲ್ಲ. ಆದರೆ ಮುಂದೆ ಕೆಲದಿನಗಳಲ್ಲಿಯೇ ಈ ಮಸೂದೆಯ ವಿರುದ್ಧ ತಮಿಳರ ಚಳುವಳಿಯಿಂದಾಗಿ ರಾಜಾಜಿಯವರು ಮುಖ್ಯಮಂತ್ರಿ ಕುರ್ಚಿಯನ್ನು ಕಳೆದುಕೊಳ್ಳಬೇಕಾಯಿತು.

ಈ ಘಟನೆಯನ್ನು ಡಾ. ಪಾವಟೆಯವರು ತಮ್ಮ Memoirs of an Education al Administrator ಎಂಬ ಆತ್ಮಚರಿತ್ರೆಯಲ್ಲಿ ವಿಶದವಾಗಿ ನಿರೂಪಿಸಿದ್ದಾರೆ. ಇದ ರಲ್ಲಿ ಪಾವಟೆಯವರ ಧೈರ್ಯ, ಮುಂದಾಲೋಚನೆ ಹಾಗೂ ಗ್ರಾಮೀಣ ವಿದ್ಯಾರ್ಥಿ ಗಳ ಬಗೆಗಿದ್ದ ಅವರ ಕಾಳಜಿ ವ್ಯಕ್ತವಾಗುವಂತೆಯೇ ನಮ್ಮದೇಶದಲ್ಲಿ ಸುಧಾರಣೆಯ ಹೆಸರಿನಲ್ಲಿ, ವಿಶೇಷವಾಗಿ ಶೈಕ್ಷಣಿಕ ರಂಗದಲ್ಲಿ, ಹೇಗೆ ಪ್ರಗತಿವಿರೋಧಿ ಶಕ್ತಿಗಳು ಕೆಲಸ ಮಾಡುತ್ತವೆಯೆಂಬುದು ವ್ಯಕ್ತವಾಗುತ್ತದೆ.

ಈಗ್ಗೆ ಕೆಲವು ವರ್ಷಗಳ ಹಿಂದೆ ನನ್ನ ಮಿತ್ರರೊಬ್ಬರು ಪಾವಟೆಯವರ ಸೂಕ್ಷ್ಮ ವಿವೇಚನಾ ಶಕ್ತಿಗೆ ಇನ್ನೊಂದು ಉದಾಹರಣೆ ನೀಡಿದರು. ಆಗ ಸುರತ್ಕಲ್ ಇಂಜಿ ನಿಯರಿಂಗ್ ಕಾಲೇಜಿಗೆ ಪಾವಟೆಯವರು ಪ್ರಥಮ ವರ್ಷದ ಇಂಜನಿಯರಿಂಗ್ ವಿದ್ಯಾರ್ಥಿಗಳ ಆಯ್ಕೆ ಸಮಿತಿಯಲ್ಲಿ ಕೆಲಸ ಮಾಡುತ್ತಿದ್ದರು. ವಿದ್ಯಾರ್ಥಿಗಳ

ಸಂದರ್ಶನದಲ್ಲಿ ಪಾವಟೆಯವರು ಆಯಾ ವಿದ್ಯಾರ್ಥಿಯ ಶೈಕ್ಷಣಿಕ ಪರಿಸರವನ್ನು ವಿವರವಾಗಿ ತಿಳಿದುಕೊಂಡು ಅವನ ಗುಣಮಟ್ಟವನ್ನು ನಿರ್ಧರಿಸುತ್ತಿದ್ದರಂತೆ. ಉದಾಹರಣೆಗೆ, ಸುಶಿಕ್ಷಿತ ತಂದೆತಾಯಿಗಳ ಮಗನಾಗಿ, ನಗರ ಪ್ರದೇಶದ ಶಿಕ್ಷಣ ಸೌಲಭ್ಯಗಳ ಪ್ರಯೋಜನ ಪಡೆದು ಶೇಕಡಾ ೬೦ ಅಂಕಗಳನ್ನು ಪಡೆದ ವಿದ್ಯಾರ್ಥಿ, ಗ್ರಾಮೀಣ ಪ್ರದೇಶದಲ್ಲಿ ಓದಿ, ಅನಕ್ಷರಸ್ಥ ತಂದೆತಾಯಿಗಳ ಆಶ್ರಯದಲ್ಲಿ ಬೆಳೆದು ಶೇಕಡಾ ೪೫ ಅಂಕಗಳಿನ್ನು ಪಡೆದ ವಿದ್ಯಾರ್ಥಿಗಿಂತ ಶ್ರೇಷ್ಠ ಎಂದು ಹೇಳಲಾಗದು ಎಂಬುದು ಪಾವಟೆಯವರ ಅಭಿಪ್ರಾಯ. ಅಲ್ಲದೆ ತನ್ನ ವಂಶದಲ್ಲಿ ಯಾರೂ ಎಂದೆಂದೂ ಅಕ್ಷರದ ಮುಖವನ್ನೇ ಕಾಣದ ಕುಟುಂಬದಿಂದ ಹೊರಗೆ ಕಾಲಿಟ್ಟ ವಿದ್ಯಾರ್ಥಿಯು ಪಡೆದ ಅಂಕಗಳನ್ನು ಅಕ್ಷರವೇ ಆಸ್ತಿಯಾಗಿ ಉಳ್ಳ ಜಾತಿಯ ವಿದ್ಯಾರ್ಥಿ ಪಡೆದ ಅಂಕಗಳಿಗೆ ಹೋಲಿಸಬಾರದೆಂಬುದೂ ಪಾವಟೆಯವರಿಗೆ ಮನವರಿಕೆಯಾಗಿತ್ತು.

ಶಿಕ್ಷಣದ ಬಹುಮುಖ ಸಮಸ್ಯೆಗಳ ನಿಕಟ ಪರಿಚಯವಿದ್ದ ಪಾವಟೆಯವರೂ ಸಹ ಯಾವುದೇ ಮೂಲಭೂತ ಬದಲಾವಣೆ ಮಾಡಲಾರದೆ ಹೋದದ್ದು ನಮ್ಮ ವ್ಯವಸ್ಥೆಯ ಕಪಿಮುಷ್ಠಿಯ ಪ್ರಬಲತೆಗೆ ಸಾಕ್ಷಿ ಮಾತ್ರ.

ಹರಿಹರನ ಬಸವಣ್ಣ

ಬಸವರಾಜ ಮಲಶೆಟ್ಟಿ

ನಮ್ಮ ಪ್ರಾಚೀನ ಸಾಹಿತ್ಯಕ್ಕೆ ಧರ್ಮ ಮುಖ್ಯ ಪ್ರೇರಣೆ. ಕಾವ್ಯ ವಸ್ತುವಿನ ಆಯ್ಕೆಗೆ ಧಾರ್ಮಿಕ ಪುರುಷರ ಜೀವನ ಅಕ್ಷಯ ನಿಧಿ. ಧರ್ಮ ಒಂದು ಮೌಲ್ಯವಾಗಿದ್ದರಿಂದ ಆಯಾ ಮತದ ಕವಿಗಳು ತಮ್ಮ ತಮ್ಮ ಧರ್ಮದ ವ್ಯಕ್ತಿ-ತತ್ವಗಳನ್ನು ಕುರಿತು ಬರೆಯುವದರಲ್ಲಿ ಧನ್ಯತೆ ಕಂಡುಕೊಂಡರು. ಇಂಥ ಹಿನ್ನೆಲೆಯಲ್ಲಿ ಹರಿಹರ ಗಮನಾರ್ಹ ಕವಿ. ಮೊದಲಬಾರಿಗೆ ಶಿವಭಕ್ತರ ಕಥಾರಾಶಿಯನ್ನು ಕನ್ನಡಿಗರ ಮುಂದೆ ಸುರಿದು ಕನ್ನಡ ಶಿವಪರ ಸಾಹಿತ್ಯದ ಆದ್ಯ ಪ್ರವರ್ತಕನಾಗಿದ್ದಾನೆ. ಹಾಗೇ ಮತನಿಷ್ಠೆಯ ಉತ್ಸಾಹದ ಭರದಲ್ಲಿ ಮುಗ್ಧಭಾವುಕತೆ ಮತ್ತು ಅವೈಚಾರಿಕ ಧೋರಣೆಗಳ ಬೀಜ ಬಿತ್ತಿದ್ದಾನೆ. ಧಾರ್ಮಿಕ ಮೌಢ್ಯ, ಅರ್ಥಹೀನ ಸಂಪ್ರದಾಯ, ಪುರೋಹಿತಶಾಹಿಯ ದಬ್ಬಾಳಿಕೆ, ಜೀವ ವಿರೋಧಿ ವರ್ಗ-ವರ್ಣವ್ಯವಸ್ಥೆ ಮುಂತಾದವುಗಳನ್ನು ಪ್ರತಿಭಟಿಸಿ ಸಿಡಿದೆದ್ದ ಕಲ್ಯಾಣ ಕ್ರಾಂತಿಯ ಕಾಲಕ್ಕೆ ತೀರ ಸಮೀಪವವನಾದ ಹರಿಹರ ತನ್ನ ಕೃತಿಗಳಲ್ಲಿ ಆ ಕ್ರಾಂತಿಯ ತತ್ವಗಳ ಜೀವ ಹಿಂಡಿರುವುದು ಅಚ್ಚರಿಯ ಸಂಗತಿ.

'ಬಸವರಾಜ ದೇವರರಗಳೆ' ಹರಿಹರನ ಪ್ರಮುಖ ಕೃತಿಗಳಲ್ಲಿ ಒಂದೆಂಬುದರಲ್ಲಿ ಸಂಶಯವಿಲ್ಲ. ಇದಕ್ಕೆ ಕಾರಣವನ್ನು ವಿದ್ವಾಂಸರು ಹೀಗೆ ಗುರುತಿಸಿದ್ದಾರೆ- ಹರಿಹರನು "ಬಸವಣ್ಣನವರಿಗೆ ಅತಿಸಮೀಪದವನಾದುದರಿಂದಲೂ ಇತರ ಕವಿಗಳಿಗೆ ದೊರೆಯದೆ ಇದ್ದ ಸಾಮಗ್ರಿಯು ಹರಿಹರ ಕವಿಗೆ ದೊರೆತುದರಿಂದಲೂ, ಹರಿಹರ ಕವಿಯ ದೃಷ್ಟಿ ಚರಿತ್ರಾಂಶಗಳ ಕಡೆಗೆ ವಿಶೇಷವಾಗಿದ್ದುದರಿಂದಲೂ ಹಾಗೂ ಚಿಕ್ಕವನಾಗಿರುವಾಗಿನಿಂದ ದೊಡ್ಡವನಿರುವಾಗಲೂ ಬಸವಣ್ಣನವರನ್ನು ಕಂಡಿರಬಹುದಾದುದರಿಂದಲೂ ಈ ಕವಿಯು ಚಿತ್ರಿಸಿದ ಬಸವಣ್ಣನವರ ಚಿತ್ರವು ಇತರ ಕವಿಗಳ ಚಿತ್ರಣಕ್ಕಿಂತ ಭಿನ್ನವಾಗಿಯೂ ಸಹಜ ಸುಂದರವಾಗಿಯೂ ಕಂಗೊಳಿಸುವುದು."[೧] ಹೆಚ್ಚೂ

೧. ಡಾ. ಬಿ. ಸಿ. ಜವಳಿ-ಧರ್ಮಭಂಡಾರಿ ಬಸವಣ್ಣನವರು, ಪುಟ ೪

ಕವಿಮ್ಮ ಎಲ್ಲರೂ ಒಪ್ಪಿರುವ ಈ ಅಭಿಪ್ರಾಯವನ್ನು ಸೋಸಿ ನೋಡಬೇಕಾಗಿದೆ. ಹರಿಹರ ಬಸವಣ್ಣನಿಗೆ ಸಮೀಪದವ ನಿಜ. ಆದರೆ ಎಷ್ಟು ಸಮೀಪದವ? ಬಸವಣ್ಣ ತೀರಿಕೊಂಡದ್ದು ೧೧೬೭ರಲ್ಲಿ. ವಿವಿಧ ಐತಿಹಾಸಿಕ ಅಂಶಗಳ ಆಧಾರ ಮತ್ತು ಅಂತರ್ ಬಾಹ್ಯಪ್ರಮಾಣಗಳ ನಿರಂತರ ಚರ್ಚೆಯಿಂದ ಹರಿಹರ ೧೨೦೦ರ ನಂತರ ಕೃತಿ ರಚನೆಗೆ ತೊಡಗಿದನೆಂಬುವದು ಇಂದಿನ ಸಾಮಾನ್ಯ ನಂಬಿಗೆ. ಅಂದಮೇಲೆ ಅವನು ೧೧೭೦ರ ಮುಂಚೆ ಹುಟ್ಟಿರಲಾರ. ಆದ್ದರಿಂದ ಹರಿಹರ ಬಸವಣ್ಣನನ್ನು ನೋಡಿ ಪ್ರಭಾವಿತನಾಗಿದ್ದನೆಂಬಂದು ಆಧಾರವಿಲ್ಲದ ಕಲ್ಪನೆ ಮಾತ್ರ. ಆದರೆ ಬಸವಣ್ಣನ ಅಂತ್ಯದ ಕಾಲಕ್ಕೆ ತೀರ ಸಮೀಪದವನಾಗಿರುದ ಭಾಗ್ಯಶಾಲಿ ಹರಿಹರನಿಗೆ ಇತರ ಕವಿಗಳಿಗೆ ನಿಲುಕದ ಹೆಚ್ಚು ಖಚಿತವಾದ ಬಸವ ಜೀವನ ವೃತ್ತಾಂತಗಳು ದೊರೆತಿರುವ ಸಾಧ್ಯತೆಯಿದೆ. ಹಾಗಂತ ಹರಿಹರನು ಐತಿಹಾಸಿಕ ಪ್ರಜ್ಞೆಯಿಂದ ಬಸವಣ್ಣನ ಚರಿತ್ರೆಯನ್ನು ನಿರೂಪಿಸಿದ್ದಾನೆಂದು ತಿಳಿಯಬೇಕಿಲ್ಲ. ಏಕೆಂದರೆ ಹರಿಹರನಿಗೆ ಬಸವಣ್ಣನೊಬ್ಬ ಪುರಾತನ ಶಿವಭಕ್ತರ ಸಾಲಿನಲ್ಲಿ ನಿಲ್ಲುವ ಶಿವಭಕ್ತ; ಮಾತ್ರ ಐತಿಹಾಸಿಕ ವ್ಯಕ್ತಿಯಲ್ಲ. ಮೊದಲಸಲ ಬಸವಣ್ಣನ ತಲೆಗೆ ಅವತಾರದ ಆರೋಪ ಕಟ್ಟಿ ಅವನನ್ನು ಪವಾಡಪುರುಷನನ್ನಾಗಿಸಿದ ಹರಿಹರನಿಗೆ ಚರಿತ್ರಾಂಶಗಳ ಕಡೆಗೆ ಗಮನವೇ ಇಲ್ಲ. ಚರಿತ್ರೆ ಅವನಿಗೆ ಬೇಕಾಗಿಯೂ ಇಲ್ಲ. ಹರಿಹರನನ್ನೊಳಗೊಂಡು "ನಮ್ಮ ಕವಿಗಳಿಗೆ ವ್ಯಕ್ತಿಯ 'ಚರಿತ್ರೆ' ಮುಖ್ಯವಲ್ಲ–'ಚಾರಿತ್ರ್ಯ' ಮುಖ್ಯ. ಆ ಚಾರಿತ್ರ್ಯವನ್ನು ಪುರಾಣದ ನೆಲೆಗೇರಿಸಿ ಅತಿಶಯವನ್ನಾಗಿ ಮಾಡಿ ಹೇಳುವುದರಲ್ಲಿ ಆಸಕ್ತಿ"[೩] ಬಸವಣ್ಣ ಅಷ್ಟೊತ್ತಿಗಾಗಲೆ ಜನತೆಯ ಕಣ್ಣಲ್ಲಿ ದೈವೀಪುರುಷನಾಗಿ ನೆಲೆಯೂರಿರಬೇಕು. ಅವನ ಬಗ್ಗೆ ವರ್ಣರಂಜಿತ ಅತಿಶಯೋಕ್ತಿ ಅಂಶಗಳು ಪ್ರಸಾರವಾಗಿರಬೇಕು. ಹರಿಹರನಿಗೆ ಇವೇ ಆಕರ್ಷಕವಾಗಿ ಕಂಡವು. ಹೀಗಾಗಿ ಕಾಲದ ದೃಷ್ಟಿಯಿಂದ ಬಸವಣ್ಣನಿಗೆ ಸಮೀಪದವನಾದ ಹರಿಹರ ಅವನನ್ನು ಮಾನವೀಯ ದೃಷ್ಟಿಯಿಂದ ಹತ್ತಿರದಿಂದ ಕಾಣದೆ ದೂರ ನಿಂತು ಪವಾಡಗಳ ದುರ್ಬಿನಿಯಿಂದ ಕಂಡದ್ದರಿಂದ ಹರಿಹರನ ಬಸವಣ್ಣನ ಚಿತ್ರ ಆಕರಾಳವಿಕರಾಳ ಆಗಿದೆ. ಅದು ಖಂಡಿತವಾಗಿಯೂ ಮೂಲ ಚಿತ್ರವಲ್ಲ. ಅಂದಮೇಲೆ "ಒಂದು ಪುರಾಣವು ಎಷ್ಟು ಹಿಂದಿನದೋ ಅಷ್ಟು ಹೆಚ್ಚು ವಿಶ್ವಾಸಾರ್ಹವಾದುದು. ಈ ದೃಷ್ಟಿಯಿಂದ ಬಸವರಾಜದೇವರ ರಗಳೆ......ಹೆಚ್ಚು ಆದರಣೀಯವಾಗುತ್ತದೆ"[೪] ಎಂಬ ಮಾತನ್ನು ಒಪ್ಪಲಿಕ್ಕಾಗದು.

ಬಸವಣ್ಣ ದೈವೀಪುರುಷನೆಂಬ ಪೂರ್ವಗ್ರಹ ಅಚಲ ನಂಬಿಕೆಯೊಂದಿಗೆ ಹರಿಹರ ಕೃತಿ

೩. ಡಾ. ಜಿ. ಎಸ್. ಶಿವರುದ್ರಪ್ಪ–ಕವಿ ಹೃದಯ (ಕಸಾಪ ಪ್ರಕಟಣೆ), ಪುಟ ೪
೪. ಟಿ. ಎಸ್. ವೆಂಕಣ್ಣಯ್ಯ–ಬಸವರಾಜ ದೇವರ ರಗಳೆ–ಪೀಠಿಕೆ, ಪುಟ VIII

ರಚನೆಗೆ ತೊಡಗಿದ್ದಾನೆ. ಈ ಅಂಶ 'ಬಸವರಾಜ ದೇವರ ರಗಳೆ' ಎಂಬ ತಲೆಬರಹದಲ್ಲಿಯೇ ಸ್ಪಷ್ಟವಾಗಿದೆ. ಇಲ್ಲಿ ಬಸವಣ್ಣನ ಮೇಲೆ ರಾಜ ಮತ್ತು ದೇವರು ಎಂಬ ಎರಡು ಭಾರೀ ವಿಶೇಷಣಗಳ ಹೊರೆ ಹೇರಲಾಗಿದೆ. ಮಂತ್ರಿಯಾಗಿದ್ದ ಬಸವಣ್ಣ ಹರಿಹರನ ಲೆಕ್ಕದಲ್ಲಿ 'ರಾಜ' ಪ್ಲಸ್ 'ದೇವರು'. ಇಂಥ ಗುಣ ವಿಶೇಷಗಳ ಹೊರೆ ಹೊತ್ತವನು ಸಾಮಾನ್ಯ ವ್ಯಕ್ತಿಯಾಗಿರಲು ಹೇಗೆ ಸಾಧ್ಯ ? ಬಸವಣ್ಣ 'ರಾಜ' ಮತ್ತು 'ದೇವರು' ಎಂಬುದನ್ನು ಸಮರ್ಥಿಸಿಕೊಳ್ಳಲು ಹರಿಹರ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿದ್ದಾನೆ. ಬಸವಣ್ಣನಿಗೆ ಮಂತ್ರಿ ಪದವಿ ದೊರೆತ ಸಂದರ್ಭದ ವರ್ಣನೆ ರಾಜೋಚಿತವಾದುದು. (೬ನೇ ಸ್ಥಲದ ಕೊನೆಯಲ್ಲಿ) ಮಂತ್ರಿ ಬಸವಣ್ಣ ತನ್ನ ದಿನನಿತ್ಯದ ಕಾರ್ಯ ನಿರ್ವಹಿಸಲು ಬಿಜ್ಜಳನ ಅರಮನೆಗೆ ಹೊರಟಾಗಿನ ವರ್ಣನೆ (೬/೬–೧೦) ಮಂತ್ರಿಯ ಗೌರವಕ್ಕೆ ಮೀರಿದ್ದು ಮತ್ತು ರಾಜನಿಗೆ ಮಾತ್ರ ಸಲ್ಲಬೇಕಾದುದು. ಆದರೆ ಇಡೀ ಕಾವ್ಯದಲ್ಲಿ ಸ್ವತಃ ರಾಜನಾದ ಬಿಜ್ಜಳನಿಗೆ ಇಂಥ ಗೌರವ ಎಲ್ಲಿಯೂ ದಕ್ಕಿಲ್ಲ. ಮಂತ್ರಿ ಬಸವಣ್ಣನಿಗೆ ಇದನ್ನು ಅನ್ವಯಿಸುವುದರ ಹಿಂದಿರುವ ಭಾವ ಸ್ಪಷ್ಟವಿದೆ. ಇದೇ ರೀತಿ ಬಸವಣ್ಣನು 'ದೇವರ' ನೆಲೆಗೇರಿರುವ ಕಾರಣಿಕ ಪುರುಷನೆಂಬುದನ್ನು ಹರಿಹರ ಪುನಃ ಪುನಃ ಸಾರಿ ಹೇಳಿದ್ದಾನೆ. ಬಸವನ ಜನನ ಸಂದರ್ಭದಲ್ಲಿ "ಕಾರಣಿಕ ಶಿಶು ಜನಿಯಿಸಿದನನುವಾಗೆ" (೧/೧೩೦) ಎಂದಿದ್ದಾನೆ. ಮುಂದೆ "ಕಾರಣಿಕನಪ್ಪ ಬಸವಂ" (೨/೧), "ಕಾರಣಿಕ ಪುರುಷಂ" (೨/೩೬) "ಕಾರಣಿಕನಾಗಲೆವೇಳ್ಕುಂ" (೨/೬೧) ಮುಂತಾದ ಮಾತುಗಳು ಆಗಾಗ ಬರುತ್ತವೆ. ಹೀಗೆ ಬಸವಣ್ಣ ದೈವೀಪುರುಷನೆಂಬ ನಂಬಿಗೆಯ ಬುನಾದಿಯ ಮೇಲೆ ಹರಿಹರ ತನ್ನ ಕಾವ್ಯದ ಕಟ್ಟಡ ಕಟ್ಟಿದ್ದಾನೆ.

ಬಸವಣ್ಣನ ಕ್ರಾಂತಿ ಅಂದಿನ ಕರ್ನಾಟಕದ ಧಾರ್ಮಿಕವಲಯದಲ್ಲಿ ಬಹಳಷ್ಟು ಕೋಲಾಹಲ ಎಬ್ಬಿಸಿದ್ದು ಸಹಜ. ಅಲ್ಲಿಯವರೆಗೆ ಪ್ರಬಲವಾಗಿದ್ದ ಜೈನ, ಬ್ರಾಹ್ಮಣಗಳು ಅನಿವಾರ್ಯವಾಗಿ ಹೊಸ ವೀರಶೈವದೊಂದಿಗೆ ಹೋರಾಡಬೇಕಾಯಿತು. ಹೀಗೆ ಬಹಿರಂಗ ಸ್ಪರ್ಧೆಗೆ ನಿಂತ ಮೂರು ಮತಗಳು ಪರಸ್ಪರ ಅವಹೇಳನ ಮತ್ತು ಸ್ವಮತದ ಬಿರುಸಿನ ಪ್ರಚಾರಕ್ಕೆ ತೊಡಗಿದ್ದವು. ಇಂಥ ಬಿಸಿ ವಾತಾವರಣದಲ್ಲಿ ಕೃತಿ ರಚನೆ ಮಾಡಿರುವ ಹರಿಹರ ತನ್ನ ಕೃತಿಗಳ ಮೂಲಕ ಸ್ವಮತ ಪ್ರಚಾರ ಮತ್ತು ಪರಮತದೂಷಣೆಗೆ ಕೈ ಹಾಕಿದ್ದು ಅಚ್ಚರಿಯ ಮಾತಲ್ಲ. ಈ ಉದ್ದೇಶದಿಂದ ಬಸವಣ್ಣನಿಗೆ ನಾಯಕನ ಗುಣಗಳನ್ನು ಆರೋಪಿಸಿದ್ದಾನೆ. ಪರಮತಗಳನ್ನು ಗೆಲ್ಲುವುದು ಬಸವಣ್ಣನ ಜೀವಿತ ಪ್ರಮುಖ ಗುರಿಗಳಲ್ಲೊಂದು ಎಂಬ ಭಾವನೆ ಹರಿಹರನಲ್ಲಿದೆ. ಬಾಲಕ ಬಸವಣ್ಣ "ಪರಸಮಯಕ್ಕುಬ್ಬಸವಂ ಮಾಡುತ...... ಬೆಳೆಯುತಿರ್ದಂ" (೧ನೇ ಸ್ಥಲದ ಕೊನೆಯ ಕಂದ) ಎಂದು ಹೇಳಿರುವುದು ಮತ್ತು

"ಪರಸಮಯ ಮೇಘಮಹಾಬಲಂ" (೬/೭೮), "ಪರಸಮಯ ಸುಮನಕೋದಂಡ ಪುರಹರ" (೧೦/೨೧೫) ಹೀಗೆ ಬಸವಣ್ಣನನ್ನು ಹೊಗಳಿರುವುದರ ಉದ್ದೇಶ ಸ್ಪಷ್ಟ ಏದೆ. ಈ ರೀತಿ ತನ್ನ ಸ್ವಂತ ವಿಚಾರಗಳ ಪ್ರತಿಪಾದನೆಗಾಗಿ ಹರಿಹರ ಬಸವಣ್ಣನನ್ನು ಸಂಕುಚಿತ ಮನಸ್ಸಿನ ದುರಭಿಮಾನಿ ಜಗಳಗಂಟ ಹುಂಬನನ್ನಾಗಿ ಮಾಡುವುದರ ಮೂಲಕ ಮೂಲ ಬಸವಣ್ಣನ ಚಿತ್ರಕ್ಕೆ ಮಸಿಬಳಿದು ಅಂದಕೆಡಿಸಿದ್ದಾನೆ.

ಬಸವಣ್ಣನ ವ್ಯಕ್ತಿತ್ವದ ಆಳ–ಸಂಕೀರ್ಣತೆಗಳನ್ನರಿಯಲು, ಆ ಕಾಲದ ಸಾಮಾಜಿಕ ಸಂಘರ್ಷಣೆಯ ನಿಜಸ್ವರೂಪ ಕಂಡುಕೊಳ್ಳಲು, ಕ್ರಾಂತಿಕಾರರ ಹೊಸ ತತ್ವಗಳ ಅನ್ವಯದ ಸಂದರ್ಭದಲ್ಲಿ ಉಂಟಾಗಿರಬಹುದಾದ ಹಳೆ–ಹೊಸತುಗಳ ತಾಕಲಾಟದ ಯಥಾರ್ಥ ನೀಡಲು ಹರಿಹರ ಪ್ರಯತ್ನಿಸಿಲ್ಲ. ಅವನ ಧೋರಣೆ. ಗುರಿ ತೀರಾ ಸರಳ ಹೀಗಿರುವಾಗ "......ಈ ಕೃತಿಯಲ್ಲಿ ಎರಡು ಯುಗಧರ್ಮಗಳ ಹೋರಾಟವೆಂಬಂತೆ ಹಳೆಯ ಮೌಲ್ಯ ಮತ್ತು ಹೊಸ ಮೌಲ್ಯಗಳ ಸಂಘರ್ಷಣೆ ಉದ್ದಕ್ಕೂ ಸಾಗಿದುದು, ಹೊಸ ಮೌಲ್ಯ ಕಾಲೂರುತ್ತಿದ್ದುದು ಕಂಡು ಬರುತ್ತದೆ"[೪] ಎಂಬ ಅಭಿಪ್ರಾಯವನ್ನು ಒಪ್ಪಲಿಕ್ಕಾಗದು, ಹರಿಹರನ ಧಾಟಿಯಲ್ಲಿ ಕಾರಣಿಕ ಬಸವಣ್ಣನ ಕಥೆಯನ್ನು ಯಾವ ಕಾಲಕ್ಕೆ ಯಾರಾದರೂ ಬರೆಯಬಹುದು. (ಕೆಲವು ಅಂಶಗಳನ್ನು ಹೊರತುಪಡಿಸಿ ಮುದಿನವರು ಬರೆದಿದ್ದಾರೆ ಕೂಡ.) ಹರಿಹರನು ಹೇಳಿದ ಪವಾಡಪರಂಪರೆಯನ್ನೇ ಮುಂದಿನವರು ನಡೆಸಿಕೊಂಡು ಬಂದರು. ಅಂದಾಗ ಬಸವರಾಜ ದೇವರ ರಗಳೆಯಲ್ಲಿ ಕಾಲನಿಷ್ಠ ಮೌಲ್ಯಪ್ರತಿಪಾದನೆಯನ್ನು ಹುಡುಕುವುದು ವ್ಯರ್ಥ ಪ್ರಯತ್ನವಲ್ಲವೇ?

ಹರಿಹರನ ವ್ಯಕ್ತಿತ್ವ ಮತ್ತು ಸಾಹಿತ್ಯಕ ಧೋರಣೆಗಳನ್ನು ಅರಿತುಕೊಂಡರೆ ಬಸವಣ್ಣನ ಬಗ್ಗೆ ಹೀಗೇಕೆ ಬರೆದನೆಂಬುದಕ್ಕೆ ಸಮಾಧಾನ ಗೋಚರಿಸುತ್ತದೆ. ಹರಿಹರ ಮೂಲತಃ ನಿಷ್ಠಾವಂತ ವೀರ ಶಿವಭಕ್ತ. ನಂತರ ಕವಿ ಶಿವಪಾರ್ಯವನ್ನು, ಶಿವಭಕ್ತರ ಲೀಲೆಗಳನ್ನು ಹೇಳಲು ಸಾಹಿತ್ಯಮಾಧ್ಯಮ ಅವಲಂಬಿಸಿದ್ದಾನೆ. ಅವನಿಗೆ ದೊರೆತ ಬಹು ದೊಡ್ಡ ಆಕರ ತಮಿಳುನಾಡಿನ ಶಿವಭಕ್ತರ ಕಥೆಗಳು (ಪೆರಿಯ ಪುರಾಣ). ಸರಿ. ತಮಿಳು ಕಥೆಗಳನ್ನು ಉತ್ಸಾಹದಿಂದ ಕನ್ನಡದಲ್ಲಿ ಪುನರ್ರಚಿಸಿದ. ಅವನ್ನು ಬರೆದಿರುವ ರಗಳೆ–ಗಳಲ್ಲಿ ಶೇಕಡ ೬೦ ರಗಳೆಗಳು ಈ ತಮಿಳುನಾಡಿನ ಶಿವಭಕ್ತರನ್ನು ಕುರಿತಾಗಿವೆ. ಅದೇ ಧಾಟಿ-ಧೋರಣೆಯಲ್ಲಿ ನೂತನರ (ಬಸವಾದಿಗಳ) ಕಥೆಗಳನ್ನು ಬರೆದ. ಹರಿಹರನ ದೃಷ್ಟಿಯಲ್ಲಿ ಅವರಿಬ್ಬರಲ್ಲಿ–ನೂತನ–ಪುರಾತನರಲ್ಲಿ–ವ್ಯತ್ಯಾಸವಿಲ್ಲ. ಪುರಾತನರು ಪುರಾಣ ಲೋಕಕ್ಕೆ ಸೇರಿದವರು; ನೂತನರು ಐತಿಹಾಸಿಕ ವ್ಯಕ್ತಿಗಳು ಎಂಬ

---

೪. ಡಾ. ಎಂ. ಎಂ. ಕಲಬುರ್ಗಿ-ಬಸವಮಾರ್ಗ-I ಪುಟ ೩೫ (ಕ. ವಿ. ವಿ, ಪ್ರಕಟಣೆ)

ಸರಳ ವಿಚಾರವೂ ಹರಿಹರನಲ್ಲಿ ಸುಳಿಯಲಿಲ್ಲ. ಇದಕ್ಕೆ ಕಾರಣ ತೀವ್ರವಾದ ಶಿವ ಭಕ್ತಿ. ಶಿವಭಕ್ತರೆಲ್ಲ ಒಂದೇ. ಅವರ ಜೀವನ ವೃತ್ತಾಂತಗಳ ಸ್ವರೂಪ ಒಂದೇ ಎಂಬುದು ಹರಿಹರನ ಅಚಲ ವಿಶ್ವಾಸ. ಹೀಗಾಗಿ ಪುರಾತನರ ಗುಣವಿಶೇಷಗಳನ್ನು ನೂತನರ ತಲೆಗೆ ಕಟ್ಟಿದ. ಭಕ್ತಿ—ಭಾವುಕತೆ—ಮುಗ್ಧತೆ—ಅವೈಚಾರಿಕತೆ—ಪವಾಡ ಹೀಗೆ ಒಂದಕ್ಕೊಂದು ತಳಕು ಹಾಕಿಕೊಳ್ಳುತ್ತವೆ. ಈ ದೃಷ್ಟಿಯಿಂದ ಹರಿಹರನ ಬಸವಣ್ಣ ಪುರಾತನ ನೂತನ ಶಿವಭಕ್ತರ ಗುಂಪಿನಲ್ಲಿ ಗೋವಿಂದಾ ಆಗಿದ್ದಾನೆ, ಅವನಿಗೆ ಸ್ವಂತಿಕೆ ಇಲ್ಲವೆಂಬುದನ್ನು ಉದಾಹರಣೆಗಳ ಮೂಲಕ ಕಂಡುಕೊಳ್ಳಬಹುದು.

ಮೊದಲನೆಯದು-ಅವತಾರದ ಕಲ್ಪನೆ. ಬಸವಣ್ಣನಿಗೆ ಕೇವಲ ಒಂದು ತಲೆಮಾರು ಈಚೆಗಿದ್ದ ಹರಿಹರ,ಬಸವಣ್ಣನ ಬಗ್ಗೆ ಬರೆಯುವಾಗ ಐತಿಹಾಸಿಕ ದೃಷ್ಟಿಕೋನವನ್ನು ಬಿಟ್ಟು ಪೌರಾಣಿಕ ನಿಲುವನ್ನು ಅನುಸರಿಸಿದ. ಪ್ರಥಮ ಬಾರಿಗೆ ಬಸವಣ್ಣನನ್ನು ಅವತಾರ ಪುರುಷನೆಂದು ಹೇಳುವುದರ ಮೂಲಕ ಹರಿಹರ ಬಸವಣ್ಣನ ಚರಿತ್ರೆಯ ಹಳಿ ತಪ್ಪಿಸಿದ್ದಾನೆ. ಮುಂದಿನವರು ಹಾಗೇ ನಂಬಲು ದಾರಿ ಮಾಡಿಕೊಟ್ಟಿದ್ದಾನೆ. ಕೈಲಾಸದಲ್ಲಿ ಶಿವನ ಒಡ್ಡೋಲಗ. ಮಾಲೆಗಾರನೊಬ್ಬ ಸಂಪಿಗೆ ಹೂಗಳನ್ನು ತಂದು ಕೊಟ್ಟ. ಶಿವನು ಅವುಗಳನ್ನು ಹಂಚಲು ವೃಷಭಮುಖನೆಂಬವನಿಗೆ ಆಜ್ಞಾಪಿಸಿದ. ಅವನು ಷಣ್ಮುಖನೊಬ್ಬನನ್ನು ಬಿಟ್ಟು ಎಲ್ಲರಿಗೂ ಹಂಚಿದ. ಷಣ್ಮುಖನ ದೂರು, ವೃಷಭಮುಖ ಕೊಡದಿದ್ದರೂ ಕೊಟ್ಟಿರುವೆನೆಂದು ಸುಳ್ಳನ್ನು ಸಮರ್ಥಿಸಿಕೊಂಡ. ಶಿವ ಶಾಪ ನೀಡಿದ-ಇಲ್ಲಿ ಪ್ರಸಾದ ವಿನಿಯೋಗದಲ್ಲಿ ತಪ್ಪು ಮಾಡಿದ್ದಕ್ಕಾಗಿ ಭೂಲೋಕಕ್ಕೆ ಹೋಗಿ ಧಾರಾಳವಾಗಿ ಪ್ರಸಾದ ವಿನಿಯೋಗಿಸಿ ಬಾ-ಎಂದು. ಇದು ಬಸವಣ್ಣನ ಅವತಾರಕ್ಕೆ ಹರಿಹರ ನೀಡುವ ಕಾರಣ. ಹರಿಹರನ ಈ ಅವತಾರ ಕಲ್ಪನೆ ಕೇವಲ ಬಸವಣ್ಣನೊಬ್ಬನಿಗೆ ಸಂಬಂಧಿಸಿದ್ದಲ್ಲ. ಶಿವಲೋಕದಲ್ಲಿ ತಪ್ಪು ಮಾಡಿ ಭೂಲೋಕದಲ್ಲಿ ಅವತರಿಸುವುದನ್ನು ಹರಿಹರನು ಅಲ್ಲಮಪ್ರಭು, ಅಕ್ಕ ಮಹಾದೇವಿ, ರೇವಣಸಿದ್ಧ, ನಂಬಿಯಣ್ಣ ಇವರಿಗೆಲ್ಲ ಅನ್ವಯಿಸಿದ್ದಾನೆ. ಅಂದರೆ ಪರಿಹರನ ಖಾಸಾ ಫಾರ್ಮುಲಾ, ಅಂದಾಗ ಬಸವಣ್ಣ ಅಷ್ಟು ಜನರಲ್ಲಿ ತಾನೂ ಒಬ್ಬನಾಗಿ ಈ ಫಾರ್ಮುಲಾಕ್ಕೆ ಬಲಿಯಾಗಿದ್ದಾನೆ. ಹರಿಹರನ ಈ ಫಾರ್ಮುಲಾವನ್ನು ಮುಂದಿನವರು ತಿರಸ್ಕರಿಸಿದರು. ನಂದಿ ಭೂಲೋಕದ ಉದ್ಧಾರಕ್ಕೆ (ಯಾವ ತಪ್ಪನ್ನೂ ಮಾಡದೆ) ಬಸವಣ್ಣನಾಗಿ ಅವತಾರ ತಾಳಿದನೆಂದು ಹೇಳುವುದು ಪರಂ-ಪರೆಯಾಗಿ ಬೆಳೆಯಿತು. ಹೀಗೆ ತಮತಮಗೆ ಸರಿಕಂಡಂತೆ ಅವತಾರದ ಕಾರಣವನ್ನು ಕಲ್ಪಿಸಿಕೊಳ್ಳುವುದನ್ನು ಗಮನಿಸಿದಾಗ ಇದು ತಳಬುಡವಿಲ್ಲದ ಮೂಢ ನಂಬಿಕೆಯೆಂಬುದು ಗೊತ್ತಾಗುತ್ತದೆ. ಇದು ಹರಿಹರನ ಕೊಡುಗೆ.

ಹರಿಹರ ಬಸವರಾಜ ದೇವರ ರಗಳೆಯ ಮೂರನೆಯ ಸ್ಥಲದಲ್ಲಿ–ಬಸವಣ್ಣನ ಶಿವ ಪೂಜಾನಿಷ್ಠೆಯನ್ನು ಸವಿವರವಾಗಿ ವರ್ಣಿಸಿದ್ದಾನೆ. ಆದರೆ ಈ ವಿಧಾನ–ವರ್ಣನೆ ಬಸವನ ವೈಯಕ್ತಿಕ ಗುಣವಿಶೇಷವಲ್ಲ. ಏಕೆಂದರೆ ಹರಿಹರನ ಸ್ವಂತ ದಿನಚರಿ ರೂಪದ ಪುಷ್ಪರಗಳೆಯ ಭಾವ ಕ್ರಿಯೆ ವಿಧಾನಗಳೆಲ್ಲ ಇಲ್ಲಿ ಸೇರ್ಪಡೆಯಾಗಿವೆ. ಅಲ್ಲದೆ ಇತರ ಶಿವಭಕ್ತರ ರಗಳೆಗಳಲ್ಲಿ ಬರುವ ಇಂಥ ವರ್ಣನೆಗಳಿಗೂ ಇದಕ್ಕೂ ಬಹಳಷ್ಟು ಸಾಮ್ಯತೆಯಿದೆ. ತನಗೆ ಮತ್ತು ಇತರರಿಗೆ ಅನ್ವಯಿಸುವ ಪೂಜಾ ವ್ಯವಹಾರವನ್ನು, ಹರಿಹರ ಬಸವಣ್ಣನಿಗೂ ಅನ್ವಯಿಸುವುದರ ಮೂಲಕ ಅವನನ್ನು ಸಾಮಾನ್ಯೀಕರಿಸಿದ್ದಾನೆ. ಜಂಗಮರನ್ನು ಎದುರುಗೊಳ್ಳುವುದು, ಅವರಿಗೆ ಸಲ್ಲಿಸುವ ಕಿಂಕರ ಭಾವದ ಸೇವಾವೃತ್ತಿ, ಶಿವಪರವಾದ ಉಗ್ರಭಕ್ತಿ, ಪೂಜಾ ಸಂದರ್ಭದ ಉನ್ಮಾದ ಗದ್ಗದಿಕೆ ಬಿಕ್ಕಳಿಕೆಗಳು ಇವೆಲ್ಲ ಇತರರಲ್ಲಿ ಮತ್ತು ಬಸವಣ್ಣನಲ್ಲಿ ಒಂದೇ ವಿಧವಾಗಿ ಮೂಡಿವೆ. ಕಂಬಳಿ ನಾಗಿದೇವನ ಮನೆಗೆ ಹೋದ ಬಗ್ಗೆ ಬಿಜ್ಜಳನು ಬಸವಣ್ಣನನ್ನು ಪ್ರಶ್ನಿಸಿದಾಗ ಬಸವಣ್ಣ ನೀಡುವ ಉತ್ತರ ಮತ್ತು ಕೆಂಭಾವಿ ಭೋಗಣ್ಣನೆಂಬ ಶರಣನು ಇಂಥದೇ ಸಂದರ್ಭದಲ್ಲಿ ನೀಡುವ ಉತ್ತರ ಒಂದೇ ರೀತಿಯಾಗಿವೆ, ಅವೇ ಶಬ್ದ, ಅವೇ ಮಾತುಗಳು.

ಹರಿಹರ ಬಸವಣ್ಣನನ್ನು ಇತರ ಕಾರಣಿಕ ವ್ಯಕ್ತಿಗಳ ಸಮಾನ ಸಾಲಿನಲ್ಲಿ ಹೇಗೆ ನಿಲ್ಲಿಸಿದ್ದಾನೆಂಬುದಕ್ಕೆ ಇನ್ನೂ ಕೆಲವು ಉದಾಹರಣೆಗಳನ್ನು ಅವಲೋಕಿಸಬಹುದು. ಸಾಮಾನ್ಯವಾಗಿ ಕಾರಣಿಕ ಶಿಶು ಹುಟ್ಟಿದ ಕೂಡಲೇ ಕಣ್ದೆರೆಯುವದಿಲ್ಲ. ಅವರ ಕಣ್ಮುಂದೆ ಶಿವಲಿಂಗ ಹಿಡಿದಾಗ ಕಣ್ದೆರೆಯುತ್ತದೆ. ಇದು ಮಾಮೂಲಿ ತಂತ್ರ. ಬಸವಣ್ಣ ಹುಟ್ಟಿದಾಗ ಶಿವಲಿಂಗ ನೋಡಿ ಕಣ್ದೆರೆದನೆಂದು ಹರಿಹರ ಹೇಳಿದ್ದಾನೆ. ಹೀಗೆ ಕಣ್ದೆರೆಯುವವನು ಬಸವಣ್ಣನೊಬ್ಬನೇ ಅಲ್ಲ. ಅದೇ ಹರಿಹರನ ಗಿರಿಜಾ ಕಲ್ಯಾಣದಲ್ಲಿ ಇಂಥ ಕಲ್ಪನೆ ಸೇರಿಸಿದ್ದಾನೆ. ಗಿರಿಜೆ ಹುಟ್ಟಿದಾಗ ಕಣ್ತೆರೆಯಲಿಲ್ಲ. ಗುರುಗಳು ಬಂದು ಹೇಳಿದರು–ಹಿಂದೆ ಬಾಣನೆಂಬ ಶಿವಭಕ್ತ ಹುಟ್ಟಿದಾಗಲೂ ಹೀಗೇ ಆಗಿತ್ತು. ಶಿವಲಿಂಗ ಕಣ್ಮುಂದೆ ಹಿಡಿದಾಗ ಕಣ್ದೆರೆದಿದ್ದ. ಈಗಲೂ ಹಾಗೇ ಮಾಡಿರಿ–ಎಂದು. ಸರಿ. ಶಿವಲಿಂಗ ನೋಡುತ್ತ ಗಿರಿಜೆ ಕಣ್ಬಿಟ್ಟಳು (ಗಿರಿಜಾಕಲ್ಯಾಣ ೩/೫೧-೫೪). ಸ್ವತಃ ಬಸವಣ್ಣನ ಮಗನು ಶಿವಲಿಂಗ ನೋಡಿ ಕಣ್ದೆರೆದುದನ್ನು ಹರಿಹರ ಬಸವರಾಜ ದೇವರ ರಗಳೆಯಲ್ಲಿ ಹೇಳಿದ್ದಾನೆ. (೧೦/೧೦೪) ಪ್ರಭುದೇವನು "ಲಿಂಗದಂಘ್ರಿಯೊಳೆ ನೋಟಂ ಪುಟ್ಟಿ" ಕಣ್ದೆರೆದನೆಂದು ಪ್ರಭುದೇವನ ರಗಳೆಯಲ್ಲಿ ವರ್ಣಿಸಿದ್ದಾನೆ. ಅಂದಮೇಲೆ ಬಾಣ, ಗಿರಿಜೆ, ಬಸವಣ್ಣ, ಅವನ ಮಗ ಮತ್ತು ಪ್ರಭುದೇವ ಹೀಗೆ ಅನೇಕರಿಗೆ ಸಂಬಂಧಿಸಿದ ಈ ವಿಧಾನ ಒಂದು ಮಾಮೂಲಿ ಪದ್ಧತಿಯಾಗಿ ಬೆಳೆದುಬಂದಿದೆ. ಇದರಲ್ಲಿ ಬಸವಣ್ಣನ ವೈಶಿಷ್ಟ್ಯವೇನೂ ಇಲ್ಲ.

ಪುರಾತನರ ಕಥೆಗಳನ್ನು ಹೆಣೆವ ಗುಂಗಿನಲ್ಲಿಯೇ ಹರಿಹರ ಬಸವಣ್ಣನ ಕಥೆ ಬರೆದು ಅವರ ಗುಣವಿಶೇಷಗಳನ್ನು ಇವನಲ್ಲಿ ಸೇರಿಸಿದ್ದಾನೆ. ಇಷ್ಟೇ ಅಲ್ಲ, ಅಲ್ಲಿಯ ಕೆಲವು ಪವಾಡಗಳನ್ನು ಅನಾಮತ್ತಾಗಿ ಎತ್ತಿಕೊಂಡು ಬಸವಣ್ಣನ ಮೇಲೆ ಹೇರಿದ್ದಾನೆ. ಬಸವರಾಜ ದೇವರ ರಗಳೆಯ ಹನ್ನೆರಡನೆಯ ಸ್ಥಲದಲ್ಲಿ ಒಂದು ಸಂದರ್ಭ ಹೀಗಿದೆ. ಶಿವನು ಬಸವಣ್ಣನ ದಾನಬುದ್ಧಿಯನ್ನು ಪರೀಕ್ಷಿಸಲು ವಿಟಜಂಗಮನ ವೇಷದಿಂದ ಬಂದು ಪೂಜೆ ಪ್ರಸಾದ ಇತ್ಯಾದಿ ಎಲ್ಲಾ ಆದ ಮೇಲೆ ನನಗೆ ಹೆಣ್ಣು ಬೇಕು ಎಂದು ಕೇಳುತ್ತಾನೆ. ಜಂಗಮನ ಆಸೆಯನ್ನು ನಿರ್ಲಕ್ಷಿಸಲಾದೀತೆ? ಬಸವಣ್ಣ ವೇಶ್ಯೆಯನ್ನು ಕರೆತರಲು ಆಳು ಕಳಿಸಿದ. ಯಾರೂ ಸಿಗಲಿಲ್ಲ. ಶಿವನ ತಂತ್ರದಿಂದಾಗಿ ಅವರೆಲ್ಲರ ಎಂಗೇಜ್ ಆಗಿರುತ್ತಾರೆ. ಬಸವಣ್ಣನಿಗೆ ಪೇಚಾಟಕ್ಕಿಟ್ಟುಕೊಂಡಿತು ಗಂಡನನ್ನು ಈ ಇಕ್ಕಟ್ಟಿನಿಂದ ಪಾರು ಮಾಡಲು ಬಸವಣ್ಣನ ಹೆಂಡತಿ ಮಾಯಾದೇವಿ ಅಲಂಕೃತಳಾಗಿ ಬಂದು ತಾನು ಜಂಗಮನ ಸೇವೆಗೆ ಅಣಿಯಾಗಿರುವುದಾಗಿ ತಿಳಿಸುತ್ತಾಳೆ. ಬಸವಣ್ಣ ಅತ್ಯಂತ ಸಂತೋಷದಿಂದ ಒಪ್ಪಿ ಅವಳನ್ನು ಜಂಗಮನ ಕೋಣೆಯೊಳಗೆ ಕಳಿಸಿ ತಾನು ಬಾಗಿಲು ಕಾಯುತ್ತ ಹೊರಗೆ ಕೂಡ್ರುತ್ತಾನೆ. ಒಳಗಿದ್ದ ವಿಟಜಂಗಮ ಸಂಗಮದೇವನಾಗಿ ಪ್ರತ್ಯಕ್ಷನಾದ. ಈ ಘಟನೆ ಬಸವಣ್ಣನ ಜೀವನದಲ್ಲಿ ಮಾತ್ರ ನಡೆದಂಥವಲ್ಲ. ಇಹಃಪಗೆಯಾಂಡ ಮತ್ತು ಸಿಂಧು ಬಲ್ಲಾಳರ ಕಥೆಗಳಲ್ಲಿ ಸ್ವಲ್ಪ ಹೆಚ್ಚೂಕಡಿಮೆ ಈ ಪ್ರಸಂಗ ವಿವರಿಸಲ್ಪಟ್ಟಿದೆ. ಇಹಃಪಗೆಯಾಂಡ ಒಬ್ಬ ರಾಜ. ಅವನಿಗೆ ನೂರಾರು ಜನ ರಾಣಿಯರಿರುತ್ತಾರೆ. ಅವಳಲ್ಲಿ ಪತಹಿತವೆ ಎಂಬವಳು ಅತಿ ಚಲುವೆ. ಅವಳ ಮೇಲೆ ಅವನಿಗೆ ಗಾಢವಾದ ಪ್ರೀತಿ. ಶಿವನು ವಿಟಜಂಗಮನಾಗಿ ಬಂದು ಅವಳನ್ನು ಕೇಳಿ ಪಡೆದುಕೊಂಡು ಜೊತೆಗೆ ಹೊರಡುತ್ತಾನೆ. ಪತಿಹಿತವೆಯ ಬಂಧುಗಳು ಪ್ರತಿಭಟಿಸುತ್ತಾರೆ. ಇಹಃಪಗೆಯಾಂಡ ಜಂಗಮನ ನೆರವಿಗೆ ನಿಲ್ಲುತ್ತಾನೆ. ಶಿವ ಪ್ರತ್ಯಕ್ಷನಾದ. ಇದೇ ರೀತಿ ಸಿಂಧು ಬಲ್ಲಾಳನ ಹೆಂಡತಿಯನ್ನು ಪಡೆದುಕೊಳ್ಳುತ್ತಾನೆ. ಅವಳು ನಿದ್ರೆಯಿಂದ ಎಚ್ಚತ್ತು ನೋಡುವಷ್ಟರಲ್ಲಿ ವಿಟಜಂಗಮನಾಗಿ ಬಂದ ಶಿವನು ಶಿಶುವಾಗಿ ಅವಳ ಮೊಲೆಯುಣ್ಣುತ್ತಿದ್ದನಂತೆ. ಅಂದಾಗ ಇಂಥ ಸನ್ನಿವೇಶಗಳು ಇತರ ಕಥೆಗಳಲ್ಲಿ ಪುನರಾವರ್ತನೆಗೊಂಡು ಕವಿಸಮಯದಂತೆ ಕಾಲ್ಪನಿಕ ನಂಬಿಗೆಗಳಾಗಿರುವುದರಿಂದಾಗಿ ಅವುಗಳಿಗೆ ಬಸವವಿಶೇಷತೆಯ ಗುಣಗಳಿಲ್ಲ. ಪೂಜಾ ಸಮಯದಲ್ಲಿ ಕಂಬಳಿ ನಾಗಿದೇವನು "ಓಹಿಲಯ್ಯಂಗೆ ಹಿತಾರ್ಥ ಉದ್ಭಟಯ್ಯಂಗೆ ಹಿತಾರ್ಥ ಬಸವರಾಜಂಗೆ ಹಿತಾರ್ಥ (೧೦/೧೦-೧೧) ಎಂದು ಹೇಳುತ್ತಿರುತ್ತಾನೆ. ಓಹಿಲ ಉದ್ಭಟರಂಥ ಪವಾಡ ಪುರುಷರ ಸಾಲಿನಲ್ಲಿ ಬಸವಣ್ಣನನ್ನು ಕೂಡ್ರಿಸಲು ಹರಿಹರನಿಗೆ ಸಂಕೋಚವೆನಿಸಿಲ್ಲ.

ಹರಿಹರ ಬಸವಣ್ಣನನ್ನು ಪುರಾತನರೊಂದಿಗೆ ಸಮೀಕರಿಸುವುದರ ಮೂಲಕ ತಪ್ಪು ದಾರಿ ತುಳಿದಿದ್ದಾನೆ. ವಾಸ್ತವವಾಗಿ ಶರಣರ ಜೀವನ, ಸಂದೇಶ ಮತ್ತು ಪುರಾತನರ

ಕಥೆ ಇವು ಒಂದಕ್ಕೊಂದು ವಿರುದ್ಧವಾಗಿವೆ. ಪ್ರಖರ ವೈಚಾರಿಕತೆ ಮತ್ತು ಮಾನವೀಯ ಗುಣಗಳನ್ನೊಳಗೊಂಡಿದ್ದ ಬಸವಾದಿ ಶರಣರು ಪವಾಡಗಳಂಥ ಅವೈಜ್ಞಾನಿಕ ಹೇಳಿಕೆಗಳನ್ನು ಎಂದಿಗೂ ಪುರಸ್ಕರಿಸಲು ಸಾಧ್ಯವಿಲ್ಲ. ಅಲ್ಲಮನ ವಚನವೊಂದು ಹೀಗಿದೆ—

ಅಂಗನೆಯ ಮೊಲೆ ಲಿಂಗವೇ ? ಬಳ್ಳಲಿಂಗವೇ ?
ಕಿತ್ತುಬಹ ಸಾಣೆ ಲಿಂಗವೇ ? ಆಡಿನ ಹಿಕ್ಕೆ ಲಿಂಗವೇ ?
ಮೆಚ್ಚುವರೆ ಪ್ರಮಥರು ? ಮೆಚ್ಚುವರೆ ಪುರಾತನರು ? ನಿಮ್ಮ ಭಕ್ತರು ?
ಭಾವ ಭ್ರಮೆಯಳಿದು ಗುಹೇಶ್ವರಾ ನಿಮ್ಮಲ್ಲಿ
ಅನಾದಿ ಸಂಸಿದ್ಧವಾದ ಜಂಗಮನರಿದಾತ ಬಸವಣ್ಣನೊಬ್ಬನೇ.

(ಅಲ್ಲಮ ಪ್ರಭುದೇವರ ವಚನಗಳು-೭೯೮-ಕ ವಿ ವಿ ಪ್ರಕಟಣೆ)

ಹಿಂದಿನವರ ಕಥೆಗಳಲ್ಲಿ ಅವೈಜ್ಞಾನಿಕ ಪವಾಡಗಳನ್ನು ಅಲ್ಲಮನು ಖಂಡಿಸಿದ್ದಾನೆ. ಅಂಥ ಪವಾಡಗಳ ಸಂಪರ್ಕವಿಲ್ಲದೆ ಬಸವಣ್ಣನು ಭಾವುಕತನದ ಭ್ರಮೆಯನ್ನು ಕಳೆದುಕೊಂಡು ನಿಚ್ಚಳನಾಗಿದ್ದಾನೆಂಬುದು ಅವನ ಅಭಿಪ್ರಾಯ. ಬಸವಣ್ಣನ ಈ ನಿಜ ವ್ಯಕ್ತಿತ್ವಕ್ಕೂ ಹರಿಹರನ ಬಸವಣ್ಣನಿಗೂ ಎಲ್ಲಿಂದೆಲ್ಲಿಯ ಸಂಬಂಧ ? ಹರಿಹರನು ಶರಣರು ಒಪ್ಪದ ಪವಾಡಗಳನ್ನು ಅವರ ತಲೆಗೇ ಕಟ್ಟಿ ಅವಹೇಳನ ಮಾಡಿದ್ದಾನೆ.

ಹರಿಹರನ ಬಸವಣ್ಣನ ಬೆಳವಣಿಗೆಯಲ್ಲಿ ಕ್ರಮಬದ್ಧತೆ ಔಚಿತ್ಯಗಳಿಲ್ಲ. ಹಲವಾರು ಅಪಕ್ವ ವಿಚಾರ, ಅತಿ ರಂಜಿತ ನಿರ್ಧಾರ, ಅಸಹಜ ನಡವಳಿಕೆಗಳಿಂದಾಗಿ ಬಸವಣ್ಣನ ವ್ಯಕ್ತಿತ್ವದಲ್ಲಿ ತರ್ಕಕ್ಕೆ ನಿಲುಕದ ವಿರಳಿತಗಳುಂಟಾಗಿವೆ. ಹರಿಹರನು ಬಸವಣ್ಣನನ್ನು ವೈಭವೀಕರಿಸುತ್ತಿದ್ದೇನೆಂದು ತಿಳಿದುಕೊಂಡಿರುವ ಸಂದರ್ಭಗಳಲ್ಲಿ ತನಗರಿವಿಲ್ಲದೆ ಅವನನ್ನು ಅಪಹಾಸ್ಯಕ್ಕೆ ಈಡುಮಾಡಿದ್ದಾನೆ. ಬಸವಣ್ಣ ಇನ್ನೂ ಹುಡುಗನಾಗಿದ್ದಾಗ ಅವನ ತಂದೆತಾಯಿಗಳು ತೀರಿಕೊಂಡರು. ಅವರ ಮರಣಕ್ಕೆ ಬಾಲಕ ಬಸವನ ಪ್ರತಿಕ್ರಿಯೆಯೇನು ? "ಬಸವರಾಜಂ ಪ್ರಸಿಯ ತಾಯ್ತುಂದೆಗಳ್ ಪೋದುದಂ ಕಂಡಾದರಂ ಮಿಕ್ಕು ಸಂಸಾರದ ಭಾರವಿಳಿದು ನಲಿನಲಿದಾಡಿ ಶಿವಭಕ್ತಿ ಮುತ್ತಂತಿರ್ದ ಮುತ್ತಜ್ಜಿಯ ಪಕ್ಕದೊಳು ನಾಲ್ಕೆರಡು ವರುಷಂ ಸುಖದೊಳಿರೆ..." (೨/೭-೯) ಎಂದು ಹರಿಹರ ಹೇಳಿದ್ದಾನೆ. ಸಾಕ್ಷಾತ್ ಶಿವನ ಮಗನಾದವನಿಗೆ ಈ ಲೋಕದ ತಂದೆ ತಾಯಿಗಳ ಅವಶ್ಯಕತೆಯೇನು ಎಂಬುದು ಹರಿಹರನ ಧೋರಣೆ. ಹರಿಹರನು ಇಲ್ಲಿ ಬಸವಣ್ಣನ ವೈರಾಗ್ಯಭಾವದ ತೀವ್ರತೆಯನ್ನು ವರ್ಣಿಸುವ ಭರದಲ್ಲಿ ಅವನ ಮಾನವೀಯ ಗುಣವನ್ನು ಸುಟ್ಟುಹಾಕಿದ್ದಾನೆ. ಪ್ರೀತಿ ಅನುಕಂಪೆ ದಯಾಗುಣಗಳಿದ್ದ

ಬಸವಣ್ಣನಿಗೆ ಇಂಥ ಒಣ ವೇದಾಂತ ಅನ್ವಯಿಸುವುದು ಮೂರ್ಖತನವಾಗುತ್ತದೆ. ಈ ಸಂದರ್ಭವನ್ನು "ಬಸವಣ್ಣನವರ ಅತ್ಯಂತ ವೈರಾಗ್ಯಪರವಾದ ಮನೋಧರ್ಮದ ಸಂಕೇತವಾಗಿದೆ ಎಂದೇನಾದರೂ ಸಮರ್ಥಿಸಲು ಹೊರಟರೆ ಅದು ಮನುಷ್ಯತ್ವ ವಿಲ್ಲದ ವೈರಾಗ್ಯವಾಗುತ್ತದೆ."[೫] ಇರಲಿ. ಹರಿಹರ ಈ ಧೋರಣೆಯನ್ನು ಕೊನೆಯ ವರೆಗೆ ಸಮತೂಕದಲ್ಲಿ ನಿರ್ವಹಿಸಿದ್ದಾನೆಯೇ ? ಇಲ್ಲ. ತಂದೆತಾಯಿಗಳು ಸತ್ತದ್ದಕ್ಕೆ ಸಂಸಾರ ಭಾರವಿಳಿಯಿತೆಂದು ಸಂತೋಷಪಟ್ಟ ಬಸವಣ್ಣ (ಸಂಸಾರ ಎಂದರೆ ಏನು ಎಂದು ತಿಳಿಯದ ಎಳೆವಯಸ್ಸಿನಲ್ಲಿ) ಆಮೇಲೆ ಆಶ್ರಯವನ್ನೇಕೆ ಬಯಸಿದ? ಮಂತ್ರಿ ಯಾದ ಮೇಲೆ "ಸತ್ಕುಲ ಸಾದೃಶ್ಯ ಸುಶೀಲೆಯರಪ್ಪ ಗಂಗಾದೇವಿ ಮಾಯಾದೇವಿ ಯರೊಡತಣ ವಿವಾಹ ಸಂಬಂಧದಿಂ ಸತತ ಸುಖಮಿರ್ದು" (೬/೧-೩)ವನ್ನು ಹೇಳುವಾಗ, ಮುಂದೆ ತನ್ನ "ಮಗನ ಮುದ್ದುತನವಂ ಬಸವರಾಜಂ ಕಂಡು ಮನಂ ತಣಿದು ಕುಳಿರ್ ನೋಡಿ ಹಾರೈಹಿಗ್ಗಿ" (೧೦/೧೧೯-೧೨) ಸಂತೋಷಪಡುತ್ತಿದ್ದ ನೆಂದು ವರ್ಣಿಸುವಾಗ ಹರಿಹರನ ವಿವೇಚನಾ ಶಕ್ತಿ ಎಲ್ಲಿ ಹೋಗಿತ್ತು ? ಒಂದ ಕ್ಕೊಂದು ಸಂಬಂಧವಿಲ್ಲದ ಈ ಧೋರಣೆಗಳು ಬಸವಣ್ಣನ ಪಾತ್ರಕ್ಕೆ ಮುಸುಕು ಹಾಕಿ ಉಸಿರುಗಟ್ಟಿಸಿವೆ. ಸಂಸಾರ ಜೀವನದ ತೊಳಲಾಟದ ಬಗ್ಗೆ ಬಸವಣ್ಣ ತನ್ನ ವಚನಗಳಲ್ಲಿ ಸಾಕಷ್ಟು ಹೇಳಿಕೊಂಡಿದ್ದಾನೆ. ಅಲ್ಲಿ ಅಂತರಂಗ ನಿವೇದನೆ ಮತ್ತು ಮಾನವ ಸಹಜ ಅನಿಸಿಕೆಗಳು ವ್ಯಕ್ತವಾಗಿವೆ. ಹರಿಹರ ಅಂಥ ಚಿತ್ರಣದ ಗೊಡವೆಗೆ ಹೋಗಿಲ್ಲ.

ಬಸವಣ್ಣ ಜನಿವಾರ ತೆಗೆದೊಗೆದು ಊರುಬಿಟ್ಟು ಹೊರಟುದು ಅವನ ಜೀವನದಲ್ಲಿ ಅತ್ಯಂತ ಮಹತ್ವದ ಘಟನೆ. ಹರಿಹರ ಈ ಸಂದರ್ಭವನ್ನು ಕೇವಲ ಎರಡುಸಾಲು ಗಳಲ್ಲಿ ಹೇಳಿ ಮುಗಿಸಿದ್ದಾನೆ. ಜಂಗಮರ ಊಟ, ಗರ್ಭಿಣಿ ಸ್ತ್ರೀ, ಗೋವಳರು, ಮೆರವಣಿಗೆ ಮುಂತಾದವುಗಳನ್ನು ಜಾಗ್ರತೆಯಿಂದ ವಿವರಿಸಿದ ಹರಿಹರ ಜನಿವಾರದ ಪ್ರಸಂಗವನ್ನು ನಿರ್ಲಕ್ಷಿಸಿದ್ದು ಅಪರಾಧವೇ. ಜಡಸಂಪ್ರದಾಯದ ಬಗ್ಗೆ ತನಗಿದ್ದ ಅಸಹನೆಯ ಕುದಿಯನ್ನು ಹೊರಹಾಕಿ ವ್ಯವಸ್ಥೆಯನ್ನು ಪ್ರತಿಭಟಿಸಿ ನಿಂತ ಈ ಸಂದರ್ಭದ ಬಸವಣ್ಣನ ಧೀರ ವ್ಯಕ್ತಿತ್ವವನ್ನು ಪರಿಚಯಿಸಲಾರದ ಹರಿಹರ ಬಸವಣ್ಣನಿಗೆ ಅಪಚಾರವೆಸಗಿದ್ದಾನೆ.

ಹುಟ್ಟಾಕ್ರಾಂತಿ ಸ್ವಭಾವದ ಬಸವಣ್ಣ ಬಿಜ್ಜಳನ ಮಂತ್ರಿಯಾದುದು ಕೀರ್ತಿ ಪಡೆದುದು ತನ್ನ ಪ್ರಭಾವಶಾಲಿ ವ್ಯಕ್ತಿತ್ವದ ಬಲದಿಂದ. ಹರಿಹರನ ಬಸವಣ್ಣನಿಗೆ ಅಂಥ ಛಲ ಬಲಗಳಿಲ್ಲ. ಅವನು ಪಕ್ಕಾ ಹೇಡಿಯಾಗಿ ಗೋಚರಿಸುತ್ತಾನೆ.

---

೫. ಡಾ. ಜಿ. ಎಸ್. ಶಿವರುದ್ರಪ್ಪ–ಕವಿಹೃದಯ, ಪುಟ ೧೫

ಸಂಗಮನಾಥನು ಬಸವಣ್ಣನನ್ನು ಒತ್ತಾಯ ಮಾಡಿ ಕಳಿಸುತ್ತಾನೆ. ಈ ಸಂದರ್ಭದಲ್ಲಿ ವ್ಯಕ್ತವಾದ ದೇವ–ಭಕ್ತನ ನಡುವಿನ ಹೃದ್ಯವಾದ ಸಂಬಂಧದ ಚಿತ್ರಣ ರಸವತ್ತಾಗಿ ಬಂದಿದ್ದರೂ ಅದು ಬಸವಣ್ಣನ ಸಮಗ್ರ ವ್ಯಕ್ತಿತ್ವವನ್ನು ಮಸುಕುಗೊಳಿಸುತ್ತದೆ. ಏಷ್ಟು ಹೇಳಿದರೂ ಬಸವಣ್ಣ ಸಂಗಮನಾಥನನ್ನು ಬಿಟ್ಟು ಮಂಗಳವಾಡಕ್ಕೆ ಹೋಗಲು ಒಪ್ಪುವದಿಲ್ಲ. ಸಂಗಮನಾಥ ಹೇಳಿ ಹೇಳಿ ತಲೆ ಒಡಕೊಂಡ. ಕೊನೆಗೆ "ನೆನೆಯೆ ಮುಂದಿರ್ದಪೆಂ. ಕರೆದೊಡೋ ಎಂದಪೆಂ. ನಿಂದಲ್ಲಿ ನಿಂದಪೆಂ. ನಡೆದಲ್ಲಿ ನಡೆದಪೆಂ. ಬಂದಲ್ಲಿ ಬಂದಪೆಂ. ನುಡಿದಲ್ಲಿ ನುಡಿದಪೆಂ" (೫/೩೩-೩೬) ಎಂದು ಮುಂತಾಗಿ ಭರವಸೆ ನೀಡಿದಮೇಲೆ ಬಸವಣ್ಣ ಮನಸ್ಸಿಲ್ಲದ ಮನಸ್ಸಿನಿಂದ ಡಿಮಂಗಳ ವಾಡಕ್ಕೆ ಹೊರಡುತ್ತಾನೆ. ಅಂದರೆ ಹರಿಹರನ ಪ್ರಕಾರ ಬಸವಣ್ಣ ಲೌಕಿಕವನ್ನು ಅರಿಯದ ಮುಗ್ಧ ಶಿವಭಕ್ತ. ಸಂಗಮನಾಥನ ಒತ್ತಾಯಕ್ಕಾಗಿ ಮಂಗಳವಾಡಕ್ಕೆ ಹೋಗಿ ಅವನ ನಿರ್ದೇಶನದಂತ ಧರ್ಮ ಪ್ರಸಾರಮಾಡಿದ. ಈಧೋರಣೆ ಬಸವಣ್ಣನ ಕರ್ತೃತ್ವಶಕ್ತಿಯನ್ನು ಅಲ್ಲಗಳೆಯುತ್ತದೆ. ಅವನಿಗೆ ಸ್ವಂತ ವ್ಯಕ್ತಿತ್ವವಿಲ್ಲವೆಂದು ತಿಳಿಸುತ್ತದೆ. ಹರಿಹರ ಈ ಮೂಲಕ ಬಸವಣ್ಣನ ಕ್ರಾಂತಿಕಾರಿ ಸ್ವಭಾವ, ಚೈತನ್ಯ ಶಕ್ತಿ, ಧೀರಗುಣಗಳನ್ನು ಕಿತ್ತೊಗೆದು ಅವನನ್ನು ಸಂಗಮನಾಥನ ಮುದ್ದಿನ ಕೈಗೊಂಬೆಯನ್ನಾಗಿಸಿದ್ದಾನೆ.

ಬಸವರಾಜದೇವರ ರಗಳೆಯ ವಿಪರೀತಗಳಲ್ಲಿ ಬಿಜ್ಜಳನಪಾತ್ರ ಗಮನಾರ್ಹವಾದುದು. ಹರಿಹರ ಮಂತ್ರಿ ಬಸವಣ್ಣನನ್ನು ರಾಜನನ್ನಾಗಿ ಮಾಡಿರುವದರ ಜೊತೆಗೆ ನಿಜವಾದ ರಾಜನಾದ ಬಿಜ್ಜಳನನ್ನು ಅಂಜುಬುರುಕ ಬುದ್ಧಿಗೇಡಿಯನ್ನಾಗಿ ಮಾಡಿದ್ದಾನೆ. ಬಿಜ್ಜಳನನ್ನು ಅನವಶ್ಯಕವಾಗಿ ಪ್ರತಿಸ್ಪರ್ಧಿ ಖಳನಾಯಕನನ್ನಾಗಿ ಭಾವಿಸಲಾಗಿದೆ. ಹರಿಹರನ ಬಿಜ್ಜಳನಲ್ಲಿ ಖಳನಾಯಕನ ಗುಣಗಳೂ ಇಲ್ಲ. ಅದೊಂದು ಅಸಹಾಯಕ ನಿಸ್ಸತ್ವ ಪಾತ್ರವಾಗಿದೆ. ಕಥೆಯಲ್ಲಿ ಹರಡಿಕೊಂಡಿರುವ ಹಲವಾರು ದೃಷ್ಟಾಂತಗಳಿಂದ ಇದನ್ನು ಕಂಡುಕೊಳ್ಳಬಹುದಾಗಿದೆ. ಬಸವಣ್ಣನಿಗೆ ಮಂತ್ರಿ ಪದವಿ ನೀಡಿದ ಸಂದರ್ಭ ದಲ್ಲಿ ಬಿಜ್ಜಳನು"ಸರ್ವಭಂಡಾರವೆಲ್ಲಂ ನಿನಗೆ ಬಸವಣ್ಣ,ಉರ್ವರೆಯ ಧನವೆಲ್ಲಂ ನಿನಗೆ ಬಸವಣ್ಣ, ಎನ್ನದ ರಾಜ್ಯದ ಶಿಕ್ಷೆ ರಕ್ಕೆ ನಿನ್ನದು ಬಸವ," (೫/೧೬೦–೨) ಎಂದು ಬೇಡಿಕೊಳ್ಳಲು ಕಾರಣದೇನು ? ಬಿಜ್ಜಳನು ಹೀಗೆ ತನ್ನ ಕೈಕೆಳಗಿನ ಮಂತ್ರಿಗೆ ತನ್ನಸರ್ವಸ್ವವನ್ನು ಅರ್ಪಿಸಿ ಧನ್ಯತಾಭಾವ ಅನುಭವಿಸುವಂಥ ದಡ್ಡ ರಾಜ ನಾಗಿದ್ದನೇ ? ಆಸ್ಥಾನಕ್ಕೆ ಬಂದ ಮಂತ್ರಿಬಸವಣ್ಣನಿಗೆ ಬಿಜ್ಜಳ ಮನದಲ್ಲಿಯೇ ಎರಗಿ ಸಮುಗದ್ದುಗೆ ನೀಡಿ ಕೂಡ್ರಿಸುವನು. (೬/೧೩) ವ್ಯವಹಾರಿಕವಾಗಿ ಇದುಸರಿಯೇ? ಒಡ್ಡೋಲಗದ ಚಟುವಟಿಕೆ ನಡಾವಳಿಗಳನ್ನು ಬಸವಣ್ಣ ನಿರ್ವಹಿಸುತ್ತಾನೆ. (೬/೩೦–೩೮). ಅಲ್ಲಿ ರಾಜನಾದ ಬಿಜ್ಜಳನಿಗೆ ಏನೂ ಕೆಲಸವಿಲ್ಲ. ಅವನು ರಾಜವೇಷದ ಗೊಂಬೆ ಮಾತ್ರ. ಒಮ್ಮೆಆಸ್ಥಾನದಲ್ಲಿ ಕೇದಗೆಯ ಪವಾಡ ನಡೆಯುತ್ತದೆ. ಯಾರೋ

ತಂದುಕೊಟ್ಟ ಕೇದಗೆಯನ್ನು ಬಸವಣ್ಣ ತನ್ನ ಶಿವಲಿಂಗಕ್ಕೆ ಅರ್ಪಿಸಿದ. ಇದು ಆಗಮ ನಿಷಿದ್ಧವೆಂದು ವಿರೋಧಿ ಬಣದವರು ಕೂಗಾಡಿದರು. ಆಗ ಬಸವಣ್ಣನ ಅಪ್ಪಣೆಯಂತೆ ಅಲ್ಲಿದ್ದವರ ಕಕ್ಷಪುಟಿ ಬಿಚ್ಚಿಸಿ ನೋಡಿದರೆ ಅವರೆಲ್ಲರ ಶಿವಲಿಂಗದ ಮೇಲೆ ಕೇದಗೆ ಇತ್ತು ಮಂಗಳವಾಡದ ಮಹಾಶಿವಲಿಂಗನ ತಲೆಯ ಮೇಲೆಯೂ ಇದ್ದುದಾಗಿ ಸುದ್ದಿಬಂತು. ಈ ಅದ್ಭುತವನ್ನು ಕಂಡು ಬಿಜ್ಜಳನು "ದಣ್ಣಾಯಕರ (ಬಸವ) ಪದತಲಕ್ಕೆರಗಿ ತಪ್ಪುದಂಡಕ್ಕೆ ಪನ್ನಿಚ್ಛಾಸಿರ ಹೊನ್ನು ಕೊಟ್ಟು ಅಂದಿಂಮೊದಲಾಗಿ ತನ್ನರಮನೆಯ ಭಂಡಾರಿಗಳೆಂಬುದಂ ಮರೆದು ಸಂಗಮೇಶ್ವರನೆಂದೇ ಕಂಡು ಕೊಂಡಾಡುತುಂ" (೬/೮೪-೬) ಇದ್ದನಂತೆ. ಇಲ್ಲಿ ಹರಿಹರ ರಾಜನನ್ನು ಮಂತ್ರಿಯ ಪಾದಕ್ಕೆ ಬೀಳಿಸುವ ವೈಪರೀತ್ಯ ನಡೆಸಿ ಬಸವಣ್ಣನನ್ನು ಸಂಗಮನಾಥನ ನೆಲೆಗೇರಿಸಿ ಬಿಜ್ಜಳನನ್ನು ಪಾತಾಳಕ್ಕೆ ತುಳಿದಿದ್ದಾನೆ.

ಬಸವಣ್ಣನ ಮೇಲೆ ಭಂಡಾರದ ಅಪವ್ಯಯದ ಆರೋಪ ಬರುತ್ತದೆ. ಬಿಜ್ಜಳನು ಇದರ ವಿಚಾರಣೆಗಾಗಿ ಬಸವಣ್ಣನನ್ನು ಕರೆಕಳಿಸುತ್ತಾನೆ. (ಈ ಹಿಂದೆ ತಾನು ಕಾಲಿಗೆ ಬಿದ್ದು ಕ್ಷಮೆ ಕೇಳಿಕೊಂಡ ಮಂತ್ರಿಯನ್ನು ವಿಚಾರಣೆಗೆ ಒಳಪಡಿಸುವಷ್ಟು ಧೈರ್ಯ ಈಗ ಬಿಜ್ಜಳನಿಗೆ ಎಲ್ಲಿಂದ ಬಂದಿತೋ) ಬಿಜ್ಜಳ ಎಷ್ಟು ಪುಕ್ಕಲು ಅಂದರೆ ಅಪವ್ಯಯದ ಬಗ್ಗೆ ಬಸವಣ್ಣನನ್ನು ನೇರವಾಗಿ ಕೇಳುವ ತಾಕತ್ತು ಅವನಲ್ಲಿಲ್ಲ. "ಮೆಲ್ಲಮೆಲ್ಲನೆ ಮಾತುಮಾತಿಂ ಲೆಕ್ಕದ ಮಾತಂ ತೆಗೆದು" (೮/೧೦೭) ವಿಚಾರಿಸುತ್ತಾನೆ. ಬಸವಣ್ಣನ ಮಹಿಮೆಯಿಂದಾಗಿ ಭಂಡಾರದ ಲೆಕ್ಕ ಸರಿ ಹೊಂದಿದಾಗ "ಬಿಜ್ಜಳಂ ಧರೆಗಿಳಿದು ಜೀವನ್ಮೃತನಾಗಿ ಬಸವನ ಚರಣದೊಳು ದೊಪ್ಪನೆ ಬಿಳ್ದು" (೮/೧೩೭) ಕ್ಷಮೆ ಕೇಳಿಕೊಳ್ಳುತ್ತಾನೆ. ಇಂಥ ವಿವರಣೆಗಳನ್ನು ನೋಡಿದಾಗ ಹರಿಹರನ ಬಗ್ಗೆ ಕೋಪವೂ ಬಿಜ್ಜಳನ ಬಗ್ಗೆ ಕನಿಕರವೂ ಉಂಟಾಗುತ್ತದೆ. ತನ್ನ ಕಥಾನಾಯಕ ಬಸವಣ್ಣನನ್ನು ಮಹಿಮಾಪುರುಷನನ್ನು ಮಾಡುವ ಉತ್ಸಾಹದಲ್ಲಿ ಹರಿಹರನು ತನಗರಿವಿಲ್ಲದಂತೆ ಅವನನ್ನು ದುರಹಂಕಾರಿಯನ್ನಾಗಿ ಮಾಡಿದ್ದಾನೆ. ಬಿಜ್ಜಳನು ಭಂಡಾರದ ಲೆಕ್ಕ ಕೇಳಿದಾಗ ಬಸವಣ್ಣ "ನೀನೆತ್ತ ಪರಮಾಣು ಕ್ಷುದ್ರ ಜಂತು...... ಕಪ್ಪಡದ ಹಾವೆ ಕಲ್ಲ ಜಂತ್ರ ಹುಲ್ಲಗೊಂಬೆ" (೮/೧೩೨-೪) ಎಂದು ಅವನನ್ನು ಬೈಯುತ್ತಾನೆ. ಕಂಬಳಿ ನಾಗಿದೇವನ ಪ್ರಸಂಗದಲ್ಲಿ "ಎಲೆ ಬುದ್ಧಿಯಿಲ್ಲದ ಭೂಪ ಎರಗಿವಿಯ ಮರುಳೆ" (೧೦/೪೯) ಎಂದು ಬಿಜ್ಜಳನ ಮೇಲೆ ಹರಿಹಾಯುತ್ತಾನೆ. ಮೃದುವಚನವೇ ಸಕಲ ಜಪತಪಗಳೆಂದು ಹೇಳಿಕೊಂಡ ವಿನಯಶಾಲಿ ಬಸವಣ್ಣ ಹೀಗೆ ಒರಟು ಮಾತುಗಳನ್ನಾಡಲು ಸಾಧ್ಯವೇ ? ಬಿಜ್ಜಳ ಇಷ್ಟೆಲ್ಲ ಅನ್ನಿಸಿಕೊಂಡು ಸುಮ್ಮನಿದ್ದನೇ ? ಹರಿಹರ ಚಿತ್ರಿಸಿರುವಂತೆ ಬಿಜ್ಜಳ ಒಬ್ಬ ಹೇಡಿ ದೊರೆಯಲ್ಲ. ಕಲ್ಯಾಣ ಚಾಲುಕ್ಯರ ಮಾಂಡಲಿಕನಾಗಿದ್ದು ಬರುಬರುತ್ತ ಚಾಲುಕ್ಯರು ಕ್ಷೀಣ

ಗೋಡಂತೆ ಅವಕಾಶ ನೋಡಿ ಸಾಮ್ರಾಜ್ಯವನ್ನೆಲ್ಲ ಕೈವಶ ಮಾಡಿಕೊಂಡ ಮಹತ್ವಾಕಾಂಕ್ಷಿ ಆತ. ಇಂಥ ಬಲಿಷ್ಠ ಮತ್ತು ಚತುರ ರಾಜಕಾರಣಿ ಬಿಜ್ಜಳನನ್ನು ಕಳಪೆಯಾಗಿ ಚಿತ್ರಿಸಿರುವ ಹರಿಹರನು ಬಿಜ್ಜಳನಿಗೆ, ತನ್ಮೂಲಕ ಇತಿಹಾಸಕ್ಕೆ ದ್ರೋಹ ಮಾಡಿದ್ದಾನೆ.

ಬಸವಣ್ಣನ ಮಹಿಮಾತಿಶಯಗಳನ್ನು ತಿಳಿಸಲು ಹರಿಹರ ಹಲವಾರು ಪವಾಡಗಳನ್ನು ಸೇರಿಸಿದ್ದಾನೆ. ಇವೆಲ್ಲ ಅವನ ಕಲ್ಪನಾ ಸೃಷ್ಟಿಗಳು. ಬಸವಣ್ಣನು ಇಂಥ ಪವಾಡಗಳನ್ನು ಮಾಡಿದ ಬಗ್ಗೆ ನಂಬಲರ್ಹವಾದ ಆಕರವಾದ ವಚನಗಳಲ್ಲಿ ದಾಖಲೆ ಇಲ್ಲ. ಹರಿಹರನು ಹೇರಿದ ಪವಾಡಗಳ ಹೊರೆಯ ಬುಡಕ್ಕೆ ಸಿಕ್ಕು ಒದ್ದಾಡುತ್ತಿರುವ ಬಸವಣ್ಣನ ಬಗ್ಗೆ ಮರುಕವುಂಟಾಗುತ್ತದೆ, ಈ ಪವಾಡಗಳಿಗೆ ಒಂದೊಂದು ಅರ್ಥ ಹಚ್ಚಿ ಹಿಗ್ಗಿ ಸಂತೋಷಪಡುವ ವಿದ್ವಾಂಸರೂ ಇದ್ದಾರೆ. ಇದು ಅತಿ ಬುದ್ಧಿವಂತಿಕೆಯ ಕಸರತ್ತು ಮಾತ್ರ.

ಬಸವಣ್ಣ ಜಾತಿವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಿದ್ದು ತಿಳಿದೇ ಇದೆ. ಹರಿಹರ ಈ ವಿಷಯವನ್ನು ಒಂದು ಪವಾಡದ ಮೂಲಕ ಹೇಳಲು ಪ್ರಯತ್ನಿಸಿದ್ದಾನೆ. ಕಂಬಳಿ ನಾಗಿದೇವನೆಂಬ ಅಂತ್ಯಜನ ಮನೆಗೆಹೋಗಿ ಪ್ರಸಾದ ಸ್ವೀಕರಿಸಿ ಆಚಾರ ಧರ್ಮಗಳನ್ನು ಮೀರಿದ ಬಸವಣ್ಣನ ಬಗ್ಗೆ ಬಹಿರಂಗ ವಿಚಾರಣೆ ನಡೆಯುತ್ತದೆ. ಕಂಬಳಿ ನಾಗಿದೇವ ಜಾತಿಯಲ್ಲಿ ಹೊಲೆಯನಾದರೂ ಚಾರಿತ್ರ್ಯವಂತ, ಆರೋಪಮಾಡಿರುವ ಬ್ರಾಹ್ಮಣರು ಉಚ್ಚಜಾತಿಯವರಾದರೂ ಚಾರಿತ್ರ್ಯಹೀನರು ಎಂಬುದನ್ನು ಬಸವಣ್ಣ ಹೇಳಬೇಕಾಗಿದೆ. ಆದರೆ ಅವನು ಹೇಳಲಿಲ್ಲ. ಮಾಡಿದ. ಬ್ರಾಹ್ಮಣನೊಬ್ಬನ ಮೆಯ್ಯನ್ನು ಸೀಳಿದ, ರಕ್ತ-ಬಾಲದ ಹುಳಗಳು ಸುರಿದವು. ನಾಗಿದೇವನ ಉಂಗುಟ ಚಿವುಟಿದ. ಹಾಲಹೊಳೆ ಹರಿಯಿತು. ಶರೀರ ಶಾಸ್ತ್ರದ ಪ್ರಾಥಮಿಕ ಜ್ಞಾನವೂಇಲ್ಲದ ಹರಿಹರ ವಿವರಿಸಿರುವ ಈ ಪವಾಡವನ್ನು ತಲೆಇದ್ದವರು ಒಪ್ಪಲಿಕ್ಕಾದೀತೇ ? ಇದರ ಬಗ್ಗೆ "ಜಾತಿಗೆ ಸಂಬಂಧಪಟ್ಟು ನಡೆಸಿದ ಈ ಬಹಿರಂಗ ನ್ಯಾಯ ವಿಚಾರಣೆ ಜಗತ್ತಿನ ಇತಿಹಾಸದಲ್ಲಿಯೇ ಒಂದು ಅಪೂರ್ವ ದಾಖಲೆಯೆನಿಸಿದೆ" ಎಂದು ವ್ಯಾಖ್ಯಾನ ನೀಡುವುದು ತುಂಬಾ ತಮಾಷೆಯಾಗಿದೆ. ಬಿಜ್ಜಳನು ಅರಮನೆಯ ಹೊರ ಮೈದಾನದಲ್ಲಿ ಬಹಿರಂಗ ವಿಚಾರಣೆ ನಡೆಸಿದ್ದು ನ್ಯಾಯವಿಧಾನವನ್ನು ಸಾರ್ವಜನಿಕರಿಗೆ ತಿಳಿಯಪಡಿಸುವುದಕ್ಕಲ್ಲ. ಹೊಲೆಯರ ಮನೆಗೆ ಹೋಗಿ ಮೈಲಿಗೆಯಾಗಿರುವ ಬಸವಣ್ಣನನ್ನು ಒಡ್ಡೋಲಗ ಪ್ರವೇಶಿಸಿ ಎಲ್ಲರನ್ನೂ ಮೈಲಿಗೆ ಮಾಡದಿರಲೆಂದು, ಬಸವಣ್ಣ ತಾತ್ವಿಕ ಚರ್ಚೆಯ ಮೂಲಕ ತನ್ನ ನಿಲುವನ್ನು ಸಮರ್ಥಿಸಿಕೊಂಡಿದ್ದರೆ ಅದಕ್ಕೆ ಔಚಿತ್ಯ ವಿರುತ್ತಿತ್ತು. ತಲೆಬುಡವಿಲ್ಲದ ಇಂಥ ಹಸಿ ಕಲ್ಪನೆಗಳ ಮೂಲಕ ಬಸವಣ್ಣನನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು ಸಾಧುವಲ್ಲ.

ಬಸವಣ್ಣ ಭಕ್ತರಿಗೆ ಬಹಳ ಗೌರವ ನೀಡುತ್ತಿದ್ದನೆಂಬುವಕ್ಕೆ ಹಲವಾರು ಪ್ರಸಂಗ ಗಳನ್ನು ಹರಿಹರ ನಿರೂಪಿಸಿದ್ದಾನೆ. ಒಮ್ಮೆ ಕಳ್ಳರು ಭಕ್ತರ ವೇಷದಿಂದ ಬಂದು. ಮೇಯಲು ಹೋಗಿದ್ದ ಬಸವಣ್ಣನ ಆಕಳುಗಳನ್ನು ಅಪಹರಿಸಿಕೊಂಡು ಹೋದರು. ಗೋವಳರಿಂದ ಈ ವಿಷಯ ತಿಳಿದ ಬಸವಣ್ಣ "ತಮ್ಮೊಡವೆಯಂ ತಾವೆ ಕೊಳ್ಳರೆ, 'ಶಿವವೇಷಮುಂ ಕಳವುಮೊಂದೆಡೆಯೊಳಿಪ್ಪುದೆ। ಶಿವಭಕ್ತರಲ್ಲದಾರುಂ ಕೊಳಲ್ ಬಪ್ಪುದೇ। ಸಂಗನೇ ಕೊಂಬವಂ ಸಂಗನೇ ಕೊಡುವವಂ" (೯/೧೧೧-೧೪) ಎಂದು ಹೇಳಿ ಮನೆಯಲ್ಲಿದ್ದ ಕರುಗಳನ್ನು ಅವುಗಳ ತಾಯಂದಿರನ್ನು ಸೇರಲು ಹೊಡೆಸಿ ಕಳಿಸಿದ. ಭಕ್ತರ ವೇಷದಲ್ಲಿ ಯಾರು ಬಂದು ಏನು ಮಾಡಿದರೂ ಅದಕ್ಕೆ ದೈವೀ ಅರ್ಥ ಕಲ್ಪಿಸುವಷ್ಟು ಬಸವಣ್ಣ ಅಜ್ಞಾನಿಯಾಗಿದ್ದನೇ ? ಕೊಡುವುದು ತಗೆದು ಕೊಳ್ಳುವುದು ದೇವರ ಜವಾಬ್ದಾರಿಯಾದರೆ ದುಡಿಮೆ, ಗಳಿಕೆ, ರಾಜ್ಯ, ಆಡಳಿತ, ಪ್ರಜಾರಕ್ಷಣೆ, ಇವುಗಳ ಜರೂರಾದರೂ ಏನು ? ಇಂಥ ಮುಗ್ಧ ಭಾವುಕನ ಕೈಯ್ಯಲ್ಲಿ ಒಂದು ರಾಜ್ಯದ ಮಂತ್ರಿಪದವಿ ಸಿಕ್ಕರೆ ಆ ರಾಜ್ಯದ ಗತಿಯೇನು ? ಆಕಳುಗಳನ್ನು ಒಯ್ದ ಕಳ್ಳರು ಬಸವಣ್ಣನು ಕರುಗಳನ್ನು ಕಳಿಸಿಕೊಡುವನೆಂದು ಕಾಯ್ದುಕೊಂಡು ಕುಳಿತಿದ್ದರೇ ? ಬಸವಣ್ಣನಿಗೆ ಇಷ್ಟೂ ವ್ಯವಹಾರಜ್ಞಾನ ಇದ್ದಿರ ಲಿಲ್ಲವೇ ? ಅಂದು ಇಂಥ ಗೋಗ್ರಹಣಗಳು ಮಾಮೂಲಿಯಾಗಿದ್ದವು. ಅಂಥ ಸಂದರ್ಭದಲ್ಲಿ ಹೋರಾಟಮಾಡಿ ಗೆದ್ದು ಅಪಹೃತ ಗೋವುಗಳನ್ನು ಬಿಡಿಸಿಕೊಂಡು ಬರುವುದು ವೀರತನದ ಲಕ್ಷಣವಾಗಿತ್ತು. ಬಸವಣ್ಣ ಅಂಥ ಹೋರಾಟ ತಪ್ಪಿಸಿ ಕಳ್ಳರಿಗೆ ಸೀದಾ ತನ್ನ ಆಕಳು+ಕರುಗಳನ್ನು ಒಪ್ಪಿಸಿದ ಈ ಘಟನೆಯನ್ನು "ತುರುಸೆರೆಯ ಪ್ರಸಂಗದ ಯುದ್ಧಮೌಲ್ಯವನ್ನು ಅಲಕ್ಷಿಸಿ ಕರುಗಳನ್ನು ಬಿಡಿದ ಈ ಘಟನೆ ಕನ್ನಡನಾಡಿನ ಗೋಗ್ರಹಣದ ಇತಿಹಾಸದಲ್ಲಿಯೇ ಪ್ರಥಮವಾದುದು"[೪] ಎಂದು ಅರ್ಥೈಸುವುದು ಸರಿಯಲ್ಲ. ಸೆರೆಗೊಳಗಾದ ಆಕಳುಗಳನ್ನು ಬಿಡಿಸಿಕೊಂಡು ಬರ ಬೇಕಾದುದು ಮಂತ್ರಿ ಬಸವಣ್ಣನ ಕರ್ತವ್ಯ. ಬಸವಣ್ಣನು ತನ್ನ ಕರ್ತವ್ಯವನ್ನು ಅಲಕ್ಷಿಸಿದ್ದಷ್ಟೇ ಅಲ್ಲ, ಜೊತೆಗೆ ಕರುಗಳನ್ನು ಕಳಿಸಿಕೊಡುವಂಥ ಹೇಡಿಯಾಗಿದ್ದಾನೆ. ಈತರದ ಭಾವುಕ ರಾಜಕೀಯ ತತ್ವಶಾಸ್ತ್ರ ವ್ಯವಹಾರಜ್ಞಾನಶೂನ್ಯವಾದುದು ಮತ್ತು ಸಾಕಷ್ಟು ಅಪಾಯಕಾರಿಯಾದುದು.

ಬಸವಣ್ಣನ ಶರಣಜನಪ್ರೇಮ ಕಾವ್ಯದ ತುಂಬ ಹರಿದಾಡಿದೆ. ಇಲ್ಲಿಯ ಬಹಳಷ್ಟು ಭಾಗ ಬಸವಣ್ಣನು ಶರಣರನ್ನು ಆದರಿಸುವುದು, ಅವರ ಪೂಜೆಗೆ ಸಾಮಗ್ರಿ ಒದಗಿಸು ವುದು, ನಂತರ ಅವರಿಗೆ ಊಟ ಮಾಡಿಸುವುದು–ಅಂತೂ ಅವರನ್ನು ಸಂತೋಷ ಗೊಳಿಸುವುದು, ಪ್ರತಿಯಾಗಿ ಅವರು ಇವನನ್ನು ಸಿಕ್ಕಾಪಟ್ಟೆ ಹೊಗಳಿ ಹಾಡುವುದು

---

೪. ಡಾ. ಎಂ. ಎಂ. ಕಲಬುರ್ಗಿ-ಬಸವಮಾರ್ಗ-I ಪುಟ ೪೭

ಮುಂತಾದವುಗಳಿಂದ ತುಂಬಿದೆ. ಅವನ ಶರಣ ಪ್ರೀತಿ ಮಿತಿಮೀರಿದ ಒಂದು ಸಂದರ್ಭ ಹೀಗಿದೆ—ಬಸವಣ್ಣನು ಅರಮನೆಯ ಭಂಡಾರದಲ್ಲಿದ್ದ ಬೆಲೆಯುಳ್ಳ ಒಡವೆ ವಸ್ತ್ರಗಳನ್ನು ತನ್ನ ಅನುಯಾಯಿ ಶರಣರಿಗೆ ನೀಡಿದ. ಅವರು ಅವುಗಳನ್ನು ಧರಿಸಿ ಮಜಾ ಮಾಡುತ್ತ ಊರಲ್ಲಿ ತಿರುಗಾಡುತ್ತಿರುವುದನ್ನು ಕಂಡು ಬಸವಣ್ಣ ಸಂತೋಷಪಟ್ಟನು. ವಿರೋಧಿಗಳು ಈ ವಿಷಯವನ್ನು ಬಿಜ್ಜಳನ ಗಮನಕ್ಕೆ ತಂದರು. ಬಿಜ್ಜಳ ಬಸವನನ್ನು ಕರೆಸಿ ವಿಚಾರಿಸಿದಾಗ "ಶಿವಭಕ್ತರು ನಿನ್ನೊಡವೆ ಗಾಸೆಯ ಮಾಳ್ಪರೇ ? ತಮ್ಮೊಡವೆಯಂ ತಾವೆ ಕೊಂಡರು ನಡೆನಡೆ" (೮/೧೨೭–೮) ಎಂದು ಬಸವಣ್ಣ ದಬಾಯಿಸುತ್ತಾನೆ. ಮುದ್ರೆಯೊಡೆದು ನೋಡಿದಾಗ ಅದು ನೂರ್ಮಡಿ ಸಾಸಿರ್ಮಡಿ ಹೆಚ್ಚಾಗಿತ್ತು. ಬಸವಣ್ಣನ ಕೈ ಶುದ್ಧವೆಂಬುದನ್ನು ತಿಳಿಸಲು ಹರಿಹರ ಇದನ್ನು ಹೇಳಿದ್ದಾನೆ. ಬಸವಣ್ಣನ ಪ್ರಾಮಾಣಿಕತೆ ಬಗ್ಗೆ ಯಾರೂ ಪ್ರಶ್ನಿಸುವಂತಿಲ್ಲ. ನಿಜ. ಆದರೆ ಶರಣರಿಗೆ ವಸ್ತ್ರಾಭರಣ ನೀಡಿದ್ದಕ್ಕೆ ವಿವರಣೆ ನೀಡುವುದರ ಬದಲು ಭಂಡಾರದ ಹಣ ಹೆಚ್ಚಿಸಿ ತೋರಿಸಿದ್ದರ ಅರ್ಥವೇನು ? ಬಸವಣ್ಣ ತನ್ನ ಅನುಯಾಯಿಗಳಿಗೆ ಅರಮನೆಯ ಭಂಡಾರದ ವಸ್ತ್ರಾಭರಣಗಳನ್ನು ನೀಡಿದ್ದು ಸರಿಯೇ ? ಇದು ಅಧಿಕಾರದ ದುರುಪಯೋಗ ಅಲ್ಲವೇ ? ಭಂಡಾರ ಬಸವಣ್ಣನ ಸ್ವಂತ ಆಸ್ತಿಯೇ ? ಬಸವಣ್ಣ ಬಿಜ್ಜಳನನ್ನು ದಬಾಯಿಸಿದ್ದರಲ್ಲಿ "ರಾಜ್ಯದ ಭಂಡಾರ ಕೆಲವೇ ಪ್ರತಿಷ್ಠಿತ ಪ್ರಜೆಗಳ ಆಸ್ತಿಗಳ ಆಸ್ತಿಯಲ್ಲ. ಸತ್ಪ್ರಜೆಗಳ ಆಸ್ತಿ. ಅದರ ಮೇಲೆ ಎಲ್ಲರ ಹಕ್ಕು ಇದೆ ಎಂಬ ಧೋರಣೆಯಿದೆ"[೭] ಎಂಬ ಅರ್ಥ ಕಂಡುಕೊಳ್ಳುವುದು ತಪ್ಪಾಗುತ್ತದೆ. ಭಂಡಾರ ಆಸ್ತಿಯನ್ನು ತನ್ನವರಿಗೆ ಮಾತ್ರ ಬಹಿರಂಗವಾಗಿ ಹಂಚಿದ ಬಸವಣ್ಣ ಒಬ್ಬ ಸುಸಂಸ್ಕೃತ ದರೋಡೆಖೋರನೆಂದು ತಿಳಿಯಬೇಕಾಗುತ್ತದೆ. ಸತ್ಪ್ರಜೆಗಳೆಂದರೆ ಯಾರು ? ಶರಣರು ಮಾತ್ರ ಸತ್ಪ್ರಜೆಗಳು, ಇತರರು ಕೆಟ್ಟವರು-ಎಂಬ ಈ ತಿಳುವಳಿಕೆ ಬಸವಣ್ಣನನ್ನು ಮೂರ್ಖನಾಗಿಸುವ ಪ್ರಯತ್ನವಾಗಿದೆ. ಈ ಮೂಲಕ ಬಸವಣ್ಣನ ವ್ಯಕ್ತಿತ್ವ ಇನ್ನಷ್ಟು ಹಾಳಾಗಿದೆ.

ಕಾಯಕನಿಷ್ಠರಾದ ಪ್ರಜ್ಞಾವಂತ ಅನುಯಾಯಿ ಶರಣರ ಗುಂಪನ್ನು ಕಟ್ಟಿಕೊಂಡು ಬಸವಣ್ಣ ಕ್ರಾಂತಿಗೆ ತೊಡಗಿದ್ದು ಐತಿಹಾಸಿಕ ಸತ್ಯ. ಆದರೆ ಬಸವರಾಜ ದೇವರ ರಗಳೆಯಲ್ಲಿಯ ಶರಣರು ಉಂಡಾಡಿ ರಸಿಕರಾಗಿದ್ದಾರೆ. ಬಸವಣ್ಣನ ಮನೆಯ ರುಚಿ ರುಚಿಯಾದ ಊಟ ಮೊಜೆಯ ನಿರುಂಬಳವಾಗಿ ಕಾಲ ಕಳೆಯುವ ಈ ಆಲಸಿಗಳ ಪಡೆಯಿಂದ ಯಾವ ತತ್ವದ ಅನುಷ್ಠಾನ ಪ್ರಚಾರ ಸಾಧ್ಯವಾಗಿದೆ ? ಇಲ್ಲಿಯ ಶರಣರಿಗೆ ಊಟ, ಪೂಜೆ, ಬಸವಣ್ಣನ ಹೊಗಳಿಕೆ ಈ ಮೂರು ಬಿಟ್ಟು ಬೇರೆ ಕೆಲಸವೇ ಇಲ್ಲ. ಇಂಥವರಿಗೆ ದಣಿವಿಲ್ಲದೆ ದಾನ ನೀಡುವುದು ತನ್ನ ಜೀವನದ ಪರಮ ಉದ್ದೇಶ

೭. ಡಾ. ಎಂ. ಎಂ ಕಲಬುರ್ಗಿ-ಬಸವಮಾರ್ಗ-I, ಪುಟ ೪೨

ವೆಂದು ಬಸವಣ್ಣ ಭಾವಿಸಿದ್ದಾನೆ. ಅವನಿಗೆ ಹರಿಹರ ನೀಡಿರುವ ವಿಶೇಷಣಗಳಲ್ಲಿ "ದಾನವಿನೋದ ವೃತ್ತಿ" (೧೧/೧)ಯೂ ಒಂದು. ಹೀಗೆ ನಿರಂತರ ದಾನ ಕೊಡಲು ಬಸವಣ್ಣನಲ್ಲಿದ್ದ ಸಂಪತ್ತಾದರೂ ಎಷ್ಟು? ಅವನ ಆದಾಯಕ್ಕೆ ಇತಿಮಿತಿ ಇಲ್ಲವೇ ? ಇವೆಲ್ಲ ತರ್ಕಕ್ಕೆ ನಿಲುಕದ ಊಹೆಗಳಾಗುತ್ತವೆ. ಹರಿಹರ ತತ್ವನಿಷ್ಠ ಬಸವಣ್ಣನ ಬದಲಾಗಿ ಮತನಿಷ್ಠ ಬಸವಣ್ಣನನ್ನು ಸೃಷ್ಟಿಸಿದ್ದಾನೆ. ಮತನಿಷ್ಠೆಯ ಭರದಲ್ಲಿ ಏನು ಮಾಡಿದರೂ ಸಹ್ಯ ಎಂಬ ಹುಚ್ಚು ಧೋರಣೆ ಹರಿಹರನಲ್ಲಿದೆ.

ಈ ಮೊದಲು ಹೇಳಿರುವ, ವಿಟಜಂಗಮನಿಗೆ ಹೆಂಡತಿಯನ್ನು ಅರ್ಪಿಸುವ ಸನ್ನಿವೇಶದಲ್ಲಿ ಹರಿಹರ ಬಸವಣ್ಣನ ಸಮರ್ಪಣ ಭಾವ ಭಕ್ತಿಯನ್ನು ಪರಾಕಾಷ್ಠಸ್ಥಿತಿಗೆ ತಂದು ನಿಲ್ಲಿಸಿದ್ದಾನೆ. ಯಾವ ಮುಗ್ಗುಲಿನಿಂದ ನೋಡಿದರೂ ಈ ಸಂದರ್ಭ ಅಪಾರ್ಥಕ್ಕೆಡೆಮಾಡಿಕೊಡುತ್ತದೆ. ಬಸವಣ್ಣ ಜಂಗಮವೇಷದಲ್ಲಿ ಬಂದವರಿಗೆಲ್ಲ ತನ್ನ ಹೆಂಡತಿಯನ್ನರ್ಪಿಸುತ್ತಿದ್ದನೆಂಬುದು ತಿರಸ್ಕಾರಕ್ಕೆ ಅಪಹಾಸ್ಯಕ್ಕೆ ಗುರಿಮಾಡುತ್ತದೆ. ಮುಂದಿನ ಕವಿಗಳಿಗೆ ಇದು ಡೆಂಜರಸ್ ಅನಿಸಿದ್ದರಿಂದ ಈ ಪವಾಡದ ಕೈಬಿಟ್ಟಿದ್ದಾರೆ. ಸರ್ವಾರ್ಪಣಭಾವದ ಅಪಾರ್ಥ, ಅನೀತಿಯ ವಾಸನೆ ಇದರಲ್ಲಿವೆ. ಈ ಸನ್ನಿವೇಶವನ್ನು "ಬಸವನ ದಾನಬುದ್ಧಿಯು ಕುಲವಧುವ ಕೊಡುವ ಮಟ್ಟಕ್ಕೇರಿದ್ದು ಸಮಂಜಸವೇ ಅನಿಸುತ್ತದೆ"[೮] ಎಂದು ಅರ್ಥೈಸುವುದು ಮತ್ತು "ದಾಂಪತ್ಯ ಜೀವನದಲ್ಲಿ ಗಂಡಹೆಂಡರಿಗಿದ್ದ ಪರಸ್ಪರ ಅರಿವಿನಿಂದ ಕೂಡಿದ ಸಾಮರಸ್ಯ, ಗಂಡನ ಭಕ್ತಿ ಸಾಧನೆಗೆ ಹೆಂಡತಿಯಾದವಳು ಹೊಂದಿಕೊಳ್ಳುವುದರಲ್ಲಿ ಕಂಡುಬರುವ ಸಹಕಾರ ಇವು ಮನೋಜ್ಞವಾಗಿ ಚಿತ್ರಿತವಾಗಿವೆ"[೯] ಎಂದು ವ್ಯಾಖ್ಯಾನಿಸುವುದು ಸರಿಯಲ್ಲ. "ಹೆಣ್ಣಿನ ಅವಶ್ಯಕತೆಯಿದ್ದ ಪ್ರಾಯದ ಜಂಗಮ (ಪ್ರಜೆ)ನಿಗೆ ಹೆಣ್ಣು ಸಿಗದಾದಾಗ ತನ್ನ ಸತಿ ನೀಲಲೋಚನೆ (ಮಾಯಿದೇವಿ) ಯನ್ನೇ ಒಪ್ಪಿಸಲು ಸಿದ್ಧವಾದನೆಂಬುದು"[೧೦] ಬಸವನ ಭಾವನ್ನು ಸ್ಪಷ್ಟಗೊಳಿಸುತ್ತದಂತೆ. ಜಂಗಮ = ಪ್ರಜೆಯೆಂದು ತಿಳಿದುಕೊಂಡರೆ ಬಸವಣ್ಣ ಕೇವಲ ಲಿಂಗಾಯತರಿಗಾಗಿ ರಾಜ್ಯಾಡಳಿತ ನಡೆಸಿದ ಮತ್ತು ಅನ್ಯಧರ್ಮೀಯರು ರಾಜ್ಯದ ಪ್ರಜೆಗಳೇ ಆಗಿರಲಿಲ್ಲ ಎಂದು ಅರ್ಥವಾಗುತ್ತದೆ. ಅಂದರೆ ಬಸವಣ್ಣನನ್ನು ಸ್ವಮತದ ದುರಭಿಮಾನದ ನೇಣಿಗೆ ತೂಗುಬಿಟ್ಟಂತೆ ಆಗುತ್ತದೆ.

ಹೀಗಿದ್ದಾನೆ ಹರಿಹರನ ಬಸವಣ್ಣ. ಬಸವಣ್ಣ ಯಾವಪವಾಡವನ್ನೂ ಮಾಡಲಿಲ್ಲವೆಂದು ತಿಳಿದರೆ ಅವನ ಹಿರಿಮೆಗೆ ಯಾವ ಕೊರತೆ ಇಲ್ಲ. ಬಸವಣ್ಣನ ಕ್ರಾಂತಿಯ ಸಮೀಪದ

---

೮. ಸಿಂ. ಪಿ. ಲಿಂಗಣ್ಣ–ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ. ೩, ಪುಟ ೨೬೪
೯. ಡಾ. ಜಿ. ಎಸ್. ಶಿವರುದ್ರಪ್ಪ–ಕವಿ ಹೃದಯ, ಪುಟ ೩೭
೧೦. ಡಾ. ಎಂ. ಎಂ. ಕಲಬುರ್ಗಿ, ಬಸವರಾಜ ಮಾರ್ಗ-I, ಪುಟ ೪೬

ಹರಿಹರ ಐತಿಹಾಸಿಕ ವಿವರಗಳತ್ತ ಗಮನಕೊಡದೆ ಕಲ್ಪಿತ ಪವಾಡಗಳಲ್ಲಿ ಬಸವಣ್ಣನನ್ನು ಮುಳುಗಿಸಿರುವುದು ದುರಂತದ ವಿಷಯ. ಅವನು ಮಾಡಿದ ತಪ್ಪುಗಳನ್ನು ಹೊಸ ವಿಚಾರಗಳ ಹಿನ್ನೆಲೆಯಲ್ಲಿ ಸಮರ್ಥಿಸುವುದು ಇನ್ನೂ ವಿಷಾದನೀಯ.

ಬೆಕ್ಕಿನ ಬಗ್ಗೆ ಹೇಳಬೇಕೆಂದರೆ

ಬೆಕ್ಕಿನ ಬಗ್ಗೆ ಹೇಳಬೇಕೆಂದರೆ, ಅದೊಂದು
ಸುಂದರ ಸಾಕು ಪ್ರಾಣಿ, ಬಾಹ್ಯಕ್ಕೆ
ಅದರ ಮೈ ರೋಮದಿಂದ ಕೂಡಿ ತುಂಬಾ ನಯ.
ಅದರ ತೀಕ್ಷ್ಣ ನೀಲಿ, ರಾತ್ರಿಯಲ್ಲೂ ಹೊಳೆಯುವ
ಕಣ್ಣಗೊಂಬೆಯು, ಕೆಲವೊಮ್ಮೆ ಸಪೂರ
ಕಡ್ಡಿಯಂತಿರುತ್ತದೆ, ಇನ್ನು ಕೆಲವೊಮ್ಮೆ
ಇಡೀ ಕಣ್ಣನ್ನೇ ಆವರಿಸುತ್ತದೆ.
ಹಾಲು ಕುಡಿವಾಗಲೆಲ್ಲಾ ಕಣ್ಣು ಮುಚ್ಚಿಕೊಳ್ಳುವ
ಇದು, ಹೊಟ್ಟೆಯೊಳಗಿಂದ 'ಗುರು ಗುರು' ಶಬ್ಧ
ಹೊರಡಿಸುತ್ತದೆ. ನಿದ್ರೆ ಪ್ರಾರಂಭಿಸುವಾಗ
ನಡೆದರೆ ಶಬ್ದವೇ ಆಗದ ಈ ಬೆಕ್ಕಿನ
ಪಂಜಲ್ಲಡಗಿರುವ ಉಗುರುಗಳು ತುಂಬಾ ಹರಿತ
ಹಾಗೂ ತನ್ನ ಬೇಟೆಯೊಂದಿಗೇ ಆಡುವ,
ಅದರ ಸಂಕಟದಲ್ಲಿ ಸಂತೋಷ ಕಾಣುವ,
ಈ ಪ್ರಾಣಿಯನ್ನು ಮರಿಯಾಗಿದ್ದಾಗಲೇ
"ಹೆಣ್ಣೋ ? ಗಂಡೋ ?" ಎಂದು ಗುರುತಿಸುವುದು
ಬರಿ ಕಣ್ಣಿಗೆ ಕಷ್ಟದ ಬಾಬು.
ಇನ್ನೊಂದು ವಿಷಯ: ಇವರ ಬಗ್ಗೆಯಾಗಿಯೇ,
ಈಗೀಗ ಬೆಕ್ಕುಗಳು, ಸಂಖ್ಯೆಯಲ್ಲಿ ಹೆಚ್ಚುತ್ತಿವೆ.

ಕನಕ ಹಾ. ಮ.

'ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ'

ಕೆಲವು ಅನುಮಾನಗಳು

ಐ. ಆರ್. ಪ್ರಮೋದ

'ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ' ಎನ್ನುವ ಶ್ರೀ ಪೋಲಂಕಿ ರಾಮಮೂರ್ತಿಯವರ ಲೇಖನದ (ಸಂಕ್ರಮಣ ೧೨೩-೧೨೪ ಏಪ್ರಿಲ್ ಮೇ ೮೨) ಬಗ್ಗೆ ಕೆಲವು ಅನುಮಾನಗಳು.

ಯಾಕೆಂದರೆ ಒಂದು ಸಮಸ್ಯೆಯ/ವಿಚಾರದ ವ್ಯಾಖ್ಯಾನದ ಗರ್ಭದಲ್ಲಿ ಆ ಸಮಸ್ಯೆಯ ಪರಿಹಾರಗಳು ಸೂಚಿತವಾಗುತ್ತದೆ. ಸ್ತ್ರೀ ವಿಮೋಚನೆಗಾಗಿ ಹೋರಾಟಗಳು ನಡೆಯುತ್ತಿರುವ ಮತ್ತು ನಡೆಯಬೇಕಾದ ಇವತ್ತಿನ ಸಂದರ್ಭದಲ್ಲಿ ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀಯ ಸ್ಥಾನಮಾನದ ಬಗ್ಗೆ ವಿಮರ್ಶೆ ಮುಖ್ಯವಾಗುತ್ತದೆ.

"ಭಾರತೀಯ ಸಂಸ್ಕೃತಿಯಲ್ಲಿ ಅಸ್ಪೃಶ್ಯತೆ ಎರಡು ಬಗೆಯದು: ಒಂದು ಜಾತಿ ಅಸ್ಪೃಶ್ಯತೆ, ಎರಡು ಅಂಗ ಅಸ್ಪೃಶ್ಯತೆ" (ಪುಟ ೧೭)

"ಇನ್ನು ಅಂಗ ಅಸ್ಪೃಶ್ಯತೆ. ಹೆಣ್ಣು ಈ ಸಂಸ್ಕೃತಿಯಲ್ಲಿ ಅವಳ ಜೀವನದುದ್ದಕ್ಕೂ ಕೆಲವು ಕ್ಲುಪ್ತ ಕಾಲಗಳಲ್ಲಿ ಅಸ್ಪೃಶ್ಯಳು" (ಪುಟ ೧೭)

"ಹೆಣ್ಣು ಹೆಣ್ಣಾಗಿ ಹುಟ್ಟಿದ ಅಂಗಭೇದಕ್ಕಾಗಿಯೇ ಅವಳನ್ನು ಮುಟ್ಟುವುದರಿಂದ ಆಗಬಹುದಾದ ಲೈಂಗಿಕತೆ ಕಾಮಪ್ರಚೋದನೆಯ ಭಯಕ್ಕಾಗಿಯೇ ಅವಳನ್ನು ಅವಳ ಜೀವನದುದ್ದಕ್ಕೂ ಮುಟ್ಟದಿರುವಿಕೆ ಈ ಅಂಗ ಅಸ್ಪೃಶ್ಯತೆ-ಅಂದರೆ ಅಂಗ ಮೈಲಿಗೆಯ ಹಾಗೂ ಅಂಗ ಲೈಂಗಿಕತೆಯ ಅಸ್ಪೃಶ್ಯತೆ–ಭಾರತೀಯ ಸಂಸ್ಕೃತಿಗೆ ವಿಶಿಷ್ಟವಾದ ಸಾಂಸ್ಕೃತಿಕ ವಿಕಾರ"

ಹೆಣ್ಣಿನ ಮೇಲೆ ವಿಧಿಸಿದ ಈ ಅಂಗ 'ಅಸ್ಪೃಶ್ಯತೆ' ಕೂಡ ಒಂದು ನಿರ್ದಿಷ್ಟ ಸಾಮಾಜಿಕ ಆರ್ಥಿಕ ಘಟ್ಟದಿಂದ ಹುಟ್ಟಿಕೊಂಡಿತು ಎನ್ನುವ ಅಂಶವನ್ನು ಈ

ಲೇಖನ ಒಪ್ಪುವುದಿಲ್ಲ. ಬದಲು ಈ ರೀತಿಯ ಅಸ್ಪೃಶ್ಯತೆ ಮತ್ತು ಸ್ತ್ರೀಯನ್ನು ಕೀಳೆಂದು ಕಾಣುವ ಮನೋಭಾವ ಪ್ರಾಚೀನ ಕಾಲದಿಂದಲೂ ಬಂದಿತೆಂಬ ಅಭಿಪ್ರಾಯ ಇಡೀ ಲೇಖನದುದ್ದಕ್ಕೂ ಹರಿದು ಬಂದಿದೆ.

"ನಾವು ಹೆಣ್ಣನ್ನು ತಾಯಿ, ಅಮ್ಮ, ಅವ್ವ ಎಂದು ಕರೆಯಲು ಕಾರಣ ನಾವು ಹೆಣ್ಣನ್ನು ತಾಯ್ತನದಲ್ಲಿ ಕಲ್ಪಿಸಿಕೊಂಡಾಗಮಾತ್ರ ಅವಳ ಬಗ್ಗೆ ಯಾವ ಲೈಂಗಿಕತೆಯ ಸೋಂಕು ಇರಲಾರದು ಎನ್ನುವ ಮಹಾಭ್ರಮೆ. ಹಾಗೆಯೇ ಹೆಣ್ಣನ್ನು ಅಕ್ಕ ತಂಗಿ ಎಂಬ ಶಬ್ದಗಳಲ್ಲಿಯೂ ಪ್ರತ್ಯಯಗಳಲ್ಲಿಯೂ ಸಂಬೋಧಿಸುವಾಗಲು ನಾವು ಆ ಲೈಂಗಿಕ ಕುತ್ತಿನಿಂದ ಪಾರಾಗುತ್ತೇವೆ ಎಂಬುದೂ ನಮ್ಮ ಭರವಸೆ" (ಪುಟ ೧೯)

"ಇಲ್ಲಿ ನಾವು ಗಮನಿಸಬೇಕಾದ ಭೀಕರಸತ್ಯವೇನೆಂದರೆ ತಾಯಿಯ ಬಗೆಗಿನ ಪಾವಿತ್ರ್ಯದ ಸೋಗಿನ ಹಿನ್ನಲೆಯಲ್ಲಿ ಹೊಗೆಯಾಡುತ್ತಿರುವ ಅನೈಸರ್ಗಿಕ ಲೈಂಗಿಕತೆಯ ಇನ್‌ಸೆಸ್ಟ್ ವಿಕಾರತೆ, ಈಡಿಪಸ್ ಕಾಂಪ್ಲೆಕ್ಸ್ ಎಂಬ ಮಾತೃಗಮನದ ಲೈಂಗಿಕತೆ-ಅಥವ ನಮ್ಮೀ ಸಂಸ್ಕೃತಿಯ ಭಾಷೆಗಳಲ್ಲಿ ಜನಪ್ರಿಯವಾದ ಆಡುಭಾಷೆಯ ಸಾಮಾನ್ಯವಾಗಿರುವ 'ತಾಯ್ಗಂಡತನ" (ಪುಟ ೨೧)

ಆದರೆ ನಮ್ಮ ಸಂಸ್ಕೃತಿಯ ಕೆಲವು ಹಂತಗಳಲ್ಲಿ ಸ್ತ್ರೀ ತಾಯಿಯಾಗಿ ಮಹತ್ತರ ಪಾತ್ರ ವಹಿಸುವುದಕ್ಕೆ, ರಾಮಮೂರ್ತಿಯವರು ವಿವರಿಸಿದ ರೀತಿಯಲ್ಲಿ, ಲೈಂಗಿಕತೆಯ ಸೋಂಕು ಇರಲಾರದೆಂಬ ಭ್ರಮೆಯೂ ವಿಕಾರವೂ ಕಾರಣವಲ್ಲ. ರಾಮಮೂರ್ತಿಯವರ ಈ ವಾದಗಳಲ್ಲಿ ಭೀಕರವಾದ ಸತ್ಯವೂ ಇಲ್ಲ.

"ಸಮಾಜದ ಆರಂಭ ಕಾಲಗಳಲ್ಲಿ ಸ್ತ್ರೀಯು ಪುರುಷರಿಗೆ ಗುಲಾಮಳಾಗಿದ್ದಳು ಎಂಬುದು ೧೮ನೇಯ ಶತಮಾನದ ಜ್ಞಾನೋದಯದ ಕಾಲದಿಂದ ನಮಗೆ ಬಂದ ಅವಿವೇಕದ ಕಲ್ಪನೆಗಳಲ್ಲೊಂದಾಗಿದೆ. ಕಿರಾತವಸ್ಥೆಯ ಎಲ್ಲ ಕೆಳ ಹಾಗೂ ಮಧ್ಯಮ ಮಜಲಿನ ಜನರ ಮಧ್ಯೆಯೂ, ಭಾಗಶಃ ಅನಾಗರಿಕಾವಸ್ಥೆಯ ಮೇಲಿನ ಮಜಲಿನ ಜನರ ಮಧ್ಯೆಯೂ ಸಹ ಸ್ತ್ರೀಯು ಸ್ವತಂತ್ರವಾದ ಸ್ಥಾನವನ್ನಷ್ಟೇ ಅಲ್ಲ. ಅತ್ಯಂತ ಗೌರವದ ಸ್ಥಾನವನ್ನು ಪಡೆದುಕೊಂಡಿದ್ದಳು." (ಫ್ರೆಡರಿಕ್ ಏಂಗೆಲ್ಸ್-ಕುಟುಂಬ ಖಾಗಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ; ಕನ್ನಡಕ್ಕೆ ಕೆ. ಎಲ್. ಗೋಪಾಲ ಕೃಷ್ಣರಾವ್: ಪ್ರಗತಿ ಪ್ರಕಾಶನ ೧೯೮೦) (ಪುಟ ೭೦)

ಖಾಸಗಿ ಆಸ್ತಿ ವ್ಯವಸ್ಥೆ ಇಲ್ಲದ ಪ್ರಾರಂಭದ ಈ ಹಂತದಲ್ಲಿ ಹೆಣ್ಣು ಕೂಡ ಗಂಡಸಿನೊಂದಿಗೆ ಆರ್ಥಿಕ ಚಟುವಟಿಕೆಗಳಲ್ಲಿ ಸರಿಸಮಾನವಾಗಿ ಭಾಗವಹಿಸುತ್ತಿದ್ದಳು.

ಆಫ್ರಿಕದ ಕೆಲವು ಬುಡಕಟ್ಟುಗಳಲ್ಲಿ ಗಂಡಸರು ಬೇಟೆಯಾಡುತ್ತಿದ್ದರು. ಹೆಂಗಸರು ಕೃಷಿ ಕೆಲಸದಲ್ಲಿ ತೊಡಗಿದ್ದರು. ಈ ಹಂತದಲ್ಲಿ ಮುಕ್ತವಾದ ಮತ್ತು ಸಹಜವಾದ ಸ್ವಚ್ಛಂದ ಲೈಂಗಿಕ ಸಂಬಂಧಗಳಿದ್ದವು. ಬುಡಕಟ್ಟಿನ ಎಲ್ಲ ಗಂಡಸರೂ ಹೆಂಗಸರೂ ಪರಸ್ಪರ ಲೈಂಗಿಕ ಸಂಬಂಧಗಳನ್ನು ಹೊಂದಿರುತ್ತಿದ್ದ ಈ ಹಂತದಲ್ಲಿ "ಸೋದರ ಸೋದರಿಯರು ಮೊದಲಲ್ಲಿ ಗಂಡಹೆಂಡಿರಾಗಿ ಬಾಳುತ್ತಿದ್ದರಷ್ಟೇ ಅಲ್ಲ ತಾಯಿ ತಂದೆ ಮತ್ತು ಮಕ್ಕಳ ನಡುವೆ ಲೈಂಗಿಕ ಸಂಬಂಧಗಳಿಗೆ ಇಂದೂ ಅನೇಕ ಜನಾಂಗಗಳಲ್ಲಿ ಅವಕಾಶವಿದೆ. ಇಂತಹ ಪದ್ಧತಿಯು ಬೇರಿಂಗ್ ಖಾರಿಯ ಕಾಡಿಮಂತ ಜನರ ಮಧ್ಯೆಯೂ, ಅಲಾಸ್ಕದ ಬಳಿಯ ಕಾಡಿಯಾತ್ ದ್ವೀಪದ ನಿವಾಸಿಗಳ ಮಧ್ಯೆಯೂ, ಬ್ರಿಟಿಷ್ ಉತ್ತರ ಅಮೇರಿಕಾದ ಒಳಭಾಗಗಳಲ್ಲಿರುವ ಟಿನ್ನೇಸ್ ಜನರ ಮಧ್ಯೆಯೂ ಅಸ್ತಿತ್ವದಲ್ಲಿದೆಯೆಂದು ಬಾನಕ್ರೋಫ್ಟ್‌ರವರು ಸಮರ್ಥಿಸಿ ತಿಳಿಸುತ್ತಾರೆ. (ಎಂಗೆಲ್ಸ್ ಪುಟ ೫೨)

ಈ ನೆಲೆಯಲ್ಲಿ 'ತಾಯ್ಗಂಡ' ಎನ್ನುವ ಪದದ ಬೇರನ್ನು ಹುಡುಕಬೇಕೆ ಹೊರತು ಅನೈಸರ್ಗಿಕ ಲೈಂಗಿಕತೆ, ಈಡಿಪಸ್ ಕಾಂಪ್ಲೆಕ್ಸ್ ಎನ್ನುವ ವಿವರಣೆಗಳಲ್ಲಲ್ಲ.

"ಸಮೂಹ ಕುಟುಂಬದ ಎಲ್ಲ ರೂಪಗಳಲ್ಲೂ ಮಗುವೊಂದರ ತಂದೆ ಯಾರೆಂಬುದು ಖಚಿತವಿರುವುದಿಲ್ಲ. ಆದರೆ ತಾಯಿ ಯಾರೆಂದು ಖಚಿತವಿರುತ್ತದೆ. ಅವಳು ಸಮಷ್ಟಿ ಕುಟುಂಬದ ಎಲ್ಲ ಮಕ್ಕಳನ್ನೂ ತನ್ನ ಮಕ್ಕಳೆಂದೇ ಕರೆದು ಅವರ ಬಗೆಗೆ ತಾಯಿಯ ಕರ್ತವ್ಯಗಳೆಲ್ಲವನ್ನು ಪಾಲಿಸುವಳು. ತನ್ನ ಸ್ವಂತ ಮಕ್ಕಳನ್ನು ಅವಳು ಇತರರಿಂದ ಪ್ರತ್ಯೇಕಿಸಿ ತಿಳಿಯಬಲ್ಲಳು. ಆದ್ದರಿಂದ ಎಲ್ಲೆಲ್ಲಿ ವಿವಾಹ ಅಸ್ತಿತ್ವದಲ್ಲಿರುತ್ತದೋ ಅಲ್ಲಿ ವಂಶಾವಳಿಯನ್ನು ತಾಯಿಯ ಕಡೆಯಿಂದಷ್ಟೆ ಗುರುತಿಸಲು ಸಾಧ್ಯ. ಹೀಗೆ ತಾಯಿಯ ವಂಶವನ್ನಷ್ಟೇ ಮನ್ನಿಸಲಾಗುತ್ತದ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ." (ಎಂಗೆಲ್ಸ್ ಪುಟ ೬೧)

ಈ ರೀತಿ ಮಾತೃಪ್ರಧಾನ ಕುಟುಂಬಕ್ಕೆ ಕಾರಣ ಆ ಕಾಲದ ಅರ್ಥವ್ಯವಸ್ಥೆ ಎನ್ನುವುದು ಮುಖ್ಯವಾದ ಅಂಶ.

ಹೀಗೆ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಮತ್ತು ಸ್ವಚ್ಛಂದ ಲೈಂಗಿಕ ಸಂಬಂಧಗಳು ಒಂದು ನಿರ್ದಿಷ್ಟ ಐತಿಹಾಸಿಕ ಹಂತವನ್ನು ಪ್ರತಿನಿಧಿಸುತ್ತವೆ. ಮಾತೃ ಪ್ರಧಾನ ವ್ಯವಸ್ಥೆಯಲ್ಲಿ, ಆರಾಧಿಸಲ್ಪಡುವ ದೇವದೇವತೆಯರ ಸ್ಥಾನಕ್ಕೆ ಸ್ತ್ರೀಯರು ಏರಿಸಲ್ಪಡುತ್ತಾರೆ.

ಕೊಡಗು ಜಿಲ್ಲೆಯಲ್ಲಿ ಮೇಲು ಜಾತಿಯವರಾದ ಕೊಡವರಿಗೆ, ಅಮ್ಮ ಕೊಡವರಿಗೆ ಕಾವೇರಿ ಪ್ರಧಾನ ದೇವತೆಯಾದರೆ ಕೀಳುಜಾತಿಯವರಾದ ಅಸ್ಪೃಶ್ಯರಾದ ಕೆಂಬಟ್ಟಿಯವರಿಗೆ

ಪನ್ನಂಗಾಲತಮ್ಮೆ ಮುಖ್ಯ ದೇವತೆ. ಮೇಲು ಜಾತಿಯಾದ ಅಮ್ಮ ಕೊಡವರಲ್ಲಿ (ಚೆಟ್ಟೋಳಿಯಮ್ಮರದ ಬಾಚಮ್ಮತ, ನಾಳಿಯಮ್ಮನ, ಪಾಡಿಯಮ್ಮಂಥ) ಸ್ತ್ರೀ ಪ್ರಧಾನ ಕುಟುಂಬ ಹೆಸರುಗಳಿವೆ. ಈ ರೀತಿಯ ಮಾತೃಪ್ರಧಾನ ವ್ಯವಸ್ಥೆಯ ಆರ್ಥಿಕತೆಯ ಮೂಲ ವರ್ಗರಹಿತ ಸಮಾಜ. ಆ ಪ್ರಾಚೀನ ಹಂತವನ್ನು ಆದಿ ಕಮ್ಯುನಿಸ್ಟ್ ಸಮಾಜ ಎಂದು ಕರೆಯಲಾಗುತ್ತದೆ.

"ಆದರೆ ಕಮ್ಯುನಿಸ್ಟ್ ಲಕ್ಷಣದ ಮನೆ-ಆರ್ಥಿಕತೆಯಲ್ಲಿ ಮಹಿಳೆಯದೇ ಮೇಲುಗೈ. ನಿಜವಾದ ತಂದೆಯನ್ನು ಖಚಿತವಾಗಿ ನಿರ್ಧರಿಸಿ ಹೇಳಲು ಅಸಾಧ್ಯವಾದುದರಿಂದ ನಿಜವಾದ ಸ್ವಂತ ತಾಯಿಗೆ ವಿಶೇಷ ಮನ್ನಣೆ ನೀಡಿದುದು ಮಹಿಳೆಯರಿಗೆ ಅಂದರೆ ತಾಯಂದಿರಿಗೆ ಉನ್ನತ ಗೌರವ ನೀಡಿದಂತೆ. ಕಮ್ಯೂನಿಸ್ಟ್ ಆರ್ಥಿಕತೆಯಲ್ಲಿ ಮಹಿಳೆಗೆ ಹೆಚ್ಚಿನ ಸ್ಥಾನವಿದ್ದಿತು." (ಎಂಗೆಲ್ಸ್, ಪುಟ ೭೦)

ಭಾರತದ ಹಲವು ಜನಾಂಗಗಳು ಈ ರೀತಿಯ ಚಾರಿತ್ರಿಕ ಘಟ್ಟಗಳನ್ನು ದಾಟಿವೆ ಎನ್ನುವುದಕ್ಕೆ ಈಗ ಹೇರಳ ಪುರಾವೆಯಿದೆ. ನಮ್ಮ ದೇವದೇವತೆಗಳ ಜಾತ್ರೆಗಳಲ್ಲಿ, ಸಂಪ್ರದಾಯ, ವಿಧಾನಗಳಲ್ಲಿ ಬಲವಾಗಿರುವ ಸ್ವಚ್ಛಂದ ಲೈಂಗಿಕತೆಯ ಸಂಕೇತಗಳನ್ನು ಈ ನೆಲೆಯಲ್ಲಿ ವಿಮರ್ಶಿಸಬೇಕೆ ಹೊರತು ಪ್ರೋಲಂಕಿ ರಾಮಮೂರ್ತಿಯವರು ಮಾಡಿದಂತೆ ಮನೋವೈಜ್ಞಾನಿಕ ತತ್ವಗಳ ನೆಲೆಗಳಲ್ಲಿ ಅಲ್ಲ.

ರಾಮಮೂರ್ತಿಯವರು ಗ್ರಾಮದೇವತೆಯಾದ ಕಾಳಮ್ಮನ ಗುಡಿಯಿಂದ ಖಜರಾಹೊ ದೇವಾಲಯದ ಮಿಥುನ ವಿಗ್ರಹಗಳ ವಾಸ್ತುಶಿಲ್ಪವನ್ನು, ವಾತ್ಸಾಯನ ಲೈಂಗಿಕ ಗ್ರಂಥಗಳನ್ನು ಮತ್ತು ಹೋಳಿ ಹುಣ್ಣಿಮೆಯ ಕಥಾನಕಗಳು, ಕಾಮನ ಹಬ್ಬಗಳನ್ನು ಒಂದೇ ಪಾತಳಿಯಲ್ಲಿ ಹೋಲಿಸುವುದು ಸಮಂಜಸವಲ್ಲ. ಯಾಕೆಂದರೆ ಗ್ರಾಮ ದೇವತೆಯಾದ ಕಾಳಮ್ಮ, ಖಜರಾಹೋ ದೇವಾಲಯದ ಶಿಲ್ಪ, ಹೋಳಿ ಹುಣ್ಣಿಮೆ, ಕಾಮನ ಹಬ್ಬ ಮತ್ತು ವಾತ್ಸಾಯನ ಗ್ರಂಥಗಳು ನಮ್ಮ ಸಮಾಜದ ವಿವಿಧ ಚಾರಿತ್ರಿಕ ಹಂತಗಳನ್ನು ಪ್ರತಿನಿಧಿಸುತ್ತವೆ. ಇವುಗಳ ಹಿಂದಿರುವ ಆರ್ಥಿಕ ವ್ಯವಸ್ಥೆ ಕೂಡ ಭಿನ್ನವಾದದ್ದು.

ಪ್ರಸಿದ್ಧ ಇತಿಹಾಸಕಾರ ಡಿ. ಡಿ. ಕೊಸಂಬಿ ಹೋಳಿ ಹಬ್ಬವನ್ನು ಇತಿಹಾಸಪೂರ್ವ ಸಮಾಜದ ಅವಶೇಷ ಎನ್ನುತ್ತಾರೆ. ಆಹಾರ ಕಮ್ಮಿಯಾಗಿದ್ದ, ಬದುಕು ಮತ್ತು ಸಂತಾನೋತ್ಪತ್ತಿ ಕಷ್ಟಕರವಾದ ಆ ಕೆಳಹಂತದಲ್ಲಿ ಲೈಂಗಿಕ ಸ್ವಚ್ಛಂದತೆ ಪ್ರಚೋದಕ ವಾಗಿ ಅಗತ್ಯವಿತ್ತು.

ಹೋಳಿ ಹಬ್ಬದ ಕೆಲವು ಆಚರಣೆಗಳು ಇತಿಹಾಸ ಪೂರ್ವ ಮಾತೃಪ್ರಧಾನ ಹಂತಕ್ಕೆ ಸಂಬಂಧಿಸಿದ್ದವು. ಕೆಲವು ಕಡೆಗಳಲ್ಲಿ ಕೋಲಿನ ಎನ್ನುವ ಪುರುಷ ಮಹಿಳೆಯ

ಉಡುಪು ಹಾಕಿಕೊಂಡು ಹೋಳಿಯ ನೃತ್ಯದಲ್ಲಿ ಸೇರಿಕೊಳ್ಳಬೇಕು. ಬೆಂಗಳೂರಿನಲ್ಲಿ ನಡೆದ ವಾರ್ಷಿಕ ಕರಗ ಮಹಾಜಾತ್ರೆಯಲ್ಲಿ ಮುಖ್ಯಸ್ಥ ಅಧಿಕಾರ ವಹಿಸುವ ಮೊದಲು ಮಹಿಳೆಯಂತೆ ಬಟ್ಟೆ ಹಾಕಿಕೊಳ್ಳಬೇಕು. ಮೊದಲು ಮಹಿಳೆಯ ಸಂಪೂರ್ಣ ಹಕ್ಕಾಗಿದ್ದ ಈ ವಿಧಿ ವಿಧಾನಗಳನ್ನು ಆಮೇಲೆ ಪುರುಷರು ವಶಪಡಿಸಿಕೊಂಡರು. (D. D. Kosambi-The Culture and Civilization of Ancient India in Historical Outline. ಪುಟ ೪೭)

ಪ್ರಾಥಮಿಕ ಹಂತದ ಬಣಗಳ ದೈವಿಕ ನಂಬಿಕೆಗಳ ಬಗ್ಗೆ ಹೇಳುತ್ತಾ ಶ್ರೀ ಎಸ್. ಜಿ. ಸರ್‌ದೇಶಾಯಿ "ಇಡೀ ವಿಶ್ವದ ಜನನಿ, ಆದಿ ಪರಾಶಕ್ತಿ ಹೆಣ್ಣೆಂಬ ಭಾವನೆ ಅವರಲ್ಲಿ ಮೂಡುವುದು ಸ್ವಾಭಾವಿಕವಾಗಿತ್ತು. ಇಂತಹ ಕಲ್ಪನೆಯಿಂದ ಪ್ರಾಕೃತಾವಸ್ಥೆಯ ಸಮಾಜಗಳಲ್ಲಿ ಕೆಲವು ವಿಶಿಷ್ಟ ವಿಧಿ–ವಿಧಾನಗಳು ರೂಪ ತಾಳುತ್ತವೆ. 'ಋತು ಸಾಧನೆ' ಎನ್ನುವುದು ಅಂತಹ ಒಂದು ವಿಧಿ. ಬೀಜ ಬಿತ್ತುವ ಸಮಯದಲ್ಲಿ ಬತ್ತಲೆ ಹೆಂಗಸರು ಗದ್ದೆಗಳಲ್ಲಿ ಅಲೆದಾಡುವ ರೂಢಿ ಪ್ರಾಚೀನ ಕಾಲದಲ್ಲಿ ಇತ್ತು. ಕೆಲವು ಹಿಂದುಳಿದ ಬಣಗಳಲ್ಲಿ ಇಂದಿಗೂ ಈ ಪದ್ಧತಿ ಇದೆ. ಹಾಗೆ ಮಾಡಿದರೆ ಭೂಮಿ ಫಲವತ್ತಾಗುತ್ತದೆ ಎಂಬ ನಂಬಿಕೆಯೇ ಅದಕ್ಕೆ ಕಾರಣ". (ಭಾರತೀಯ ತತ್ವಜ್ಞಾನ ವೈಚಾರಿಕ ಮತ್ತು ಸಾಮಾಜಿಕ ಸಂಘರ್ಷ ಎಸ್. ಜಿ. ಸರ್‌ದೇಸಾಯಿ ನವಕರ್ನಾಟಕ ಪ್ರಕಾಶನ, ಪುಟ ೫೯)

ವೀರಾಜಪೇಟೆ ತಾಲೂಕಿನ ಶೆಟ್ಟಿಗೇರಿ ಎನ್ನುವ ಗ್ರಾಮದಲ್ಲಿ ಇವತ್ತಿಗೂ ನಡೆಯುವ ಬೋಡು ನಮ್ಮೆ ಎನ್ನುವ ಉತ್ಸವದಲ್ಲಿ ಪುರುಷ ದೇವತೆ ಮತ್ತು ಭಗವತಿ ದೇವತೆಯ ಜನನಾಂಗಗಳ ಬಗ್ಗೆ ಹಾಡುತ್ತ ನರ್ತನ ಮಾಡುತ್ತಾರೆ. ಮೇಲು ಮಧ್ಯಮ ಮತ್ತು ಕೆಳಜಾತಿಗಳವರು ಭಾಗವಹಿಸುವ ಈ ಹಬ್ಬದಲ್ಲಿ ನಿಸ್ಸಂಕೋಚವಾಗಿ ಲೈಂಗಿಕತೆಯ ಬಗ್ಗೆ ಹಾಡುಗಳನ್ನು ಹಾಡಲಾಗುತ್ತದೆ, ನರ್ತಿಸಲಾಗುತ್ತದೆ. ಹೀಗೆ ಲೈಂಗಿಕತೆಯ ಉತ್ಸವಗಳನ್ನು ವಿಧಿ ವಿಧಾನಗಳನ್ನು ವಿಕಾರಗಳೆಂದು ತಳ್ಳಿಹಾಕುವ ಪೋಲಂಕಿಯವರ ನಿಲುಮೆ ವಸ್ತುನಿಷ್ಠವಾದುದಲ್ಲ.

ವೇದಕಾಲದಲ್ಲಿ ಸ್ತ್ರೀ :

"ಹೀಗಾಗಿ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು ಮೂಲ ಭಯಳಾಗಿದ್ದಾಳೆ. ಈ ಮೂಲಭೀತಿ ನಮ್ಮ ಸಂಸ್ಕೃತಿಯ ಆದಿಯಾದ ಋಗ್ವೇದದಿಂದಲೇ ಹುಟ್ಟಿಕೊಳ್ಳುತ್ತದೆ, ಋಗ್ವೇದದಲ್ಲಿ 'ಕಿರುಬನ ಹೃದಯಗಳು' ಐತರೇಯ ಬ್ರಾಹ್ಮಣರಲ್ಲಿ 'ದಾರಿಕಾ ಹೃದಯದಾರಿಕಾ' ಅಂದರೆ ಹೆಣ್ಣು ಹೃದಯವನ್ನು ಭೇದಿಸುವಳು"... (ಪುಟ ೨೭) ಎನ್ನುತ್ತಾರೆ ಪೋಲಂಕಿ ರಾಮಮೂರ್ತಿ.

ಆದರೆ ಸಂಕ್ರಮಣದ ಇದೇ ಸಂಚಿಕೆಯ "ಹಿಂದೂಧರ್ಮ ಮತ್ತು ಮಹಿಳೆಯರು" ಎನ್ನುವ ಲೇಖನದಲ್ಲಿ ಮೀರಾ ಚಕ್ರವರ್ತಿ ವೇದಕಾಲದಲ್ಲಿ ಮಹಿಳೆಯರಿಗಿದ್ದ ಸ್ಥಾನಮಾನ ಈಗ ನಾಶವಾಗಿದೆ ಎಂದು ವಾದಿಸುತ್ತಾರೆ (ಪುಟ ೭೨). ಅವರು ತಮ್ಮ ವಾದದ ಸಮರ್ಥನೆಗಾಗಿ ಬೃಹದಾರಣ್ಯಕ, ಉಪನಿಷತ್ತು, ಪಾಣಿನಿ, ಋಗ್ವೇದ, ಬೃಹತಂಹಿತಾ ಇವುಗಳನ್ನು ಉದಾಹರಿಸುತ್ತಾರೆ,

ಆದರೆ ಪ್ರಾಚೀನ ಕಾಲದ ಮಹಿಳೆಯರ ಸ್ಥಾನಮಾನಗಳನ್ನು ಗ್ರಂಥಗಳ ಆಯ್ದ ಭಾಗಗಳ ಹೇಳಿಕೆಗಳ ಆಧಾರದಲ್ಲಿ ನಿರ್ಧರಿಸಲು ಸಾಧ್ಯವಿಲ್ಲ.

"ಸ್ಥೂಲವಾಗಿ ಹೇಳುವುದಾದರೆ, ಕ್ರಿಸ್ತ ಶಕಾರಂಭಕ್ಕಿಂತ ೧೫೦೦ ವರ್ಷಗಳಷ್ಟು ಹಿಂದೆ ಋಗ್ವೇದ ರಚನೆಯ ಕಾಲ ಆರಂಭವಾಯಿತೆನ್ನಬಹುದು. ವೈದಿಕ ವಾಙ್ಮಯದ ಕೊನೆಯ ಘಟ್ಟ ಕ್ರಿ, ಪೂರ್ವ ೫೦೦-೬೦೦ ವರ್ಷಗಳೆಂದು ಧಾರಾಳವಾಗಿ ಹೇಳಬಹುದು." (ಎಸ್. ಜಿ. ಸರ್‌ದೇಸಾಯಿ, ಪುಟ ೪೮)

ವೇದ ಉಪನಿಷತ್ತುಗಳಲ್ಲಿ ಬರುವ ಸ್ತ್ರೀಯರ ಬಗೆಗಿನ ಹೇಳಿಕೆಗಳನ್ನು ಆಯಾ ಕಾಲದ ನಿರ್ದಿಷ್ಟ ಆರ್ಥಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು.

"ವೇದಕಾಲದ ಪ್ರಥಮ ಹಂತದಲ್ಲಿ ಮಹಿಳೆಯರ ಸ್ಥಾನಮಾನ ಹೆಚ್ಚು ಕಮ್ಮಿ ತೃಪ್ತಿಕರವಾಗಿತ್ತು. ಸಹಶಿಕ್ಷಣವೇ ನಿಯಮವಾಗಿತ್ತು ಮತ್ತು ಸತಿ, ಶಿಶುವಿವಾಹ ಆಮೇಲೆ ಬಂದಿತು. ಹೆಂಗಸರು ಸ್ವತಂತ್ರವಾಗಿ ಬಲಿ ಕೊಡುತ್ತಿದ್ದರು. ಮತ್ತು ವಿಧಿಗಳ ಆಚರಣೆಯಲ್ಲಿ ಅವರನ್ನು ತೊಡಕೆಂದು ಭಾವಿಸಲಾಗುತ್ತಿರಲಿಲ್ಲ." (ಸೋಫಿ ಎಂ. ತರಗನ್, ಮೈಕೆಲ್ ತರಗನ್—ಸೋಷಿಯಲ್ ಸೈಂಟಿಸ್ಟ್ ನವ್ಹಂಬರ-ಡಿಸಂಬರ ೧೯೭೫, ಪುಟ ೧೧೭)

ಆದರೆ ಕ್ರಮೇಣ ಖಾಸಗಿ ಆಸ್ತಿ ಒಡೆತನ ರೂಪುಗೊಂಡು ಪದಾರ್ಥ ಉತ್ಪಾದನೆಯಿಂದ ಮಹಿಳೆಯ ಸಾಮಾಜಿಕ ಸ್ಥಾನಮಾನ ಹದಗೆಟ್ಟಿತು. ಮಹಾರಾಜರುಗಳ ಬ್ರಾಹ್ಮಣರ ಆಳ್ವಿಕೆಯ ಊಳಿಗಮಾನ್ಯ ಭೂ ಒಡೆತನ ಬಲಿಷ್ಠವಾಗಿದ್ದ ಸಮಾಜಗಳಲ್ಲಿ ಜಾತಿಪದ್ಧತಿ ರೂಪುಗೊಂಡು ಮಹಿಳೆ ಎಲ್ಲ ಶೋಷಣೆ,ದಬ್ಬಾಳಿಕೆ ಮತ್ತು ಕ್ರೌರ್ಯಕ್ಕೆ ಬಲಿಯಾದಳು. ಮೇಲು ಜಾತಿಯ ಹೆಂಗಸರು ಸಾಮಾಜಿಕ ಕಟ್ಟುಪಾಡುಗಳಿಗೆ ಬದ್ಧರಾಗಿ ಮನೆ ಕೆಲಸಗಳಲ್ಲಿ ನಿರತರಾದರೆ ಕೆಳಜಾತಿಗಳ ಹೆಂಗಸರು ಅಸ್ಪೃಶ್ಯತೆಯೊಂದಿಗೆ ಕೂಲಿಕಾರರಾಗಿ ಶೋಷಣೆಗೆ ಬಲಿಯಾದರು. ಏಕಪತ್ನಿ ಪಿತೃಪ್ರಧಾನ ಕುಟುಂಬವನ್ನು ಜಾರಿಗೆ ತಂದ ಊಳಿಗಮಾನ್ಯ ಭೂ ಒಡೆತನದ ವ್ಯವಸ್ಥೆ ಹಿಂದಿನ ಸಮಾಜಗಳು ನೀಡಿದ್ದ ಸ್ಥಾನಮಾನಗಳನ್ನು ನಿರ್ಮೂಲನಗೊಳಿಸಿದವು.

ಸ್ತ್ರೀ ಮೂಲಭಯ: ಆದರೆ ಪ್ರೋಲಂಕಿ ರಾಮಮೂರ್ತಿಯವರು ಆರ್ಥಿಕ ಸ್ಥಿತ್ಯಂತರದ ಹಿನ್ನಲೆಯಲ್ಲಿ ಮಹಿಳೆಯ ಸ್ಥಾನಮಾನಗಳನ್ನು ವಿಶ್ಲೇಷಿಸುವುದಿಲ್ಲ. ರಣಚಂಡಿ. ದುರ್ಗಕಾಳಿ ಎಂದು ಹರಿಜನರಿಂದ ಬ್ರಾಹ್ಮಣರವರೆಗೆ ಹೆಣ್ಣನ್ನು ಪೂಜಿಸುವ ಭಾರತೀಯ ಸಂಸ್ಕೃತಿಯೇ ಹೆಣ್ಣನ್ನು ಗುಲಾಮಗಿರಿಗೆ ತಳ್ಳಿ ಜೀವಸಹಿತ ಸುಡುವ ಪದ್ಧತಿಯನ್ನು ಪ್ರತಿಪಾದಿಸುವ ವೈರುಧ್ಯವನ್ನು "ಸ್ತ್ರೀಭಯ" ಎನ್ನುವ ವಾದದ ಮೂಲಕ ವಿವರಿಸುತ್ತಾರೆ. (ಪುಟ ೩೭)

ಆದರೆ ಸ್ತ್ರೀ ಮೂಲಭಯ ಎಂದರೇನು ಎನ್ನುವ ಬಗ್ಗೆ ಸ್ಪಷ್ಟವಾಗಿ ಖಚಿತವಾಗಿ ವಿವರಿಸದೆ ಉದ್ವೇಗದ ಹೇಳಿಕೆಗಳನ್ನು ಕೊಡುತ್ತಲೇ ಹೋಗಿದ್ದಾರೆ.

'ಸ್ತ್ರೀ ಮೂಲಭಯ' ಇದರ ಸ್ವರೂಪವೇನು ? ಮತ್ತು ಇದರ ಹುಟ್ಟಿಗೆ ಕಾರಣವೇನು ? ಇದು ನಮ್ಮ ಪರಂಪರೆಯಲ್ಲಿ ಹರಿದು ಬಂದ ಸ್ಥಾಯಿಯಾದ ಭಾವವೇ ?

ನಮ್ಮ ಸಮಾಜಗಳು ದಾಟಿ ಬಂದ ಬುಡಕಟ್ಟು ಜನಾಂಗ ವ್ಯವಸ್ಥೆ, ಗುಲಾಮಗಿರಿ ವ್ಯವಸ್ಥೆ, ಮತ್ತ ಊಳಿಗಮಾನ್ಯ ವ್ಯವಸ್ಥೆಗಳಲ್ಲಿ ಮತ್ತು ಸದ್ಯದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ಸ್ತ್ರೀ ಭಯ ಭಾವದ ಸ್ವರೂಪ ಹೇಗಿತ್ತು ? ಅಥವ ಯಾವ ಬದಲಾವಣೆಯೂ ಹೊಂದದ ಕಾಲಾತೀತವಾದ ಸ್ಥಗಿತವಾದ ಭಾವವೋ ?

ಈ ವಿಚಾರಗಳ ಬಗ್ಗೆ ಚರ್ಚೆ ಅವಶ್ಯ; ಯಾಕೆಂದರೆ ಯಾವುದೆ ಸಮಸ್ಯೆಯ ವ್ಯಾಖ್ಯಾನ ದಲ್ಲಿಯೇ ಅದರ ಪರಿಹಾರಗಳೂ ಸೂಚಿತವಾಗುತ್ತದೆ. ಮಹಿಳೆಯರ ವಿಮೋಚ ನೆಯ ಬಗೆಗೆ ಕಾಳಜಿಯಿಂದ ಬರೆಯುತ್ತ ರಾಮಮೂರ್ತಿಯವರು ಭಾರತೀಯ ಕ್ಷೋಭೆಗೆ ಏಕೈಕ ಕಾರಣ ಲೈಂಗಿಕ ಸಂಕೋಚ ಮತ್ತು ಮಹಿಳೆಯರನ್ನು ಮುಟ್ಟ ದಿರುವಿಕೆ ಎನ್ನುತ್ತಾರೆ. (ಪುಟ ೪೦-೪೩)

ಲೈಂಗಿಕ ಸ್ವಚ್ಛಂದತೆ ಮತ್ತು ಮುಕ್ತತೆಯ ಬಗ್ಗೆ ಪ್ರೋಲಂಕಿ ರಾಮಮೂರ್ತಿಯವರು ಅತಿಯಾದ ಒತ್ತು ಕೊಡುವುದರಿಂದ ಅದು ಕೆಲವು ಅಪಾಯಕಾರಿ ಭ್ರಮೆಗಳನ್ನು ಹುಟ್ಟಿಸುತ್ತದೆ. ಸ್ವಚ್ಛಂದ ಲೈಂಗಿಕ ಸಂಬಂಧಗಳಲ್ಲಿ ನಿಸ್ಸಂಕೋಚವಾದ ಸ್ಪರ್ಶದಲ್ಲಿ ಎಲ್ಲ ಅಸಮಾನತೆಗಳೂ ತನ್ನಿಂದ ತಾನೆ ಕಳಚಿ ಹೋಗುತ್ತದೆ ಎನ್ನುವ ಹಾಗಿದ್ದರೆ ಈ ಸಮಾನತೆಯನ್ನು ಮೇಲು ವರ್ಗದ ಜನ ನಮ್ಮ ನಗರಗಳ ಕ್ಲಬ್ಬುಗಳಲ್ಲಿ ಡಿಸ್ಕೊ ನೃತ್ಯಗಳಲ್ಲಿ ಈಗಾಗಲೇ ಸಾಧಿಸಿದ್ದಾರೆ ಎನ್ನಬೇಕಾಗುತ್ತದೆ.

ಸ್ವಚ್ಛಂದ ಸ್ಪರ್ಶವನ್ನು ಮಾತ್ರ ಪ್ರತಿಪಾದಿಸುವ ಪ್ರೋಲಂಕಿ ರಾಮಮೂರ್ತಿಯವರು ಮಹಿಳೆಯನ್ನು ಶೋಷಣೆ ಮತ್ತು ದಾರಿದ್ರ್ಯಕ್ಕೆ ಗುರಿಮಾಡಿದ ಬಂಡವಾಳಶಾಹಿ

ಭೂಮಾಲಿಕ ಪ್ರಭುತ್ವದ ವಿರುದ್ಧ ಕ್ರಾಂತಿಕಾರಿ ವರ್ಗ ಹೋರಾಟದ ಬಗ್ಗೆ ಚಕಾರ ವೆತ್ತುವುದಿಲ್ಲ. ವರ್ಗ ವಿಶ್ಲೇಷಣೆಯುನ್ನು ನಿರಾಕರಿಸುವ ಈ ನಿಲುವು ಎಡ ಪಂಥೀಯು ಹೋಗಲಿ' ಪ್ರಜಾಪ್ರಭುತ್ವವಾದಿಯೂ ಅಲ್ಲ. ಯಾಕೆಂದರೆ ಲೆನಿನ್ ಹೇಳಿದಂತೆ "ಮಹಿಳೆಯುರ ಸಂಪೂರ್ಣ ವಿಮೋಚನೆ ಸಾಧ್ಯವಾಗಿಸಲು ಮತ್ತು ಆಕೆ ಪುರುಷ ನೊಡನೆ ಸರಿಸಮಾನ ಸ್ಥಾನಗಳಿಸಲು ರಾಷ್ಟ್ರೀಯ ಆರ್ಥಿಕತೆಯನ್ನು ಸಾಮಾಜೀಕರಣ ಗೊಳಿಸುವುದು ಮತ್ತು ಸಾಮಾನ್ಯ ಉತ್ಪಾದಕ ದುಡಿಮೆಯಲ್ಲಿ ಮಹಿಳೆಯುರು ಭಾಗವಹಿಸುವುದು ಅವಶ್ಯ."

ಅವ್ವನ ಪಂಚಮಿ

ಮೊನ್ನೆ ಹೋದ ನಾಗರ ಪಂಚಮಿ ದಿನದಂದು.
ನನ್ನ ಹೊಲಗೇರಿ ಗೆಳೆಯುನ ನಾ ಕಂಡು ಬಂದ
ವಿಷಯ ಅವ್ವನಿಗೆ ತಿಳಿದಿತ್ತಂತೆ.
ಬಂದ ತಕ್ಷಣ ಅವ್ವನ ಸಲಹೆಯಂತೆ
ಅಪ್ಪ ಒಂದೆರಡು ಒದ್ದು ನನ್ನ
ಬಿಸಿ ನೀರಿನಿಂದ ಸ್ನಾನಮಾಡಿಸಿದ್ದ–ನಾ ಪುನೀತನಾಗಲು!

ಅದೇ ಸಂಜೆ–ಹೊಲಗೇರಿಯ ಹೆಂಗಸೊಬ್ಬಳು
ಕೊಳೆತು ನಾರುತ್ತಿದ್ದ ಕಸಬಾರಿಗೆ.
ಹೇಸಿಗೆ ಹತ್ತಿದ ಕಾಲಿನಿಂದ 'ಕಲ್ಲುನಾಗಪ್ಪ'ನ
ಕಟ್ಟೆ ಗುಡಿಸಿ ಹೋದಳು.
ಅವ್ವ ಕಟ್ಟೆ ಸುತ್ತ ಪಣತೆ ಇಟ್ಟು
ನಾಗಪ್ಪನಿಗೆ ಎರೆದ ಹಾಲು, ಕಟ್ಟೆ ಕೊಚ್ಚಿಕೊಂಡು
'ತೀರ್ಥ'ವಾಗಿ ಅವ್ವನ ಹೊಟ್ಟೆ ಸೇರಿತ್ತು.
ಮರುಕ್ಷಣವೇ ಅವಳಿಗೆ 'ಪಂಚಮಿ' ಯಾಗಿತ್ತು !

ಪ್ರಾಯಶಃ ಆಗ ನಾನಷ್ಟು ನಕ್ಕಿದ್ದು
ನನ್ನ ಜೀವಿತ ಅವಧಿಯಲ್ಲಿ ಕೊನೆಯದೇ ಆದೀತು !

ಅಂಬಾದಾಸ ವಡೆ.

ಭಗವಾನ್ : ಸಾಂಪ್ರದಾಯಿಕ ಆಲೋಚನೆ

ಪ್ರತಿಕ್ರಿಯೆ

ಎಸ್. ಶಿವಾನಂದ

ಸಂಕ್ರಮಣ ೧೨೫–೧೨೬ರಲ್ಲಿ ಪ್ರಕಟವಾಗಿರುವ ಭಗವಾನ್ ಅವರ 'ರಾಮಾಯಣದ ಸೀತಾಯಣ' ಕುರಿತ ಪ್ರತಿಕ್ರಿಯೆ ಆಳದಲ್ಲಿ ಸಾಂಪ್ರದಾಯಿಕ ಆಲೋಚನೆಯನ್ನು ಸೂಸುತ್ತದೆ.ಭಗವಾನರ ವಾದ:"ವಾಲ್ಮೀಕಿಯ ಮಹಾಕಾವ್ಯದಲ್ಲಿ ಸೀತಾಲಕ್ಷ್ಮಣರಿಗೆ ಕಳಂಕ ತಟ್ಟುವಂಥ ಒಂದು ಅಂಶವೂ ಇಲ್ಲ. 'ರಾಮಾಯಣದ ಸೀತಾಯಣ'ದ ಅಭಿಪ್ರಾಯಗಳು (ಸಂ. ೧೨೧) ಸರಿಯಲ್ಲ. ಅವರ ಲೇಖನದ ಶೀರ್ಷಿಕೆಯೇ ಅನಾವಶ್ಯಕ (Superflous), ಏಕೆಂದರೆ ಸೀತೆಯಿಲ್ಲದಿದ್ದರೆ ರಾಮಾಯಣವೇ ಇಲ್ಲ. ರಾಮಾಯಣವೆಂದರೆ, ಅದು ಸೀತಾಯಣವೂ ಹೌದು; ಆದರೆ ಅದು ಡಾ. ಪೋಲಂಕಿಯವರ ಅರ್ಥದಲ್ಲಿ ಅಲ್ಲ."

ಭಗವಾನರ ದೃಷ್ಟಿಯಲ್ಲಿ 'ಸೀತಾಯಣ' ಲೇಖನದಲ್ಲಿ ಸೀತಾ–ಲಕ್ಷ್ಮಣರಿಗೆ "ಕಳಂಕ ತಟ್ಟುವಂಥ" ಅಂಶಗಳಿವೆ; ಹಾಗಾಗಿ ಪೋಲಂಕಿಯವರ 'ಸೀತಾಯಣ' ಲೇಖನ ವಾಲ್ಮೀಕಿಯ 'ರಾಮಾಯಣ'ಕ್ಕೆ ವಿರುದ್ಧವಾಗಿದೆ; ಮತ್ತು ಇದರಿಂದಾಗಿ ಮೂಲಕ್ಕೆ ಅಪಚಾರ ಮಾಡಲಾಗಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಭಗವಾನರು ಪೋಲಂಕಿಲೇಖನದಲ್ಲಿನ ಕೆಲವಾರು ಅಂಶಗಳಿಗೆ ಪ್ರತಿಕ್ರಿಯಿಸಿದ್ದಾರೆಯೇ ಹೊರತು ಪೋಲಂಕಿಯವರು ಸೀತಾಲಕ್ಷ್ಮಣರ ಬಗ್ಗೆ ಕಟ್ಟಿಕೊಡುವ ಹೊಸತಾದ ವಿಚಾರದೃಷ್ಟಿಯನ್ನು ಕುರಿತಂತೆ ವಿಭಿನ್ನಪಾಠ–ಪರ್ಯಾಯ–ದೃಷ್ಟಿಯನ್ನೇನೂ ಮಂಡಿಸಿರುವುದಿಲ್ಲ. 'ವಾಲ್ಮೀಕಿ ಏನು ಹೇಳುತ್ತಾನೆ' ಎಂಬ ಪಾಠ್ಯಾನುಸಂಧಾನವೇ ಭಗವಾನರಿಗೆ ಮುಖ್ಯ. ಹಾಗಾಗಿ 'ಸೀತಾಯಣ'ದಲ್ಲಿನ ಒಟ್ಟು ತುಡಿತವನ್ನು ಮತ್ತು ಆ ತುಡಿತದ ಹಿಂದಿರುವ ಮಾನವೀಯ ಹಾಗೂ ಸ್ತ್ರೀ ಸಹಜ ವ್ಯಕ್ತಿತ್ವವನ್ನು–ಅಂತರಂಗವನ್ನು–ಗ್ರಹಿಸಲು ಭಗವಾನರಿಂದ ಸಾಧ್ಯವಾಗಿಲ್ಲ. ಸೀತಾಲಕ್ಷ್ಮಣರ ಅಂತರಂಗ ದರ್ಶನ ಭಗವಾನರಿಗೆ 'ಕಳಂಕ'ವಾಗಿ ಕಾಣುತ್ತದೆ. ಅವರು ಬಳಸಿರುವ ಈ 'ಕಳಂಕ' ಶಬ್ದದ ಹಿಂದೆ 'ಅನೈತಿಕ' ಎಂಬ ಅರ್ಥದ ವಾಸನೆ ಬಡಿಯುವುದರಿಂದ ಅವರು ಸೀತಾಲಕ್ಷ್ಮಣರ ಸಂಬಂಧವನ್ನು

ನೈತಿಕ ದೃಷ್ಟಿಯಿಂದ ಮಾತ್ರವೇ ನೋಡಲು ಕಣ್ಣುಪಟ್ಟಿ ಹಾಕಿಕೊಳ್ಳುತ್ತಾರೆ. ಆ ಸಂಬಂಧದ ಒಳನೋಟವನ್ನು ಅನೈತಿಕ, ಕಳಂಕ ಎಂದು ಅಲ್ಲಗಳೆಯುತ್ತಾರೆ. ಕೀರ್ತಿನಾಥ ಕುರ್ತಕೋಟಿ ಮತ್ತು ಭಗವಾನರನ್ನೊಳಗೊಂಡು ನಮ್ಮ ಅಸಂಖ್ಯಾತ ಪಂಡಿತರೂ, ವಿದ್ವಾಂಸರೂ ವಿಮರ್ಶಕ ವರೇಣ್ಯರೂ ಇಂಥ "ನೀತಿ ಪ್ರಜ್ಞೆ"-ನೈತಿಕ ಧೋರಣೆಯನ್ನು ಶತಶತಮಾನಗಳಿಂದ ಪ್ರಚುರಪಡಿಸುತ್ತಲೇ ಬಂದಿರುವುದನ್ನು ನೋಡಿದಾಗಲೇ ಪೋಲಂಕಿಯವರ ವಿಶ್ಲೇಷಣೆಯಲ್ಲಿನ ತಾಜಾತನ ಗೊತ್ತಾಗುತ್ತದೆ.

ಪೋಲಂಕಿಯವರ ಸೀತಾಲಕ್ಷ್ಮಣ ಪಾತ್ರಗಳ ಒಳನೋಟವನ್ನು ಕುರಿತ ವಿಶ್ಲೇಷಣೆ ಹೊಸತನದಿಂದ ಕೂಡಿದೆ ಎಂದು ಹೇಳುವುದರ ಉದ್ದೇಶ ಅದು ಕಾಲ್ಪನಿಕ ಎಂದಾಗಲಿ, ವಾಲ್ಮೀಕಿ ರಾಮಾಯಣದಿಂದ ಹೊರ ನಡೆದದ್ದಾಗಿದೆ ಎಂದಾಗಲಿ ಅಥವಾ ಮೂಲಕ್ಕೆ ವಿರುದ್ಧವಾಗಿದೆ ಎಂದಾಗಲಿ ಖಂಡಿತಾ ಅಲ್ಲ. ಪೋಲಂಕಿಯವರ ವಿಶ್ಲೇಷಣೆ ವಾಲ್ಮೀಕಿಯ ಮಾತುಗಳನ್ನೇ ಅವಲಂಬಿಸಿರುವುದನ್ನು ಕಣ್ಣಾರೆ ನೋಡಬಹುದು. ಆದರೆ ಅವರ ವಿಶ್ಲೇಷಣೆಯ ತಾಜಾತನವಿರುವುದು ಎಲ್ಲಿ ಅಂದರೆ, ನಮ್ಮ ಮಹಾಪಂಡಿತರೂ ಮಹಾನ್ ವಿದ್ವಾಂಸರುಗಳೂ ರಾಮಾಯಣವನ್ನು ವಾಚ್ಯದ ಮೇಲ್ಪದರಿನಲ್ಲೇ ಹಾಕಿಗಟ್ಟಿಸಿರುವ ಸಂದರ್ಭದಲ್ಲಿ ವಾಲ್ಮೀಕಿಯ ಮಾತುಗಳ ಹಿಂದಿನ ಸೂಚ್ಯಾರ್ಥವನ್ನು, ಒಳಸಂಬಂಧಗಳನ್ನು ಗುರುತಿಸಿರುವ ರೀತಿಯಲ್ಲಿ; ಮತ್ತು ಆ ಮೂಲಕ ಸಹಜ ಸ್ಪಂದನಗಳ ಸೂಕ್ಷ್ಮಪಾತಳಿಗಳನ್ನು ಅನಾವರಣಗೊಳಿಸಿರುವ ರೀತಿಯಲ್ಲಿ. ಹಾಗೆ ನೋಡಿದರೆ, ಪೋಲಂಕಿಯವರ ವಿಶ್ಲೇಷಣೆ ನೈತಿಕ ಧೋರಣೆಯಲ್ಲಿ ನೆಟ್ಟುಕೊಂಡಂಥ ಮತ್ತು ಧಾರ್ಮಿಕ-ಸಂಸ್ಕೃತಿಪರ ವ್ಯಾಖ್ಯಾನಕಾರರ ಸಂಕುಚಿತ ದೃಷ್ಟಿಕೋನ ದಿಂದ ಸಿಡಿದು ಬಂದಿದೆಯೇ ಹೊರತು ವಾಲ್ಮೀಕಿಯಿಂದ ಸಿಡಿದು ಬಂದಿಲ್ಲ, 'ಕಳಂಕ'ದ ಬಗ್ಗೆ ಮಾತನಾಡುವ ಭಗವಾನರು ಸೀತಾಲಕ್ಷ್ಮಣರ ಸಹಜ ಸ್ಪಂದನಗಳ ಮಾನವೀಯ ತುಡಿತಗಳಿಗೆ ಕುರುಡಾಗುತ್ತಾರೆ; ಅಷ್ಟೇ ಅಲ್ಲ, ಅನ್ಯಾಯ ಮಾಡುತ್ತಾರೆ: ಹಾಗೆಯೇ ಕಾವ್ಯದ ಧ್ವನಿಸೂಕ್ಷ್ಮಗಳಿಗೆ ಕಿವುಡಾಗುತ್ತಾರೆ.

ಸೀತಾಲಕ್ಷ್ಮಣರ ಸಹಜ ಸ್ಪಂದನಗಳಿಗೆ ಸೂಕ್ಷ್ಮ ಹೊಳಹು ನೀಡುವ ವಾಲ್ಮೀಕಿಯ ಮಾತುಗಳು ಹಾಗೂ ಸಂದರ್ಭಗಳು ಹೊಮ್ಮಿಸುವ "ಧ್ವನಿ ಸಂಬಂಧ"ಗಳ ಬೆಳವಣಿಗೆಯನ್ನು ಗುರುತಿಸಲಾಗದ ಅಸಮರ್ಥತೆ ಎನ್ನುವುದಕ್ಕಿಂತ ಇದಕ್ಕೆ ಇರುವ ಮತ್ತೊಂದು ಮಗ್ಗುಲನ್ನು ಗ್ರಹಿಸಬೇಕಾಗುತ್ತದೆ. "ವಾಲ್ಮೀಕಿಯ ಮಹಾಕಾವ್ಯದಲ್ಲಿ ಸೀತಾಲಕ್ಷ್ಮಣರಿಗೆ ಕಳಂಕ ತಟ್ಟುವಂಥ ಒಂದು ಅಂಶವೂ ಇಲ್ಲ" ಎಂಬ ನಿರ್ದುಷ್ಟ-'ಧೀರೋಧಾತ್ತ' ಹೇಳಿಕೆಯೊಳಗಡೆ ಪಾವಿತ್ರ್ಯ-ಪಾತಿವ್ರತ್ಯ-ನೀತಿಪ್ರಜ್ಞೆಗಳಿಗೆ ಪುಳಕಿತರಾಗುವ ವಿವೇಕಾನಂದ ಹಾಗೂ ಹಿಂದೂ ವಿದ್ವನ್ಮಣಿಗಳ ಪ್ರತಿಧ್ವನಿ ಅಡಗಿರುವುದನ್ನು ಸೂಕ್ಷ್ಮವಾಗಿ ಗಮನಿಸಿದಾಗ,ಭಗವಾನರ ಹೇಳಿಕೆ 'ವಿಮರ್ಶೇತರ' ಭೀತಿ. ಕಳವಳದ ಸೂಚಿಯಾಗಿ ಕಾಣುತ್ತದೆ.

'ರಾಮಾಯಣದ ಸೀತಾಯಣ' ಎಂಬ ಶೀರ್ಷಿಕೆಯ ಬಗ್ಗೆ ಭಗವಾನರು ಎತ್ತಿರುವ ಮತ್ತು ಅಪಸ್ವರ, ಹೊಸ ದೃಷ್ಟಿಕೋನವೊಂದನ್ನು ಅತ್ಯಂತ ಸಮರ್ಥವಾಗಿ ಅಭಿವ್ಯಕ್ತಿಸುವ, ಮನ ಮುಟ್ಟಿಸುವ ಸಮಂಜಸ ಮತ್ತು ಔಚಿತ್ಯಪೂರ್ಣ ಜಾಣ್ಮೆಯನ್ನು ಅಲ್ಲಗಳೆಯುವ ಪೊಂಡುತನವಾಗಿದೆ. "ರಾಮಾಯಣವೆಂದರೆ, ಅದು ಸೀತಾಯಣವೂ ಹೌದು" ಎಂಬುದು ಭಗವಾನರ ಅಂಬೋಣ; ಅರ್ಥಾತ್ ನಮ್ಮ ಹಿಂದೂ ಸಂಸ್ಕೃತಿಯ ಉರುಫ್ ಪುರುಷ ಪ್ರಧಾನ ಸಂಸ್ಕೃತಿಯ ವಕ್ತಾರರು, ವ್ಯಾಖ್ಯಾನಕಾರರು ರಾಮಾಯಣದ ಕಾಲದಿಂದಲೂ ಅಚಲವಾಗಿ ನಂಬಿಸಿಕೊಂಡು ಬಂದಿರುವ ವ್ಯವಸ್ಥಿತ ರೀತಿಯ ಮಹಾನ್ ಜಾಣತನವೇ ಆಗಿದೆ!

ಸ್ಪಷ್ಟವಾಗಿ ಹೇಳಬೇಕೆಂದರೆ, ವಾಲ್ಮೀಕಿಯ ರಾಮಾಯಣ ಪುರುಷಪರ ಸಂಸ್ಕೃತಿಯನ್ನು ಎತ್ತಿಹಿಡಿದರೆ, ಪೋಲಂಕಿಯ ಸೀತಾಯಣ ಸ್ತ್ರೀಪರ ಸಂಸ್ಕೃತಿಯನ್ನು ಸ್ಥೂಲವಾಗಿ ಎತ್ತಿಹಿಡಿಯುತ್ತದೆ. (ಈ ಸಂದರ್ಭದಲ್ಲಿ ದಿವಂಗತ ಸ್ನೇಹಲತಾ ರೆಡ್ಡಿ ಬರೆದ 'ಸೀತಾ' ನಾಟಕ ನೆನಪಾಗುತ್ತದೆ.) ಹಾಗಂತ ವಾಲ್ಮೀಕಿ ಸ್ತ್ರೀ ದ್ವೇಷಿಯೇ ಎಂದು ತಪ್ಪು ತಿಳಿಯಬೇಕಾಗಿಲ್ಲ; ಏಕೆಂದರೆ ವಾಲ್ಮೀಕಿಯು ಕೊಟ್ಟ ಧ್ವನಿ ಸೂಕ್ಷ್ಮಗಳ ಮೇಲೆಯೇ ಸೀತಾಯಣವನ್ನು ಪೋಲಂಕಿ ಮುಂದಿಟ್ಟಿರುವುದು.

ಇನ್ನು ಭಗವಾನರ ಪ್ರತಿಕ್ರಿಯೆಯಲ್ಲಿ ಸ್ವಾಗತಿಸಬಹುದಾದ ಒಂದೆರಡು ಅಂಶಗಳೆಂದರೆ ಮೊದಲನೆಯದಾಗಿ, 'ಸೀತಾ', 'ಲಕ್ಷ್ಮಣ' ಪದಗಳ ಅರ್ಥಗಳನ್ನು ಪ್ರೋಲಂಕಿ ತಮ್ಮ ತರ್ಕಕ್ಕೆ ಬಗ್ಗಿಸಿಕೊಳ್ಳಲು ಆ ಪದಗಳನ್ನು ಲೈಂಗಿಕಾರ್ಥಕ್ಕೆ ಬಲಾತ್ಕರಿಸಿರುವುದು ವಿಕೃತ ಇಲ್ಲವೆ ಅಸಹ್ಯಕರವಾಗಿ ಕಾಣುತ್ತದೆ. 'ಸೀತಾ' ಎಂದರೆ 'ಉಳುವಲ್ಲಿ ಭೂಮಿಯಲ್ಲಿ ಬೀಳುವ ಗೆರೆ' ಎಂಬುದು ಸರಿಯಾದ ಅರ್ಥ ಇರಬಹುದೇನೋ: ಏಕೆಂದರೆ ನೇಗಿಲು ಉಳುವಾಗ ಸಿಕ್ಕವಳು ಭೂಜಾತೆ ಎಂಬ ಪ್ರತೀತಿ ಉಂಟು. ಆದರೆ 'ಬಿತ್ತನೆ'ಗೆ ಕಾತರಳಾದ 'ನೆಲ' ಎಂದು, 'ಲಕ್ಷ್ಮಣ' ಎಂದರೆ 'ಜನನೇಂದ್ರಿಯ', Sexual organ ಎಂದೂ ಹೇಳಲು ಪ್ರೋಲಂಕಿಯವರಿಗೆ ಸಿಕ್ಕ ಆಧಾರವಾದರೂ ಏನು? ಇದೇ ರೀತಿ, "ನಿರೀಕ್ಷ್ಯ ಮಾಮ್ಯ ಗಚ್ಛತ್ವಮ ಋತಕಾಲ ಅತಿವರ್ತಿನೀಂ" ಎಂಬ ವಾಲ್ಮೀಕಿಯ ಸಾಲಿಗೆ "ಅವಳ ದೇಹದ ಯಾವುದೋ ಭಾಗವನ್ನು, ಪ್ರದೇಶವನ್ನು ಕಣ್ಣಾರೆ ನೋಡಬೇಕು" ಎಂಬುದಾಗಿ ಸಿಗ್ಗಾಮುಗ್ಗಾ ಜಗ್ಗಾಡಿ ವಿವರಿಸಿರುವುದೂ ಕೂಡ ಅಸಹ್ಯಕರ. ವಾಚ್ಯಾರ್ಥದ ಮಬ್ಬಾಳಿಕೆಗೆ ಪ್ರೋಲಂಕಿ ಇಂಥಲ್ಲಿ ತಾವೇ ಬಲಿಯಾಗಿದ್ದಾರೆ. ಆದರೆ ಇಂಥ ಅಸಭ್ಯ ವ್ಯಾಖ್ಯಾನಕ್ಕೆ ಪ್ರೋಲಂಕಿ ಎಷ್ಟು ಜವಾಬ್ದಾರರೋ ಕೀರ್ತಿನಾಥ ಕುರ್ತಕೋಟಿಯವರೂ ಅಷ್ಟೇ ಮಟ್ಟಿಗೆ ಕಾರಣರಾಗಿದ್ದಾರೆ. ಒಟ್ಟಿನಲ್ಲಿ "ಲಕ್ಷ್ಮಣ, ನನಗೆ ಋತುಕಾಲ ನಿಂತಿರುವುದನ್ನು ಕಣ್ಣಾರೆ ನೋಡಿ ಹೋಗು" ಎಂಬ ಕುರ್ತಕೋಟಿಯವರ ವ್ಯಾಖ್ಯಾನವನ್ನು ಇನ್ನಷ್ಟು ಹಿಂಜಿ ಹಿಪ್ಪೆ ಮಾಡಿದ ಅಪಕೀರ್ತಿ ಪ್ರೋಲಂಕಿಯವರಿಗೇ ಸಲ್ಲಬೇಕು.

ಭಗವಾನರು ಕೊಡುವ ಇನ್ನುಳಿದ ವಿವರಗಳು–ರಾಮಸೀತೆಯರ ಸಂತೃಪ್ತ ಪ್ರೇಮ ಜೀವನ ಕುರಿತ ಉದ್ಗಾರಗಳು, ಸೀತೆಯ ಪತಿಭಕ್ತಿ, ರಾಮನ ಗಂಡಸುತನದ ಪುರಾವೆ ಇತ್ಯಾದಿ ಅಪ್ರಸ್ತುತ; ಏಕೆಂದರೆ ಸೀತಾಯಣ ಲೇಖನದಲ್ಲಿ ಬೆಳೆಯುತ್ತಾ ಬರುವ ದೃಷ್ಟಿಕೋನದ ಅಂತರ್ನೋಟವನ್ನು ಗ್ರಹಿಸಲು ವಿಫಲವಾಗಿರುವುದನ್ನು ಈ ವಿವರಗಳು ಸೂಚಿಸುತ್ತವೆ.

ಕೊನೆಯದಾಗಿ, ಭಗವಾನ್ ತಮ್ಮ ಪ್ರತಿಕ್ರಿಯೆಯ ಪ್ರಾರಂಭದಲ್ಲಿ "ಡಾ. ಶಂ. ಬಾ. ಜೋಷಿಯವರೂ ಸೇರಿದಂತೆ ವಾಲ್ಮೀಕಿ ರಾಮಾಯಣವನ್ನು ಯಾರೂ ಸಮಗ್ರವಾಗಿ ಓದಿಲ್ಲ ಎನಿಸುತ್ತದೆ" ಎಂಬುದಾಗಿ ನುಡಿದಿದ್ದಾರೆ. ಇದರರ್ಥ, ತಾವೊಬ್ಬರೇ (ಇಲ್ಲವೆ ವಿದ್ವಾನ್ ರಂಗನಾಥ ಶರ್ಮ ಎಂಬ ಇನ್ನೊಬ್ಬರು) 'ಸಮಗ್ರ' ಓದಿದವರು ಎಂದು. ಇಂಥ ಗ್ರಹಿಕೆ ಮೂಲತಃ ವಿಮರ್ಶಕನ, ಸಹೃದಯನ ಸಭ್ಯತೆಯನ್ನೇ ಇಕ್ಕಿಮೆಟ್ಟುವ ಸರ್ವಾಧಿಕಾರೀ ಸವಾಲಾಗುತ್ತದೆ. ●

ನಿಸರ್ಗದತ್ತಾ

ಎಲೈ ದೇವರೆ, ನಿನಗೆ ಅಂಜಲಾರೆ;
ಕೈ ಮುಗಿಯಲಾರೆ.
ಉತ್ತಮರಿಗೆ ಹುಟ್ಟಿ
ಹಿಗ್ಗಾ ಮುಗ್ಗಾ ಬೆಳೆದ ನಿನ್ನ ಲೀಲೆಗಳ ಬಗ್ಗೆ
ಮೈ ಉರಿಯುತ್ತದೆ; ರಕ್ತ ಕುದಿಯುತ್ತದೆ.

ಹೊಟ್ಟೆಗಾಗಿ ದುಡಿದು, ಹಸಿದಾಗ ತಿಂದು
ಖುಷಿಯಾದಾಗ ಕುಣಿಯುತ್ತಾ ಮನುಷ್ಯನಾಗಿ ಬದುಕುತ್ತೇನೆ
ನಿನ್ನದೇನು ಹಂಗು?

ನನ್ನನ್ನು ಹುಟ್ಟಿಸೆಂದು ಕಾಡಿ ಬೇಡಿರಲಿಲ್ಲ-
ಅಪ್ಪ–ಅವ್ವ ಇವರ ತೀಟೆಗಾಗಿ
ನನ್ನ ಹುಟ್ಟು ಆಕಸ್ಮಿಕ.
ನನ್ನಿಚ್ಚೆಯಂತೆ ನಿಸರ್ಗಕ್ಕೆ ಬದ್ಧನಾಗಿದ್ದೇನೆ.
ತಪ್ಪು–ಪಾಪ–ನರಕ ಎಂದರೆ ನಿನ್ನನ್ನು
ಯಾವುದರಲ್ಲಿ ಪೂಜಿಸುವೆ ಗೊತ್ತೆ?

ಎಸ್. ಆರ್. ಗುರುನಾಥ್

ಸೀತಾಯಣ : ಒಂದು ಅಡಿ ಟಿಪ್ಪಣಿ

ಪೋಲಂಕಿ ರಾಮಮೂರ್ತಿ

ನಾವೆಲ್ಲರೂ ಬಾಲ್ಯದಿಂದಲೂ ರಾಮಾಯಣವನ್ನು ನಾನಾ ರೀತಿಯಲ್ಲಿ ಕೇಳುತ್ತಾ ಓದುತ್ತಾ ಬಂದಿದ್ದೇವೆಯಾದರೂ ಒಂದು ಆಶ್ಚರ್ಯದ ಸಂಗತಿಯೆಂದರೆ ನಾವಾರೂ ಯಾವಾಗಲೂ, ರಾಮನು ಎತ್ತಿ ಹೆದೆ ಏರಿಸಬೇಕಾಗಿದ್ದ ಬಿಲ್ಲು ಏಕೆ ಮುರಿಯಿತು, ಧನುರ್ಭಂಗ—ಆ ಸರ್ಗದ ಶೀರ್ಷಿಕೆ ರಾಮಾಯಣದಲ್ಲಿ 'ಧನುರ್ಭಂಗಃ' ಎಂತಲೇ ಇದೆ—ವಾಯಿತೇಕೆ, ಅದೊಂದು ಅನಾಹುತವಲ್ಲವೇ, ಅಪಕಾರ್ಯವೂ, ದುರ್ದೆಶೆಯ ಸಂಕೇತವೂ, ದುಶ್ಶಕುನವೂ ಅಲ್ಲವೇ-ಎಂಬ ಪ್ರಶ್ನೆಗಳನ್ನು ಕೇಳಿಕೊಂಡಂತಿಲ್ಲ. ಆದರೆ ರಾಮಾಯಣದಲ್ಲಿ ಧನುರ್ಭಂಗ ಸಂಕೇತಿಸುವಂತೆ ರಾಮನಿಗೆ ಆ ಬಿಲ್ಲಿನಿಂದಲೇ 'ವೀರ್ಯ ಶುಲ್ಕ'ಳಾಗಿ ಬಂದ ಸೀತೆ ಅಪಹೃತಳಾಗುತ್ತಾಳೆ, ಆಮೇಲೆ ರಾಮನೇ ಅವಳನ್ನು ಕಾಡಿಗಟ್ಟಿ ಅವಳ ದಾಂಪತ್ಯದಿಂದ ತಾನೇ ವಂಚಿತನಾಗುತ್ತಾನಲ್ಲದೆ, ರಾಮನಿಗೆ ವನವಾಸದಲ್ಲೂ, ಅಯೋಧ್ಯೆಯಲ್ಲೂ ಮಕ್ಕಳಾಗುವುದಿಲ್ಲ—ಆದ ಮಕ್ಕಳಾದರೂ ರಾಮನಿಂದ ತ್ಯಕ್ತಳಾದ ಸೀತೆಗೆ ಅರಣ್ಯದಲ್ಲಿ, ಅವರ ಲವ ('ಉಣ್ಣೆ', 'ತುಪ್ಪಟೆ', 'ಕೂದಲು') ಕುಶ ('ದರ್ಭೆ')' ಹೆಸರುಗಳು ಸಂಕೇತಿಸುವಂತೆ, ನಿಸರ್ಗದಲ್ಲಿ ಹುಟ್ಟಿದ 'ನಿಸರ್ಗ'ದ ಮಕ್ಕಳು.

ರಾಮನು 'ದಂಡಪಾಣಿ', 'ಕೋದಂಡ ರಾಮ'—ಬಿಲ್ಲೆ ರಾಮನಾದವನು. ಅವನು ಪಣದಂತೆ ಧನುಸ್ಸನ್ನು ಹೆದೆಯೇರಿಸಬೇಕಾಗಿತ್ತು, ಶರಸಂಧಾನ ಮಾಡಬೇಕಾಗಿತ್ತು-ಏಕೆಂದರೆ ಜನಕನು ಶರಸಂಧಾನದ ಷರತ್ತನ್ನೂ ಹೇಳುತ್ತಾನೆ. ಇದೇ ರೀತಿ ಮುಂದೆ ರಾಮನು, ಪರಶುರಾಮನ ಸ್ಪಷ್ಟ ಷರತ್ತಿನಂತೆ ವೈಷ್ಣವ ಧನುಸ್ಸಿನ ಹೆದೆಯೇರಿಸುವುದಷ್ಟೇ ಅಲ್ಲ, ಶರಸಂಧಾನವನ್ನೂ ಮಾಡುತ್ತಾನೆ. ಅಂದರೆ ಪಣದ ಪೂರೈಕೆ ಬಿಲ್ಲನ್ನೆತ್ತಿ, ಅದನ್ನು ಹೆದೆ ಏರಿಸುವ ಟೆನ್‌ಷನ್ (tension)ನಲ್ಲಿ, ಆ ಟೆನ್‌ಷನ್ನಿನ ಧಾರಣೆ ಸಮರ್ಥಿಸುವ ಶರಸಂಧಾನದಲ್ಲಿ ಇದೆ—to erect the bow and hold it in the tension of its string.* ಈ ಕ್ರಿಯೆ ಪುರುಷನ ವೀರ್ಯ ('ಪರಾಕ್ರಮ', 'ಧಾತು')ದ, ಅಂದರೆ ಧನುರ್ಧಾರಣದ ಪರಾಕ್ರಮದ ಹಾಗೂ ಅದು

ಸ್ಪಂದಿಸುವ ಪ್ರಖರ ಲೈಂಗಿಕ ಸಾಮರ್ಥ್ಯದ ಸವಾಲು; ಆದ್ದರಿಂದಲೇ ಸೀತೆ,ಜನಕನು ಮತ್ತೆ ಮತ್ತೆ ಹೇಳುವಂತೆ, 'ವೀರ್ಯಶುಲ್ಕ'ಳಾಗುವ ಅನ್ವರ್ಥಳು–ಪರಾಕ್ರಮಕ್ಕೆ, ವೀರ್ಯ (ಧಾತು)ಕ್ಕೆ ಬೆಲೆಯಾಗಿ ಬರುವವಳು.

ಆದರೆ ಸೀತೆ ಅನಸೂಯೆಗೆ ಹೇಳುವಂತೆ–'ತೇನ ಪೂರಯತ ಮಧ್ಯೇ ಭಗ್ನಂ ದ್ವಿಧಾಧನುಃ'—'ಹೆದೆ ಏರಿಸುವ ಕಾರ್ಯ ಪೂರೈಸುತ್ತಿದ್ದ ಅವನಿಂದ (ರಾಮನಿಂದ) ಮಧ್ಯದಲ್ಲಿ ವೇಗದ ಕಾರಣದಿಂದ ಧನಸ್ಸು ಎರಡು ತುಂಡಾಗಿ ಮುರಿಯಲ್ಪಟ್ಟಿತು'. ಈ ಮಾತಿನಲ್ಲಿ ಹೆದೆಯೇರಿಸುವ ಕಾರ್ಯ ಸಂಪೂರ್ಣಗೊಂಡಂತೆ, ಪರಿಸಮಾಪ್ತಿ ಯಾದಂತೆ ಕಾಣುವುದಿಲ್ಲ.

ಆಮೇಲೆ ನಾವು ಇನ್ನೊಂದು ವಿಷಯವನ್ನು ಗ್ರಹಿಸಬೇಕು. 'ವೀರ್ಯ ಶುಲ್ಕ'ಳೆಂದೇ ಅಂಕಿತಳಾದ, ಬಿಲ್ಲನ್ನು ನಿರ್ದೇಶಿಸುವ ಸೀತೆ,ರಾಮನು ಧನುರ್ಭಂಗ ಮಾಡಿದ ಮೇಲೆ ತನ್ನನ್ನು ನಿರಾಕರಿಸುವುದನ್ನು ಅನಸೂಯೆಯಲ್ಲಿ ಹೇಳಿಕೊಳ್ಳುತ್ತಾಳೆ—'ದೀಯಾ ಮಾನಾಂ ನ ತು ಜಗ್ರಾಹ ರಾಘವ', ರಾಮ ತನ್ನ (ಕೈ) **ಹಿಡಿ**ಯಲಿಲ್ಲವೆನ್ನುತ್ತಾಳೆ, ಏಕೆಂದರೆ ರಾಮ ತಂದೆಯ ಇಚ್ಛೆ ಇಲ್ಲದೆ ಮದುವೆಯಾಗುವುದಿಲ್ಲವೆನ್ನುತ್ತಾನೆ. ಅಂದಾಗ ಹೆಣ್ಣಾದ ಸೀತೆಯಲ್ಲಿ ರಾಮ ತನ್ನನ್ನು ವರಿಸುವ ಉತ್ಸಾಹ, ಪ್ರೇಮಿಯ ಆಕಾಂಕ್ಷೆಯನ್ನು ತೋರದ ಅಳುಕು ಸೀತೆಯಲ್ಲಿ ಇದ್ದಿರಲಿಕ್ಕೆ ಸಾಕು; ಇಲ್ಲಿಯ ಈ ಕ್ಷಣದ ನಿರಾಕರಣೆಯೇ ಸೀತೆಯ ಅಪಹರಣವನ್ನೂ, ಅವಳು ರಾಮನಿಂದ ಪರಿತ್ಯಕ್ತ ಳಾಗುವುದನ್ನೂ ಮುನ್ಸೂಚಿಯಾಗಿ ಸಂಕೇತಿಸುತ್ತದೆ.

ಹೀಗೆ ಒಂದು ಗುಪ್ತಗಾಮಿಯಾದ ವಿಷಮತೆ, ವೈರುಧ್ಯ ರಾಮನ ಸ್ವಭಾವದಲ್ಲೇ, ವರ್ತನೆಯಲ್ಲೇ ಧ್ವನಿಸುತ್ತದೆ. ಇಂತಹ ರಾಮನೊಂದಿನ ಸಹವಾಸದ ಸನ್ನಿವೇಶ ದಲ್ಲಿ ಸೀತೆಗೆ ಲಕ್ಷ್ಮಣನತ್ತಣ ಒಲವು (ಓಲುವಿಕೆ ಹಾಗೂ ಒಲುಮೆ) ಸಹಜವಾಗು ವುದು ಅತಿಶಯದ, ಅತಿ ಸೋಜಿಗದ ವಿಷಯವಾಗಲಿಕ್ಕಿಲ್ಲ. ರಾಮಾಯಣದ ಮಟ್ಟಿಗೆ ಈ ಪ್ರೇಮಿಗಳ ಸಹಜ ಜೈವಿಕ ತುಡಿತ, ಆ ತುಡಿತ ಅಭಿನಯಿಸುವ ಘಟನಾ ವಿಶೇಷ, ಸೃಷ್ಟಿಸುವ ಸನ್ನಿವೇಶ, ವಾತಾವರಣ, ಸಾಮಗ್ರಿ ಅದರ ಕಾವ್ಯ ದೃಷ್ಟಾರ ತೆಯ ದರ್ಶನದ, ಸತ್ಯಸಾಕ್ಷಾತ್ಕರತೆಯ ಸಾಕ್ಷ್ಯವಾಗಿವೆ.

---

* ಅಡಿಟಿಪ್ಪಣಿ :

ಇದು ಪುಂಸತ್ವದ,ಲೈಂಗಿಕ ಕ್ರಿಯಾ ಸಾಮರ್ಥ್ಯದ ಅಂದರೆ ಪೋಟೆನ್ಸಿ(potency)ಯ ಒಂದು ಪ್ರಖರ ಸಂಕೇತ. ಹಾಗೆಯೇ ಧನುರ್ಭಂಗ, ಆ ಸಾಮರ್ಥ್ಯವಿಲ್ಲದ, ಇಂಪೊಟೆನ್ಸಿ (impo ency)ನ ಸಂಕೇತವೂ ಹೌದು. ಈ ಸನ್ನಿವೇಶದಲ್ಲಿ ಸೀತೆ

ರಾಮನ ಬಗ್ಗೆ ಅನಸೂಯೆ ಎದುರು ಏನು ಗುಣಗಾನ ಮಾಡುತ್ತಾಳೆ ಎಂಬುದನ್ನು ಗಮನಿಸಬೇಕು. ಸೀತೆ ರಾಮನು 'ಜಿತೇಂದ್ರಿಯ'ನೆಂದೂ, ಅವನು ತನಗೆ 'ಮಾತೃವತ್ ಪಿತೃವತ್ ಪ್ರಿಯಃ' ತಂದೆ ತಾಯಿಯಂತೆ ಪ್ರಿಯನೆಂದೂ, ದಶರಥನ ಅಂತಃಪುರದ ಸ್ತ್ರೀಯರಲ್ಲೂ ತಾಯಿಯ ಗೌರವವೇ ಉಳ್ಳವನಾಗಿದ್ದಾನೆ ಎನ್ನುವಲ್ಲಿ ಪ್ರೇಯಸಿಯು ತನ್ನ ಪ್ರಿಯಕರನಲ್ಲಿ, ಅದರಲ್ಲೂ ಮದುವೆಯಾದ ಹೊಸದರಲ್ಲಿ, ಅಪೇಕ್ಷಿಸುವ ಶೃಂಗಾರ ಪ್ರಿಯತೆ, ರಸಿಕತೆ, ರಾಮನೆಂಬ ನಾಮವೇ ಸುಚಿಸುವಂತೆ, ರಮ್ಯತೆ, ರಮಿಸುವ ಗುಣ, ಇಲ್ಲಿ ಸೂಚ್ಯವಾಗಿಯೂ ಕಂಡು ಬಾರದಿರುವುದಿರಲಿ. ಅವಳು ಪ್ರಿಯನನ್ನು ಕೀರ್ತಿಸುವಲ್ಲಿ ಈ ಶೃಂಗಾರಾನುರಾಗ ಸಂವೇದನೆಗೆ ನೇರವಾಗಿ ವಿರುದ್ಧವಾದ, ಜಿತೇಂದ್ರಿಯತೆ, ವಿಲಾಸ ಸ್ತ್ರೀಯರಲ್ಲಿ ತಾಯ್ತನವನ್ನು ಕಾಣುವಿಕೆ, ತಾನೇ ತನ್ನ ಹೆಂಡತಿಗೆ ತಾಯಿಯಂತೆ ತಂದೆಯಂತೆ ಪ್ರೀತಿಸುವಿಕೆಗಳನ್ನು ಗುರುತಿಸುತ್ತಿರುವುದು ಧನುರ್ಭಂಗದ ಸಂಕೇತದ ಹಿನ್ನೆಲೆಯಲ್ಲಿ ಹಾಗೂ ಮುಂಬರುವ ದಾಂಪತ್ಯಕ್ಕೆ ವಿರೋಧವಾಗಿರುವ ಘಟನೆಗಳ ಸಮಕ್ಷಮದಲ್ಲಿ, ಸ್ವಲ್ಪ ಯೋಚಿಸಬೇಕಾದ ವಿಷಯವೇ ಆಗಿದೆ.

ಬಂಡಾಯ : ಕೆಲವು ಸಂದೇಹಗಳು

ನರಹರಿ

ಕಳೆದ ಎರಡು ಮೂರು ವರ್ಷಗಳಿಂದ ನಾನು ಸಂಕ್ರಮಣದ regular ಓದುಗ. ಇಲ್ಲಿನ ಲೇಖನಗಳನ್ನು ಬಂಡಾಯದ ಸ್ರೋತಸ್ಸಿನ representative ಧ್ವನಿಗಳೆಂದು ಪರಿಗಣಿಸಬಹುದಾದಲ್ಲಿ, ಈ ಆಂದೋಲನದ ಬಗ್ಗೆ ನನಗೆ ನಿರಾಸೆ ಸಿಟ್ಟು ಹೆಚ್ಚಾಗುತ್ತಿದೆ.ಒಂದು ವಸ್ತುನಿಷ್ಠ ಬೌದ್ಧಿಕ ಸಂಪ್ರದಾಯ ನಮ್ಮ ಪರಿಸರದಲ್ಲಿ ಬೆಳೆದು ಬರಬೇಕೆಂಬುದನ್ನು 'ಬಂಡಾಯ'ದ ಪ್ರತಿನಿಧಿಗಳು ಒಪ್ಪುತ್ತಾರೆಂದು ಅಂದು ಕೊಳ್ಳುತ್ತೇನೆ. ಅಂತಹ Intellectual tradition ಹುಟ್ಟಿಬರಬೇಕಾದರೆ, ತಾವು ಯಾವುದರ ಬಗ್ಗೆ,ಏನನ್ನು ವಿಮರ್ಶಿಸುತ್ತಿದ್ದೇವೆ ಎಂಬ ಕಲ್ಪನೆ ವಿಮರ್ಶಕರಿಗೆ ಸ್ಪಷ್ಟವಾಗಿರಬೇಕು. ನಿಮ್ಮ ಪತ್ರಿಕೆಯ ಲೇಖಕರಾದ ಅನೇಕ ವಿಮರ್ಶಕರಲ್ಲಿ ಈ ಸ್ಪಷ್ಟತೆ ಇಲ್ಲವೆಂದು ನನ್ನ ಅನಿಸಿಕೆ. ಉದಾಹರಣೆಗೆ 'ಕುಮಾರವ್ಯಾಸನ ಶ್ರೀಕೃಷ್ಣ ಪರ ಮಾತ್ಮನೇ?' ಎಂಬ ಲೇಖನ ಹಾಗೂ ಹಿಂದಿನ ಸಂಚಿಕೆಯೊಂದರಲ್ಲಿ 'ರಾಮಾಯಣದ ಸೀತಾಯಣ' ಎಂಬ ಲೇಖನ–ಇವುಗಳಲ್ಲಿ ಲೇಖಕರು ಏನನ್ನು ವಸ್ತುವಾಗಿ ವಿಮರ್ಶಿ ಸುತ್ತಿದ್ದಾರೆ ಎಂಬುದೇ ಅರ್ಥವಾಗುವುದಿಲ್ಲ.

ರಾಮಾಯಣ ಅಥವಾ ಕುಮಾರವ್ಯಾಸನ ಕಾವ್ಯವನ್ನು ಒಂದು ಚಾರಿತ್ರಿಕ ಆಗರವಾಗಿ ತೆಗೆದುಕೊಳ್ಳುವುದು ಸಾಧ್ಯವಿರಬಹುದು—ಆದರೆ ಹಾಗೆ ಮಾಡಬೇಕಾದರೆ, ಗ್ರಂಥ ಗಳಿಂದ ಚಾರಿತ್ರಿಕ ಅಂಶಗಳನ್ನು ಹಿಂಜಿ ತೆಗೆಯುವ ವಿಧಾನ (method) ಚಾರಿತ್ರಿಕ ಸಂಶೋಧನಾ ಶಾಸ್ತ್ರದಲ್ಲಿ ಸಾಕಷ್ಟು ಚರ್ಚೆಗೊಳಗಾದ, ಬೆಳವಣಿಗೆಯನ್ನು ಹೊಂದಿದ theme. ಅಂತಹ ಕೆಲಸವೊಂದು ಮೇಲಿನ ಲೇಖಕರ ಉದ್ದೇಶವಲ್ಲ ಎಂಬುದು ಸ್ಪಷ್ಟ. ಆದರೆ ಈ ಲೇಖಕರಿಗೆ ತಾವು ಅಂತಹದ್ದೇನನ್ನೋ ಮಾಡುತ್ತಿದ್ದೇವೆ ಎಂಬ ಕಲ್ಪನೆಯಿದೆ ಎಂಬ ಸಂದೇಹ ಹುಟ್ಟುತ್ತದೆ.

ಈ ಗ್ರಂಥಗಳನ್ನು ಕಾವ್ಯವಾಗಿ ತೆಗೆದುಕೊಂಡಲ್ಲಿ, ಕಾವ್ಯದ Theme ಏನು, ಎಂತಹ thesisಗಳು ಕಾವ್ಯದಲ್ಲಿ ಅಡಕವಾಗಿವೆ-ಎಷ್ಟರಮಟ್ಟಿಗೆ ಈ theme ಅಥವಾ thesisಗಳು adequate ಆಗಿ ಕಾವ್ಯದಲ್ಲಿ embody ಆಗಿವೆ, ಈ ಅಂಶ, thime,

thesisಗಳ ಸತ್ಯಾಸತ್ಯತೆಯನ್ನು ವಿಮರ್ಶಿಸುವುದರ ಮುಂಚೆ ಕಾವ್ಯದಿಂದ interpretation ಮೂಲಕ ಹೊರತರಬೇಕು—ಈ interpretation ಕ್ರಿಯೆಗೆ ಕಾವ್ಯದ ಸಮಗ್ರ ಹೇಳಿಕೆಗಳನ್ನು ಆಧಾರಭೂತವಾಗಿಟ್ಟುಕೊಳ್ಳಬೇಕೆಂಬುದು fiction-interpretationನ elementary principle ಆಗಿದೆ. ಮೇಲಿನ ಲೇಖಕರು ಇಂತಹ ಕೆಲಸವೊಂದನ್ನು ಮಾಡುತ್ತಿಲ್ಲ.

ಅವರುಗಳ ಮುಖ್ಯ ಉದ್ದೇಶ ನಮ್ಮ ಪರಿಸರದಲ್ಲಿರುವ ಕೆಲವು ಸಾಂಪ್ರದಾಯಿಕ ನಂಬಿಕೆ, ಮೌಲ್ಯಗಳನ್ನು debunk ಮಾಡುವುದು ಆಗಿರಬಹುದು. ಈ ಉದ್ದೇಶ ಬಹಳ ಮುಖ್ಯವಾದದ್ದು ಹಾಗೂ ಒಳ್ಳೆಯದೇ ಇರಬಹುದು. ಆದರೆ, ಇವರುಗಳು debunk ಮಾಡುವುದು ಏನನ್ನು ? 'ಕೃಷ್ಣ', 'ಪರಮಾತ್ಮ' ಎಂಬ ನಂಬಿಕೆಯನ್ನೇ ? ಯಾವ ತರಹದ 'ಕೃಷ್ಣ' ಕಲ್ಪನೆಯನ್ನು ಇವರು debunk ಮಾಡಲು ಉದ್ದೇಶಿಸುತ್ತಿದ್ದಾರೆ ? Text-adiquate interpretation ಮಾಡಿ ಅಲ್ಲಿರುವ ಕಲ್ಪನೆಗಳಲ್ಲಿರುವ ವೈಚಿತ್ರ್ಯಗಳನ್ನು ತೋರಿಸುವುದು debunking ಆಗಬಹುದು—ಆದರೆ text-interpretationನ ಗೋಜಿಗೆ ಹೋಗದೇ ತಮ್ಮದೇ ಆವ ಕಲ್ಪನೆಗಳನ್ನು ಸೃಷ್ಟಿಸಿಕೊಂಡು ವಿಮರ್ಶಿಸುವುದರಿಂದ- ಇವರು ಸಾಧಿಸಬಯುಸುವ ಉದ್ದೇಶವೇನು ? ಇವರ ಉದ್ದೇಶ text-interpretation ಅಲ್ಲ, ಪರಿಸರದ ನಂಬಿಕೆಗಳನ್ನು debunk ಮಾಡುವುದು ಎಂದುಕೊಳ್ಳೋಣ. ಹಾಗಿದ್ದಲ್ಲಿ ಪರಿಸರದ ನಂಬಿಕೆಗಳು, ಅವುಗಳ ನೆಲೆ, ನೆಲೆಗಳನ್ನು ವಿಶದೀಕರಿಸಿ ವಿಮರ್ಶಿಸುವುದು ಮುಖ್ಯವಾಗುತ್ತದೆ. ಇದಾವುದನ್ನೂ ಮಾಡದೇ ಹರಟೆ ಹೊಡೆಯುವ ಮಾದರಿಯ ಹೇಳಿಕೆಗಳನ್ನು ಬರವಣಿಗೆಗಿಳಿಸುವುದು ವಿಮರ್ಶೆಯಾಗುವುದಿಲ್ಲ. ಚಾಕಚಕ್ಯತೆ ವಹಿಸಿದಲ್ಲಿ ಅದು ಒಂದು ಉತ್ತಮ ಹರಟೆ ಲೇಖನವಾಗಬಹುದು.) ಹರಟೆ ಹೊಡೆಯುವಾಗ ಬಹಳ creative ಆದ ಯೋಜನೆಗಳು ತಲೆದೋರುತ್ತವೆ, ನಿಜ. ಆದರೆ ಅದು ವಿಮರ್ಶೆಯಾಗಬೇಕಾದರೆ ಬಹಳ homework ಮಾಡಬೇಕು. Homework and clarity about the the theme ಇವೆರಡೂ ಬಂಡಾಯದ ಲೇಖಕರಲ್ಲಿ ಹೆಚ್ಚು ಹೆಚ್ಚಾಗಿ ಕಡಿಮೆಯಾಗುತ್ತಿವೆ ಎಂದು ನನ್ನ ಅನಿಸಿಕೆ.

●

ಮೇಲಿನದನ್ನು ಬರೆದ ಮೇಲೆ 'ರಾಮಾಯಣದಲ್ಲಿ ಸೀತಾಯಣ'-ಪ್ರತಿಕ್ರಿಯೆಗಳನ್ನು ಪುನಃ ಓದಿದೆ. ಶಂ. ಬಾ. ಜೋಶಿಯವರು etymology ಮೂಲಕ 'ಗುಹ್ಯಾರ್ಥ'ವನ್ನು ಬಯಲಿಗೆಳೆಯಲು ಹೊರಟಿದ್ದಾರೆ. ಯಾವುದರ 'ಗುಹ್ಯಾರ್ಥ'? ರಾಮಾಯಣ ಕಾವ್ಯದ ಗುಹ್ಯಾರ್ಥವೇ? ಅಥವಾ ಬ್ರಾಹ್ಮಣ ಸಂಸ್ಕೃತಿಯ ಪರಿಕಲ್ಪನೆ

ಗಳ ಗುಹ್ಯಾರ್ಥವಾಗಿದ್ದಲ್ಲಿ ಈ ಶಬ್ದಗಳ 'ಮೂಲ' ಅರ್ಥವನ್ನು (etymology method ಬಹಳ ವಿವಾದಾಸ್ಪದ.) ರಾಮಾಯಣದ ಲೇಖಕ ಉದ್ದೇಶಪೂರ್ವಕವಾಗಿ ಬಳಸಿ ಯಾವುದೋ ಅರ್ಥವನ್ನು ಹೊರಹೊಮ್ಮಿಸಲು ಪ್ರಯತ್ನಿಸಿದ್ದಾನೆ ಎಂದಾಗುತ್ತದೆ. ಹಾಗಿದ್ದಲ್ಲಿ ರಾಮಾಯಣ textನ consistent interpretation ಇವರುಗಳು ಮಾಡಬೇಕಾದ ಮೊದಲನೆಯ ಕೆಲಸ. ಸಂಸ್ಕೃತಿಯ ಆರಾಧಕರ ಸೊತ್ತಾದ 'ಗುಹ್ಯಾರ್ಥ' ಹೇಳುವುದನ್ನು, ಬಂಡಾಯ ಲೇಖಕರುಗಳು ಪ್ರಾಯಶಃ debunk ಮಾಡಲೂ ಉಪಯೋಗಿಸಬಹುದೆಂಬುದನ್ನು ತೋರಿಸುತ್ತಿದ್ದಾರೆ. ಆದರೆ ಜೋಶಿಯವರ 'ವಿಧಾನ' 'ಚರಿತ್ರೆಯ ಸತ್ಯಗಳನ್ನು ಹೊರಗೆಳೆಯುವ' Presupposition‌ನಿಂದ ಕೂಡಿದ್ದು. ಆದರೆ etymology ಮೂಲಕ ಚರಿತ್ರೆಯ ಸತ್ಯಗಳನ್ನು ಹೊರಗೆಳೆಯುವುದೂ, ಈ ಕಾವ್ಯ ನಮ್ಮನ್ನು ಮೋಸಮಾಡುತ್ತದೆ ಎಂಬ ರೀತಿಯ ಹೇಳಿಕೆಗಳೂ (ವ್ಯಾಮಿಶ್ರ ಶೈಲಿಯಲ್ಲಿ ಮೋಸಗೊಳಿಸುತ್ತಾ ಹೊರಟಿದೆ.) ಪರಸ್ಪರ ಅಸಂಬದ್ಧ. etymology ಮೂಲಕ ಚರಿತ್ರೆಯ ಸತ್ಯ (ಅದರ ಅರ್ಥ ಏನೇ ಇರಲಿ) ವನ್ನು discovery ಮಾಡುವವರು—'ಈ ಕಾವ್ಯ, ಈ ಗ್ರಂಥ ಮೋಸಗೊಳಿಸುತ್ತದೆ' ಎಂಬೀ ರೀತಿಯ ಹೇಳಿಕೆಗಳನ್ನು ಮಾಡಬಾರದು. ಉಳಿದ ಪತ್ರಗಳಲ್ಲೂ 'ಸೀತೆಗಾದ ಅನ್ಯಾಯ'ವನ್ನು ಸರಿಪಡಿಸಿದ್ದನ್ನು ಮೆಚ್ಚುವ ಧಾಟಿಯಲ್ಲಿವೆ. ಯಾವ 'ಸೀತೆಗೆ' ಆದ ಅನ್ಯಾಯ ? 'ಪೋಲಂಕಿ'ಯವರ ಮಾತನ್ನು ತೆಗೆದುಕೊಂಡರೆ ಕಾವ್ಯದ ಸೀತೆ—'ಸಹೃದಯೀ ಓದುಗನಿಗೆ' ಕಾವ್ಯದ ಮೂಲಕ ತಟ್ಟುವ 'ಸೀತೆಯ ನೋವು ನರಳಿಕೆಗಳ ಸೂಕ್ಷ್ಮ' 'ಹೃದಯಸ್ಪರ್ಶಿಯಾದ ಸತ್ಯವನ್ನು ಅರಿಯುವ ಪ್ರಕ್ರಿಯೆ ವಿಮರ್ಶೆ' ಎನ್ನುವ ರಾಮಮೂರ್ತಿ, ಕಾವ್ಯದಿಂದ ಹೊರಹೊಮ್ಮುವ theme, thesisಗಳು ಅವರ ವಿಮರ್ಶೆಯ ವಸ್ತು ಎಂಬುದನ್ನು ಒಪ್ಪುತ್ತಾರೆ ಎಂದುಕೊಳ್ಳುತ್ತೇನೆ. ಹಾಗಿದ್ದಲ್ಲಿ consistent interpretation of all the sentences of the text' ಅವರ ಗುರಿಯಾಗಿರಬೇಕು. 'ರಾಮಾಯಣದ **ಈ ಅಪ್ರಿಯ** ಸತ್ಯ' ಯಾವುದು ? ಪ್ರಾಯಶಃ 'ಹೆಣ್ಣಿನ ಜೀವನ ಕಣ್ಣೀರು' ಎಂಬ ಸಾಂಪ್ರದಾಯಿಕ, ಜನಸಾಮಾನ್ಯ interpretation. ಹೆಚ್ಚು text-faithful interpretation. ಆದರೆ ನಮ್ಮ 'ಬಂಡಾಯ'ದ ಪರಿಸರದಲ್ಲಿ debunking spirit ಎಷ್ಟು ಜೋರಾಗಿದೆಯೆಂದರೆ. **ಚರಿತ್ರೆ,** text, **ಇಂದಿನ ಸಾಂಸ್ಕೃತಿಕ ನಂಬಿಕೆಗಳು**— ಈ ಮೂರು ನಡುವಣ ಭೇದಗಳು debunkingಗೆ ಅಪ್ರಕೃತವಾಗುತ್ತಿದೆ.

●

ಸಂಕ್ರಮಣ : ೧೦೧-೧೨೪

ಜೂನ್ ೧೯೮೦ ರಿಂದ ಮೇ ೧೯೮೨

ಸಂಪುಟ ೧೬-೧೭

ಲೇಖನ-ಸೂಚಿ ಹಾಗೂ ಲೇಖಕ-ನಿರ್ದೇಶಿ

ಸಂಕಲನ

ಸಿ. ಆರ್. ಕರಿಸಿದ್ದಪ್ಪ

ಕಾವ್ಯ

ಕವನಗಳು

ಇಟ್ಟಣ್ಣವರ (ಶ್ರೀರಾಮ).
ದೇವರಲ್ಲಿ ಐತಿ ?
೧೭ (೭) ೧೧೯;
ಡಿಸೆಂಬರ ೧೯೮೧; ೩೪

ಕಂಬಳಿ (ಈರಪ್ಪ. ಎಂ).
ನನ್ನವ್ವ ಭಾರತಾಂಬೆಗೆ
೧೬ (೧–೨) ೧೦೧–೧೦೨;
ಜೂನ–ಜುಲೈ ೧೯೮೦; ೬೬

ಕಾಟಕರ (ಸರಜೂ).
ಮರಿಸೂರ್ಯ.
೧೬ (೧–೨) ೧೦೧–೧೦೨;
ಜೂನ್-ಜುಲೈ ೧೯೮೦; ೭-೮.

ಕಾಡನಕುಪ್ಪೆ (ಶಿವರಾಮು)
ವಶಿಷ್ಟ ಸಂತಾನ.
೧೬ (೧-೨)೧೦೧-೧೦೨;
ಜೂನ್-ಜುಲೈ ೧೯೮೦; ೫-೭.

ಕುಲಕರ್ಣಿ (ಜಿ.ಎಂ).
ಹೊರಟಿದೆ ಕಾಲ.
೧೭ (೧೦) ೧೨೨;
ಮಾರ್ಚ ೧೯೮೨; ೪೪

ಕೌಶಿಕ
ಲಾವಾಪ್ರವಾಹ.
೧೬ (೫) ೧೦೫;
ಅಕ್ಟೋಬರ ೧೯೮೦; ೫೧.

ಗಂಗಾಧರಮೂರ್ತಿ
ಒಂಬು ಪತ್ರ.
೧೬ (೧೦-೧೧) ೧೧೦-೧೧೧;
ಮಾರ್ಚ-ಎಪ್ರಿಲ್ ೧೯೮೧;೧೮

— —
ಮಾನವನ ಹಾಡು.
೧೭ (೭) ೧೧೯;
ಡಿಸೆಂಬರ ೧೯೮೧; ೪೨

ಗಂಗಾಧರಯ್ಯ (ಕೆ. ಆರ್).
ಅನಾವರಣ.
೧೭(೯)೧೨೧; ಫೆಬ್ರುವರಿ ೧೯೮೨;೧೮

ಗಣೇಶಕುಮಾರ (ಎಂ. ಆರ್.)
ಭೂಮಿ ತಿರುಗುವದಿಲ್ಲ ?
೧೬(೬-೭) ೧೦೬-೧೦೭;
ನವಂ-ಡಿಸೆಂ ೧೯೮೦; ೧೬

ಗೂನಡ್ಕ (ದಯಾನಂದ)
ಎರಡು ನೋಟ.
೧೭ (೯) ೧೨೧;
ಫೆಬ್ರುವರಿ ೧೯೮೨; ೩೪.

ಚಕ್ರಪಾಣಿ (ಎಂ. ವಿ.)
ಸೊನ್ನೆಗಳ ಸುತ್ತ.
೧೭ (೪) ೧೧೬;
ಸಪ್ಟಂಬರ ೧೯೮೧; ೩೦

ಚತುರ್ವೇದಿ (ಸುರೇಂದ್ರ)
ಮೂರು ಕವಿತೆಗಳು.
೧. ಕತ್ತೆ ಪು.೪೧.
೨. ಮಾರ್ಗದರ್ಶಿ ಪು. ೪೨.
೩. ರಾಜ-ನೀತಿ ಪು.೪೨.

ಕನ್ನಡಕ್ಕೆ : ಪಂಚಾಕ್ಷರಿ ಹಿರೇಮಠ
೧೬.(೩-೪) ೧೦೩-೧೦೪; ಅಗಸ್ಟ-ಸಪ್ಟಂಬರ ೧೯೮೦; ೪೧-೪೨.

ಚಾಟೆ (ಜಯಶ್ರೀ)
ಶೋಷಣೆ.
೧೬(೬-೭) ೧೦೬-೧೦೭;
ನವಂ-ಡಿಸೆಂ ೧೯೮೦; ೨೧.

ಪ್ರಭಾ (ಜೆ. ಎನ್).
ನನ್ನ ಹಾಡು.
೧೬(೬-೭)೧೦೬-೧೦೭;
ನವಂ-ಡಿಸೆಂ ೧೯೮೦; ೪೨

ಪ್ರದೀಪ ಕುಮಾರ (ಕೆ.ಸಿ.)
ಚರಿತ್ರೆ.
೧೬,(೧-೨) ೧೦೧-೧೦೨;
ಜೂನ-ಜುಲೈ ೧೯೮೦; ೯೫

ಪ್ರಮೋದ.
ಆಕೆ ಆತ ಮತ್ತು ಜಾತಿ
೧೬ (೬-೭) ೧೦೬-೧೦೭; ನವಂ-ಡಿಸೆಂ ೧೯೮೦; ೨೨

ಪಾತ್ರೋಟ (ಸತ್ಯಾನಂದ).
ಅರ್ಥವಾಗದವರು.
೧೬ (೧೨) ೧೧೨; ಮೇ ೧೯೮೧; ೪೦

ಪಾಟೀಲ (ವಿಜಯ)
ಡೊಂಬರಮತ್ತೂರು-ಅಮೇರಿಕ-ಡೊಂಬರಮತ್ತೂರು.
೧೭(೧೦)೧೨೨; ಮಾರ್ಚ ೧೯೮೨;
೩೯-೪೩.

ಪಾಟೀಲ (ಸಿದ್ಧನಗೌಡ)
ಎರಡು ಕವನಗಳು.
೧೬ (೬-೭) ೧೦೬-೧೦೭;
ನವಂ-ಡಿಸೆಂ ೧೯೮೦; ೫೬

ಪೂಜಾರಿ (ಸಿದ್ದರಾಜ).
ಪ್ರತೀಕ್ಷೆ.
೧೬ (೩-೪) ೧೦೩-೧೦೪;
ಅಗಸ್ಟ-ಸಪ್ಟಂಬರ ೧೯೮೦; ೭೨-೭೩

ಪೆಂಡಕೂರ (ಗುರುಮೂರ್ತಿ), ಅನು.
ತೆಲುಗು ದಿಗಂಬರ ಕವನಗಳು,
೧೬ (೧೨) ೧೧೨; ಮೇ ೧೯೮೧;
೫-೩೩

ಪೇರುಮನೆ (ವಿಠ್ಠಲ)
ಯಾತ್ರಿಕರು ಮತ್ತು ಆನೆಕಾಲು
೧೬ (೮-೯) ೧೦೮-೧೦೯;
ಜನೆ-ಫೆಬ್ರು ೧೯೮೧; ೮೮.

ಬಿಳಿಮಲೆ (ಪುರುಷೋತ್ತಮ).
ಉಸಿರಿಲ್ಲದವರು ಪದ ಹಾಡಿದರು.
೧೭(೪)೧೧೬; ಸಪ್ಟಂಬರ ೧೯೮೧;
೪೩-೪೪

——
ಕರ್ಮಸ್ಥಳದ ತಮ್ಮಪ್ಪನಿಗೆ
೧೬ (೩-೪) ೧೦೩-೧೦೪;
ಅಗಸ್ಟ-ಸಪ್ಟಂಬರ ೧೯೮೦; ೧೨

ಬೆಣಕಲ್ (ಗುರುರಾಜ)
ಇವ್ರು ನನ್ನೋವ್ರಾ ?
೧೬(೩-೪) ೧೦೩-೧೦೪;
ಅಗಸ್ಟ-ಸಪ್ಟಂಬರ ೧೯೮೦; ೮೦

ಭಟ್ಟ (ಟಿ. ಜಿ.)
ಎರಡು ಕವನಗಳು.
೧೬ (೮-೯) ೧೦೮-೧೦೯;
ಜನೆ-ಫೆಬ್ರು ೧೯೮೧; ೭೧-೭೨.

ಭರತನಹಳ್ಳಿ (ವಿದ್ಯಾ).
ಫಲಿತಾಂಶ
೧೭(೭)೧೧೯; ಡಿಸೆಂಬರ ೧೯೮೧; ೫೮

ಭವಾನಿ ಶಂಕರ್
ಖಿಂಗ್ ವಿಂಗ್
೧೭(೧೦)೧೨೨; ಮಾರ್ಚ ೧೯೮೨;೬೪

ಭಾಗ್ಯ.
ಒಂದು ಕೇಳಿಕೆ.
೧೬(೬-೭) ೧೦೬-೧೦೭;
ನವಂ-ಡಿಸೆಂ, ೧೯೮೦; ೬೪

ಭೀಮನಗೌಡರ (ಎಚ್.ಎಸ್.)
ನೆಚ್ಚಿನ ಪ್ರಾಣಿ.
೧೭(೭)೧೧೯; ಡಿಸೆಂಬರ ೧೯೮೧;
೩-೪.

ಮಂಜುನಾಥ್ (ಎಸ್).
ಸಿಗರೇಟು ಹೊತ್ತಿಸಿರುವಾಗ.
೧೬ (೩-೪) ೧೦೩-೧೦೪; ಅಗಸ್ಟ-
ಸಪ್ಟಂಬರ ೧೯೮೦; ೭೬

ಮಂದರಿ (ಎ. ಎಂ.)
ದೊಡ್ಡ ಶರಣು,
೧೭(೭)೧೧೯; ಡಿಸೆಂಬರ ೧೯೮೧; ೪

ಮಾರುತಿ (ಸಂಕನ್ನಾ).
ಬಡವರಯ್ಯ.
೧೬(೧-೨) ೧೦೧-೧೦೨;
ಜೂನ-ಜುಲೈ ೧೯೮೦; ೭೮.

ಮೂರ್ತಿ (ಸಿ. ನಾ.)
ನಮ್ಮದೇ ಕೋವಿ.
೧೬ (೬-೭) ೧೦೬-೧೦೭;
ನವಂ-ಡಿಸೆಂ ೧೯೮೦; ३೨.

ನಾಗಭೂಷಣ (ಡಿ. ಎಸ್.)
ಸಂಬಂಧವಿಲ್ಲದ ನಾಲ್ಕು ಪದ್ಯಗಳು.
೧೬ (३-೪) ೧೦३-೧೦೪;
ಅಗಸ್ಟ-ಸಪ್ಟಂಬರ; ೧೯೮೦; ೪३-೪೪

ನಾಯಕ (ವಿಷ್ಣು)
ನನ್ನ ಅಂಬಾರ ಕೊಡಲಿನ ಕಥೆ.
೧೬ (೧೦-೧೧) ೧೧೦-೧೧೧;
ಮಾರ್ಚ-ಎಪ್ರಿಲ್ ೧೯೮೧; ೪೧-೪೨.

——
ನಾನು ಶಬರಿಯಲ್ಲ.
೧೬ (೧-೨) ೧೦೧-೧೦೨;
ಜೂನ-ಜುಲೈ ೧೯೮೦; ३೦.

ನಾರಾಯಣ (ಕಿಕ್ಕೇರಿ).
ಗುಲಾಬಿ ಮತ್ತು ರಾಗಿತೆನೆ.
೧೬(३-೪) ೧೦३-೧೦೪;
ಅಗಸ್ಟ-ಸಪ್ಟಂಬರ ೧೯೮೦; ೬೦.

ನಿಜಾಮಕಾರ (ಭಗತರಾಜ).
ಒಂದು ಖಾಸ ಮಾತು.
೧೬ (೧-೨) ೧೦೧-೧೦೨;
ಜೂನ-ಜುಲೈ ೧೯೮೦; ೯೬.

ರಾಜಶೇಖರ (ಹನುಮಲಿ).
ಅರಾಜಕ ಪ್ರಜ್ಞೆ.
೧೬ (३-೪) ೧೦३-೧೦೪;
ಅಗಸ್ಟ-ಸಪ್ಟಂಬರ ೧೯೮೦; ೭೪-೭೫.

ರಾಧಾಕೃಷ್ಣರಾವ್ (ಯಂ.)
ಆಹ್ವಾನ.
೧೬ (३-೪) ೧೦३-೧೦೪;
ಅಗಸ್ಟ-ಸಪ್ಟಂಬರ ೧೯೮೦; ೭೪.

ರಾಮಸ್ವಾಮಿ (ಚೆ.)
ವ್ಯಾಪಾರ.
೧೭ (೪) ೧೧೬; ಸಪ್ಟಂ ೧೯೮೧; ೨೪.

ಲಂಬಾಪುರ (ವಿ.ಕೆ.ಬಿ.)
ಹೀಗೆ ಒಬ್ಬಳು ಹುಡುಗಿ.
೧೭ (೯) ೧೨೧; ಫೆಬ್ರು ೧೯೮೨; ३३

ಲಲಿತಾಂಬ (ಬಿ. ವೈ.)
ಹೆಣ್ಣು.
೧೬ (೧-೨) ೧೦೧-೧೦೨;
ಜೂನ-ಜುಲೈ ೧೯೮೦; ೮೦

ವಕ್ಕುಂದ (ಬಸವರಾಜ).
ಎರಡು ಕವನಗಳು.
೧೬ (೬-೭) ೧೦೬-೧೦೭;
ನವಂ-ಡಿಸೆಂ ೧೯೮೦; ೭೪.

ವಡಚನಾಳ (ತಿಂದಪ್ಪ)
ಮುಳ ಜಂಜೀ ಮಂದಿ.
೧೭ (೯) ೧೨೧; ಫೆಬ್ರು ೧೯೮೨; ೮

ವಿಜಯ (ಡಿ).
ನನ್ನ ಸನಿಹದ ಬದುಕು.
೧೬ (೧-೨) ೧೦೧-೧೦೨;
ಜೂನ-ಜುಲೈ ೧೯೮೦; ೭೯-೮೦

ಶಿವಪ್ರಕಾಶ್ (ಎಚ್. ಎಸ್.)
ಎರಡು ಕವನಗಳು.
೧೬ (೬-೭) ೧೦೬-೧೦೭;
ನವಂ-ಡಿಸೆಂ ೧೯೮೦; ३೧.

ಶ್ರೀನಿವಾಸನ್ (ಪೆಮ್ಮಿಗೆ).
ಅಮೇರಿಯಿಂದ ಬಂದ ಅಯ್ಯಂಗಾರಿ.
೧೭(೪)೧೧೬; ಸಪ್ಟಂಬರ ೧೯೮೧; ೧೦

ಪರೀಫ್ (ಸೈಯದ್ ಜಮೀರುಲ್ಲಾ)
ಬದುಕಿನ ಸಾಕ್ಷಿ.
೧೭(೪)೧೧೬; ಸಪ್ಟಂಬರ ೧೯೮೧; ೫೬.

ಸಬರದ (ವಿಜಯಶ್ರೀ)
ಎರಡು ಕವನಗಳು.
೧. ಲಕ್ಷ್ಮಣರೇಖೆ ದಾಟಿದವರು ಪು. ೫
೨. ಪಲ್ಲವಿ ಪು. ೬
೧೭(೯)೧೨೧; ಫೆಬ್ರು ೧೯೮೨; ೫–೬

ಸಖಿ.
ಇಂಡಿಯದ ಗಂಡನೊಬ್ಬನ ಸಖೀ
ಗೀತಗಳು.
೧೬ (೧೦-೧೧) ೧೧೦-೧೧೧;
ಮಾ-ಎಪ್ರಿಲ್ ೧೯೮೧; ೫೧-೫೮.

ಸುರೇಶ (ಕೆ. ಪಿ.)
ಮಹಾಲಂಗೋ.
೧೬(೫)೧೦೫; ಅಕ್ಟೊ ೧೯೮೦; ೫೨

ಸೋಮಶೇಖರ (ಪಿ.)
ಮನೆಯೊಳಗೆ ಮನೆಯೊಡೆಯನಿಲ್ಲ.
೧೬ (೮-೯) ೧೦೮-೧೦೯;
ಜನೆ-ಫೆಬ್ರು ೧೯೮೧; ೮೦.

ಹಂದ್ರಾಳ (ಕೇಶವರೆಡ್ಡಿ)
'ಕಾಮ್ರೇಡ್'ಗೆ ಒಂದುಪತ್ರ.
೧೬ (೧೦-೧೧) ೧೧೦-೧೧೧;
ಮಾ-ಎಪ್ರಿಲ್ ೧೯೮೧; ೩೯-೪೦

ಹಕಾರಿ (ದೇವೇಂದ್ರಕುಮಾರ).
ನಾನು-ಮತ್ತು ಕೆಲವರು-ನೀವು.
೧೬ (೧-೨) ೧೦೧-೧೦೨;
ಜೂನ-ಜುಲೈ ೧೯೮೦; ೪೮

ಹನಗವಾಡಿ (ರುದ್ರಪ್ಪ)
ಅಯ್ಯಗಳು ಅಕ್ಕಗಳು.
೧೭(೮)೧೨೦; ಜನೆವರಿ ೧೯೮೨; ೫೬

ಹಿರೇಮಠ (ಸೂಗಯ್ಯ)
ಆರಂಭವ ಮಾಡುವೆನಯ್ಯ.
೧೬ (೩-೪) ೧೦೩-೧೦೪;
ಅಗಸ್ಟ-ಸಪ್ಟಂಬರ ೧೯೮೦: ೫೯-೬೦

ಹುಲ್ಕುಂಟಿಮಠ (ಶಿವಪ್ರಕಾಶ).
ನವಿಲು ಜಾತಿಯ ಗಂಡು.
೧೭(೯)೧೨೧; ಫೆಬ್ರು ೧೯೮೨; ೭-೮.

ಹೆಗಡೆ (ಜೈರಾಮ)
ಆ ದಿನ ದೂರವಿಲ್ಲ.
೧೭(೬)೧೧೮: ನವಂ ೧೯೮೧; ೫೫-೫೬

ಅನುವಾದಿತ ಕವನಗಳು

ಕೃಷ್ಣಮೂರ್ತಿ (ಬಿ.)
ಹೇಳಬೇಕಾದ್ದನ್ನ ಹೇಳಿಬಿಡುತ್ತೇನೆ.
೧೭ (೭) ೧೧೯: ಡಿಶೆಂಬರ ೧೯೮೧:
೫೬-೫೮.
ಕನ್ನಡಕ್ಕೆ : ವಿಜಯ ಪಾಟೀಲ

ಝುಸ್ಲಾ (ಮಿಲಾಜ್)
ಗೋರಿಯ ಮೇಲಿನ ಹಾಡು.
೧೬ (೬-೭) ೧೦೬-೧೦೭;
ನವಂ-ಡಿಸೆಂ ೧೯೮೦; ೩೭-೩೮.
ಕನ್ನಡಕ್ಕೆ : ಶ್ರೀಪತಿ ಮಂಜಿನಬೈಲು.

ಪವಾರ [ದಯಾ]
ನನ್ನ ಭುಜಗಳು
೧೬ [೬–೭] ೧೦೬-೧೦೭;
ನವಂ–ಡಿಸೆಂ ೧೯೮೦; ೭೮.
ಕನ್ನಡಕ್ಕೆ : ಮಂಗ್ಳೂರ ವಿಜಯ

ಪಾರ್ಕ್ಸ್ [ಫ್ರೆಂಚ್]
ಅಚ್ಚಗಪ್ಪು ಆತ್ಮ.
೧೬ [೫] ೧೦೫; ಅಕ್ಟೋ ೧೯೮೦; ೫೦

ಕನ್ನಡಕ್ಕೆ : ತೇಜಸ್ವಿ ಕಟ್ಟೀಮನಿ

ಪಾಟೀಲ [ಬಾಪುಗೌಡ]
ಆಜ್ಞೇಯರ ಮೂರು ಕವನಗಳು
೧೬ [೧೦–೧೧] ೧೧೦-೧೧೧,
ಮಾರ್ಚ-ಎಪ್ರಿಲ್ ೧೯೮೧; ೩೬–೩೮

ದೇವತಾರೆ [ಚಂದ್ರಕಾಂತ]
ಹೈಪವರ ಕಮೀಶನ್ ಬತ್ತಲೆ
ಬಸ್ತರಕ್ಕೆ ಬಟ್ಟೆ ತೊಡಿಸುವುದು.
೧೭ [೮] ೧೨೦; ಜನವರಿ ೧೯೮೨;
೬೪.

ಕನ್ನಡಕ್ಕೆ : ತೇಜಸ್ವಿ ಕಟ್ಟೀಮನಿ

ಭಟ್ಟಾಚಾರ್ಯ[ಸಂಜಯ].
ಕದನ.
೧೭[೭]೧೧೯; ಡಿಶೆಂಬರ ೧೯೮೧; ೨೮

ಕನ್ನಡಕ್ಕೆ : ಜಿ. ಕುಮಾರಪ್ಪ

ಹಿರೇಮಠ [ಪಂಚಾಕ್ಷರಿ] ಅನು.
ಮೂರು ಕವನಗಳು.
೧೭[೫] ೧೧೭; ಅಕ್ಟೊ ೧೯೮೧; ೬೪
ಮೂಲ : ವಳ್ಳತ್ತೋಳ್

—— ಅನು.
ಏಳು ತುರ್ಕಿ ಕವನಗಳು.
೧೬ (೬-೭) ೧೦೬-೧೦೭;
ನವಂ-ಡಿಸೆಂ ೧೯೮೦; ೫೭–೬೩

ಮೂಲ : ಡೆರಿಕ್ ಪ್ಯಾಟ್ ಮೋರ್
ಅವರ ಆಂಗ್ಲ ಕವನಗಳು.

ಕಾವ್ಯವಿಮರ್ಶೆ

ಮಣಿಪಾಲ [ಆರ್ಕೆ]
ಗೋವಿಂದಯ್ಯ ಅವರ ಆಅ ಮತ್ತು :
ಒಂದು ವಿಶ್ಲೇಷಣೆ.
೧೭(೫)೧೧೭; ಅಕ್ಟೊ ೧೯೮೧;೩೧–೩೮

ಸಿದ್ಧಾಶ್ರಮ (ಸಿ. ಪಿ.)
ಅಂಬಿಗರ ಚೌಡಯ್ಯನ ವಚನಗಳಲ್ಲಿ
ಸಾಮಾಜಿಕ ಪ್ರಜ್ಞೆ.
೧೬(೧–೨) ೧೦೧–೧೦೨;
ಜೂನ–ಜುಲೈ ೧೯೮೦; ೩೧–೪೦

ನಾಟಕ

ದಾಸ್ (ಜಗನ್ನಾಥ ಪ್ರಸಾದ).
ಅತ್ಯಂತ ಕೆಳಗಿನ ಮನುಷ್ಯ.
೧೭(೮)೧೨೦; ಜನ ೧೯೮೨, ೩–೫೫
ಕನ್ನಡಕ್ಕೆ : ಶಂ. ಸ. ಐತಾಳ

ಭಂಡಾರಿ (ಆರ್. ವಿ.)
ಧರ್ಮವ್ಯಾಧ : ಒಂದು ರೂಪಕ
೧೭ (೧೦) ೧೨೨;
ಮಾರ್ಚ ೧೯೮೨; ೨೯-೩೮

ನಾಟಕಕಾರನ ಪರಿಚಯ

ರಾಮಚಂದ್ರ (ಎನ್ಕೆ)
ಬ್ರೆಕ್ಟ್ ನಾಟಕ : ಕ್ರಾಂತಿ ನಂತರದ ಸಮಾಜ ಚಿತ್ರ.
೧೭ (೭) ೧೧೯;
ಡಿಸೆಂಬರ ೧೯೮೧; ೨೯-೩೩

ಕಾದಂಬರಿ

ಕಾದಂಬರಿ ವಿಮರ್ಶೆ

ಕುವೆಂಪು ಕಾದಂಬರಿಗಳು–ಆತ್ಮಕಥೆ–ಪರಿಚಯ

ಆಲೂರ (ಚಂದ್ರಶೇಖರ).
ಪರಿಸರಾಂತದ ಹಿನ್ನೆಲೆಯಲ್ಲಿ ಕಾನೂರು
೧೬ (೧–೨) ೧೦೧–೧೦೨;
ಜೂನ-ಜುಲೈ ೧೯೮೦, ೪೧–೪೭

ಹರವೆ (ದೇವಯ್ಯ)
ಶೂದ್ರ ಶಾಹಿಯಿಂದ ಪುರೋಹಿತ ಶಾಹಿಯೆಡೆಗೆ-ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' : ಒಂದು ಅಧ್ಯಯನ.
೧೬ (೮–೯) ೧೦೮–೧೦೯;
ಜನೆ–ಫೆಬ್ರು ೧೯೮೧, ೩೫–೭೦

ಚದುರಂಗ

ಸುಧಾಕರ.
ಚದುರಂಗರ 'ವೈಶಾಖ'
೧೭ (೪) ೧೧೬;
ಸಪ್ಟಂಬರ ೧೯೮೧; ೩೧–೪೨

ಬರಗೂರ ರಾಮಚಂದ್ರಪ್ಪ

ಕಾಯಿ (ರುದ್ರಪ್ಪ)
ಬರಗೂರರ ಕಾದಂಬರಿಗಳು : ಸ್ವಾತಂತ್ರ್ಯೋತ್ತರ ಹಳ್ಳಿಗಳನ್ನು ಅರ್ಥೈಸುವ ಪ್ರಯತ್ನಗಳು.
೧೬,(೧-೨) ೧೦೧-೧೦೨;
ಜೂನ-ಜುಲೈ ೧೯೮೦; ೧೭-೨೯

ಟಿ. ಜಿ. ರಾಘವ

ಆಲೂರ (ಚಂದ್ರಶೇಖರ)
ಟಿ. ಜಿ. ರಾಘವರ 'ಮನೆ'
೧೬(೬–೭) ೧೦೬-೧೦೭;
ನವಂ- ಡಿಸೆಂ ೧೯೮೦; ೭೫–೭೭

ಸತ್ಯಕಾಮ

ವಿಜಯಶಂಕರ (ಎಸ್. ಆರ್.)
ಸತ್ಯಕಾಮರ ಆರು ಕಾದಂಬರಿಗಳು
೧೬ (೧೦) ೧೨೨; ಮಾ ೧೯೮೨;೫-೮

ಕಥೆ

ಪವಾರ (ದಯಾ)
ಇಪ್ಪತ್ತು ರೂಪಾಯಿ
೧೬ (೧೦-೧೧) ೧೧೦-೧೧೧,
ಮಾರ್ಚ-ಎಪ್ರಿಲ್ ೧೯೮೧, ೫–೧೭
ಕನ್ನಡಕ್ಕೆ : ಮಂಗ್ಳೂರ ವಿಜಯ

ದೇಸಾಯಿ (ಬಿ. ಸಿ.)
ನನ್ನದನ್ನೂದೆಲ್ಲಾ.
೧೬ (೧-೨)೧೦೧-೧೦೨;
ಜೂನ್-ಜುಲೈ ೧೯೮೦; ೯-೧೬.

ನಾಯಕ (ಬಿ. ಟಿ. ಲಲಿತಾ)
ಕಳ್ರು.
೧೭(೭)೧೧೯; ಡಿಸೆಂ ೧೯೮೦; ೫–೧೪

ನೀರಮಾನ್ವಿ (ರಾಜಶೇಖರ)
ಪ್ರಜಾಪ್ರಭುತ್ವದಲ್ಲಿ ಒಂದು ಸಾವು.
೧೬,(೩–೪) ೧೦೩-೧೦೪;
ಅಗಸ್ಟ-ಸಪ್ಟಂಬರ ೧೯೮೦; ೪೫–೫೪

ವನಜ
ಒಂದು ತೊಡಕಿನ ಕಥೆ.
೧೬(೬–೭) ೧೦೬-೧೦೭;
ನವಂ–ಡಿಸೆಂ ೧೯೮೦; ೯-೧೫.

ವೈದೇಹಿ.
ವೈಶಾಖದ ಒಂದು ರಾತ್ರಿ.
೧೬ (೩–೪) ೧೦೩-೧೦೪,
ಅಗಸ್ಟ-ಸಪ್ಟಂಬರ ೧೯೮೦; ೫–೧೧.

ಸೋಮಯಾಜಿ [ಹೇ. ಪ.]
ಗೋಡೆಗಳು.
೧೬ [೬-೭] ೧೦೬–೧೦೭;
ನವಂ-ಡಿಸೆಂ ೧೯೮೦; ೩೩-೩೭.

ಕಥಾವಿಮರ್ಶೆ

ರಾಮಮೂರ್ತಿ (ಪೋಲಂಕಿ)
ಒಡಲಾಳ: ಒಂದು ಸಮೀಕ್ಷೆ
೧೬ (೩–೪) ೧೦೩-೧೦೪;
ಅಗಸ್ಟ–ಸಪ್ಟಂಬರ ೧೯೮೦; ೩೧-೪೦
ಒಡಲಾಳ : ದೇವನೂರು ಮಹದೇವ

ಚಂಪಾವತಿ (ಎಚ್. ಎಸ್.)
ಸಾಕವ್ವ ಪೌರಾಣಿಕ ಪಾತ್ರವೆ ?
೧೬ (೬-೭) ೧೦೬–೧೦೭;
ನವೆಂ-ಡಿಶೆಂ ೧೯೮೦; ೮೪-೮೬

ಪ್ರಬಂಧ

ಒಡೆಯರ (ಸದಾಶಿವ)
ಸಮಿತಿಗಳು ಉಪಸಮಿತಿಗಳು
೧೭(೪)೧೧೬: ಸಪ್ಟಂ ೧೯೮೧, ೫-೯.

ವೀರಭದ್ರಪ್ಪ (ಕುಂ.)
ಇಂಡಿಯಾದ ಇಷ್ಟ ದೇವತೆಗಳ ಭಾನಗಡಿ
೧೭[೯]೧೨೧, ಫೆಬ್ರು ೧೯೮೨, ೯-೧೭

ಸಿಂಪಿ [ವೀರೇಂದ್ರ]
ಹಳ್ಳಿಯ ಚಹಾ ಹೋಟೆಲ್ಲುಗಳು.
೧೬[೧೨]೧೧೨, ಮೇ ೧೯೮೧; ೩೪-೩೯

ಸಾಹಿತ್ಯ–ಚರಿತ್ರೆ

ಮಲಶೆಟ್ಟಿ [ಬಸವರಾಜ]
ಕನ್ನಡ ಸಾಹಿತ್ಯ ಚರಿತ್ರೆಯ ಸ್ವರೂಪ ವೇನು ?
೧೬ [೧೦-೧೧] ೧೧೦-೧೧೧,
ಮಾ–ಎಪ್ರಿಲ್ ೧೯೮೧, ೪೩-೫೦

ಸಾಹಿತ್ಯ ಪುರಾಣ

ಸಿದ್ಧರಾಮಯ್ಯ [ಎಸ್. ಜಿ.]
ಪುರಾಣ ಪಾರ್ಥೇನಿಯಂ ಹಾಗೂ ಕೂಚುಭಟ್ಟ ಅಧ್ಯಾಪಕ ದಾಸರು
೧೭[೧೦] ೧೨೨, ಮಾ ೧೯೮೨,೪೫-೫೦

ಜಾನಪದ ಸಾಹಿತ್ಯ

ರಾಮಚಂದ್ರೆಗೌಡ [ಹಿ. ಶಿ]
ಜಾನಪದ ಕ್ರಿಯಾಶೀಲವಾದುದೆ?
೧೬ [೬–೭] ೧೦೬–೧೦೭;
ನವಂ-ಡಿಶೆಂ ೧೯೮೦; ೨೩–೩೧

ಮುಕ್ತಾಯಕ್ಕ [ಎಚ್. ಎಸ್.]
ಜನಪದ ಸಾಹಿತ್ಯದಲ್ಲಿ ಹೆಣ್ಣು;
ಒಂದು ವಿವೇಚನೆ.
೧೭[೯]೧೨೧, ಫೆಬ್ರು ೧೯೮೨, ೩೫-೪೪

ವಿಮರ್ಶೆ

ಬಂಡಾಯ–ದಲಿತ ಸಾಹಿತ್ಯ

ಮಣಿಪಾಲ [ಆರ್ಕೆ].
ಕನ್ನಡ ಕಾವ್ಯದಲ್ಲಿ ಬಂಡಾಯ
ಮನೋವೃತ್ತಿ.
೧೬ [೮-೯] ೧೦೮–೧೦೯,
ಜನೆ-ಫೆಬ್ರು ೧೯೮೧, ೨೧-೩೪.

ವಿಜಯಶಂಕರ [ಎಸ್. ಆರ್]
ಕಿರು ಸಂಸ್ಕೃತಿಯ ಚಿಗುರು : ಕನ್ನಡದಲ್ಲಿ
ದಲಿತ ಸಾಹಿತ್ಯ.
೧೭[೪]೧೧೬; ಸಪ್ಟಂ ೧೯೮೧, ೨೫–೨೯

ಸಾಹಿತ್ಯ ವಿಮರ್ಶೆ

ರಾಮಮೂರ್ತಿ [ಪೋಲಂಕಿ]
ರಾಮಾಯಣದ 'ಸೀತಾಯಣ'.
೧೭[೪]೧೧೬, ಸಪ್ಟಂ ೧೯೮೧, ೧೧-೨೩
(ಸಾಹಿತ್ಯ ಮತ್ತು ಸಂಸ್ಕೃತಿ: ಕೀರ್ತಿನಾಥ
ಕುರ್ತಕೋಟಿ, ಪ್ರಜಾವಾಣಿ ದೀಪಾವಳಿ
ವಿಶೇಷಾಂಕ ೧೯೭೯ ಈ ಲೇಖನದ
ವಿಮರ್ಶೆ).

ಜೋಶಿ [ಶಂ. ಬಾ.] ಮತ್ತು ಇತರರು.
ರಾಮಾಯಣದಲ್ಲಿ ಸೀತಾಯಣ.
೧೭[೯]೧೨೧, ಫೆಬ್ರು ೧೯೮೨, ೪೫–೪೯
[ಇತರರು: ಶಶಿಕಲಾ ವಸ್ತ್ರದ, ಶ್ರೀಕೃಷ್ಣ
ಚನ್ನಂಗೋಡ್, ಬಿ. ವಿ. ವೀರಭದ್ರಪ್ಪ,
ಎಸ್. ಶಿವಾನಂದ].

ರಾಮಮೂರ್ತಿ [ಪೋಲಂಕಿ]
ಲೇಖಕರ ಟಿಪ್ಪಣಿ.
೧೭[೯]೧೨೧, ಫೆಬ್ರು ೧೯೮೨, ೪೯–೫೦

ಧರ್ಮ–ವಿಮರ್ಶೆ

ಭಗವಾನ್
ಆದಿಶಂಕರಾಚಾರ್ಯರ ಜನ ವಿರೋಧಿ
ತತ್ತ್ವಜ್ಞಾನ.
೧೬[೮–೯] ೧೦೮-೧೦೯,
ಜನೆ–ಫೆಬ್ರು ೧೯೮೧, ೮೧–೮೭.

ಶಿವಮೊಗ್ಗ [ಸುಬ್ಬಣ್ಣ]
ಶಂಕರರ ತತ್ವಬೋಧೆ.
೧೬ [೧೦–೧೧] ೧೧೦-೧೧೧,
ಮಾರ್ಚ-ಏಪ್ರಿಲ್ ೧೯೮೦, ೯೫.

ವೆಂಕಟೇಶ [ಮಲ್ಲೇಪುರಂ ಜಿ.]
ಶಂಕರಾಚಾರ್ಯರ ಜೀವನ ವಿರೋಧಿ
ಲೇಖನಗಳು
೧೬[೧೨]೧೧೨, ಮೇ ೧೯೮೧; ೫೨-೫೪

ರಾಮಕೃಷ್ಣ [ಎಂ].
ಶಂಕರರ ಬಗ್ಗೆ ವಿಚಾರ ಸಂಕರ.
೧೬[೧೨]೧೧೨, ಮೇ ೧೯೮೧, ೫೫–೫೭
ಭಗವಾನ್
ಶಂಕರಾಚಾರ್ಯರ ಗೂಂಡಾಗಿರಿ !
೧೬[೧೨]೧೧೨, ಮೇ ೧೯೮೧, ೫೭-೬೪

ಸಿದ್ಧರಾಮಯ್ಯ [ಎಸ್. ಜಿ.]
ಕುಂಬಳಕಾಯಿ ಹಾರುವ ಪುರಾಣ.
೧೬[೧೦-೧೧] ೧೧೦-೧೧೧,
ಮಾರ್ಚ-ಏಪ್ರಿಲ್ ೧೯೮೧, ೮೧-೮೨.

ಗುರುಮೂರ್ತಿ [ಜೋಗನಹಳ್ಳಿ]
ಭೂತದ ಬ್ರಾಹ್ಮಣ ವರ್ತಮಾನದ
ವರ್ತಕ.
೧೬[೧೨]೧೧೨, ಮೇ ೧೯೮೧, ೬೯-೭೦

ಭಾರತೀಯ ಸಂಸ್ಕೃತಿ

ಧರ್ಮಲಿಂಗಂ [ಎ. ಎಸ್.]
ದೇವರ ಕಲ್ಪನೆ ಮತ್ತು ನಿರೀಶ್ವರವಾದ
೧೭[೧೧-೧೨] ೧೨೩-೧೨೪,
ಏಪ್ರಿಲ್-ಮೇ ೧೯೮೨, ೫೮-೭೧.
ಕನ್ನಡಕ್ಕೆ : ಸಿ, ಎಸ್. ನಂಜುಂಡಯ್ಯ

ದೇಸಾಯಿ [ಸುದರ್ಶನ]
ಭಾರತದ ಸಂಸ್ಕೃತಿ ಮತ್ತು ದಾಸ್ಯತ್ವ.
೧೬ [೧-೨] ೧೦೧-೧೦೨,
ಜೂನ-ಜುಲೈ ೧೯೮೦, ೬೭-೭೭

ರಾಮಕೃಷ್ಣ [ಜಿ].
ಭಾರತೀಯ ನಿರೀಶ್ವರವಾದ.
೧೭ [೧೧-೧೨] ೧೨೩-೧೨೪,
ಏಪ್ರಿಲ್-ಮೇ ೧೯೮೨, ೪೩-೫೭.

ರಾಮಮೂರ್ತಿ [ಪೋಲಂಕಿ].
ಭಾರತೀಯ ಸಂಸ್ಕೃತಿ : ಅಂತರಂಗ
ಬಹಿರಂಗ.
೧೬ [೧೦-೧೧], ೧೧೦-೧೧೧,
ಮಾರ್ಚ-ಏಪ್ರಿಲ್ ೧೯೮೧, ೫೯-೮೦
ಕನ್ನಡಕ್ಕೆ : ಚಂದ್ರಶೇಖರ ಪಾಟೀಲ
ಶಿವರಾಮು ಕಾಡನಕುಪ್ಪೆ

ಗಿರಿಧರ [ಪಿ. ಪಿ.]
ಭಾರತೀಯ ಸಂಸ್ಕೃತಿ : ಕೆಲ ಅನುಮಾನ
ಗಳು.
೧೬[೧೨]೧೧೨, ಮೇ ೧೯೮೧, ೬೫-೬೮

ವಿಜಯಶಂಕರ [ಎಸ್. ಆರ್.]
ಅನಂತಮೂರ್ತಿ VS ರಾಮಮೂರ್ತಿ
೧೬[೧೨]೧೧೨, ಮೇ ೧೯೮೧, ೬೮

ರಾಮಲಿಂಗಂ.
ಧರ್ಮ ಮತ್ತು ವೈಜ್ಞಾನಿಕತೆ.
೧೭[೧೧-೧೨]೧೨೩-೧೨೪,
ಏಪ್ರಿಲ್-ಮೇ ೧೯೮೨, ೮೮-೯೩

ಲೋಹಿಯಾ [ರಾಮ ಮನೋಹರ].
ಹಿಂದೂಧರ್ಮ.
೧೭ [೧೧-೧೨] ೧೨೩-೧೨೪,
ಏಪ್ರಿಲ್-ಮೇ ೧೯೮೨, ೯೪-೧೧೦.
ಕನ್ನಡಕ್ಕೆ : ಹಸನ್‌ನಯೀಮ ಸುರಕೋಡ

ಸಿ. ಬಿ,
ನರಬಲಿ : ಪ್ರಾಚೀನ ಭಾರತದ
ಚಾರ್ವಾಕ ಭೌತಿಕ ವಾದಿಗಳಿಬ್ಬರನ್ನು
ಕುರಿತ ವಚನ ಕಾವ್ಯ.
೧೭(೬)೧೧೮; ನವಂ ೧೯೮೧; ೩-೫೪
ಕನ್ನಡಕ್ಕೆ : ಕೆ. ನಾರಾಯಣ ಸ್ವಾಮಿ

ಮಹಿಳೆ-ವಿಮೋಚನೆ-ಸಂಸ್ಕೃತಿ

ಚಕ್ರವರ್ತಿ (ಮೀರಾ)
ಮಹಿಳಾ ವಿಮೋಚನಾ ಚಳುವಳಿ :
ಒಂದು ದೃಷ್ಟಿಕೋನ.
೧೭(೭)೧೧೯;ಡಿಸೆಂಬರ ೧೯೮೧;೨೩-೨೭

——
ಹಿಂದೂಧರ್ಮ ಮತ್ತು ಮಹಿಳೆಯರು
೧೭(೧೧-೧೨) ೧೨೩-೧೨೪,
ಏಪ್ರಿಲ್-ಮೇ ೧೯೮೨; ೭೨-೭೮

ರಾಮಮೂರ್ತಿ (ಪ್ರೋಲಂಕಿ)
ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ
೧೭(೧೧-೧೨) ೧೨೩-೧೨೪;
ಏಪ್ರಿಲ್-ಮೇ ೧೯೮೨; ೧೭-೪೨

ಶರ್ಮಾ (ವಿಮಲಾ ಎಸ್.)
ಮಹಿಳೆ ಮತ್ತು ಧರ್ಮಾಚರಣೆ.
೧೭ (೧೧-೧೨) ೧೨೩-೧೨೪;
ಏಪ್ರಿಲ್-ಮೇ ೧೯೮೨; ೭೯-೮೭

ರಾಜಕೀಯ

ರಾಜಕೀಯ ಪಂಥಗಳು

ಹನುಮಂತ
ಎಡ ಮತ್ತು ಬಲಪಂಥಗಳು–
ಹೊಸ ಆಯಾಮಗಳು,
೧೬ (೧-೨) ೧೦೧-೧೦೨;
ಜೂನ-ಜುಲೈ ೧೯೮೦; ೪೯-೬೫

ಹೆದ್ದೂರಶೆಟ್ಟಿ (ಬಾಪು)
ಹೊಸ ಸಮಾಜವಾದಿ ಚಿಂತನೆ.
೧೬(೬-೭) ೧೦೬-೧೦೭;
ನವಂ-ಡಿಸೆಂ ೧೯೮೦; ೬೫-೭೩.

ರಾಜಕೀಯ-ಜಾತಿ

ತಿಪ್ಪೇಸ್ವಾಮಿ (ಪಿ. ಆರ್.)
ಕರ್ನಾಟಕ ಗಾಂಧಿ : ಪಂಚಮರ
ಗೋಪಾಲಸ್ವಾಮಿ,
೧೭(೧೦)೧೨೨; ಮಾ ೧೯೮೨; ೫೧-೫೬

ಪೂಜಾರ (ನೀಲಗಂಗಯ್ಯ)
ವರ್ಗಹೋರಾಟ ಸ್ತಂಭನದ ಉಪಾಖ್ಯಾನ
೧೬ (೮-೯) ೧೦೮-೧೦೯;
ಜನೆ-ಫೆಬ್ರು ೧೯೮೧; ೭೩-೭೯.

ಲೋಹಿಯಾ (ರಾಮ ಮನೋಹರ)
ವರ್ಗ ಸಂಘಟನೆ: ಜಾತಿ ನಿರ್ಮೂಲನೆಯ
ಸಾಧನೆ.
೧೭(೭)೧೧೯; ಡಿಸೆಂ ೧೯೮೧; ೧೫-೨೨
ಕನ್ನಡಕ್ಕೆ : ಹಸನ್‌ನಯೀಮ ಸುರಕೋಡ

ವಿಶ್ವನಾಥರೆಡ್ಡಿ (ಎಂ. ಆರ್.)
ಜಾತಿವಾದಕ್ಕೆ ಒಂದು ಪ್ರತಿಕ್ರಿಯೆ.
೧೭(೫)೧೧೭; ಅಕ್ಟೊ ೧೯೮೧;೩೯-೪೪

ರಾಜಕೀಯ-ಭಾಷೆ

ಲೋಹಿಯಾ (ರಾಮ ಮನೋಹರ)
ಭಾಷೆ ಮತ್ತು ರಾಜಕೀಯ ಪಕ್ಷಗಳು
೧೬ (೩-೪) ೧೦೩-೧೦೪;
ಅಗಸ್ಟ-ಸಪ್ಟಂಬರ ೧೯೮೦; ೧೩-೩೦
ಕನ್ನಡಕ್ಕೆ : ಹ. ಸೋಮಶೇಖರ

——
ಪಾಳೆಗಾರ ಭಾಷೆ ವಿರುದ್ಧ ಜನಭಾಷೆಗಳು
೧೭(೯)೧೨೧; ಫೆಬ್ರು ೧೯೮೨; ೧೯-೩೨
ಕನ್ನಡಕ್ಕೆ : ಎಸ್. ಆರ್. ವಿಜಯಶಂಕರ

ಸುಬ್ಬಣ್ಣವರ (ಬಿ. ಎಸ್.)
ಪ್ರಜಾತಂತ್ರ–ಶಿಕ್ಷಣ ಮತ್ತು ಭಾಷೆ
೧೭ (೧೦) ೧೨೨; ಮಾ ೧೯೮೨; ೯-೨೮

ವ್ಯಕ್ತಿ ಚಿತ್ರ, ಸಂದರ್ಶನ

ಕಾಫ್ಕಾ

ಸಿಂಹ (ಶಿವಪ್ರಸಾದ)
ಕಾಫ್ಕಾ : ಬದುಕು–ಬರಹ.
೧೬ (೬-೭) ೧೦೬-೧೦೭;
ನವಂ-ಡಿಸೆಂ ೧೯೮೦; ೪೩–೫೫.
ಕನ್ನಡಕ್ಕೆ : ಹಸನ ನಯೀಮ ಸುರಕೋಡ

ಶಂ. ಬಾ. ಜೋಶಿ

ಪಾಟೀಲ (ಚಂದ್ರಶೇಖರ)
ಪ್ರಖರ ವೈಚಾರಿಕ ಶಂ. ಬಾ.
೧೭(೬)೧೧೮; ನವಂ ೧೯೮೧; ೫೭–೬೦

ಜಾಗೀರದಾರ್ (ಸೀತಾರಾಮ)
ಶಂ. ಬಾ. ವೈಚಾರಿಕತೆ ಮತ್ತು
ಇತಿಹಾಸ. (ಪ್ರತಿಕ್ರಿಯೆ)
೧೭(೯)೧೨೧; ಫೆಬ್ರು ೧೯೮೨, ೫೯-೬೦

ಜೋಶಿ (ಶಂ. ಬಾ.)
ಶಂ. ಬಾ. ವೈಚಾರಿಕತೆ ಮತ್ತು
ಇತಿಹಾಸ. (ಉತ್ತರ)
೧೭(೧೯)೧೨೨; ಮಾ ೧೯೮೨; ೬೦-೬೧

ವೆಂಕಟೇಶ (ಮಲ್ಲೇಪುರಂ ಜಿ.)
ಶಂ. ಬಾ. ವೈಚಾರಿಕತೆ ಮತ್ತು
ಇತಿಹಾಸ. (ಪ್ರತಿಕ್ರಿಯೆ)
೧೭(೧೦)೧೨೨; ಮಾ ೧೯೮೨; ೫೭–೬೦

ದ.ರಾ. ಬೇಂದ್ರೆ

ಕವನ

ದೇಸಾಯಿ [ಸಿದ್ಧಲಿಂಗ]
ಬೇಂದ್ರೆ ಕಾಯಕ.
೧೭(೫)೧೧೭; ಅಕ್ಟೊ ೧೯೮೧; ೨೪.

ಹಕಾರಿ [ದೇವೇಂದ್ರಕುಮಾರ]
ಅಂದತ್ತ.
೧೭ [೫] ೧೦೫; ಅಕ್ಟೋ ೧೯೮೧;೫-೬.

ಹಿರೇಮಠ [ಪಂಚಾಕ್ಷರಿ]
ನೀ ಹೊರಟಿದ್ದೀಗ ಎಲ್ಲಿಗೆ ?
೧೭ [೫] ೧೧೭; ಅಕ್ಟೋ ೧೯೮೧; ೩೦.

ವ್ಯಕ್ತಿ ವಿಚಾರಕೃತಿ

ಎನ್ಕೆ
ಬೇಂದ್ರೆ ಕಾವ್ಯದಲ್ಲಿ ರೌದ್ರವಿಲಾಸ.
೧೭[೫]೧೧೭; ಅಕ್ಟೋ ೧೯೮೧; ೭-೧೪

ಕೃಷ್ಣಮೂರ್ತಿ [ಬಿ]
ಮಾಯಾ ಜಿಂಕೆಯ ಬೆಂಬತ್ತಿದ್ದ ಬೇಂದ್ರೆ.
೧೭[೫]೧೧೭; ಅಕ್ಟೋ ೧೯೮೧;೫೨-೫೬

ದರ್ಗಾ [ರಮಜಾನ]
ಬೇಂದ್ರೆ; ಕೆಲ ಸನ್ನಿವೇಶಗಳು.
೧೭[೫]೧೧೭; ಅಕ್ಟೋ ೧೯೮೧;೨೫-೨೯

ಪಾಟೀಲ [ಚಂದ್ರಶೇಖರ]
ಬೇಂದ್ರೆ : ಎರಡು ದಾಖಲೆಗಳು.
೧೭[೫]೧೧೭; ಅಕ್ಟೋ ೧೯೮೧; ೧೫-೨೩

ಬಿರೇಂದ್ರ ಕುಮಾರ್ ಭಟ್ಟಾಚಾರ್ಯ

ಭಟ್ಟಾಚಾರ್ಯ [ಬೀರೇಂದ್ರಕುಮಾರ]
ಸಾಹಿತ್ಯ, ರಾಜಕೀಯ ಜಾತಿ ಇತ್ಯಾದಿ.
ಸಂದರ್ಶಕರು ಡಿ. ಎಸ್. ನಾಗಭೂಷಣ
೧೬ [೬–೭] ೧೦೬-೧೦] ನವೆಂ-ಡಿಸೆಂ
೧೯೮೦; ೧೭-೨೧.

ಅಂಬೇಡ್ಕರ್

ವ್ಯಕ್ತಿ–ಕೃತಿ-ವಿಚಾರ–ಪರಿಚಯ

ಇನಾಂದಾರ್ [ವಿ ಎಂ]
ಅಂಬೇಡ್ಕರ್: ವ್ಯಕ್ತಿತ್ವ ಮತ್ತು
ಜೀವನ ಸಿದ್ಧಿ.
೧೭[೧,೨,೩] ೧೧೩-೧೧೪-೧೧೫ ಜೂನ
ಜುಲೈ-ಅಗಸ್ಟ್ ೧೯೮೧; ೧೭೯-೧೯೮.

ಡೊಂಗ್ರೆ [ಮಧುಕರ]
ಅಂಬೇಡ್ಕರ್ ಹಾಗೂ ಅಸ್ಪೃಶ್ಯತೆಯ
ಆರ್ಥಿಕ ಸ್ವರೂಪ.
೧೭ [೧,೨,೩] ೧೧೩,-೧೧೪-೧೧೫,
ಜೂನ್-ಜುಲೈ-ಅಗಸ್ಟ ೧೯೮೧,೭೩-೭೬,
[೨೧ ಆಕರ ಗ್ರಂಥಗಳ ಪಟ್ಟಿಯಿದೆ.]
ಕನ್ನಡಕ್ಕೆ: ರಮೇಶ ಧಾನವಾಡಕರ.

ಪಾರ್ವತಮ್ಮ [ಸಿ].
ಅಂಬೇಡ್ಕರ್ ಮತ್ತು ಇವರ ನಂತರದಲ್ಲಿ
ಇಂಡಿಯಾ ದೇಶದ ದಲಿತಜನಾಂಗವರ್ಗದ
ಭವಿಷ್ಯ ಮತ್ತು ಹಾಲಿ ಸ್ಥಿತಿಗತಿ.
೧೭ [೧,೨,೩] ೧೧೩,-೧೧೪-೧೧೫,
ಜೂನ್-ಜುಲೈ ಅಗಸ್ಟ-೧೯೮೧,
೧೫೩-೧೭೮.
[೯ ಆಕರ ಗ್ರಂಥಗಳ ಪಟ್ಟಿಯಿದೆ].
ಕನ್ನಡಕ್ಕೆ : ದೇವಯ್ಯ ಹರವೆ.

ರಾಜಶೇಖರ ಶೆಟ್ಟಿ [ವಿ ಟಿ].
ಜಾತಿ ಹೋರಾಟವನ್ನು ಯಾಕೆ ಸ್ವಾಗತಿಸ
ಬೇಕು, ೧೭ [೧,೨,೩] ೧೧೩-೧೧೪-
೧೧೫; ಜೂನ್-ಜುಲೈ-ಅಗಸ್ಟ
೧೯೮೧, ೧೪೫-೧೫೧.

ರಾಮದಾಸ [ಕೆ]
ಗಾಂಧಿಯುಗದ ಪ್ರತಿಭಟನೆಯ ಒಂಟಿ
ಧ್ವನಿ. ೧೭ (೧,೨,೩]೧೧೩-೧೧೪-೧೧೫:
ಜೂನ್-ಜುಲೈ-ಅಗಸ್ಟ ೧೯೮೧;
೧೦೫-೧೧೦.

ಕವನ

ಅಡ್ಕೂರ [ಮುಂದಕಪ್ಪ]
ಅಂಬೇಡ್ಕರ್ : ಒಂದು ಅನುಮಾನ.
೧೭ [೧,೨.೩] ೧೧೩-೧೧೪–೧೧೫;
ಜೂನ್-ಜುಲೈ-ಅಗಸ್ಟ ೧೯೮೧; ೯೬

ಅರ್ಕೆ [ಮಣಿಪಾಲ]
ಅಂಬೇಡ್ಕರ್ ಮತ್ತು ನಸ್ನೂರ ಕೊರಗನ
ಆನೆಕಾಲು.
೧೭ [೧,೨,೩] ೧೧೩-೧೧೪-೧೧೫:
ಜೂನ್ ಜುಲೈ-ಅಗಸ್ಟ ೧೯೮೧,
೧೪೩-೧೪೪

ಕಟಗಿ [ಶಂಕರ].
ನಾಲಿಗೆಗೆ ಜ್ವಾಲೆ.
೧೭ [೧,೨.೩], ೧೧೩-೧೧೪-೧೧೫.
ಜೂನ-ಜುಲೈ-ಅಗಸ್ಟ ೧೯೮೦; ೧೨೬

ಪಾಟೀಲ [ಚಂದ್ರಶೇಖರ].
ನಿನ್ನೆಗಳ ನೆನಪು.
೧೭ [೧,೨,೩] ೧೧೩-೧೧೪-೧೧೫,
ಜೂನ-ಜುಲೈ-ಅಗಸ್ಟ ೧೯೮೧; ೧೩೬

ಭಂಡಾರಿ [ಆರ್. ವಿ.]
ಅಂಬೇಡ್ಕರ್ ನೆನಪಿಗೆ.
೧೭ [೧,೨,೩] ೧೧೩-೧೧೪-೧೧೫,
ಜೂನ-ಜುಲೈ-ಅಗಸ್ಟ ೧೯೮೧; ೫೪

ಮಲೆಮನೆ [ವಿಶ್ವನಾಥ]
ನನ್ನರಿವು ನನಗಾಗಿ.
೧೭ [೧,೨,೩] ೧೧೩-೧೧೪-೧೧೫,
ಜೂನ-ಜುಲೈ-ಅಗಸ್ಟ ೧೯೮೧; ೧೫೨.

ಮುಳ್ಳೂರು (ಜಿ. ನಾಗರಾಜ್)
ಕಪ್ಪೊಡಲಿನ ಕೂಗು.
೧೭ (೧,೨,೩) ೧೧೩-೧೧೪-೧೧೫;
ಜೂನ-ಜುಲೈ-ಅಗಸ್ಟ ೧೯೮೧; ೧೦೪

ವಾಲೀಕಾರ (ಚೆನ್ನಣ್ಣ).
ಕಪ್ಪು ಜನತೆಯ ಸೂರ್ಯನಿಗೆ.
೧೭ (೧,೨,೩) ೧೧೩-೧೧೪-೧೧೫;
ಜೂನ-ಜುಲೈ-ಅಗಸ್ಟ ೧೯೮೧; ೯-೧೦

ಕುಟುಂಬ ಯೋಜನೆ

ಮಾಂಗುಡಕರ (ಎಂ. ಪಿ.)
ಕುಟುಂಬ ಯೋಜನೆ : ಡಾ. ಅಂಬೇಡ್ಕರ ವಿಚಾರಗಳು.
೧೭ (೧,೨,೩) ೧೧೩-೧೧೪-೧೧೫;
ಜೂನ-ಜುಲೈ-ಅಗಸ್ಟ ೧೯೮೧;
೧೧೧-೧೨೦.
ಕನ್ನಡಕ್ಕೆ : ರಮೇಶ ಧಾನವಾಡಕರ

ಪ್ರಜಾಪ್ರಭುತ್ವ

ಹಿರೇಮಠ (ಸೂಗಯ್ಯ).
ಅಂಬೇಡ್ಕರ್ ಮತ್ತು ಪ್ರಜಾಪ್ರಭುತ್ವ.
೧೭ (೧,೨,೩) ೧೧೩-೧೧೪-೧೧೫;
ಜೂನ-ಜುಲೈ-ಅಗಸ್ಟ ೧೯೮೧; ೬೨.

ಭೂದಾನ

ಗೇಲ್ ಆಮ್ ವೆಡ್ಟ್.
ಅಂಬೇಡ್ಕರ್ ಹಾಗೂ ಭೂಪ್ರಶ್ನೆ.
೧೭ (೧,೨,೩) ೧೧೩-೧೧೪-೧೧೫;
ಜೂನ-ಜುಲೈ-ಅಗಸ್ಟ ೧೯೮೧; ೮೭-೯೫
ಕನ್ನಡಕ್ಕೆ : ಜವರನಹಳ್ಳಿ ಸಿದ್ದಪ್ಪ.

ಮತಾಂತರ-ಸಮಾಜ

ಭಗವಾನ್‌ದಾಸ್.
ಬೌದ್ಧ ಧರ್ಮಕ್ಕೆ ಮತಾಂತರ : ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಕಂಡ ಇಂಡಿಯಾ ಸಮಾಜ.
೧೭ (೧,೨,೩) ೧೧೩-೧೧೪-೧೧೫;
ಜೂನ-ಜುಲೈ-ಅಗಸ್ಟ ೧೯೮೧; ೭೭-೮೬
ಕನ್ನಡಕ್ಕೆ : ತಿಪ್ಪೇಸ್ವಾಮಿ

ಮಾನವಹಕ್ಕು

ರಾಜಶೇಖರಯ್ಯ (ಎ. ಎಂ.)
ಬಿ.ಆರ್. ಅಂಬೇಡ್ಕರ್: ಮಾನವ ಹಕ್ಕುಗಳ ಕೈವಾರಿ.
೧೭ (೧.೨,೩) ೧೧೩-೧೧೪-೧೧೫;
ಜೂನ-ಜುಲೈ-ಅಗಸ್ಟ ೧೯೮೧;೯೭-೧೦೩
ಕನ್ನಡಕ್ಕೆ : ವಸಂತ ಪಾಟೀಲ

ಮನುಸ್ಮೃತಿ

ಜೋಶಿ (ಶಂ. ಬಾ.)
ಡಾ। ಅಂಬೇಡ್ಕರ ಮತ್ತು
ಮನು(?)ಸ್ಮೃತಿ.
೧೭(೪)೧೧೬; ಸಪ್ಟಂ ೧೯೮೧; ೫೭-೫೮

ಪಾಟೀಲ (ಕ. ಚ.)
ಅಂಬೇಡ್ಕರ್ ಮತ್ತು ಮನುಸ್ಮೃತಿ.
೧೭(೧,೨,೩); ೧೧೩-೧೧೪-೧೧೫
ಜೂನ-ಜುಲೈ-ಅಗಸ್ಟ ೧೯೮೧;
೧೨೧-೧೨೫.

ಮೀಸಲಾತಿ

ಗುಣಶೀಲನ್
ಮೀಸಲಾತಿ ಮತ್ತು ಅದರ ಅಪರಿಚಿತ
ಮಗ್ಗಲು.
೧೭ (೧,೨,೩) ೧೧೩-೧೧೪-೧೧೫;
ಜೂನ್-ಜುಲೈ-ಅಗಸ್ಟ ೧೯೮೧;
೧೩೭-೧೪೨
ಕನ್ನಡಕ್ಕೆ : ಡಿ. ವಿಜಯ

ಬೋಳ ಬಂಡೆಪ್ಪ
ಮೀಸಲಾತಿ: ಒಂದು ಐತಿಹಾಸಿಕ ಹಿನ್ನೆಲೆ
೧೭ (೧.೨,೩) ೧೧೩-೧೧೪-೧೧೫;
ಜೂನ-ಜುಲೈ-ಅಗಸ್ಟ ೧೯೮೧;
೧೨೭-೧೩೫.

ಸಂಸ್ಕೃತಿ

ಲೋಖಂಡೆ (ಗಂಗಾಧರ)
ಅಂಬೇಡ್ಕರ್ ಸಂಸ್ಕೃತಿ
೧೭ (೧,೨,೩) ೧೧೩-೧೧೪-೧೧೫;
ಜೂನ-ಜುಲೈ-ಅಗಸ್ಟ ೧೯೮೧; ೫೫-೬೧
ಕನ್ನಡಕ್ಕೆ : ರಮೇಶ ಧಾನವಾಡಕರ

ರಾಜಕೀಯ ವಿಚಾರ

ಲಕ್ಷ್ಮೀನಾರಾಯಣ (ವಿ.)
ಅಂಬೇಡ್ಕರ್ ಅವರ ರಾಜಕೀಯ
ವಿಚಾರಧಾರೆ : ಒಂದು ಅಧ್ಯಯನ.
೧೭ (೧,೨,೩) ೧೧೩-೧೧೪-೧೧೫;
ಜೂನ-ಜುಲೈ-ಅಗಸ್ಟ ೧೯೮೧; ೧೧-೪೦
(೩೦ ಆಕರ ಗ್ರಂಥಗಳ ಪಟ್ಟಿಯಿದೆ.)

ಹನುಮಂತ.
ಅಂಬೇಡ್ಕರ್ ಮತ್ತು ಸಮಾಜವಾದ.
೧೭ (೧,೨,೩) ೧೧೩-೧೧೪-೧೧೫;
ಜೂನ್-ಜುಲೈ-ಅಗಸ್ಟ ೧೯೮೧;೪೧-೫೩
(೮ ಆಕರಗ್ರಂಥಗಳ ಪಟ್ಟಿಯಿದೆ).

ರೈತ ಚಳುವಳಿ-ಬಂಡಾಯ ಕವನ

ಕಟಗಿ (ಶಂಕರ)
ಬಂಡಾಯದ ಹಾಡು.
೧೬ (೩-೪) ೧೦೩-೧೦೪; ಅಗಸ್ಟ-
ಸೆಪ್ಟಂಬರ ೧೯೮೦; ೫೫-೫೬

ಮಾಲಗತ್ತಿ (ಅರವಿಂದ)
ಮುದ್ದೇಬಾಳ ಊರಾಗ.
೧೬ (೩-೪) ೧೦೩-೧೦೪; ಅಗಸ್ಟ-
ಸಪ್ಟಂ ೧೯೮೦; ೫೩-೫೮

ವಿಶ್ಲೇಷಣೆ

ಪಟ್ನಾಯಕ್ (ಕಿಶನ್)
ರೈತ ಚಳುವಳಿ : ವಿಶ್ಲೇಷಣೆ ಮತ್ತು
ದೃಷ್ಟಿಕೋನ.
೧೬ (೧೨) ೧೧೨; ಮೇ ೧೯೮೧;
೪೧-೫೧.

ಯತಿರಾಜು (ಸಿ)
ನಕ್ಸಲ್ ಬಾರಿ ರೈತದಂಗೆ; ಒಂದು.
ಚಾರಿತ್ರಿಕ ವಿಶ್ಲೇಷಣೆ.
೧೭ (೭) ೧೧೯; ಡಿಸೆಂಬರ ೧೯೮೧;
೩೫-೪೧.

ದಕ್ಷಿಣ ಆಫ್ರಿಕಾ ಮತ್ತು ನೆಲ್ಸನ್ ಮಾಂಡೆಲಾ ಕವನ

ಪಾಟೀಲ (ಚಂದ್ರಶೇಖರ)
ನೆಲ್ಸನ ಮಾಂಡೆಲಾ.
೧೬ (೫) ೧೦೫; ಅಕ್ಟೋ
೧೯೮೦; ೭-೮.

ಮಾಂಡೆಲಾ (ಜಿಂಜಿ)
ನಮಗಾಗಿ ಸತ್ತವರು.
೧೬ (೫) ೧೦೫; ಅಕ್ಟೋ ೧೯೮೦; ೫-೬.
ಕನ್ನಡಕ್ಕೆ; ಗಂಗಾಧರಮೂರ್ತಿ.

ವೈಚಾರಿಕ ಲೇಖನಗಳು

ಒಡೇರಾ (ಎಚ್)
ಕಪ್ಪು ಪ್ರಜ್ಞೆ.
೧೬ (೧೦-೧೧) ೧೧೦-೧೧೧; ಮರ್ಚ-
ಎಪ್ರಿಲ್ ೧೯೮೧;
೧೯-೩೫.
ಕನ್ನಡಕ್ಕೆ : ಗು. ಪರಮೇಶ್ವರ

ಪರಮೇಶ್ವರ (ಗು)
ಕಪ್ಪು ಪ್ರಜ್ಞೆ.
೧೬ (೧೦-೧೧) ೧೧೦-೧೧೧; ಮಾರ್ಚ
ಏಪ್ರಿಲ ೧೯೮೧; ೯೧-೯೪.

ಕಟ್ಟೀಮನಿ (ತೇಜಸ್ವಿ)
ಕರಿಯರ ಹೋರಾಟ;ಗನ್ನಿನ ನೆರಳಲ್ಲಿನಿದ್ದೆ
೧೬ (೫) ೧೦೫; ಅಕ್ಟೋ ೧೯೮೦;
೨೫-೩೬

ಕೃಷ್ಣಮೂರ್ತಿ (ಬಿ)
ನೆಲ್ಸನ್ ಮಾಂಡೆಲಾ; ನಮ್ಮೆಲ್ಲರ
ವಿಮೋಚನಾಕ್ರಿಯೆಯ ಪ್ರಜ್ಞೆಯ ಸಾಕ್ಷಿ.
೧೬ (೫) ೧೦೫; ಅಕ್ಟೋ ೧೯೮೦;
೪೭-೫೦

ಕಾಯಿ (ರುದ್ರಪ್ಪ)
ದಕ್ಷಿಣ ಆಫ್ರಿಕ; ಬಂಡವಾಳವಾದದ
ಅಪರಾಧಗಳಿಗೊಂದು ಸಾಕ್ಷಿ.
೧೬(೫)೧೦೫; ಅಕ್ಟೋ ೧೯೮೦; ೯-೨೪

ಬೆಳಗಲಿ (ಸನತ್‌ಕುಮಾರ).
ದಕ್ಷಿಣ ಆಫ್ರಿಕ : ಕೆಂಪಾಗಿ ಸಿಡಿದ ಕಪ್ಪು
ನಕ್ಷತ್ರ.
೧೬(೫)೧೦೫; ಅಕ್ಟೋ ೧೯೮೦;೩೭-೪೬

ಪುಸ್ತಕ ವಿಮರ್ಶೆ

ಈಶ್ವರಪ್ಪ (ಎಂ. ಜಿ.)
ಕುಂ. ವೀ. ಅವರ 'ಕಪ್ಪು'.
೧೭(೧೦)೧೨೨; ಮಾ ೧೯೮೨; ೬೨-೬೩

ಕೋಡಿರಾಂಪುರ (ರಂಗಾರೆಡ್ಡಿ)
ಹಳ್ಳಿಯ ಬಳ್ಳಿ :
ಎಚ್. ಎಸ್. ಸಿದ್ಧಲಿಂಗಪ್ಪ
೧೬ (೩-೪) ೧೦೩-೧೦೪;
ಅಗಸ್ಟ-ಸಪ್ಟಂ ೧೯೮೦; ೮೮-೯೦.

ಗುಬ್ಬಿ (ಎಸ್. ಎನ್.)
ಗಾಂಧೀ ಕಾಣ್ಕೆ : ಸಂ- ಸಿ.ಪಿ.ಕೆ.
೧೭(೬)೧೧೮; ನವೆಂ ೧೯೮೧; ೬೧-೬೩

———

ಮೇರಿ ಮೆಕ್‌ಲಿಯಾಡ್ ಬೆಥೂನೆ.
೧೬(೬-೭)೧೦೬-೧೦೭;
ನವೆಂ-ಡಿಶೆಂ ೧೯೮೦; ೯೦-೯೩.
(ಮೇರಿ ಮೆಕ್‌ಲಿಯಾಡ್ ಬೆಥೂನೆ :
ಡಿ. ವಿಜಯು)

———

ನರಬಲಿ: ಒಂದು ಸಾಂಸ್ಕೃತಿಕ ಅಧ್ಯಯನ
೧೬ (೬-೭) ೧೦೬-೧೦೭;
ನವೆಂ-ಡಿಶೆಂ ೧೯೮೦, ೮೭-೯೦.
(ನರಬಲಿ: ಟಿ. ಎಸ್. ಸತ್ಯನಾಥ)

ಪೂರ್ಣಿಮಾ (ಆರ್).
ಅಮೇರಿಕದಲ್ಲಿ ಒಂದು ಶ್ರಾದ್ಧ.
೧೬ (೬-೭) ೧೦೬-೧೦೭;
ನವೆಂ-ಡಿಸೆಂ ೧೯೮೦; ೩೯-೪೧

ಸೋಮಶೇಖರ (ಹ.)
ಡಾ. ಜಿ. ರಾಮಕೃಷ್ಣ ಅವರ
ಮುನ್ನೋಟ.
೧೭[೫]೧೧೭;ಅಕ್ಟೋ ೧೯೮೧; ೪೫-೫೧

ಕನ್ನಡ ಭಾಷೆ

ಅವಧಾನಿ (ಜಿ. ಎಸ್.)
ನಾಲ್ಕು ಕಿರು ಹೊತ್ತಗೆಗಳು.
೧. ಕನ್ನಡದ ಹೋರಾಟ : ಬರಗೂರು ರಾಮಚಂದ್ರಪ್ಪ
೨. ಸಂಸ್ಕೃತ-ಸಂಸ್ಕೃತಿ-ಶೋಷಣೆ : ಆರ್ಕೆ
೩. ಕನ್ನಡ ಬಳಕೆಗೆ ಅಗತ್ಯ ಪರಿಸರದ ನಿರ್ಮಾಣ : ದೇವಯ್ಯ ಹರವೆ
೪. ಬಂಡಾಯ ಸಾಹಿತಿ : ರಮಜಾನ ದರ್ಗಾ.
೧೭(೪)೧೧೬; ಸಪ್ಟಂ ೧೯೮೧; ೫೯-೬೪
ಸಂಕ್ರಮಣ/೧೨೭-೧೨೮

ಕವನ ಸಂಕಲನಗಳು

ಕಾಡನಕುಪ್ಪೆ (ಶಿವರಾಮು)

ಮೂರು ಕವನ ಸಂಗ್ರಹಗಳು.
೧. ಕಣ್ಣೇ ಕಟ್ಟಿ ಕಾಡೇಗೋಡೆ :
ಆರ್. ವಿ, ಭಂಡಾರಿ
೨. ಷಣ್ಮುಖ : ಆರ್ಕೆ, ಮಣಿಪಾಲ
೩. ಸಿಂದಾಬಾದನ ಆತ್ಮಕಥೆ :
ಎಚ್. ಎಸ್. ವೆಂಕಟೇಶ ಮೂರ್ತಿ.
೧೬ (೧-೨) ೧೦೧-೧೦೨;
ಜೂನ-ಜುಲೈ ೧೯೮೦; ೮೧-೮೪.

———

ಬೆನ್ನುಮೂಳೆಯು ಹಾಡುಗಳು.
೧. ಪರಿಸರದ ಜನ : ರಾಮಲಿಂಗಯ್ಯ
೨. ನನ್ನ ಕಣ್ಣಗಲಕ್ಕೆ : ಚಂದ್ರಶೇಖರ ತಾಳ್ಯ
೩. ದಿವಿ ಸೀಮೆಯ ಹಾಡು :
ಕುಂ. ವೀರಭದ್ರಪ್ಪ
೪. ಬೆನ್ನು ಮೂಳೆಯು ಹಾಡುಗಳು :
ಶಿವಳ್ಳಿ ಕೆಂಪೇಗೌಡ
೫. ಬೆಸ್ತ : ಕೆ. ನ. ಶಿವತೀರ್ಥನ್
೬. ಗಾಲ್ಪ ಉಬ್ಬಿನ ಮೇಲೆ :
ಎಸ್. ಜಿ. ಸಿದ್ದರಾಮಯ್ಯ.
೧೬(೧೦-೧೧) ೧೧೦-೧೧೧;
ಮಾ ೧೯೮೧; ೮೩-೯೪

ಕೆರ.

ಬಂಡಾಯ ಪ್ರಜ್ಞೆಯ ಪ್ರಾಮಾಣಿಕಕಾವ್ಯ
೧. ನೆರಳುಗಳು (ಮೂಲ:ಸಾಹಿರ್ ಲೂಧಿಯಾನ್ವಿ) :
ಅನು : ಅಬ್ದುಲ್ ಮಜೀದ್‌ಖಾನ್, ೧೯೮೦.
೨. ಯಾರಿಗೆ ಯಾರಿಲ್ಲ ಈ ದೇಶದಲ್ಲಿ; ಪುಂಡಲೀಕ ಶೇಟ್, ೧೯೮೦.
೩. ಮನುಷ್ಯನೆಲ್ಲಿ; ಎಸ್, ಎಸ್, ಹಿರೇಮಠ ೧೯೮೦.
೪. ನನ್ನವರ ಹಾಡು; ಬಸವರಾಜ ಸಬರದ ೧೯೮೦.
೫. ಹೆಣಗಳೆದ್ದು ಹಾಡಿದವು; ಕೇಶವ ಪ್ರಸಾದ್ ೧೯೮೦.
೧೭ (೭) ೧೧೯; ಡಿಶೆಂಬರ್ ೧೯೮೧; ೪೩-೪೮.

— —

ಕವಿತೆಯ ಹೆಸರಿನ ಒಣ ವರದಿಗಳು.
೧. ಇದೂ ಒಂದು ಮಹಾಭಾರತ : ಪ್ರಮೀಳಾ ಸಿರ್ಸೆ, ೧೯೮೦
೨. ಸಂಕಲ್ಪ : ಕುಲಶೇಖರಿ, ೧೯೮೧
೩. ವರ್ತಮಾನ : ಲತಾ ಗುತ್ತಿ, ೧೯೮೦
೪. ಹುಟ್ಟು ಸಾವಿನ ಮಧ್ಯೆ : ಮಾನಸ ೧೯೮೦
೫. ಎಂಜಿನಿಯರಿಂಗ್ ಗೀತೆಗಳು: ಕೆ. ಚಿದಾನಂದ, ೧೯೮೦
೧೬(೧೨)೧೧೨; ಮೇ ೧೯೮೧; ೭೧-೭೩

ಗಂಗಾಧರಮೂರ್ತಿ.

ನಾಲ್ಕು ಕವನಸಂಕಲನಗಳು.
೧. ಸಿಂಚನ : ಚಂದ್ರಕಾಂತ ಥುಲಿಗಾರ
೨. ನೆನಪು ಅವಳ ನೆನಪು : ಕೆ.ವಿ.ಬನ್ನಟ್ಟಿ
೩. ಗುಬ್ಬಿಮನಿ : ಶಶಿಕಲಾ ವಸ್ತ್ರದ
೪. ಮುಚ್ಚಿಲ್ಲದ ಬಿಚ್ಚು : ಸಂ. ಎಚ್. ಟಿ. ಶಂಕರಮೂರ್ತಿ
೧೬(೬-೭) ೧೦೬-೧೦೭; ನವಂ-ಡಿಸೆಂ ೧೯೮೦; ೯೩-೯೫

ಮಂಠದ (ಅಶೋಕ).

ಐದು ಕವನ ಸಂಕಲನಗಳು ಮತ್ತು ಐದು ನೂರು ಚುಟುಕಗಳು.
೧. ಇಡಲಿರುವ ಹೆಜ್ಜೆ : ಮಾರುತಿ ಭೋಸಲೆ, ೧೯೮೧
೨. ಮೂಕನಿಗೆ ಬಾಯಿ ಬಂದಾಗ : ಅರವಿಂದ ಮಾಲಗತ್ತಿ, ೧೯೮೧
೩, ಜ್ವಾಲೆ : ಅರವಿಂದ ಸಜ್ಜನ, ೧೯೮೧
೪. ಈಚೆ ದಡದಲಿ ನಿಂತು : ಟಿ. ಜಿ. ಭಟ್ಟ, ೧೯೮೧;
೫. ಬಿನ್ನಹ : ಕೆ. ಆರ್. ಗಂಗಾಧರಯ್ಯ ೧೯೮೧
೬. ಒಗ್ಗರಣೆ : ವಿಡಂಬಾರಿ, ೧೯೮೧
೧೭(೭)೧೧೯;ಡಿಸೆಂಬರ ೧೯೮೧;೪೮-೫೨

———

ಐದು ಸಮ್ಮಿಶ್ರ ಸಂಕಲನಗಳು.
೧. ಗಾಂಧಿ ಗಾಂಧೀಜಿ : ಬಾಲಚಂದ್ರ ಬಡಿಗೇರ, ೧೯೮೧
೨. ಪುಷ್ಪಾಂಜಲಿ : ನರಸಿಂಹ ಪರಾಂಜಪೆ ೧೯೮೧
೩. ಹೃದಯನಾದ : ರುದ್ರನಾಥ ಕಲ್ಯಾಣಶೆಟ್ಟಿ ೧೯೮೧
೪. ಒಳಗೂಡಿನಲ್ಲಿ : ವಿ. ಗ. ನಾಯಕ ೧೯೮೧
೫. ಧರೆ ಹತ್ತಿ ಉರಿವಾಗ : ಮಲ್ಲೇದೇವರಹಳ್ಳಿ ನಾಗಭೂಷಣ ೧೯೮೧
೧೭(೭)೧೧೯; ಡಿಸೆಂ ೧೯೮೧; ೫೨-೫೫

ವಿಮರ್ಶೆ

ಕೆರ.
'ಹೊಸ ದೃಷ್ಟಿಕೋನ'ದ ಹೆಸರಿನಲ್ಲಿ ಪೂರ್ವಾಗ್ರಹದ ಆತುರದ ವಿಮರ್ಶೆ.

ನವ್ಯ ಕಾದಂಬರಿಯ ಪ್ರೇರಣೆಗಳು :
ಟಿ. ಪಿ. ಅಶೋಕ, ೧೯೭೯
೧೬ (೩–೪) ೧೧೩–೧೧೪;
ಅಗಸ್ಟ–ಸಪ್ಟಂಬರ ೧೯೮೦; ೮೨–೮೫

ನಾಟಕ

ರಘುನಾಥರಾವ್ (ಡಿ).
ನಾಲ್ಕು ನಾಟಕಗಳ ಸಮೀಕ್ಷೆ.
೧. ಹರಕೆ : ಮೈಸೂರು ನಾಗೇಶ್
೨. ಹೊಲೆಯು ಬಂದ ಹೊಲೆಯು :
ಕೆ. ಎಚ್ ಪ್ರಭು.
೩. ಅಂಬೆ : ಸಿ. ಪಿ. ನಾಗರಾಜ.
೪. ಆಕಾಂಕ್ಷೆ ಮತ್ತು ಆಸ್ತಿ : ಎಲ್.
ಶೇಷಗಿರಿರಾವ್.
೧೬ (೧–೨) ೧೧೧–೧೧೩, ಜೂನ-ಜಲೈ
೧೯೮೦, ೮೫-೯೧.

——

ನಾಲ್ಕು ನಾಟಕಗಳು.
೧. ಗಂಡಸರಲ್ಲ ಇವರು ಹೆಂಗಸರು:ಅನು ಸುಚೇತನಸ್ವರೂಪ.
೨. ಗಾಜಿನ ಗೊಂಬೆ : ಅನು. ಎಚ್. ಕೆ. ರಾಮಚಂದ್ರಮೂರ್ತಿ.
೩. ಸೋಮ್ರಾಯ್ ಭೀಮ್ರಾಯ್ನ ದಪ್ಪಿನಾಟ: ಚೆನ್ನಣ್ಣ ವಾಲೀಕಾರ
೪. ಚಾರ್ವಾಕ : ಸತ್ಯನಾರಾಯಣ ರಾವ್ ಅಣತಿ.
೧೬ (೩-೪)೧೧೩-೧೧೪, ಅಗಸ್ಟ–ಸಪ್ಟಂ
೧೯೮೦, ೯೧–೧೦೦.

ಕಥಾ ಸಂಕಲನ

ಗುಬ್ಬಿ (ಸಿದ್ದಣ್ಣ)
ಹೀಚುಹಣ್ಣ
೧೭ (೫)೧೧೭,ಅಕ್ಟೋ ೧೯೮೧ ೬೨-೬೩

——

ಕಾಳೇಗೌಡ ನಾಗವಾರರ : ಬೆಟ್ಟ
ಸಾಲು ಮಳೆ.
೧೬ (೩–೪) ೧೧೩–೧೧೪
ಅಗಸ್ಟ,–ಸಪ್ಟಂ ೧೯೮೦ : ೮೫-೮೮.

ಪ್ರಭುಸ್ವಾಮಿಮಠ
ಮೂರು ಕಥಾಸಂಗ್ರಹಗಳು.
೧ ನಾವು ಮತ್ತು ಹತ್ತು ಜನ ಹೊಸಬರು
ಸಂ. ಬಾದಶಹಾ ನದಾಫ, ೧೯೮೧.
೨. ನಿಗೂಢರು. ಸಂ ಎನ್ಕೆ ರಾಮ ಚಂದ್ರ
೧೯೮೦.
೩. ಪ್ರಸ್ಥಾನ. ಅನು. ಸು. ರತ್ನಾಕರ
ಶೆಟ್ಟಿ ೧೯೭೯.
೧೭ (೫) ೧೧೭, ಅಕ್ಟೋಬರ
೧೯೮೧, ೫೭-೬೨.

ವಿಶ್ವಕಥಾ ಕೋಶ

ವೇಣುಗೋಪಾಲ(ಸಿ ವಿ)
ವಿಶ್ವಕಥಾಕೋಶ :ಮೊದಲ ೪ ಸಂಪುಟಗಳು.
೧೬ (೩-೪) ೧೧೩-೧೧೪, ಅಗಸ್ಟ
ಸಪ್ಟಂ ೧೯೮೦, ೬೧-೭೧.

——

ವಿಶ್ವಕಥಾಕೋಶ : ಎರಡನೇ ಕಂತಿನ ೪
ಸಂಪುಟಗಳ ಸಮೀಕ್ಷೆ.
೧೬ (೮-೯) ೧೧೮-೧೧೯, ಜನೆ-ಫೆಬ್ರು
೧೯೮೧, ೮೯-೯೮.

——
ವಿಶ್ವಕಥಾಕೋಶ : ಮೂರನೆಯ ಕಂತು:
೧೭ (೪) ೧೧೬; ಸಪ್ಟಂ ೧೯೮೧;
೪೫-೫೫

ಜಾನಪದ

ಕೋಡಿರಾಂಪುರ (ರಂಗಾರೆಡ್ಡಿ)
ಜಾನಪದಚಿಂತನ : ಚಕ್ಕರೆ ಶಿವಶಂಕರ್
೧೬ (೩-೪) ೧೦೩-೧೦೪; ಆಗಷ್ಟ-
ಸಪ್ಟಂಬರ ೧೯೮೦; ೯೦-೯೧.

ಪಂಡೆ (ವೀರಣ್ಣ)
ಮೂರು ಜಾನಪದ ಕೃತಿಗಳು.
೧. ಜಾನಪದ ಜಿಜ್ಞಾಸೆ : ಬಸವರಾಜ ನೆಲ್ಲಿಸರ.
೨. ಹೇಳುವೆ ಮಜಕೂರಾ : ನಿಂಗಣ್ಣ ಸಣ್ಣಕ್ಕಿ.
೩. ಜಾನಪದದಲ್ಲಿ ಕಿತ್ತೂರು : ನಿಂಗಣ್ಣ ಸಣ್ಣಕ್ಕಿ.
೧೬ (೬-೭) ೧೦೬-೧೦೭; ನವೆಂ-ಡಿಶೆಂ ೧೯೮೦; ೯೬-೧೦೦.

ಮಹಿಮ.
ಮೂರು ಜಾನಪದ ಸಂಕಲನಗಳು.
೧. ಬೀಸೆ ಕುಂಕಮದ ತೆನೆಗಾಳಿ :
ವಿ. ಗ. ನಾಯಕ ೧೯೭೮
೨. ಮದುವೆ ಮನೆ ಚಂದ :
ವಿ. ಗ. ನಾಯಕ ೧೯೭೮
೩. ಗಂಧದ ಮರವೇ ನೆರಳಾಗು :
ವಿ. ಗ. ನಾಯಕ ೧೯೭೮
೧೬ [೧೨] ೧೧೨; ಮೇ ೧೯೮೧,೭೯-೮೧

ಮುರಿಗೆಪ್ಪ [ಎ].
ಎಂಟು ಪರಿಚಯಾತ್ಮಕ ಕೃತಿಗಳು.
೧. ಮಂಟೆಸ್ವಾಮಿಯ ನೀಲಗಾರರು :
ಜೀ. ಶಂ. ಪರಮಶಿವಯ್ಯ
೨. ಕಿನ್ನರಿ ಜೋಗಿಗಳು :
ಜೀ. ಶಂ. ಪರಮಶಿವಯ್ಯ
೩. ಕರ ಪಾಲದವರು: ಡಿ. ಕೆ. ರಾಜೇಂದ್ರ
೪. ಬುಡಬುಡಕಿಯವರು :
ನಿಂಗಣ್ಣ ಸಣ್ಣಕ್ಕಿ
೫. ಹಾಲಕ್ಕಿ ಒಕ್ಕಲಿಗರು :
ಎಲ್. ಜಿ. ಭಟ್
೬. ಕೊಡವರು : ಜೀವನ ಪದ್ಧತಿ :
ಬಿ ಡಿ. ಗಣಪತಿ
೭. ಕಾಡುಗೊಲ್ಲರು : ತೀ. ನಂ. ಶಂಕರ ನಾರಾಯಣ
೮. ಲಂಬಾಣಿಗರು : ಬಸವರಾಜ ನೆಲ್ಲಿರಸ
೧೬[೧೨]೧೧೨; ಮೇ ೧೯೮೧; ೮೧-೮೪

ವ್ಯಕ್ತಿ ಪರಿಚಯ

ಕೆರ.
ವಿಶ್ವ ಸಾಹಿತಿಯೊಬ್ಬನ ಕುರಿತು ಉಪಯುಕ್ತ ಮಾಹಿತಿ.
ದಾಸ್ತೊವ್‌ಸ್ಕಿ (ಒಂದು ಪರಿಚಯ) :
ಎಂ. ರಾಜಗೋಪಾಲ್ ೧೯೭೯
೧೬ (೩-೪) ೧೦೩-೧೦೪;
ಆಗಸ್ಟ-ಸಪ್ಟಂ ೧೯೮೦; ೮೧-೮೨

ಶಿವಾನಂದ (ವಿ.)
ಜೀವನ ಚಿತ್ರ-ವಿಮರ್ಶೆ-ಸಂಶೋಧನೆ :
೧. ಪ್ರೇಮಚಂದ್ : ದ. ನಿಂ. ಬೆಳಗಲಿ ೧೯೮೦
೨. ವೈಚಾರಿಕ ಸಾಹಿತ್ಯ-ದಿಗ್ದರ್ಶನ :
ಷಣ್ಮುಖಯ್ಯ ಅಕ್ಕೂರಮಠ, ೧೯೮೦
೩. ಆದಯ್ಯನ ಲಘುಕೃತಿಗಳು :
ಎಂ. ಎಂ. ಕಲಬುರ್ಗಿ, ೧೯೮೦;
೧೬(೧೨)೧೧೨;ಮೇ ೧೯೮೧;೭೪-೭೯

ಶಿವಾನಂದ [ಎಸ್.]
ಲೋಹಿಯಾ : ವ್ಯಕ್ತಿ-ವಿಚಾರ-ವಿಮರ್ಶೆ
೧೬ [೯] ೧೨೧; ಫೆಬ್ರು ೧೯೮೨;೫೧-೫೭

ರೈತಸತ್ಯಾಗ್ರಹ

ಸೋಮಶೇಖರ (ಹ)
ಕಾಗೋಡು ಸತ್ಯಾಗ್ರಹ : ಪ್ರಾಮಾಣಿಕ ನಿರೂಪಣೆ ೧೬ (೬-೭) ೧೦೬-೧೦೭; ನವಂ–ಡಿಶೆಂ ೧೯೮೦; ೭೯-೮೩.

ಹನುಮಂತ
ಕಾಗೋಡು ಸತ್ಯಾಗ್ರಹ : ಹಿಂದು ಅಡಿ ಟಿಪ್ಪಣಿ.
೧೬ (೮-೯) ೧೦೮-೧೦೯ ; ಜನೆ-ಫೆಬ್ರು ೧೯೮೧; ೯೯-೧೦೦

ರಂಗ ಭೂಮಿ

ತೊಂಟದಾರ್ಯ (ಸಂಪಿಗೆ)
ಕರ್ನಾಟಕ ರಂಗಭೂಮಿ.
೧೬ (೬-೭) ೧೦೬–೧೦೭; ನವೆಂಬರ್ ಡಿಶೆಂ ೧೯೮೦; ೧೦೦.
(ಕರ್ನಾಟಕ ರಂಗಭೂಮಿ : ಎಚ್. ಕೆ. ರಂಗನಾಥ)

ಸಿನೇಮಾ

ತೋಂಟದಾರ್ಯ (ಸಂಪಿಗೆ)
ಸಿನೇಮಾ ಕುರಿತು ಪುಸ್ತಕಗಳು.
೧. ಅಭಿವೃದ್ಧಿಗಾಗಿ ಸಿನೇಮಾ : ಕೆ. ವಿ. ಸುಬ್ಬಣ್ಣ
೨. ನಾಟಕ ಮತ್ತು ಸಿನೇಮಾ : ಕೆ. ವಿ. ಸುಬ್ಬಣ್ಣ.
೩. [illegible]ೂಮಿ ಮತ್ತು ಚಲನಚಿತ್ರ.
೪. ಭಾರತದಲ್ಲಿ ಚಲನಚಿತ್ರ ಸಂಸ್ಕೃತಿಯ ಪ್ರಸ್ತುತ ಸನ್ನಿವೇಶ : ಸತೀಶ್ ಬಹಾದುರ್
೫. ಬೈಸಿಕಲ್ ಥೀವ್ಸ್ : ಅನು : ಕೆ. ವಿ. ಸುಬ್ಬಣ್ಣ
೧೬(೧–೨) ೧೦೧–೧೦೨; ಜೂನ–ಜುಲೈ ೧೯೮೦; ೯೨-೯೫.

ಸಂಪಾದಕೀಯ

ಪಾಟೀಲ (ಚಂದ್ರಶೇಖರ)
ಎಪ್ಪತ್ತರ ದಶಕ : ಒಂದು ನೋಟ.
೧೬, (೬-೭) ೧೦೬-೧೦೭; ನವಂ-ಡಿಸೆಂ ೧೯೮೦, ೬-೮,

——

ಲಂಕೇಶ್ ಪತ್ರಿಕೆ, ಸಾಕ್ಷಿ, ರುಜುವಾತು.
೧೬ (೮-೯) ೧೦೮-೧೦೯, ಜನೆ-ಫೆಬ್ರು ೧೯೮೧, ೫-೨೦.

——

'ಸಾಹಿತ್ಯಕ' ಪತ್ರಿಕೆ : ಬದಲಾದ ಚಿತ್ರ.
೧೬ (೧೧–೧೨)೧೨೩–೧೨೪, ಎಪ್ರಿ ಮೇ ೧೯೮೨, ೧೧ ೧೫.

ಪ್ರಿಯ ಓದುಗರಿಗೆ,

ಇಂಥ ಲೇಖನ-ಸೂಚಿ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಅಭ್ಯಾಸಿಗಳಿ ತುಂಬ ಉಪಯುಕ್ತ ಅಲ್ಲವೆ ? ಇನ್ನು ಮೇಲೆ ಪ್ರತಿ ವರ್ಷಕ್ಕೊಮ್ಮೆ ಇಂಥ ಸೂಚಿ ಪ್ರಕಟಗೊಳ್ಳಲಿದೆ.

'ಸಂಕ್ರಮಣ'ದ ಮೊದಲ **ಒಂದು ನೂರು** ಸಂಚಿಕೆಗಳ-ಅಂದರೆ ೧೯೬೪ ರಿಂದ ೧೯೮೦—ಲೇಖನ ಸೂಚಿ ಹಾಗೂ ಲೇಖಕನಿರ್ದೇಶಿ ಈಗಾಗಲೇ **ಸಂಕ್ರಮಣ ಶತಕ** ಎಂಬ ಪುಸ್ತಕ ರೂಪದಲ್ಲಿ ಅಚ್ಚಾಗಿದೆ. [ಸಂಕಲನ–ಸಿ. ಆರ್. ಕರಿಸಿದ್ದಪ್ಪ]

ಸಂಕ್ರಮಣ ಶತಕದ ಬೆಲೆ **೭ ರೂ.** ನಮ್ಮ ಚಂದಾದಾರರಿಗೆ ಮಾತ್ರ **೫ ರೂ.** ಗಳಲ್ಲಿ ಲಭ್ಯ. ಎಂ,ಓ,/ಡಿ,ಡಿ, ಕಳಿಸಿ ಪುಸ್ತಕ ತರಿಸಿಕೊಳ್ಳಿರಿ.

ಸಂಪಾದಕ

DEVUPATTAR
GUTTIPETH,
SHAHAPUR-585223

ಅರಿವಿನ ಆಗರ-

'ದೇಶ ನೋಡು, ಇಲ್ಲವೆ ಕೋಶ ಓದು' ಎಂಬುದು ಒಂದು ಗಾದೆ. ಪ್ರವಾಸದಿಂದ ಲೋಕಾನುಭವ ಎಲ್ಲರಿಗೂ ನಿಲುಕದ ವಿಷಯ. ಆದರೆ ಇದ್ದಲ್ಲಿಯೇ ಜಗತ್ತಿನ ಆಗುಹೋಗುಗಳು ಹಾಗೂ ವಿವಿಧ ವಿಷಯ ಜ್ಞಾನ, ಪುಸ್ತಕ ಓದುವುದರಿಂದ ಸಿಗುತ್ತದೆ. ಅಂತಹ ಜ್ಞಾನ ಪ್ರಸಾರ ಕೇಂದ್ರ ಪುಸ್ತಕ ಭಂಡಾರ.

ಕರ್ನಾಟಕದಲ್ಲಿ ಓದುಗರ ಸೇವೆಗಾಗಿ ಪ್ರತಿ ಜಿಲ್ಲಾ ಕೇಂದ್ರದಲ್ಲಿ ಒಂದು ಪುಸ್ತಕ ಭಂಡಾರ, ದೊಡ್ಡ ನಗರಗಳಲ್ಲಿ ೧೦ ನಗರ ಕೇಂದ್ರ ಗ್ರಂಥಾಲಯ ಹಾಗೂ ೭೪ ಪುಸ್ತಕ ಪೂರೈಕೆ ಕೇಂದ್ರಗಳು ಮತ್ತು ೭೩ ಪುಸ್ತಕ ಸೇವಾ ಕೇಂದ್ರಗಳು ಕೆಲಸ ಮಾಡುತ್ತಿವೆ. ಇವಲ್ಲದೆ ಒಂದು ಸಂಚಾರಿ ಗ್ರಂಥಾಲಯವೂ ಜ್ಞಾನ ಪ್ರಸಾರದಲ್ಲಿ ನಿರತವಾಗಿದೆ.

ಬೆಂಗಳೂರಿನಲ್ಲಿರುವ ರಾಜ್ಯ ಕೇಂದ್ರ ಗ್ರಂಥಾಲಯ ಈ ಎಲ್ಲ ಪುಸ್ತಕ ಭಂಡಾರಗಳ ಆಡಳಿತ ನಿರ್ವಹಣೆ ಹಾಗೂ ಪುಸ್ತಕ, ನಿಯತಕಾಲಿಕೆಗಳ ಪೂರೈಕೆಯಲ್ಲಿ ನಿರತವಾಗಿದೆ.

ಗ್ರಾಮಾಂತರ ಪ್ರದೇಶಗಳ ಓದುಗರಿಗೆ ಪುಸ್ತಕ ಪೂರೈಸುವ ರಾಜಾರಾಂ ಮೋಹನರಾಯ ಪುಸ್ತಕ ಭಂಡಾರ ಪ್ರತಿಷ್ಠಾನ ವಿಸ್ತಾರ ಕಾರ್ಯಕ್ರಮ ಹಾಕಿಕೊಂಡಿದೆ. ಈ ಯೋಜನೆಯಂತೆ ಅಲ್ಪಸ್ವಲ್ಪ ಓದುಬರಹ ಬಲ್ಲವರಿಗೆ ಅನುಕೂಲವಾಗುವಂತಹ ಪುಸ್ತಕಗಳನ್ನು ಪೂರೈಸಲಾಗುತ್ತಿದೆ.

ಪ್ರಸ್ತುತ ೧೯೦೫ ಗ್ರಾಮೀಣ ಪುಸ್ತಕ ಕೇಂದ್ರಗಳು ಮತ್ತು ೧೭೫ ತಾಲೂಕು ಪುಸ್ತಕ ಕೇಂದ್ರಗಳು ಈ ಸೇವೆ ಸಲ್ಲಿಸುತ್ತಿವೆ.

ಕೇಂದ್ರ ಗ್ರಂಥಾಲಯದಲ್ಲಿ ಕುರುಡರು ಓದಲು ನೆರವಾಗಲು ೭೫೦ ಬ್ರೈಲ್ ಲಿಪಿ ಪುಸ್ತಕಗಳ ಸಂಗ್ರಹ ಮಾಡಲಾಗಿದೆ. ಅಲ್ಲದೆ ಬ್ರೈಲ್ ಲಿಪಿಯ ೭೦ ನಿಯತಕಾಲಿಕೆಗಳನ್ನು ಒದಗಿಸಲಾಗಿದೆ.

ಇಲಾಖೆಯು ರಾಜ್ಯಾದ್ಯಂತ ಗ್ರಂಥಾಲಯಗಳಲ್ಲಿ ಮಕ್ಕಳ ಪುಸ್ತಕ ಹಾಗೂ ಪಠ್ಯಪುಸ್ತಕಗಳಿಗೆ ಪ್ರತ್ಯೇಕ ವಿಭಾಗಗಳನ್ನು ತೆರೆದಿದೆ.

ಈ ಎಲ್ಲ ಸೌಲಭ್ಯಗಳನ್ನು ಸೂಕ್ತವಾಗಿ ಬಳಸಿಕೊಳ್ಳುವ ಜವಾಬ್ದಾರಿ ನಮ್ಮ ಓದುಗರ ಮೇಲಿದೆ. ನೀವು ಓದಿದ ಮೇಲೂ ಇತರರು ಆ ಪುಸ್ತಕಗಳನ್ನು ಓದುತ್ತಾರೆ ಎಂಬುದನ್ನು ಮರೆಯದಿರಿ.

"ಕುಳಿತಲ್ಲೇ ದೇಶ ನೋಡಬೇಕೆಂದರೆ ಪುಸ್ತಕಗಳನ್ನು ಓದಿ."

ಪ್ರಕಟನೆ : **ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ**

No. ... G 97
... pre-payment,
WPP-31

...ಗೆ,

ಸಂಕ್ರಮಣ ಪ್ರಕಾಶನ
ಧಾರವಾಡ ೫೮೦೦೦೮
ರಿಯಾಯ್ತಿ ದರದಲ್ಲಿ ಕೆಲ ಪ್ರಕಟನೆಗಳು

ಪುಸ್ತಕ	ಮೂಲ ಬೆಲೆ	ರಿಯಾಯ್ತಿ ಬೆ...
ಆರೆಸ್ಸೆಸ್ ಮೇಲೆ ಕ್ಷ-ಕಿರಣ		
ಪಂಜು : ರಾವಸಾಹೇಬ ಕಸಬೆ (ಕ್ಯಾಲಿಕೊ)	೧೫-೦೦	೧೨-೦೦
ಸಂಕ್ರಮಣ ಲೇಖನ-ಸೂಚಿ		
ಸಂಕ್ರಮಣ ಶತಕ : ಕರಿಸಿದ್ದಪ್ಪ	೭-೦೦	೫-೦೦
ಷಣ್ಮುಖ : ಆರ್ಕೆ ಮಣಿಪಾಲ	೪-೦೦	೩-೦೦
ಇದು ನನ್ನ ಭಾರತ : ಅ. ಬೆಟ್ಟದೂರ	೬-೦೦	೪-೦೦

ಚಂಪಾ ಕೃತಿಗಳು

ಮಧ್ಯಬಿಂದು	೩-೦೦	೨-೦೦
ನಳಕವಿಯ ಮಸ್ತಕಾಭಿಷೇಕ	೩-೦೦	೧-೫೦
ಕೊಡೆಗಳು	೧-೮೦	೧-೫೦
ಅಪ್ಪ	೧-೮೦	೧-೫೦
ಕುಂಟೂ ಕುಂಟೂ ಕುರವತ್ತಿ	೧-೫೦	೧-೨೫
ಕತ್ತಲ ರಾತ್ರಿ	೧-೮೦	೧-೫...
ಅಚ್ಚಿನಲ್ಲಿವೆ :		
ಗೋಕಾಕ್ ಚಳುವಳಿ ನನಗೆ ಕಂಡಂತೆ	೭-೦೦	೫-೦೦
ಹೂವು ಹೆಣ್ಣು ತಾರೆ	೭-೦೦	೫-೦೦
At the Other End (ಇಂಗ್ಲಿಷ್ ಪದ್ಯಗಳು)	೧೦-೦೦	೮-೦೦